ಬುಧವಾರ, ಜನವರಿ 31, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 31 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮನುಷ್ಯನ ಕೀಲುಗಳಂತೆಯೇ ಎಲ್ಲ ದಿಕ್ಕುಗಳಲ್ಲಿ ಸಂಚರಿಸಬಲ್ಲ, ಕಡಿಮೆ ಯಾಂತ್ರಿಕ ಸದ್ದುಗಳನ್ನು ಮೂಡಿಸಬಲ್ಲ 'ಹೈಬಿಡ್ ರೋಬೊ' ಸಿದ್ಧಗೊಂಡಿದೆ

ಆಳ-ಅಗಲ
ದೇಶದಲ್ಲಿವೆ 718 ಹಿಮಚಿರತೆಗಳು...
ರಾಷ್ಟ್ರಧ್ವಜಕ್ಕೆ ಅವಮಾನ: ಪರಸ್ಪರ ದೂರು 4
ಮಯಂಕ್ ಅಗರವಾಲ್ ಅಸ್ವಸ್ಥ 14

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,139 ▼	21,522 ▼	₹64,840 (ಬೆಂಗಳೂರು) ▲	₹73,900 (ಬೆಂಗಳೂರು) ▲	83.10 ▲

ಮೊದಲ ವರದಿ ಸಲ್ಲಿಸಿದ ಎಸ್‌ಇಪಿ ಆಯೋಗ • ವಾರದಲ್ಲಿ ಸರ್ಕಾರದಿಂದ ನಿರ್ಧಾರದ ಸಾಧ್ಯತೆ

ಮೂರು ವರ್ಷಗಳ ಪದವಿಗೆ ಒಲವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಆಯೋಗವು ತನ್ನ ಮೊದಲ ಸಲಹಾ ವರದಿಯನ್ನು ಸರ್ಕಾರಕ್ಕೆ ನೀಡಿದ್ದು, ರಾಜ್ಯದ ಪದವಿ ಕಾಲೇಜುಗಳಲ್ಲಿ ಹಿಂದೆ ಇದ್ದಂತೆ 3 ವರ್ಷಗಳ ಪದವಿಯನ್ನೇ ಮುಂದುವರಿಸುವಂತೆ ಶಿಫಾರಸು ಮಾಡಿದೆ.

ಬಿಜೆಪಿ ಸರ್ಕಾರವು ತರಾತುರಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಜಾರಿಗೊಳಿಸಿದೆ ಎಂದು ಚುನಾವಣಾ ಪೂರ್ವದಲ್ಲಿ ಆಪಾದಿಸಿದ್ದ ಕಾಂಗ್ರೆಸ್, ಪಕ್ಷ ಅಧಿಕಾರಕ್ಕೆ ಬಂದರೆ ಎನ್‌ಇಪಿ ರದ್ದು ಮಾಡುವುದಾಗಿ ಘೋಷಿಸಿತ್ತು. ಅಧಿಕಾರಕ್ಕೆ ಬಂದ ಕೂಡಲೇ ಎಸ್‌ಇಪಿ ಆಯೋಗವನ್ನು ರಚಿಸಿತ್ತು. ಹಲವು ಸುತ್ತಿನ ಸಭೆ, ಅಧ್ಯಯನ, ಸಮಾಲೋಚನೆಗಳನ್ನು ನಡೆಸಿದ್ದ ಸುಖದೇವ್ ಥೋರಟ್ ಅಧ್ಯಕ್ಷತೆಯ ಆಯೋಗ ಸರ್ಕಾರಕ್ಕೆ ಇತ್ತೀಚೆಗೆ ವರದಿ ಸಲ್ಲಿಸಿದೆ.

'2021-22ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ 6ನೇ ಸೆಮಿಸ್ಟರ್ ಇದೇ ಜೂನ್ ಒಳಗೆ ಪೂರ್ಣಗೊಳ್ಳಲಿದೆ. ಅವರನ್ನು ನಾಲ್ಕನೇ ವರ್ಷದ ಪದವಿಗೆ ಮುಂದುವರಿಸಬೇಕೇ? ಬೇಡವೇ ಎನ್ನುವುದು ತುರ್ತು ತೆಗೆದುಕೊಳ್ಳಬೇಕಾದ ನಿರ್ಧಾರ. ಹಾಗಾಗಿ, ಮೂರನೇ ವರ್ಷದ ಪದವಿ ಓದುತ್ತಿರುವ ವಿದ್ಯಾರ್ಥಿಗಳ 'ಆನರ್ಸ್' ಕನಸು ಆಯೋಗದ ವರದಿ ಆಧಾರದಲ್ಲಿ ಸರ್ಕಾರ ತೆಗೆದುಕೊಳ್ಳುವ ನಿರ್ಧಾರದ ಮೇಲೆ ಅವಲಂಬಿತವಾಗಿದೆ' ಎಂದು ಮೂಲಗಳು ಹೇಳಿವೆ.

ಎನ್‌ಇಪಿ-2020 ಅನ್ನು ರಾಜ್ಯದ ಉನ್ನತ ಶಿಕ್ಷಣದಲ್ಲಿ 2021-22ನೇ ಸಾಲಿನಿಂದಲೇ ಜಾರಿಗೊಳಿಸಲಾಗಿತ್ತು. ಪಿಯು ನಂತರ ಪದವಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ನಾಲ್ಕು ವರ್ಷಗಳ ಪದವಿ ವ್ಯಾಸಂಗ ಮಾಡಬಹುದಿತ್ತು. ಅಲ್ಲದೇ, ಪ್ರತಿವರ್ಷ ಪಡೆಯುವ ಪದವಿಗೆ ಪ್ರತ್ಯೇಕ ಪ್ರಮಾಣಪತ್ರ ನೀಡಲು ಅವಕಾಶ ಮಾಡಿಕೊಡಲಾಗಿತ್ತು. ಒಂದು ವರ್ಷ ಓದಿದವರಿಗೆ 'ಸರ್ಟಿಫಿಕೇಟ್ ಕೋರ್ಸ್', ಎರಡು ವರ್ಷ ಪೂರೈಸಿದರೆ 'ಡಿಪ್ಲೊಮಾ', ಮೂರು ವರ್ಷಕ್ಕೆ 'ಪದವಿ', ನಾಲ್ಕು ವರ್ಷಕ್ಕೆ 'ಆನರ್ಸ್' ನೀಡುವ ನಿಯಮ ಜಾರಿಗೊಳಿಸಲಾಗಿತ್ತು.

9ನೇ ಪುಟ ನೋಡಿ

ಆಯೋಗದ ಅವಧಿ ವಿಸ್ತರಣೆ?

ರಾಜ್ಯ ಶಿಕ್ಷಣ ನೀತಿ ರೂಪಿಸಲು ರಚಿಸಲಾದ ಆಯೋಗಕ್ಕೆ ಇದೇ ವರ್ಷದ ಫೆ.28ರವರೆಗೆ ಕಾಲಾವಕಾಶ ನೀಡಲಾಗಿತ್ತು. ಅವಧಿಯನ್ನು ಮತ್ತೆ ವಿಸ್ತರಿಸಲು ಆಯೋಗ ಕೋರಿಕೆ ಸಲ್ಲಿಸಿದ್ದು, ಮಾರ್ಚ್ ಅಂತ್ಯದವರೆಗೆ ಅವಧಿ ವಿಸ್ತರಣೆಯಾಗುವ ಸಾಧ್ಯತೆ ಇದೆ.

'ಆಯೋಗ ಸಲಹೆ ರೂಪದಲ್ಲಿ ಕೆಲವು ಶಿಫಾರಸುಗಳನ್ನು ಮಾಡಿದೆ. 2024-25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅಗತ್ಯವಾದ ನೀತಿಯನ್ನು ತುರ್ತಾಗಿ ರೂಪಿಸಬೇಕಿದೆ. ಹಾಗಾಗಿ, ಮಧ್ಯಂತರ ವರದಿ ಸಲ್ಲಿಸಲು ಸ್ವಲ್ಪ ಸಮಯ ನೀಡಲಾಗುವುದು. ಬೇರೆ ರಾಜ್ಯಗಳಲ್ಲಿ ಎನ್‌ಇಪಿ ಜಾರಿಗೆ ನಡೆಸಿದ್ದ ಸಿದ್ಧತೆ, ಅದರ ಸಾಧಕ-ಬಾಧಕಗಳನ್ನು ಸಮಗ್ರವಾಗಿ ಪರಿಶೀಲಿಸಿ, ನಂತರ ಸಮಗ್ರ ವರದಿ ನೀಡಲು ಹೆಚ್ಚಿನ ಕಾಲಾವಕಾಶ ಒದಗಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಸುಧಾಕರ್ ಮಾಹಿತಿ ನೀಡಿದರು.

'4 ವರ್ಷ ಪದವಿ ಅನಗತ್ಯ'

ಯೂರೋಪ್ ಸೇರಿದಂತೆ ಬಹುತೇಕ ರಾಷ್ಟ್ರಗಳಲ್ಲಿ ಮೂರು ವರ್ಷಗಳ ಪದವಿಗೆ ಆದ್ಯತೆ ನೀಡಲಾಗಿದೆ. ಅಮೆರಿಕ, ಕೆನಡಾ, ಆಸ್ಟ್ರೇಲಿಯಾ ಸೇರಿದಂತೆ ಕೆಲ ದೇಶಗಳು ಮಾತ್ರ ನಾಲ್ಕು ವರ್ಷದ ಪದವಿಯನ್ನು ಪ್ರೋತ್ಸಾಹಿಸುತ್ತಿವೆ. ಭಾರತದಂತಹ ದೇಶಗಳ ವಿದ್ಯಾರ್ಥಿಗಳಿಗೆ ಮೂರು ವರ್ಷಗಳ ಪದವಿ ಸೂಕ್ತವಾಗಿದೆ ಎನ್ನುವುದು ಬಹುತೇಕ ಶಿಕ್ಷಣ ತಜ್ಞರ ಅಭಿಪ್ರಾಯ. ಹಾಗಾಗಿ, ರಾಜ್ಯದ ವಿದ್ಯಾರ್ಥಿಗಳಿಗೆ ಅನುಕೂಲಕರವಾದ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಲಿದೆ ಎಂದು ಸುಧಾಕರ್ ಹೇಳಿದರು.

ಆಯೋಗ ನೀಡಿದ ಸಲಹೆ ರೂಪದ ವರದಿ ಸ್ವೀಕರಿಸಿದ್ದು, ಶಿಫಾರಸಿನ ಅಂಶಗಳನ್ನು ಪರಿಶೀಲಿಸಲಾಗುತ್ತಿದೆ. ವರದಿ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸಿ, ವಾರದೊಳಗೆ ನಿರ್ಧಾರ ತೆಗೆದುಕೊಳ್ಳಲಾಗುವುದು

ಡಾ.ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ

ಮುಖ್ಯಾಂಶಗಳು

- 3ನೇ ವರ್ಷದ ಪದವಿ ವಿದ್ಯಾರ್ಥಿಗಳ 'ಆನರ್ಸ್' ಕನಸು ಅತಂತ್ರದಲ್ಲಿ
- ಬಹು ಪ್ರವೇಶ-ನಿರ್ಗಮನಕ್ಕೆ ವಿರೋಧ

ಆಯೋಗದ ಹಾದಿ...	
ಆಯೋಗ ರಚನೆ	ಅ.11, 2023
ಮೊದಲ ಸಭೆ	ನ.3, 2023
9 ಉಪ ಸಮಿತಿಗಳ ರಚನೆ	ನ.3, 2023
ಆಯೋಗಕ್ಕೆ ನೀಡಿದ್ದ ಅವಧಿ	ಫೆ.28, 2024
ಆಯೋಗದ ಅಧ್ಯಕ್ಷ ಸುಖದೇವ್ ಥೋರಟ್	
ಸದಸ್ಯರ ಸಂಖ್ಯೆ	11
ಸಲಹಾ ಸಮಿತಿ ಸದಸ್ಯರು	8

ಟೈಲರ್ ಸಮಾವೇಶ ಬೆಂಗಳೂರಿನಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಟೈಲರ್ಸ್ ಸಂಘದಿಂದ ಆಯೋಜಿಸಿದ್ದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಸಂಘದ ಸದಸ್ಯರು –ಪ್ರಜಾವಾಣಿ ಚಿತ್ರ

ಚಾರಣಪಥಗಳಿಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ವಾರ ಸಾವಿರಾರು ಸಂಖ್ಯೆಯಲ್ಲಿ ಬರುವ ಚಾರಣಿಗರು ಪಶ್ಚಿಮ ಘಟ್ಟದ ಪ್ರದೇಶ, ಅರಣ್ಯದ ಗಿರಿ ಪ್ರದೇಶಗಳು, ಜಲಮೂಲಗಳಿಗೆ ಹಾನಿ ಮತ್ತು ಮಾಲಿನ್ಯ ಮಾಡುತ್ತಿರುವುದರಿಂದ ಚಾರಣ ಪಥಗಳಿಗೆ ನಿರ್ಬಂಧ ವಿಧಿಸುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಅರಣ್ಯದ ಅಂಚಿನ ಗ್ರಾಮಗಳಲ್ಲಿ ಮತ್ತು ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಮನಸೋಇಚ್ಛೆ ಪ್ಲಾಸ್ಟಿಕ್, ಕ್ಯಾರಿಬ್ಯಾಗ್, ಬಾಟಲಿ, ತಟ್ಟೆ, ಉಳಿದ ಆಹಾರ ಪದಾರ್ಥಗಳನ್ನು ಚಾರಣಿಗರು ಎಸೆಯುತ್ತಿದ್ದಾರೆ. ಇದರಿಂದ ವನ್ಯಜೀವಿಗಳಿಗೂ ಅಪಾಯ ಉಂಟಾಗುತ್ತಿದೆ. ಅಪಾರ ಸಂಖ್ಯೆಯ ಜನರನ್ನು ನಿಯಂತ್ರಿಸುವುದು ಮತ್ತು ಪ್ರತಿಯೊಬ್ಬರನ್ನು ತಪಾಸಣೆ ಮಾಡಿ ಬಿಡುವುದು ಅರಣ್ಯ ಇಲಾಖೆಯ ಸಿಬ್ಬಂದಿಗೂ ಸವಾಲಾಗಿದೆ ಎಂದಿದ್ದಾರೆ.

ಇದೇ 26ರಂದು ಪುಷ್ಪಗಿರಿ ಅರಣ್ಯ ವ್ಯಾಪ್ತಿಯ ಕುಮಾರಪರ್ವತಕ್ಕೆ ಒಂದೇ ದಿನ ಸಾವಿರಾರು ಚಾರಣಿಗರು ಭೇಟಿ ಕೊಟ್ಟ ಕಾರಣ ಅರಣ್ಯದೊಳಗೆ ಜನಜಂಗುಳಿ ಆಗಿತ್ತು. ಮುಂದಿನ ದಿನಗಳಲ್ಲಿ ಅರಣ್ಯದೊಳಗೆ ಜನಜಂಗುಳಿ ತಪ್ಪಿಸಲು ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಇಲ್ಲದ ಚಾರಣ ಪಥಗಳಿಗೆ ತಾತ್ಕಾಲಿಕ ನಿರ್ಬಂಧ ವಿಧಿಸಲಾಗಿದೆ.

9ನೇ ಪುಟ ನೋಡಿ

ಬಿಜೆಪಿ ಜಯಭೇರಿ; 'ಇಂಡಿಯಾ'ಕ್ಕೆ ಸೋಲು 13

'ಕನ್ನಡ ಫಲಕ: ಸುಗ್ರೀವಾಜ್ಞೆ ವಾಪಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿರುವ ಎಲ್ಲ ಅಂಗಡಿ, ಹೋಟೆಲ್, ವಾಣಿಜ್ಯ ಸಂಕೀರ್ಣ, ಕೈಗಾರಿಕೋದ್ಯಮಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಕೆ ಕಡ್ಡಾಯ ಮಾಡಿ ಹೊರಡಿಸಿದ್ದ ಸುಗ್ರೀವಾಜ್ಞೆಯನ್ನು ರಾಜ್ಯಪಾಲರು ಅಂಕಿತ ಹಾಕದೆ ವಾಪಸು ಮಾಡಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ನಾಮಫಲಕಗಳು ಶೇ 60ರಷ್ಟು ಕನ್ನಡದಲ್ಲೇ ಇರಬೇಕು ಎಂದು ನಾವು ಕಾನೂನು ಮಾಡಿ ಸುಗ್ರೀವಾಜ್ಞೆ ಹೊರಡಿಸಿದ್ದೆವು. ಇದಕ್ಕೆ ರಾಜ್ಯಪಾಲರು ಅಂಕಿತ ಹಾಕಬಹುದಾಗಿತ್ತು. ಆದರೆ, ಅವರು ವಿಧಾನ ಮಂಡಲ ಅಧಿವೇಶನದಲ್ಲಿ ಮಸೂದೆ ಮಂಡಿಸುವಂತೆ ಸೂಚಿಸಿದ್ದಾರೆ' ಎಂದರು.

ನಾಮಫಲಕಗಳಲ್ಲಿ ಕನ್ನಡ ಬಳಸದೇ ಇರುವುದನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಟಿ.ಎ. ನಾರಾಯಣಗೌಡರ ಬಣದ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆದಿತ್ತು. ದೇವನಹಳ್ಳಿ ಸಮೀಪದ ಸಾದಹಳ್ಳಿ ಗೇಟ್‌ನಿಂದ ಹೊರಟ ಮೆರವಣಿಗೆ ಸಂಘರ್ಷಕ್ಕೂ ಕಾರಣವಾಗಿತ್ತು. ಕೆಲವು ಕಡೆಗಳಲ್ಲಿ ನಾಮಫಲಕಗಳನ್ನು ಪ್ರತಿ ಭಟನಕಾರರು ಒಡೆದು ಹಾಕಿದ್ದರು. ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದರು. ನಾರಾಯಣಗೌಡ ಸೇರಿದಂತೆ 40ಕ್ಕೂ ಹೆಚ್ಚು ಜನರನ್ನು ಬಂಧಿಸಿ, ಜೈಲಿಗೆ ಕಳುಹಿಸಲಾಗಿತ್ತು.

ರಕ್ಷಣಾ ವೇದಿಕೆಯ ಕಾರ್ಯಕರ್ತರ ಪ್ರತಿಭಟನೆ ತೀವ್ರಗೊಂಡ ಹಿನ್ನೆಲೆಯಲ್ಲಿ ಉನ್ನತಮಟ್ಟದ ಸಭೆ ನಡೆಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಭಾಷೆಯ ಅನುಷ್ಠಾನಕ್ಕೆ 2024ರ ಫೆ.28ರ ಗಡುವು ವಿಧಿಸಿದ್ದರು. ಈ ಉದ್ದೇಶದಿಂದ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ' ಕಾಯ್ದೆಯ ಸೆಕ್ಷನ್ 17 (6)ಕ್ಕೆ ತಿದ್ದುಪಡಿ ತಂದು ಅಧಿಸೂಚನೆ ಹೊರಡಿಸಲು ಮತ್ತು ನಿಯಮಗಳನ್ನು ರೂಪಿಸಲು ತಕ್ಷಣ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದರು. ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದು ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ ಹೊರಡಿಸಲು ತೀರ್ಮಾನಿಸಲಾಗಿತ್ತು.

ಇಂದಿನಿಂದ ಬಜೆಟ್ ಅಧಿವೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನ ಬುಧವಾರ ಆರಂಭವಾಗಲಿದ್ದು, ಲೋಕಸಭಾ ಚುನಾವಣೆಗೆ ಮುನ್ನ ಮಧ್ಯಂತರ ಬಜೆಟ್ ಮಂಡಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಸಜ್ಜಾಗಿದೆ.

ಲೋಕಸಭೆ ಹಾಗೂ ರಾಜ್ಯಸಭೆಯ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ಭಾಷಣ ಮಾಡಲಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಗುರುವಾರ ಮಧ್ಯಂತರ ಬಜೆಟ್ ಮಂಡಿಸಲಿದ್ದಾರೆ. ಈ ಬಜೆಟ್‌ನಲ್ಲಿ ದೊಡ್ಡ ಘೋಷಣೆಗಳು ಇರುವುದಿಲ್ಲ ಎಂದು ನಿರ್ಮಲಾ ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಲೋಕಸಭಾ ಚುನಾವಣೆಯ ಬಳಿಕ ನೂತನ ಸರ್ಕಾರ ಪೂರ್ಣ ಪ್ರಮಾಣದ ಬಜೆಟ್ ಮಂಡನೆ ಮಾಡಲಿದೆ.

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕರ್ತವ್ಯಲೋಪ: ಡಿಡಿಪಿಐ ಸೇರಿ ಐವರ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೌಢಶಾಲಾ ಹಂತದಲ್ಲಿ ಓದುತ್ತಿರುವ ಅಂಗವಿಕಲ ಮಕ್ಕಳಿಗೆ ರೂಪಿಸಿದ ವಿಶೇಷ ಯೋಜನೆ (ಐಇಡಿಎಸ್‌ಎಸ್) ಅನುಷ್ಠಾನದಲ್ಲಿ ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಡಿಡಿಪಿಐ ಸೇರಿ ಐವರು ಅಧಿಕಾರಿಗಳನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಮಾನತು ಮಾಡಿದೆ.

ವಿಜಯಪುರ ಜಿಲ್ಲೆ ಉಪ ನಿರ್ದೇಶಕ (ಡಿಡಿಪಿಐ) ಎನ್‌.ಎಚ್‌. ನಾಗೂರ, ಸ್ಥಳ ನಿರೀಕ್ಷೆಯಲ್ಲಿರುವ ಡಿಡಿಪಿಐ ಪುಂಡಲೀಕ, ವಿಜಯಪುರ ಡಯಟ್ ಉಪನ್ಯಾಸಕರಾದ ಎ.ಎಸ್‌.ಹತ್ತಳ್ಳಿ, ಎಸ್‌.ಎ.ಮುಜಾವರ್, ಬೆಳಗಾವಿ ಅಕ್ಷರ ದಾಸೋಹ ಅಧಿಕಾರಿ ಬಿ.ಎಚ್‌.ಮಿಲ್ಲನ ಶೆಟ್ಟಿ ಅಮಾನತುಗೊಂಡವರು.

ಪ್ರೌಢಶಾಲಾ ಹಂತದಲ್ಲಿ ಓದುತ್ತಿರುವ ಅಂಗವಿಕಲ ಮಕ್ಕಳಿಗೆ ವಿಶೇಷ ಕಲಿಕಾ ವ್ಯವಸ್ಥೆ, ಪುಸ್ತಕ, ಲೇಖನ ಸಾಮಗ್ರಿ, ಸಮವಸ್ತ್ರ, ಸಾಧನ ಸಲಕರಣೆ, ಕಲಿಕಾ ಬೋಧನಾ ಸಾಮಗ್ರಿಗಳ ಪೂರೈಕೆ, ವಿಶೇಷ ಶಿಕ್ಷಕರ ಗೌರವಧನದ ವೆಚ್ಚವಾಗಿ 2009–10ನೇ ಸಾಲಿನಿಂದ 2013–14ರವರೆಗೆ ₹18.39 ಕೋಟಿ ಖರ್ಚು ಮಾಡಲಾಗಿತ್ತು.

ಕೇಂದ್ರ ಸರ್ಕಾರದ ಅನುದಾನದ ಸಮನ್ವಯ ಶಿಕ್ಷಣ ಯೋಜನೆಯ ಅಡಿ ಜಾರಿಗೆ ತಂದಿದ್ದ ಯೋಜನೆಯಲ್ಲಿ ₹2.18 ಕೋಟಿ ಅನುದಾನ ದುರ್ಬಳಕೆಯಾಗಿದೆ ಎಂಬ ಆರೋಪದ ಮೇಲೆ ಮೂವರು ನಿರ್ದೇಶಕರೂ ಸೇರಿ 56 ಅಧಿಕಾರಿಗಳ ವಿರುದ್ಧ ಆರು ತಿಂಗಳ ಹಿಂದೆ ಎಫ್‌ಐಆರ್ ದಾಖಲಾಗಿತ್ತು. ಅವರಲ್ಲಿ ಹಲವರು ನಿವೃತ್ತರಾಗಿದ್ದು, ಕೆಲವರು ನಿಧನ ಹೊಂದಿದ್ದರು. 22 ಅಧಿಕಾರಿಗಳು ಹಾಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈಗ ಐವರನ್ನು ಅಮಾನತು ಮಾಡಲಾಗಿದೆ.

ಅಪೌಷ್ಟಿಕತೆ ನಿವಾರಣೆ ಸವಾಲು: ಶರಣಪ್ರಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳು ಮತ್ತು ಮಹಿಳೆಯರು ಹೆಚ್ಚಾಗಿ ಅಪೌಷ್ಟಿಕತೆ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇದನ್ನು ಹೋಗಲಾಡಿಸಲು ಪೌಷ್ಟಿಕ ಆಹಾರ ವಿತರಣೆ ಸೇರಿ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಕೌಶಲ್ಯಾಭಿವೃದ್ಧಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದರು.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ, ರಾಷ್ಟ್ರೀಯ ಜೀವನೋಪಾಯ ಅಭಿಯಾನ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಆಹಾರ ಪೌಷ್ಟಿಕತೆ, ಆರೋಗ್ಯ ಮತ್ತು ನೈರ್ಮಲ್ಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

'ಸಮಾಜದಲ್ಲಿ ಅನಕ್ಷರತೆ ಮತ್ತು ಬಡತನ ಈಗಲೂ ಇದೆ. ಬಡವರಿಗೆ ಪೌಷ್ಟಿಕ ಆಹಾರ ಅಗತ್ಯ ಪ್ರಮಾಣದಲ್ಲಿ ಸಿಗುತ್ತಿಲ್ಲ. ಹೀಗಾಗಿ, ಮಕ್ಕಳಲ್ಲಿನ ಪೌಷ್ಟಿಕಾಂಶದ ಕೊರತೆ ನೀಗಿಸಲು ಸರ್ಕಾರವು ಶಾಲೆಗಳಲ್ಲಿ ವಾರಕ್ಕೆ ಎರಡು ದಿನ ಮೊಟ್ಟೆ ವಿತರಿಸುತ್ತಿದೆ. ಮೊಟ್ಟೆ ತಿನ್ನದ ಮಕ್ಕಳಿಗೆ ಬಾಳೆ ಹಣ್ಣು ಮತ್ತು ಚಿಕ್ಕಿ ನೀಡಲಾಗುತ್ತಿದೆ. ಇಷ್ಟಾಗಿಯೂ ಹೆಚ್ಚುತ್ತಿರುವ ಅಪೌಷ್ಟಿಕತೆಯನ್ನು ಹೋಗಲಾಡಿಸುವುದು ಸವಾಲಾಗಿದೆ' ಎಂದು ಹೇಳಿದರು.

'ನವಜಾತ ಶಿಶುಗಳು, ಮಕ್ಕಳು, ಹದಿಹರೆಯದವರು, ಗರ್ಭಿಣಿಯರು, ತಾಯಂದಿರಲ್ಲಿ ರಕ್ತಹೀನತೆ ಮತ್ತು ಅಪೌಷ್ಟಿಕತೆ ನಿವಾರಿಸಲು 'ಅನಿಮಿಯ ಮುಕ್ತ ಪೌಷ್ಟಿಕ ಕರ್ನಾಟಕ' (ಎಎನ್‌ಪಿಕೆ) ಯೋಜನೆಯನ್ನು ಸರ್ಕಾರ ಜಾರಿ ಮಾಡಿದೆ. ಆರೋಗ್ಯ ಸುಧಾರಣೆಗೆ ಇದು ಸಹಕಾರಿಯಾಗಿದೆ. ಯಾವುದೇ ಒಂದು ಯೋಜನೆ ಅಥವಾ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಮಹಿಳೆಯರ ಪಾತ್ರ ಮುಖ್ಯವಾಗುತ್ತದೆ. ಈ ಹಿಂದೆ ಎಸ್‌.ಎಂ.ಕೃಷ್ಣ ಅವರು ಪ್ರಾರಂಭಿಸಿದ್ದ 'ಸ್ತ್ರೀ ಶಕ್ತಿ ಸ್ವಸಹಾಯ ಗುಂಪು'ಗಳು ಗ್ರಾಮೀಣ ಭಾಗದ ಆರ್ಥಿಕ ಸುಧಾರಣೆಗೆ ಮುನ್ನುಡಿ ಬರೆದಿವೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸ್ವಸಹಾಯ ಸಂಘಗಳು ಸೇರಿ ಅನೇಕ ಸಂಘ ಸಂಸ್ಥೆಗಳು ಆರ್ಥಿಕ ಸ್ವಾವಲಂಬನೆ, ಮಹಿಳೆಯರ ಸಬಲೀಕರಣಕ್ಕೆ ಒತ್ತು ಕೊಟ್ಟಿವೆ. ಇಂದಿನ ಸಮಾಜಕ್ಕೆ ಇಂತಹ ಸಂಘಗಳ ಅಗತ್ಯವಿದೆ' ಎಂದರು.

'ಲಾಬಿಗೆ ಅವಕಾಶ ನೀಡಿಲ್ಲ'

'ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಹುದ್ದೆಗೆ 22 ಅರ್ಜಿ ಸಲ್ಲಿಕೆಯಾಗಿದ್ದವು. ಅವುಗಳಲ್ಲಿ 11 ಅರ್ಜಿಗಳ ಕಿರುಪಟ್ಟಿಯನ್ನು ಇಲಾಖೆ ತಯಾರಿಸಿತ್ತು. ನೇಮಕಾತಿಗೆ ಸಂಬಂಧಿಸಿದಂತೆ ಯಾವುದೇ ಲಾಬಿಗೆ ಅವಕಾಶ ನೀಡಿಲ್ಲ. ಡಾ.ಸಿ.ಎನ್‌. ಮಂಜುನಾಥ್ ಅವರು ಇದೇ 31ರಂದು ನಿವೃತ್ತರಾಗುತ್ತಾರೆ. ನಿರ್ದೇಶಕರ ನೇಮಕಾತಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಸಭೆ ಕರೆದಿದ್ದಾರೆ. ಇದೇ ಸಭೆಯಲ್ಲಿ ಮುಂದಿನ ನಿರ್ದೇಶಕರು ಯಾರೆಂದು ನಿರ್ಧಾರವಾಗುತ್ತದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ನೆಪ್ರೊ ಯುರಾಲಜಿ ಸಂಸ್ಥೆಯ ನಿರ್ದೇಶಕರ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಇಲಾಖೆ ರಚಿಸಿದ್ದ ಆಂತರಿಕ ಸಮಿತಿಗಳು ವರದಿ ಸಲ್ಲಿಸಿವೆ. ಈ ವರದಿಯ ಆಧಾರದಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಿದೆ' ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಕರಕುಶಲ ವಸ್ತುಗಳನ್ನು ಶರಣಪ್ರಕಾಶ ಪಾಟೀಲ ವೀಕ್ಷಿಸಿದರು. ಉಮಾ ಮಹದೇವನ್, ಸ್ಮೃತಿ ಶರಣ್ ಪಾಲ್ಗೊಂಡಿದ್ದರು

ಗಮನ ಸೆಳೆದ ವಸ್ತು ಪ್ರದರ್ಶನ: ಕಾರ್ಯಾಗಾರದ ಪ್ರಯುಕ್ತ ಹಮ್ಮಿಕೊಂಡಿದ್ದ ವಸ್ತು ಪ್ರದರ್ಶನ ಎಲ್ಲರ ಗಮನಸೆಳೆಯಿತು. ಕರ್ನಾಟಕ, ಅಸ್ಸಾಂ, ಸಿಕ್ಕಿಂ, ನಾಗಾಲ್ಯಾಂಡ್, ಮಿಜೋರಾಂ, ಪಶ್ಚಿಮ ಬಂಗಾಳ, ಮಣಿಪುರ, ಕೇರಳ ಸೇರಿ 19 ರಾಜ್ಯಗಳ ಮಳಿಗೆಗಳು ಪ್ರದರ್ಶನದಲ್ಲಿ ಇದ್ದವು. ಸ್ಥಳೀಯ ಉತ್ಪನ್ನಗಳಿಂದ ತಯಾರಿಸಿದ ಪೌಷ್ಟಿಕ ಆಹಾರೋತ್ಪನ್ನ ಹಾಗೂ ತೆಂಗಿನ ಎಣ್ಣೆ ಸೇರಿ ವಿವಿಧ ವಾಣಿಜ್ಯೋತ್ಪನ್ನಗಳು ಪ್ರದರ್ಶನದಲ್ಲಿ ಇದ್ದವು.

ಕೌಶಲ್ಯಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಉಮಾ ಮಹದೇವನ್, ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಜಂಟಿ ಕಾರ್ಯದರ್ಶಿ ಸ್ಮೃತಿ ಶರಣ್, ರಾಷ್ಟ್ರೀಯ ಜೀವನೋಪಾಯ ಮಿಷನ್ ನಿರ್ದೇಶಕಿ ಪಿ.ಐ.ಶ್ರೀವಿದ್ಯಾ, ಕೆ.ಎಂ.ಎ.ಎಸ್ ಮುಖ್ಯ ನಿರ್ವಹಣಾಧಿಕಾರಿ ಅನುಪಮಾ ಪಾಲ್ಗೊಂಡಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

WANTED: COMPUTER OPERATOR & TELEMARKETING STAFF FOR REAL ESTATE DEVELOPER OFFICE SANJAYNAGAR RMV 2ND-STAGE: 9035883017

WANTED FEMALE Admin Assistant and Delivery Boys Should stay around Kalyannagar Bangalore.contact: 9980564542

Multiple Vacancy

WANTED EXPERIENCED 1)Advocate with strong knowledge in civil conveyance with legal Opinion,Minimum 3years of Experience 2)Sales Executives Fresher/Experience Candidates Equinox Global Shelters Office @ Jakkur, Attractive salary 8217482988, egsadm159@gmail.com

Teachers/ Professors

HOLY ANGEL'S High School Hampinagar, Vijayanagar, Bengaluru-560104. Phone-23404465/ 23202042 holyangels.highschoolr pclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc.,B.Ed. M.A/M.Sc.,M.Ed, N.T.T, CP.Ed. Only English medium candidates need to apply.

CAMLIN HIGH SCHOOL
State Board Nursery to X
6th 'C' Main, 4th Cross, Near 7th Main Bus Stop Hampinagar, Vijayanagar 2nd Stage, Bengaluru-560104
Phone : 080-23301363
ESTD. 1981

REQUIRED

PRINCIPAL / VICE PRINCIPAL
Lady candidates with a minimum qualification of M.A. / M.Sc. and B.Ed. with 5 years of experience as Principal / Vice Principal

HIGH SCHOOL & HIGHER PRIMARY
Experienced Trained Teachers to Teach English, Kannada, Hindi, Maths, Science, Social Science, Drawing, Yoga, Music, P.E. Computer Science

PRIMARY & NURSERY
Experienced Trained TCH / D.Ed / NTT / Montessori

OTHERS
Security Guard, Attenders and Ayas.

Hand return application along with resume with recent passport size photo to be submitted to the above address by post / in person to Secretary

National Public School
Kanakapura Road, Agara

RECRUITMENT FOR THE YEAR 2024-25

KINDERGARTEN, PRIMARY, SECONDARY, SENIOR SECONDARY TEACHERS, COORDINATORS, MUSIC TEACHERS, ART TEACHERS, SPORTS COACHES, FRONT OFFICE EXECUTIVES, ACCOUNTANT AND LAB ATTENDANT

TRAINED NTT/MONTESSORI, B.ED GRADUATES, POST GRADUATES, IB AND IGCSE

ENGLISH, MATHEMATICS, BIOLOGY, CHEMISTRY, PHYSICS, SOCIAL SCIENCE, COMPUTER SCIENCE, KANNADA, HINDI, ACCOUNTANCY (CBSE)

All subjects (IGCSE, IB)

ATTRACTIVE PAY PACKAGES

info@npsagara.com 7996666777

#118/4 Kumbalagodu Road, Agara Village, Thathaguni Post, Off Kanakapura Road, Bangalore - 560062.

COLUMBIA GROUP OF INSTITUTIONS
JP Nagar, Bangalore
WANTED
LECTURERS
in HOD Kannada/ Commerce / English/ History/ Economics / PCMB Computer Science
TEACHERS
for Science/ Maths / Social /Computer /Clerk
Contact: 9845457012

REQUIRED FOR KIDZEE Horamavu. Centre`Head Co_ordinator Kindergarten Teachers Housekeeping Staff Good Salary and Benefits Offered. Contact: 9483448722.

St. Joseph's College of Commerce (Autonomous)
163 Brigade Road, Bengaluru 560025
Faculty Positions:
Assistant/Associate Professors in Commerce & Management, Economics, Accounting & Finance, Mathematics & Statistics, Information Systems/IT and Data Analytics.
Qualification: Post-Graduate degree with NET/SLET/Ph.D. can apply.
Accounts Manager:
Qualification: B. Com graduates with 10 years managerial experience / CA Inter completed candidates can apply.
Applications with CV should be mailed to: HR@sjcc.edu.in before 10th February 2024 Visit www.sjcc.edu.in for more information.
The Secretary
Bangalore Jesuit Educational Society (Reg.)
Jesuit Nivas, 35 Museum Road, Bengaluru-560025

DH ಪ್ರಜಾವಾಣಿ
Classifieds More value, more impact
JOB HUNT
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

VIDYA SOUDHA GROUP OF INSTITUTIONS
No.9/1, 1st Main Peenya, 1st Stage, Near Basaveshwara Bus Station, Bangalore – 560 058. www.vidyasoudha.edu.in

VIDYA SOUDHA PUBLIC SCHOOL, BANGALORE

VICE PRINCIPAL
Qualification: Post Graduate with B.Ed
Experience: Min 3 years as Vice Principal in any reputed ICSE School

HIGH SCHOOL
Subject Teachers: English, Maths, Computers, Geography
Qualification: Post Graduate with B.Ed | Experience: 5 years

PRIMARY SCHOOL
Coordinator
Qualification: Post Graduate with B.Ed | Experience: Min 3 years as Coordinator
Subject Teachers: English, Maths, Science, Social, Hindi
Qualification: Graduate with B.Ed. | Experience: 4 years

NURSERY
Qualification: Graduate with NTT/MTT/ECCE | Experience: 3 years

PHYSICAL EDUCATION (P.E.), MUSIC, LIBRARIAN & COUNSELLOR
Qualification: Masters Degree/Degree in relevant field | Experience: 3 years

VIDYA SOUDHA PU COLLEGE, BANGALORE

LECTURERS IN PHYSICS AND CHEMISTRY
Qualification: M.Sc.,with B.Ed
Experience: 5 to 10 years. Preferably CET teaching experience.

LECTURER IN ENGLISH AND SANSKRIT
Qualification: M.A.,with B.Ed. | Experience: 3 to 5 years

ADMIN/MARKETING EXECUTIVE & HOUSEKEEPING SUPERVISOR
Qualification: Any Degree | Experience: 2 to 5 years in colleges

Call us: 8971566659 hr@vidyasoudha.edu.in
APPLY BEFORE 10TH FEB 2024

Engg/ Production Technical

WANTED VMC OPERATOR with Programming, Experience 2-3 years for Industry in Peenya. Immediate Appointment. Contact: 9972410541, 9845915484 infusilindia@infusil.in

Marketing & Sales

REQUIRED SALES cum receptionist for our hair product sales depot in commercial street Bangalore. Call 9382232999

General

WANTED-FOR DATA ENTRY job in accounts department Qualification PU or B.com passed wilson-garden siddaiah Road near shantinagar bus-stop Call:9535218502 9845351200.

WANTED DELIVERY BOYS, OFFICE ASSISTANTS for Reputed Dairy Agencies in Jayanagar. Attractive Salary. Contact immediately 9880204270/ 8884327849

WANTED IMMEDIATELY PLACEMENT MANAGER, TRAVELS MANAGER, BUSINESS EXECUTIVES, RECEPTIONIST, TELECALLERS, CAB DRIVERS. Good Salary. Bengaluru South Candidates Call: 99000-54461/62

WANTED FOR Garments Industry. Tailors men/ women with minimum 4 years of experience (15 number). Contact- Finesse Inc, 21 Jiwraj Heights 11 cross road, Chinnayanpalya, Wilson Garden, Bangalore. Karnataka 560027. Phone: 6362564671

SHARANYA TELTRONICS requires Sales, Service, Accounts, Office Executives. Call 9845010634 email rajendiran@sharanyateltronics.com

Walk-in

WANTED AUDIT ASSISTANT.- 12 ACCOUNTS ASSISTANT.-6 OFFICE ASSISTANT. 3 QUALIFICATION- B.Com., with or without experience but Computer knowledge, MS Office & Tally is must, to work in an Chartered Accountant Firm Preferably in & around Hebbal & Yelahanka limits. Whatsapp. 9060145466

EDUCATIONAL

Training

DIPLOMA IN NTT/ MTT, regular/ online/ distance, 1Year/ 6 months placement assist, Call: TSA. 9986863752.

REAL ESTATE SELLING

Commerical

Sarjapur Road

COMMERCIAL 39000Sft Suitable For Complex,Near Dommasandra Circle RS 6500/- Sft Buyers Contact : 8884501767

Flat

Basavanagudi

SALE BASAVANAGUDI Prime Location Flat 3BHK 1550sft North Face A-Katha Clear Tittle Ready Occupation: 9886019240

House

Vidyaranyapura

4BHK, FULLY furnished, 10 CCP , 24 Hrs Kaveri & Bore water, Granite flooring, Home Theatre, kerala architect designed , censor control lights, 100% vaastu, very near to Vidyaranyapura Bus terminus for sale Brokers excuse ,Contact Mob 9880343275

REAL ESTATE BUYING

Sites

Vishweshwariah Layout

URGENTLY REQUIRED BDA 30x40 Site or 60x40 Site in Vishweshwaraiah Layout (any block). Brokers Excuse. Contact: 9448018447.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business Offers

Finance

NRI'S INVESTMENTS and Finance through Banking Available On-low interest against Properties,Land&Building,Sites,Flat also take over Loans NPA cases from Any Banks:7204995189

PERSONAL

Change of Name

I ANANTHESH Billava Rajesh S/O Rajesh BS have changed my name to Ananthesh Billava

CHANGE OF NAME
I, **SHARATH KUMAR.P.V** S/o M.P.Venkatesh residing at No.146, Lakshmanaiah Layout, Subhash Nagar, Nelamangala - 562123. My Name is Wrongly recorded as **Manjunatha.P.V** in LIC Policy and my Mother's Service Record Book. My Name is **Sharath Kumar.P.V** in all Other Records is True and correct my Name as **SHARATH KUMAR.P.V.** Vide affidavit Sworn before advocate R.Lakshminarayana Dated 29-01-2024

I, JINCY Suresh W/o Sri Suresh N, aged about 46 Years, residing at Shalom A.G Church, Manighatta Road, Near Siddarth High School, Hodalavadi Kolar 563101. Have changed my name to Jincy M K vide affidavit dated 30.01.2024 before Notary K M Vijaya Kumar Kolar. Henceforth I shall be called as Jincy M.K only

CHANGE OF NAME
I, **MUKUND PATIL,** Residing at # F4, JC Pearl Apartment, Jayalakshmamma Layout, Nagarabhavi 2nd Stage, Bengaluru - 560072, have changed my name to **MUKUND P PATIL** vide affidavit dt:30-01-2024, before Notary S.I. Balaguru, Bengaluru, Henceforth I shall be called **MUKUND P PATIL** only.

ಹೆಸರು ಬದಲಾವಣೆ
ಶ್ರೀನಿವಾಸ ಕೆ.ಇ. ಎಂಬ ನಾನು, ಕುದುಪಕುಂಟೆ ಗ್ರಾಮ, ಬಶೆಟ್ಟಹಳ್ಳಿ ಹೋ॥, ಶಿಡ್ಲಘಟ್ಟ ತಾ॥ ಚಿಕ್ಕಬಳ್ಳಾಪುರ ಜಿಲ್ಲೆಯ ವಿಳಾಸದಲ್ಲಿ ವಾಸಿಯಾಗಿದ್ದು, ನನ್ನ ಮಗಳ ಹೆಸರು ಹಾಸಿನಿ ಎಸ್, ಶ್ರೀನಿವಾಸ ಹಾಸಿನಿ ಎಂದು ದಾಖಲಾಗಿದೆ. ಇದೀಗ ಅವಳ ಹೆಸರನ್ನು **ಹಾಸಿನಿ ಶ್ರೀನಿವಾಸ** ಎಂದು ಬದಲಾಯಿಸಿದ್ದೇವೆ ಮತ್ತು ಚಿಂತಾಮಣಿ ನೋಟರಿಯವರಾದ ಮಂಜುನಾಥ ರೆಡ್ಡಿ ಅವರ ಎದುರು 19/01/2023 ರಂದು ಪ್ರಮಾಣೀಕರಿಸಿದ್ದೇವೆ.

I, JAVERIA B A w/o Muktar Ahamed #100 Heribidanuru Beside Eshwara Temple Gauribidanur- 561208, Have Changed My Name Javeria Sultana for All Purpose

I, NIKHIL SATYAKUMAR Residing at No.324,3rd Main,Vyalikaval Layout, Vijaynagar, Bangalore hereby state that I abandon my old name NIKHIL SATHYA KUMAR alias NIKHIL S and be called and continued as NIKHIL SATYAKUMAR only vide affidavit dated 24-01-2024 before notary M.K.Devaki, Bangalore.

CHANGE OF NAME
I, **A. GURU DUTT,** Residing at # 59, 8th Cross, ITI Layout, JP Nagar 1st Phase, Bangalore - 560078, have changed my name to **A. GURU DATT** vide affidavit dt:18-01-2024, before Notary R. Vishwanath, Bangalore, Henceforth I shall be called **A. GURU DATT** only.

ಹೆಸರು ಬದಲಾವಣೆ
ಶ್ರೀನಿವಾಸ ಕೆ.ಇ. ಎಂಬ ನಾನು, ಕುದುಪಕುಂಟೆ ಗ್ರಾಮ, ಬಶೆಟ್ಟಹಳ್ಳಿ ಹೋ॥, ಶಿಡ್ಲಘಟ್ಟ ತಾ॥ ಚಿಕ್ಕಬಳ್ಳಾಪುರ ಜಿಲ್ಲೆಯ ವಿಳಾಸದಲ್ಲಿ ವಾಸಿಯಾಗಿದ್ದು, ನನ್ನ ಹೆಸರು ಶ್ರೀನಿವಾಸ ಕೆ.ಇ, ಕುದುಪಕುಂಟೆ ಈರಪ್ಪ ಶ್ರೀನಿವಾಸ ಎಂದು ದಾಖಲಾಗಿದೆ. ಇದೀಗ ನನ್ನ ಹೆಸರನ್ನು **ಶ್ರೀನಿವಾಸ ಕುದುಪಕುಂಟೆ ಈರಪ್ಪ** ಎಂದು ಬದಲಾಯಿಸಿಕೊಂಡಿರುತ್ತೇನೆ ಮತ್ತು ಚಿಂತಾಮಣಿ ನೋಟರಿಯವರಾದ ಮಂಜುನಾಥ ರೆಡ್ಡಿ ಅವರ ಎದುರು 19/01/2023 ರಂದು ಪ್ರಮಾಣೀಕರಿಸಿದ್ದೇನೆ.

I, NIDHI RAHUL NAMJOSHI, resident of M0770, Divyasree republic of Whitefield, Kundalhalli, Brookfield, Bengaluru-560066, have changed my name to NIDHI NAMJOSHI vide affidavit Dated 28/01/2024 before Notary public. Prakasha.C Bengaluru.

I MANOJ KUMAR MEHTA R/a, Flat #403, 4th floor Seasons Apartment, No.92, Surveyor Street, Basavanagudi Bengaluru-560004 Have Changed my Name To MANOJ KUMAR S MEHTA Vide Affidavit Dated 09/01/2024 before Notary B. CHITRA Bangalore.

Lost

DOCUMENT LOST
I, **ABHIRAMI,** W/o Suresh M, aged about 44 yrs, R/at #120, Dharmaraja Koil Street, Shivaji Nagar, Bengaluru, have lost my **Original Sale Deed Document No/ Identification No: BK-I 674/12-13,** While in transit.
Finders please contact: **9980888733** or inform nearby the police station.

PUBLIC NOTICE

PUBLIC NOTICE
Public are informed that our Client/s are desirous of purchasing the Residentially Converted (Unsold) Sites formed in the Land bearing Sy.No.25 measuring 7A 09 Gts. (converted vide Official Memorandum dated 27.8.2011 bearing No.ALN(A)(A) SR.44/2011-12, issued by the Special Deputy Commissioner, Bangalore District) of **M.Medahalli Village, Attibele Hobli, Bangalore East Taluk** (layout approved by Anekal Planning Authority, vide No.APA/1/38/39/2011 and the Sites released thereon vide Release Order dated 02.03.2012 bearing No. APA/LAO/99/2011-12 issued by Anekal Planning Authority belonging to **M/s.Woodsville Projects Pvt. Ltd.,** Represented by its Representative **Mr. Prateek Kumar, S/o. Sri.Praful Kumar,** and the land is bounded as follows:
East by : Sy.No.20
West by : Sy.No.27
North by : Sy.Nos. 23 & 24
South by : Sy.No.26
Persons having any right over the said Property may lodge their claims with documentary evidence within **10 days** from the date of this publication to the undersigned.
Shanti .L, Advocate
(994500 3212)
for K.V. Narendra & Associates,
Branch Office: No.4, III Floor, Saroj Bank Square, Gear School-Doddakanahalli Road,
Next to Prestige Trinity Centre
Boganahalli, Bangalore-560 103

CONNECT ಕ್ಲಾಸಿಫೈಡ್ಸ್

IPO² INDIA
Fast Track your business growth towards
Capital Entrepreneurship

SPEAKERS:

Jonathan Por, Chairman | Camila Chen, CMO | Kalene Tan, Principal Capital Consultant | Grace Lim, Managing Director from Antz Capital | Henry Lim, Executive Director from Antz Capital | Shakthi V N Saravanan, Founder, Promoter & CMD Shakthi Group of Company

A Man with a Mission ...Enable to Empower...

Session 1
Date: 30th January 2024 (Tuesday)
Time: 2.00pm - 6:00pm (IST)

Session 2
Date: 31st January 2024 (Wednesday)
Time: 9.00am - 1:00pm (IST)

Session 3
Date: 1st February 2024 (Thursday)
Time: 9.00am - 1:00pm (IST)

Venue:
Shakthi Crazy Park
BEML Layout, Off, Mysore Rd, Rajarajeshwari Nagar, Bengaluru, Karnataka 560098

Agenda
Gain Valuable Insights on:
- Why IPO your company?
- When is the best time to IPO?
- Who are your IPO team members?
- What are the options for IPO?
- How to IPO and increase valuation? (Case Studies)

ORGANIZER: PIF CAPITAL

CONTACT:
Jagadeesh D N: +91 95381 88378 | Lingaraju: +91 80950 33944
Shivakumar: +91 88847 28516 | Chandrashekhar: +91 95380 22353
Pavan Kumar: +91 88847 29769 | Jai Ganesh: +91 97391 07131

‘ಇ-ಶ್ರಮ್’: ಪ್ರಜಾವಾಣಿ ಕಚೇರಿಯಲ್ಲಿ ನಾಳೆ ನೋಂದಣಿ

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ವತಿಯಿಂದ ಫೆ.1ರಂದು ಪತ್ರಿಕಾ ಏಜೆಂಟರು ಮತ್ತು ವಿತರಕರಿಗೆ ‘ಇ-ಶ್ರಮ್’ ಯೋಜನೆಗೆ ನೋಂದಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಎಂ.ಜಿ.ರಸ್ತೆಯಲ್ಲಿರುವ ‘ಪ್ರಜಾವಾಣಿ’ ಕೇಂದ್ರ ಕಚೇರಿಯಲ್ಲಿ ಅಂದು ಸಂಜೆ 4ರಿಂದ 5ರ ವರೆಗೆ ನೋಂದಣಿ ನಡೆಯಲಿದೆ. ನೋಂದಣಿ ಕಾರ್ಯಕ್ರಮಕ್ಕೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಚಾಲನೆ ನೀಡಲಿದ್ದಾರೆ. ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹಾಗೂ ಕಾರ್ಮಿಕ ಇಲಾಖೆ ಆಯುಕ್ತ ಎಚ್.ಎನ್.ಗೋಪಾಲಕೃಷ್ಣ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ನೋಂದಣಿಗೆ ಆಸಕ್ತಿಯುಳ್ಳವರು **ಮೊಬೈಲ್:** 94481 59346 ಹಾಗೂ 97399 97923 ಸಂಪರ್ಕಿಸಬಹುದು.

ವರ್ಚ್ಯುವಲ್ ಸಭೆಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್

ನಾಮಫಲಕಗಳಲ್ಲಿ ಕನ್ನಡ: ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಕೆಗೆ ತ್ವರಿತ ಗತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಾಣಿಜ್ಯ ಮಳಿಗೆಗಳ ನಾಮ ಫಲಕಗಳಲ್ಲಿ ಕನ್ನಡ ಅಳವಡಿಕೆ ಹಾಗೂ ‘ಸಹಾಯ 2.0’ದಲ್ಲಿ ಬಂದ ದೂರುಗಳಿಗೆ ಸಂಬಂಧಿಸಿದಂತೆ ಮಂಗಳವಾರ ನಡೆದ ವರ್ಚ್ಯುವಲ್ ಸಭೆಯಲ್ಲಿ ಅವರು ಮಾತನಾಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 49,241 ಮಳಿಗೆಗಳಿಗೆ ನೋಟಿಸ್ ನೀಡಲಾಗಿದ್ದು, 16,813 ಮಳಿಗೆಗಳಲ್ಲಿ ಶೇ 60ರಷ್ಟು ಕನ್ನಡ ಬಳಸಿದ ನಾಮಫಲಕಗಳನ್ನು ಅಳವಡಿಸಿಕೊಳ್ಳಲಾಗಿದೆ. 32,428 ಮಳಿಗೆಗಳಲ್ಲಿ ನಾಮಫಲಕಗಳನ್ನು ಅಳವಡಿಸಬೇಕಿದೆ. ಫೆಬ್ರುವರಿ ಅಂತ್ಯದೊಳಗಾಗಿ ಎಲ್ಲಾ ಮಳಿಗೆಗಳೂ ಅಳವಡಿಸಿಕೊಳ್ಳುವಂತೆ ಆಯಾ ವಲಯಗಳಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ದೂರು ಶೀಘ್ರ ಇತ್ಯರ್ಥ: ಪಾಲಿಕೆಯ ಸಹಾಯ 2.0ರಲ್ಲಿ ಬರುವ ದೂರುಗಳನ್ನು ನಿಗದಿತ ಸಮಯದಲ್ಲಿ ಇತ್ಯರ್ಥಪಡಿಸಬೇಕು. ಪ್ರಮುಖವಾಗಿ ಕಸದ ಸಮಸ್ಯೆ, ಬೀದಿ ದೀಪಗಳ ಅಳವಡಿಕೆ ಹಾಗೂ ರಸ್ತೆ ಗುಂಡಿ ಸಮಸ್ಯೆಗಳ ಕುರಿತು ದೂರುಗಳು ಬರುತ್ತವೆ. ಇವುಗಳನ್ನು ಆದ್ಯತೆ ಮೇರೆಗೆ ಪರಿಹರಿಸಬೇಕು ಎಂದು ತುಷಾರ್ ಗಿರಿನಾಥ್ ಆದೇಶಿಸಿದರು.

ರಸ್ತೆ ಅಭಿವೃದ್ಧಿ: ಎಲ್ಲ ವಾರ್ಡ್‌ಗಳಿಗೆ ತಲಾ ₹1 ಕೋಟಿ ಹಣವನ್ನು ಮೀಸಲಿಡಲಾಗಿದ್ದು, ಚರಂಡಿಗಳಲ್ಲಿ ಹೂಳು ತೆಗೆಯುವ ಕಾಮಗಾರಿಗೆ ಇದನ್ನು ಬಳಸಿಕೊಳ್ಳಲಾಗುತ್ತಿದೆ. ಪೀಣ್ಯ ಕೈಗಾರಿಕಾ ಪ್ರದೇಶ, ಎಸ್.ಪಿ ರಸ್ತೆ, ಮಾಮೂಲ್ ಪೇಟೆ, ತರಗುಪೇಟೆ, ಸುಲ್ತಾನ್ ಪೇಟೆ ಸೇರಿದಂತೆ ಇನ್ನಿತರೆ ರಸ್ತೆಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಅಭಿವೃದ್ಧಿ ಆಗುತ್ತಿಲ್ಲ: ‘ನಗರದಲ್ಲಿರುವ ಕೈಗಾರಿಕಾ ಪ್ರದೇಶಗಳಿಂದ ಬಿಬಿಎಂಪಿಗೆ ಸಾಕಷ್ಟು ತೆರಿಗೆ ಪಾವತಿ ಮಾಡಲಾಗುತ್ತಿದೆ. ಆದರೆ, ನಮ್ಮ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳಾಗುತ್ತಿಲ್ಲ. ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ರಮೇಶ್‌ಚಂದ್ರ ಲಹೋಟಿ ಮನವಿ ಮಾಡಿದರು.

ಬಿಬಿಎಂಪಿ ಬಜೆಟ್‌ಗೆ ಎಫ್‌ಕೆಸಿಸಿಐ ಸದಸ್ಯರು ಸಲಹೆ ನೀಡಿದ ಸಂದರ್ಭದಲ್ಲಿ ಅವರು ಮಾತನಾಡಿದರು.

‘ಕೈಗಾರಿಕೆ ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿಯಾಗಬೇಕು, ಬೀದಿ ದೀಪಗಳ ನಿರ್ವಹಣೆಯಾಗಬೇಕು, ಸಾರಕ್ಕಿ ಮೆಟ್ರೊ ನಿಲ್ದಾಣದ ಬಳಿ ಸಂಚಾರ ದಟ್ಟಣೆ ಸಮಸ್ಯೆ ನಿವಾರಿಸಬೇಕು, ಅಪಾಯ ಸ್ಥಿತಿಯಲ್ಲಿರುವ ಮರದ ಕೊಂಬೆಗಳ ಕಟಾವು ಮಾಡಬೇಕು, ಉದ್ದಿಮೆ ಪರವಾನಗಿ ಸಮಯಕ್ಕೆ ಸರಿಯಾಗಿ ನೀಡಬೇಕು. ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ಅಭಿವೃದ್ಧಿ ಕಾರ್ಯಗಳಾಗುವಂತೆ ನೋಡಿಕೊಳ್ಳಬೇಕು’ ಎಂಬ ಸಲಹೆಗಳನ್ನು ನೀಡಿದರು.

ಎಫ್‌ಕೆಸಿಸಿಐ ಹಿರಿಯ ಉಪಾಧ್ಯಕ್ಷ ಎಂ.ಜಿ ಬಾಲಕೃಷ್ಣ, ಉಪಾಧ್ಯಕ್ಷೆ ಉಮಾರೆಡ್ಡಿ ಉಪಸ್ಥಿತರಿದ್ದರು.

— ಫ್ಲೈಟ್ಸ್ ಸಹಿತ ಗ್ರೂಪ್ ಹಾಲಿಡೇಸ್‌ಗಳು ವಿಥ್ ಟೂರ್ ಮ್ಯಾನೇಜರ್ —

8 ದಿನಗಳು - ಎಕ್ಸ್‌ಪ್ಲೋರ್ ಭೂತಾನ್ @ ₹ 92 000.00

ಹನಿಮೂನ್ ಸ್ಪೆಷಲ್ 8 ದಿನಗಳು @ ₹ 1 35 000.00

— ಫ್ಲೈಟ್ಸ್ ಸಹಿತ ಕಸ್ಟಮೈಜ್ಡ್ ಹಾಲಿಡೇ —

ಎಕ್ಸಾಟಿಕ್ ಭೂತಾನ ಬಿಸ್‌ನೆಸ್ ಕ್ಲಾಸ್‌ನಲ್ಲಿ

8 ದಿನಗಳು @ ₹ 1 75 990.00

ಸೇರ್ಪಡೆಗಳು: ಏರ್‌ಫೇರ್, ಹೋಟೆಲ್ಸ್, ವಿಸಾ, ಇನ್ಶುರೆನ್ಸ್ ಮತ್ತು ಪ್ರವಾಸ ವೇಳೆ ಪಟ್ಟಿಯ ಅನುಸಾರ ಪ್ರೇಕ್ಷಣೀಯ ಸ್ಥಳಗಳ ದರ್ಶನ.

ನಿಮ್ಮ ಸಮೀಪದ ಸ್ಟೋರ್‌ಗೆ ಕರೆ ನೀಡಿರಿ

ಬೆಂಗಳೂರಿನಿಂದ | ನಿ ಹಾಗೂ ಷ ಅನ್ವಯ.

M. G. Road: 8291227617
HSR Layout: 9167492765
Basaveshwar Nagar: 9619479651
Kormangala: 9167491308
Banashankari: 9167519822
Jayanagar: 9167491079
Sahakarnagar: 9167511759
Malleshwaram: 9619475496

ಆನ್‌ಲೈನ್ ಬುಕ್ ಮಾಡಿ @ thomascook.in

1800 2099 100

Thomas Cook

ಮೇಲ್ಮನೆ ಉಪಚುನಾವಣೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

‘ಸೋಲಿನ ಭಯ: ಬಿಜೆಪಿ– ಜೆಡಿಎಸ್ ಮೈತ್ರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನ ಪರಿಷತ್ತಿಗೆ ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ನಡೆಯಲಿರುವ ಉಪಚುನಾವಣೆಯಲ್ಲಿ ಸೋಲಿನ ಭಯದಿಂದ ಬಿಜೆಪಿ– ಜೆಡಿಎಸ್‌ನವರು ಮೈತ್ರಿ ಮಾಡಿಕೊಂಡಿದ್ದಾರೆ. ಮೈತ್ರಿ ಮಾಡಿಕೊಂಡಿದ್ದರೂ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ನೂರಕ್ಕೆ ನೂರು ಗೆದ್ದೇ ಗೆಲ್ಲುತ್ತಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಪುಟ್ಟಣ್ಣ ಅವರು ಸೋಮವಾರ ಮತ್ತೊಮ್ಮೆ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಸಿದ್ದರಾಮಯ್ಯ, ‘ಇದೇ ಕ್ಷೇತ್ರದಿಂದ ಪರಿಷತ್ ಸದಸ್ಯರಾಗಿದ್ದ ಪುಟ್ಟಣ್ಣ ಅವರು ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲು ರಾಜೀನಾಮೆ ನೀಡಿದ್ದರು. ಸತತ ನಾಲ್ಕು ಬಾರಿ ಈ ಕ್ಷೇತ್ರದಿಂದ ಗೆದ್ದಿರುವ ಅವರು, ಶಿಕ್ಷಕರ ಮನಸ್ಸು ಗೆದ್ದಿದ್ದಾರೆ’ ಎಂದರು.

ಶಿಕ್ಷಕರಿಗೆ ಕೊಟ್ಟಿರುವ ಭರವಸೆ ಈಡೇರಿಸುತ್ತೇವೆ: ‘ಶಿಕ್ಷಕರ ಬದುಕಿನ ಬಗ್ಗೆ ನಮ್ಮ ಸರ್ಕಾರ ಕಾಳಜಿ ವಹಿಸಲಿದೆ. ಚುನಾವಣೆಗೂ ಮೊದಲು ಶಿಕ್ಷಕರಿಗೆ ಕೊಟ್ಟಿರುವ ಭರವಸೆಗಳನ್ನು ಈಡೇರಿಸುತ್ತೇವೆ. ಸದ್ಯ ಚುನಾವಣೆ ನೀತಿಸಂಹಿತೆ ಜಾರಿಯಲ್ಲಿರುವುದರಿಂದ ಈ ಬಗ್ಗೆ ಮಾತನಾಡುವುದಿಲ್ಲ. ಹಳೆ ಪಿಂಚಣಿ ಯೋಜನೆ ಸೇರಿದಂತೆ ಅನೇಕ ವಿಚಾರವಾಗಿ ನಾವು ನುಡಿದಂತೆ ನಡೆದಿದ್ದೇವೆ. ನಮ್ಮ ಅಭ್ಯರ್ಥಿ ಅನುಭವಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಅವರು ಸಹಾಯಕ ಚುನಾವಣಾಧಿಕಾರಿ ಹರೀಶ್ ಕುಮಾರ್ ಅವರಿಗೆ ಮಂಗಳವಾರ ನಾಮಪತ್ರ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಎಚ್. ಮುನಿಯಪ್ಪ ಜೊತೆಗೆ ಇದ್ದರು

ಕಾನೂನು ತಿದ್ದುಪಡಿ: 9ಕ್ಕೆ ಚಾಲಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪಘಾತ ನಡೆಸಿ ಪರಾರಿ’ಯಾದ (ಹಿಟ್ ಆ್ಯಂಡ್ ರನ್) ಪ್ರಕರಣದಲ್ಲಿ 10 ವರ್ಷ ಜೈಲು ಹಾಗೂ ₹7 ಲಕ್ಷ ದಂಡ ವಿಧಿಸುವ ರಸ್ತೆ ಸಂಚಾರ ಕಾನೂನು ತಿದ್ದುಪಡಿ ಯನ್ನು ವಿರೋಧಿಸಿರುವ ಸಾರಿಗೆ ಚಾಲಕರ ಸಂಘಟನೆಗಳ ಒಕ್ಕೂಟ, ಈ ತಿದ್ದುಪಡಿ ಯನ್ನು ಜಾರಿಗೊಳಿಸದಂತೆ ಆಗ್ರಹಿಸಿ ಫೆ.9ರ ಬೆಳಿಗ್ಗೆ 10.30ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆದರ್ಶ ಆಟೊ ಮತ್ತು ಟ್ಯಾಕ್ಸಿ ಚಾಲಕರ ಸಂಘದ ಅಧ್ಯಕ್ಷ ಎಂ. ಮಂಜುನಾಥ್, ‘ಭಾರತೀಯ ನ್ಯಾಯಸಂಹಿತೆಯ ಕಲಂ 106ರ ಉಪವಿಧಿ 1 ಮತ್ತು 2 ತಿದ್ದುಪಡಿಯು ಸರಕು ಸಾಗಾಟದ ವಾಹನಗಳಿಗೆ ಚಾಲಕರು ಬರಲು ಹಿಂಜರಿಯುವಂತೆ ಮಾಡಿದೆ. ಈ ತಿದ್ದುಪಡಿಯ ಪ್ರಕಾರ ಅಪಘಾತ ನಡೆದ ಕೂಡಲೇ ಬಂಧಿಸಬೇಕು. 10 ವರ್ಷ ಜೈಲು ಶಿಕ್ಷೆ, ₹ 7 ಲಕ್ಷ ದಂಡ ವಿಧಿಸಲು ಅವಕಾಶ ನೀಡಲಾಗಿದೆ. ಚಾಲಕ ವಿರೋಧಿಯಾದ ಕಲಂಗಳನ್ನು ರದ್ದುಪಡಿಸಬೇಕು’ ಎಂದರು.

ಬೃಹತ್ ಬೆಂಗಳೂರು ಟ್ಯಾಕ್ಸಿ ಡ್ರೈವರ್ಸ್ ಯೂನಿಯನ್‌ನ ಗೌರವಾಧ್ಯಕ್ಷ ಎ. ರಮೇಶ್ ಹೊಳ್ಳ, ‘ಈ ತಿದ್ದುಪಡಿಯನ್ನು ಕೂಡಲೇ ವಾಪಸ್ ಪಡೆದು, ಅಪಘಾತಗಳನ್ನು ಕ್ರಿಮಿನಲ್ ಪ್ರಕರಣವೆಂದು ಪರಿಗಣಿಸುವ ಅಂಶವನ್ನು ರದ್ದು ಮಾಡಬೇಕು. ಈ ಮೊದಲು ಇದ್ದ ಶಿಕ್ಷೆ ಹಾಗೂ ದಂಡವನ್ನೇ ವಿಧಿಸಬೇಕು. ತಿದ್ದುಪಡಿ ಜಾರಿಯಾದಲ್ಲಿ ಯಾರೂ ಚಾಲಕ ವೃತ್ತಿಗೆ ಬರುವುದಿಲ್ಲ. ನಮ್ಮ ಪ್ರತಿಭಟನೆಗೆ ವಿವಿಧ ಸಂಘಟನೆಗಳು ಬೆಂಬಲ ಸೂಚಿಸಿವೆ’ ಎಂದು ಹೇಳಿದರು.

ಡಿವೈಎಸ್ಪಿ, ಇನ್‌ಸ್ಪೆಕ್ಟರ್, ಪಿಎಸ್‌ಐ ವರ್ಗಾವಣೆ: ಪರಿಷ್ಕೃತ ಪಟ್ಟಿ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 33 ಡಿವೈಎಸ್ಪಿ/ಎಸಿಪಿ, 132 ಇನ್‌ಸ್ಪೆಕ್ಟರ್‌ಗಳು ಹಾಗೂ ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯ 218 ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳನ್ನು (ಪಿಎಸ್‌ಐ) ವರ್ಗಾವಣೆ ಮಾಡಿ ಪೊಲೀಸ್ ಸಿಬ್ಬಂದಿ ಮಂಡಳಿ ಮಂಗಳವಾರ ಆದೇಶ ಹೊರಡಿಸಿದೆ.

‘ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಆದೇಶ ಹೊರಡಿಸಲಾಗಿದೆ. ನಿಗದಿತ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕು’ ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ವರ್ಗಾವಣೆಗೊಂಡಿರುವ ಕೆಲ ಪಿಎಸ್‌ಐಗಳನ್ನು ಕರ್ತವ್ಯಕ್ಕೆ ಹಾಜರಾಗದಂತೆ ತಡೆದಿರುವುದಾಗಿ ಗೊತ್ತಾಗಿದ್ದು, ಪರಿಷ್ಕೃತ ಪಟ್ಟಿ ಬಿಡುಗಡೆ ಆಗುವ ಸಾಧ್ಯತೆ ಇದೆ.

ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಬೆಂಗಳೂರು ಶಿಕ್ಷಕರ ಕ್ಷೇತ್ರದ ವತಿಯಿಂದ ನಡೆಯಲಿರುವ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಹೈಕೋರ್ಟ್ ವಕೀಲ ಎಚ್.ಸುನಿಲ್ ಕುಮಾರ್ ತಮ್ಮ ಪತ್ನಿ ಅನೂಷಾ ಜೊತೆ ಸೋಮವಾರ ಸಹಾಯಕ ಚುನಾವಣಾ ಅಧಿಕಾರಿ ಎ.ಹರೀಶ್ ಕುಮಾರ್ ಅವರಿಗೆ ನಾಮಪತ್ರ ಸಲ್ಲಿಸಿದರು

ಮುರುಘಾ ಶರಣರಿಗೆ ಜಾಮೀನು: ‘ಸುಪ್ರೀಂ’ಗೆ ಮೇಲ್ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೋಕ್ಸೊ ಕಾಯ್ದೆಯಡಿ ಆರೋಪಿಯಾಗಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಕೆಯಾಗಿದೆ.

ಮೈಸೂರಿನ ಒಡನಾಡಿ ಸಂಸ್ಥೆಯ ಪರ ವಕೀಲರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಸತೀಶ್ ಚಂದ್ರ ಶರ್ಮಾ ಅವರಿದ್ದ ಪೀಠ, ಪ್ರಕರಣದ ವಿಚಾರಣೆಗೆ ಅಂಗೀಕರಿಸಿತು. ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದ ಪೀಠ, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ. ಅರ್ಜಿದಾರರ ಪರವಾಗಿ ವಕೀಲೆ ಅಪರ್ಣಾ ಭಟ್ ವಾದಿಸಿದರು.

‘ಶರಣರು ನಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ’ ಎಂದು ಆರೋಪಿಸಿ ಇಬ್ಬರು ಬಾಲಕಿಯರು ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ 2022ರ ಆಗಸ್ಟ್ 26ರಂದು ದೂರು ದಾಖಲಿಸಿದ್ದರು. 2022ರ ಸೆಪ್ಟೆಂಬರ್ 1ರಂದು ಶರಣರನ್ನು ಬಂಧಿಸಲಾಗಿತ್ತು.

ಶರಣರ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ–2012, ಭಾರತೀಯ ದಂಡ ಸಂಹಿತೆ–1860, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೇಲಿನ ದೌರ್ಜನ್ಯ ತಡೆ ಕಾಯ್ದೆ–1989 ಮತ್ತು ಬಾಲ ನ್ಯಾಯ (ಮಕ್ಕಳ ಸಂರಕ್ಷಣೆ ಹಾಗೂ ಆರೈಕೆ) ಕಾಯ್ದೆ–2015ರ ವಿವಿಧ ಕಲಂಗಳ ಅಡಿಯಲ್ಲಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದ್ದು ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಮೊದಲ ಪ್ರಕರಣದ ಬೆನ್ನಲ್ಲೇ ಮತ್ತೊಂದು ಪೋಕ್ಸೊ ಪ್ರಕರಣ ಶರಣರ ವಿರುದ್ಧ ದಾಖಲಾಗಿದ್ದು ಇದರಲ್ಲಿ ಶರಣರ ವಿರುದ್ಧ ಬಾಡಿ ವಾರಂಟ್ ಹೊರಡಿಸಲಾಗಿತ್ತು. ಶರಣರಿಗೆ ಹೈಕೋರ್ಟ್ ಏಕಸದಸ್ಯ ಪೀಠ ನವೆಂಬರ್‌ನಲ್ಲಿ ಜಾಮೀನು ನೀಡಿತ್ತು.

ನಿಧನ ವಾರ್ತೆ

ಮಧುರಬಾಯಿ

ಬೆಂಗಳೂರು: ಶ್ರೀನಗರದ ನಿವಾಸಿ, ಮಕ್ಕಳ ಸಾಹಿತಿ ದಿವಂಗತ ಎಚ್.ಶ್ರೀನಿವಾಸಮೂರ್ತಿ (ಪರಿಮಳ) ಅವರ ಪತ್ನಿ ಮಧುರಬಾಯಿ (91) ಅವರು ಸೋಮವಾರ ರಾತ್ರಿ ನಿಧನರಾದರು.

ಮೃತರಿಗೆ ಲೇಖಕ ಎಸ್.ಜಯಸಿಂಹ ಸೇರಿದಂತೆ ಮೂವರು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದಾರೆ.

ಮೃತರ ಅಂತ್ಯಕ್ರಿಯೆ ಮಂಗಳವಾರ ಚಾಮರಾಜಪೇಟೆ ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಜೀವಮಾನ ಸಾಧನೆಯ ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ

ಪ್ರಶಸ್ತಿ ಪ್ರದಾನ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ : 31.01.2024, ಬುಧವಾರ, ಸಂಜೆ 6.00 ಗಂಟೆಗೆ ಸ್ಥಳ : ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

ಘನ ಉಪಸ್ಥಿತಿ

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಕೇಂದ್ರ ಹಣಕಾಸು ಕಾರ್ಪೊರೇಟ್ ವ್ಯವಹಾರಗಳ ಸಚಿವರು
ಭಾರತ ಸರ್ಕಾರ

ಶ್ರೀ ರಾಜೀವ್ ಚಂದ್ರಶೇಖರ್
ಮಾನ್ಯ ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು, ಭಾರತ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಶಿವರಾಜ ಎಸ್. ತಂಗಡಗಿ
ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು
ಕರ್ನಾಟಕ ಸರ್ಕಾರ

ಅಧ್ಯಕ್ಷತೆ

ಶ್ರೀ ಉದಯ್ ಬಿ. ಗರುಡಾಚಾರ್
ಮಾನ್ಯ ಶಾಸಕರು,
ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು

ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಕೆ ಜೆ ಜಾರ್ಜ್
ಮಾನ್ಯ ಇಂಧನ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಕೃಷ್ಣ ಬೈರೇಗೌಡ
ಮಾನ್ಯ ಕಂದಾಯ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಬಿ. ಝಡ್. ಜಮೀರ್ ಅಹಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಸುರೇಶ ಬಿ ಎಸ್
ಮಾನ್ಯ ನಗರಾಭಿವೃದ್ಧಿ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಆರ್. ಅಶೋಕ
ಮಾನ್ಯ ವಿರೋಧ ಪಕ್ಷದ ನಾಯಕರು
ಕರ್ನಾಟಕ ಸರ್ಕಾರ

ಶ್ರೀ ನಸೀರ್ ಅಹ್ಮದ್
ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು

ಡಾ. ಕೆ. ಗೋವಿಂದರಾಜ್
ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ರವರೊಂದಿಗೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರಾದ ಶ್ರೀ ಶಿವರಾಜ ಎಸ್. ತಂಗಡಗಿ ರವರು ಸಮಾರಂಭವೊಂದರಲ್ಲಿ ಭಾಗವಹಿಸಿರುವುದು.

ಸರ್ವರಿಗೂ ಆದರದ ಸುಸ್ವಾಗತ

ಅತಿಥಿಗಳು : ಬೆಂಗಳೂರು ನಗರದ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು,ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಚುನಾಯಿತ ಪ್ರತಿನಿಧಿಗಳು

ಡಾ. ಎನ್. ಮಂಜುಳಾ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಡಾ. ಧರಣೀದೇವಿ ಮಾಲಗತ್ತಿ, ಭಾ.ಪೊ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸಾಂಸ್ಕೃತಿಕ ಕಾರ್ಯಕ್ರಮಗಳು: ಸಂಜೆ 5.00 ರಿಂದ 6.00 ಗಂಟೆ, ಗಾಯನ ಕಾರ್ಯಕ್ರಮ : ಶ್ರೀಮತಿ ಸಂಗೀತಾ ಕಟ್ಟಿ ಕುಲಕರ್ಣಿ, ಬೆಂಗಳೂರು.
ವಿವಿಧ ಜಾನಪದ ಕಲಾವಿದರಿಂದ ಜಾನಪದ ಕಲಾ ಪ್ರದರ್ಶನ

“ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು” – ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಕರ್ತವ್ಯ

ಕೆರಗೋಡು: ತಾಲಿಬಾನ್ ಧ್ವಜಕ್ಕೆ ರಾಷ್ಟ್ರಧ್ವಜದ ಹೋಲಿಕೆ • ಸಿ.ಟಿ.ರವಿ ಬಂಧನಕ್ಕೆ ಒತ್ತಾಯ

ರಾಷ್ಟ್ರಧ್ವಜಕ್ಕೆ ಅವಮಾನ: ಪರಸ್ಪರ ದೂರು

ಪ್ರಜಾವಾಣಿ ವಾರ್ತೆ

ಕನಕದಾಸರು, ಮುಖ್ಯಮಂತ್ರಿ ಭಾವಚಿತ್ರದ ಫ್ಲೆಕ್ಸ್ ಹರಿದ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಕುರುಬರ ಸಂಘದ ಸದಸ್ಯರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್‌.ಯತೀಶ್ ಅವರಿಗೆ ದೂರು ಸಲ್ಲಿಸಿದರು

ಮಂಡ್ಯ: 'ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿ ಅಧಿಕಾರಿಗಳು ರಾಷ್ಟ್ರಧ್ವಜವನ್ನು ಅವಮಾನಿಸಿದ್ದಾರೆ' ಎಂದು ಆರೋಪಿಸಿ ಬಿಜೆಪಿ ಮುಖಂಡರು ಮಂಗಳವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ಸಲ್ಲಿಸಿದರು. ಇದೇ ವೇಳೆ, 'ಬಿಜೆಪಿ ಮುಖಂಡ ಸಿ.ಟಿ.ರವಿ ಅವರು ರಾಷ್ಟ್ರಧ್ವಜವನ್ನು ತಾಲಿಬಾನ್ ಧ್ವಜಕ್ಕೆ ಹೋಲಿಸಿ ಅವಮಾನಿಸಿದ್ದು, ಕೂಡಲೇ ಅವರನ್ನು ಬಂಧಿಸಬೇಕು' ಎಂದು ಆಗ್ರಹಿಸಿ ಮಳವಳ್ಳಿ ಕಾಂಗ್ರೆಸ್ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರೂ ದೂರು ಸಲ್ಲಿಸಿದರು.

'ಹನುಮ ಧ್ವಜ ಇಳಿಸುವ ನೆಪದಲ್ಲಿ ಜಿಲ್ಲಾಡಳಿತ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದೆ. ಆ ವೇಳೆ ಧ್ವಜಸಂಹಿತೆಯನ್ನು ಗಾಳಿಗೆ ತೂರಲಾಗಿದೆ. ಮಧ್ಯಾಹ್ನದ ವೇಳೆಯಲ್ಲಿ ಸ್ತಂಭದ ಅರ್ಧ ಭಾಗಕ್ಕೆ ರಾಷ್ಟ್ರಧ್ವಜ ಹಾರಿಸಲಾಗಿದೆ. ಅಧಿಕಾರಿಗಳು ಚಪ್ಪಲಿ ಧರಿಸಿ ಧ್ವಜಾರೋಹಣ ಮಾಡಿದ್ದಾರೆ. ಆಗ ರಾಷ್ಟ್ರಗೀತೆ ಹಾಡಿಲ್ಲ, ಪುಷ್ಪಾರ್ಪಣೆ ಮಾಡಿಲ್ಲ. ಬಲವಂತದಿಂದ ಧ್ವಜಾರೋಹಣ ಮಾಡಿ ಅವಮಾನಿಸಿದ್ದಾರೆ' ಎಂದು ಬಿಜೆಪಿ ಮುಖಂಡರಾದ ಸಿ.ಟಿ.ಮಂಜುನಾಥ್, ಚಂದ್ರು, ಶಿವಕುಮಾರ್ ದೂರಿನಲ್ಲಿ ಆರೋಪಿಸಿದ್ದಾರೆ.

ತಾಲಿಬಾನ್ ಧ್ವಜ ಹೇಳಿಕೆ: 'ನಾವು ಹಾರಿಸಿರುವುದು ಹನುಮ ಧ್ವಜವೇ ಹೊರತು ತಾಲಿಬಾನ್ ಧ್ವಜವಲ್ಲ, ಹಿಂದೂ ದೇಶದಲ್ಲಿ ಹಿಂದೂ ಧ್ವಜ ಹಾರಿಸಿದ್ದೇವೆ ಎಂದು ಹೇಳಿ ರಾಷ್ಟ್ರಧ್ವಜವನ್ನು ಅವಮಾನಿಸಿದ್ದಾರೆ. ಹಿಂದಿ ವಾಹಿನಿಯೊಂದಕ್ಕೆ ಸಂದರ್ಶನ ನೀಡಿ, ರಾಷ್ಟ್ರಧ್ವಜವನ್ನು ನೇರವಾಗಿ ತಾಲಿಬಾನ್ ಧ್ವಜಕ್ಕೆ ಹೋಲಿಸಿದ್ದಾರೆ. ಆ ಕುರಿತ ವಿಡಿಯೊ ದೃಶ್ಯಾವಳಿಯನ್ನು ಕೂಡ ಪೊಲೀಸರಿಗೆ ಸಲ್ಲಿಸಿದ್ದೇನೆ' ಎಂದು ಶಾಸಕ ನರೇಂದ್ರಸ್ವಾಮಿ ತಿಳಿಸಿದರು.

ಪ್ರತಿಭಟನಕಾರರ ವಿರುದ್ಧ ಎಫ್‌ಐಆರ್: 'ಹನುಮ ಧ್ವಜ ತೆರವು ವೇಳೆ ನಿಷೇಧಾಜ್ಞೆ ಉಲ್ಲಂಘಿಸಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ' ಎಂದು ತಹಶೀಲ್ದಾರ್ ಶಿವಕುಮಾರ ಬಿರಾದರ ನೀಡಿದ ದೂರಿನ ಮೇರೆಗೆ, ಬಿಳಿದೇಗಲು ಗ್ರಾಮದ ಪ್ರತಾಪ್, ಕೆರಗೋಡಿನ ಪ್ರಕಾಶ್, ಹೊನಗವಳ್ಳಿಮಠ ಗ್ರಾಮದ ಅವಿನಾಶ್ ಸೇರಿ ಹಲವರ ವಿರುದ್ಧ ಕೆರಗೋಡು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಕೆರಗೋಡಿನಿಂದ ಮಂಡ್ಯದವರೆಗೆ ಭಾನುವಾರ ಪಾದಯಾತ್ರೆ ನಡೆಸಿದ ವೇಳೆ ಫ್ಲೆಕ್ಸ್ ಹರಿದು, ಸಾರ್ವಜನಿಕರ ಮೇಲೆ ಕಲ್ಲು ತೂರಾಟ ನಡೆಸಿದ ಆರೋಪದಲ್ಲಿ 8 ಮಂದಿ ವಿರುದ್ಧ ಡಿವೈಎಸ್‌ಪಿ ಶಿವಮೂರ್ತಿ ನೀಡಿದ ದೂರು ಆಧರಿಸಿ ನಗರದ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕುರುಬರ ಸಂಘದಿಂದ ದೂರು: 'ಪಾದಯಾತ್ರೆ ವೇಳೆ ಕುರುಬರ ಸಂಘದ ವಿದ್ಯಾರ್ಥಿನಿಲಯದ ಮೇಲೆ ಕಲ್ಲು ತೂರಿ, ಕನಕದಾಸರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಫ್ಲೆಕ್ಸ್ ಹರಿದು ದಾಂಧಲೆ ನಡೆಸಿದ ಕಿಡಿಗೇಡಿಗಳನ್ನು ಬಂಧಿಸಬೇಕು' ಎಂದು ಒತ್ತಾಯಿಸಿ ಜಿಲ್ಲಾ ಸಂಘದ ಮುಖಂಡರು ಹಾಗೂ ರಾಜ್ಯ ಶೋಷಿತ ಸಮುದಾಯಗಳ ಮಹಾಒಕ್ಕೂಟದ ಪದಾಧಿಕಾರಿಗಳು ಪ್ರತ್ಯೇಕವಾಗಿ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ಸಲ್ಲಿಸಿದರು.

ಕುರುಬರ ಸಂಘದ ಕಾರ್ಯದರ್ಶಿ ಶಶಿಧರ ಪಶ್ಚಿಮ ಠಾಣೆಯಲ್ಲಿ ಪ್ರತ್ಯೇಕ ದೂರು ನೀಡಿದ್ದು 40 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಪಿಡಿಒ ಅಮಾನತು: 'ಗ್ರಾಮ ಪಂಚಾಯಿತಿಯ ಜಾಗದಲ್ಲಿ ಧ್ವಜಸ್ತಂಭ ನಿರ್ಮಿಸಲು ಖಾಸಗಿ ಸಂಸ್ಥೆಗೆ ನಿಯಮ ಬಾಹಿರವಾಗಿ ಅನುಮತಿ ನೀಡಲಾಗಿದೆ' ಎಂಬ ಆರೋಪದ ಮೇರೆಗೆ ಕೆರಗೋಡು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ.ಎಂ.ಜೀವನ್ ಅವರನ್ನು ಅಮಾನತು ಮಾಡಿ ಜಿಲ್ಲಾ ಪಂಚಾಯಿತಿ ಸಿಇಒ ಶೇಖ್ ತನ್ವೀರ್ ಆಸಿಫ್ ಸೋಮವಾರ ಆದೇಶಿಸಿದ್ದಾರೆ.

'2023, ಡಿ.23ರಂದು ನಡೆದ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ವಿಷಯ ಮಂಡಿಸದೆ, ಪಂಚಾಯತ್ ರಾಜ್ ಕಾಯ್ದೆಯ ನಿಯಮ ಉಲ್ಲಂಘಿಸಿ, ಧ್ವಜಸ್ತಂಭ ನಿರ್ಮಿಸಲು ಗೌರಿಶಂಕರ ಸೇವಾ ಟ್ರಸ್ಟ್‌ಗೆ ಸರ್ಕಾರಿ ಜಾಗ ನೀಡಲಾಗಿದೆ. ಧ್ವಜಸ್ತಂಭದಲ್ಲಿ ರಾಷ್ಟ್ರಧ್ವಜ ಹಾರಿಸಬೇಕೆಂಬ ಷರತ್ತು ಉಲ್ಲಂಘಿಸಿದ್ದರೂ ಕ್ರಮ ಕೈಗೊಳ್ಳದೆ ಪಿಡಿಒ ಕರ್ತವ್ಯ ಲೋಪ ಎಸಗಿದ್ದಾರೆ. ಅದರಿಂದ ಸಂಘರ್ಷ, ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗಿದ್ದು, ತಕ್ಷಣದಿಂದ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಅಮಾನತುಗೊಳಿಸಲಾಗಿದೆ' ಎಂದು ಆದೇಶಿಸಿದ್ದಾರೆ.

ಈ ನಡುವೆ, ಕೆರಗೋಡು ಗ್ರಾಮದಲ್ಲಿ ನಿಷೇಧಾಜ್ಞೆಯನ್ನು ತೆರವುಗೊಳಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

> **ಕೇಸರಿ ಶಾಲು ಧರಿಸಿದ ಕುಮಾರಸ್ವಾಮಿಯವರು ಕೆರಗೋಡು ಘಟನೆಯನ್ನು ಮುಂದಿಟ್ಟುಕೊಂಡು ಜಿಲ್ಲೆಯಲ್ಲಿ ಅಶಾಂತಿ ಮೂಡಿಸಲು ಯತ್ನಿಸುತ್ತಿದ್ದಾರೆ**
> **ಎನ್.ಚಲುವರಾಯಸ್ವಾಮಿ,** ಕೃಷಿ ಸಚಿವ

> **ಕೆರಗೋಡಿನಲ್ಲಿ ಹನುಮ ಧ್ವಜ ಹಾರಿಸುವವರೆಗೂ ಬಿಜೆಪಿ ಹೋರಾಟ ನಡೆಸಲಿದೆ. ಸರ್ಕಾರ ಇನ್ನಷ್ಟು ಕೆದಕಲು ಹೋದರೆ ದೇಶವ್ಯಾಪಿ ಹೋರಾಟ ನಡೆಸಲಾಗುವುದು**
> **ಆರ್.ಅಶೋಕ,** ವಿಧಾನಸಭೆ ವಿರೋಧ ಪಕ್ಷ ನಾಯಕ

ಚಲುವರಾಯಸ್ವಾಮಿಗೆ ನಿಂದನೆ

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಮಂಡ್ಯದಿಂದ ನಾಗಮಂಗಲಕ್ಕೆ ತೆರಳುತ್ತಿದ್ದಾಗ ಕೆರಗೋಡು ಗ್ರಾಮದಲ್ಲಿ ಕೆಲವರು ಅವರ ಕಾರು ಅಡ್ಡಗಟ್ಟಿದರು. 'ನೀವು ನಮ್ಮ ಊರಿಗೇಕೆ ಬಂದಿರಿ' ಎಂದು ಆಕ್ಷೇಪಿಸಿ ಧಿಕ್ಕಾರ ಕೂಗಿದರು.

ಪ್ರತಿಭಟನಕಾರರೊಂದಿಗೆ ಮಾತನಾಡಲು ಯತ್ನಿಸಿದ ಸಚಿವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು. 'ನೀವು ನಮ್ಮ ಊರಿಗೆ ಮತ್ತೆ ಬಂದರೆ ಘೇರಾವ್ ಹಾಕುತ್ತೇವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಜೈಕಾರ ಹಾಕಿದರು.

ನಡಾವಳಿ ಪುಸ್ತಕ ಎಲ್ಲಿ?

ಹನುಮ ಧ್ವಜಾರೋಹಣ ಸಂಬಂಧ ಕೆರಗೋಡು ಗ್ರಾಮ ಪಂಚಾಯಿತಿಯಲ್ಲಿ ನಡೆದ ಸಾಮಾನ್ಯ ಸಭೆ ನಡಾವಳಿ ಪುಸ್ತಕ ನೀಡುವಂತೆ ಮಂಗಳವಾರ ಕೆಲ ಸದಸ್ಯರು ಅಧಿಕಾರಿಗಳನ್ನು ಪ್ರಶ್ನಿಸಿದರು. 'ನಡಾವಳಿ ಪುಸ್ತಕ ಇಲ್ಲ' ಎಂದು ಅಧಿಕಾರಿಗಳು ತಿಳಿಸಿದಾಗ ಕಚೇರಿಯಲ್ಲಿ ವಾಗ್ವಾದ ನಡೆಯಿತು.

'ನಡಾವಳಿ ಪುಸ್ತಕ ತಾಲ್ಲೂಕು ಪಂಚಾಯಿತಿ ಇಒ ಬಳಿ ಇದೆ, ಅದನ್ನು ಕೊಡಲು ನಮಗೆ ಅಧಿಕಾವಿಲ್ಲ' ಎಂದು ಅಧಿಕಾರಿಗಳು ತಿಳಿಸಿದರು.

'ಕೇಸರಿ ಶಾಲು ಧರಿಸಿದರೆ ಮಹಾಪರಾಧವೇ?'

ಬೆಂಗಳೂರು: 'ನಾನು ಕೇಸರಿ ಶಾಲು ಧರಿಸುವುದು ಮಹಾನ್ ಅಪರಾಧವೆ? ಕಾಂಗ್ರೆಸ್‌ನವರಿಗೆ ಕೇಸರಿ ಬಣ್ಣದ ಕುರಿತು ಸಂಕುಚಿತ ಭಾವನೆ ಏಕೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ರಾಷ್ಟ್ರ ಧ್ವಜದಲ್ಲಿ ಯಾವ ಬಣ್ಣಗಳಿವೆ ಎಂಬುದು ಕಾಂಗ್ರೆಸ್‌ನವರಿಗೆ ತಿಳಿದಿಲ್ಲವೆ? ರಾಷ್ಟ್ರ ಧ್ವಜದಿಂದ ಕೇಸರಿ ಬಣ್ಣ ತೆಗೆದರೆ ಏನು ಅರ್ಥ ಉಳಿಯುತ್ತದೆ. ಕೇಸರಿ ಬಣ್ಣದ ಮೇಲೆ ಅಸಹನೆ, ಸಂಕುಚಿತ ಭಾವನೆ ಏಕೆ? ನಾನು ಕೇಸರಿ ಶಾಲು ಹಾಕಿಕೊಂಡಿದ್ದರ ಬಗ್ಗೆ ಮಾತನಾಡುತ್ತಿದ್ದಾರೆ. ದಲಿತ ಸಮುದಾಯದ ಬಂಧುಗಳು ಸಭೆಗೆ ಕರೆದಾಗ ಅಲ್ಲಿಗೆ ಹೋಗಿ ಜೈ ಭೀಮ್ ಕಾರ್ಯಕರ್ತರು ಧರಿಸುವ ನೀಲಿ ಬಣ್ಣದ ಶಾಲನ್ನೂ ಹಾಕಿದ್ದೇನೆ. ಇದು ಇವರ ಕಣ್ಣಿಗೆ ಕಾಣಲಿಲ್ಲವೆ' ಎಂದು ಕೇಳಿದರು.

'ಕೇಸರಿ ಶಾಲು ಹಾಕಿದ ತಕ್ಷಣ ನಾನು ಜೆಡಿಎಸ್ ಪಕ್ಷವನ್ನು ಅವನತಿಗೆ ತಳ್ಳಿದ್ದೇನೆ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಮಾತನಾಡಿದ್ದಾರೆ. ಪಕ್ಷ ಉಳಿಸಿಕೊಳ್ಳುವುದನ್ನು ನಾನು ಇವರಿಂದ ಕಲಿಯಬೇಕಿಲ್ಲ. ಜನರು ಕೊಟ್ಟಿರುವ ಪ್ರೀತಿ ನನ್ನ ಜತೆಗಿದೆ' ಎಂದರು.

'ನರೇಂದ್ರಸ್ವಾಮಿ ರಾಜಕೀಯವಾಗಿ ಸೀಡ್‌ಲೆಸ್'

ಚಿಕ್ಕಮಗಳೂರು: 'ಮಳವಳ್ಳಿ ಕಾಂಗ್ರೆಸ್ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅವರು ರಾಜಕೀಯವಾಗಿ ಈಗ ಸೀಡ್‌ಲೆಸ್ ಆಗಿದ್ದಾರೆ' ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ತಿರುಗೇಟು ನೀಡಿದರು.

'ಮಂತ್ರಿಗಿರಿಗೆ ಅರ್ಜಿ ಹಾಕುತ್ತಿರುವ ನರೇಂದ್ರಸ್ವಾಮಿ ಪಕ್ಷದ ನಾಯಕರ ಗಮನ ಸೆಳೆಯುವ ಪ್ರಯತ್ನದಲ್ಲಿದ್ದಾರೆ. ಯಾರು ಹಾಗೆ ಇರುತ್ತಾರೋ, ಅವರು ಮತ್ತೊಬ್ಬರ ಬಗ್ಗೆ ಮಾತನಾಡುತ್ತಾರೆ. ಆ ಕಾರಣಕ್ಕೆ ಅವರ ಬಾಯಿಂದ ಈ ರೀತಿಯ ಮಾತು ಬಂದಿದೆ' ಎಂದು ಅವರು ಮಾಧ್ಯಮಗಳಿಗೆ ಮಂಗಳವಾರ ಪ್ರತಿಕ್ರಿಯಿಸಿದರು.

'ಕಾಂಗ್ರೆಸ್ ನಾಯಕರು ನಡೆದುಕೊಳ್ಳುವ ಮಾದರಿಯಲ್ಲೇ ಇತರರು ನಡೆದುಕೊಳ್ಳುತ್ತಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿ ಬಗ್ಗೆ ಏಕವಚನದಲ್ಲಿ ಮಾತನಾಡಿದರು. ಆ ಪಕ್ಷದ ಇತರ ಮುಖಂಡರಿಂದ ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ' ಎಂದು ಪ್ರಶ್ನಿಸಿದರು.

'ನರೇಂದ್ರಸ್ವಾಮಿ ಅವರಿಂದ ರಾಜಕೀಯಕ್ಕೆ ಏನೂ ಕೊಡುಗೆ ಇರುವುದಿಲ್ಲ' ಎಂದು ಅವರು ಹೇಳಿದರು.

ಸುದ್ದಿ 2 ನಿಮಿಷ

'ಈ ಬಾರಿ ಸಾಲ ಮನ್ನಾ ಇಲ್ಲ'

ಬೆಂಗಳೂರು: ಬರಗಾಲ ಇದ್ದರೂ ರೈತರ ಕೃಷಿ ಸಾಲ ಮನ್ನಾ ಮಾಡಲು ಸಾಧ್ಯವಿಲ್ಲ ಎಂದು ಸಚಿವ ಕೆ.ಎನ್.ರಾಜಣ್ಣ ತಿಳಿಸಿದರು.

ಈ ಹಿಂದೆ ರೈತರ ಸಾಲ ಮನ್ನಾ ಮಾಡಿದರೂ ಅದು ಪರಿಪೂರ್ಣವಾಗಿ ಜಾರಿಗೆ ಬಂದಿಲ್ಲ. ಸಣ್ಣ ಮತ್ತು ಮಧ್ಯಮ ರೈತರು ಆಧಾರ್ ಜೋಡಣೆ ಮಾಡದೇ ಇರುವುದು, ಪಡಿತರ ಚೀಟಿಗೂ ಆಧಾರ್‌ಗೂ ತಾಳೆಯಾಗದ ಕಾರಣ ಸಾಲ ಮನ್ನಾದಡಿ ಸಹಕಾರ ಬ್ಯಾಂಕ್‌ಗಳಿಗೆ ಇನ್ನೂ ₹388 ಕೋಟಿ ಪಾವತಿ ಮಾಡಲು ಸಾಧ್ಯವಾಗಿಲ್ಲ ಎಂದು ಹೇಳಿದರು.

ರೈತರು ಪಡೆದ ಸಾಲವನ್ನು ನಿಗದಿತ ಅವಧಿಯೊಳಗೆ ಕಟ್ಟಿದರೆ ಬಡ್ಡಿ, ಚಕ್ರ ಬಡ್ಡಿಯಿಂದ ರಿಯಾಯ್ತಿ ನೀಡಲು ತೀರ್ಮಾನಿಸಲಾಗಿದೆ. ರೈತರು ಇದರ ಪ್ರಯೋಜನ ಪಡೆಯಬೇಕು. ಆದರೆ ಕೊನೆ ದಿನಾಂಕ ವಿಸ್ತರಿಸುವುದಿಲ್ಲ. ಈ ಯೋಜನೆಯನ್ನು ರೈತರು ಬಳಸಿಕೊಂಡರೆ ಸರ್ಕಾರಕ್ಕೆ ₹540 ಕೋಟಿ ಬೇಕಾಗುತ್ತದೆ ಎಂದೂ ತಿಳಿಸಿದರು.

ಈ ಹಿಂದೆ ಬಡ್ಡಿ ಮನ್ನಾ ಮಾಡಿದಾಗ ₹140 ಕೋಟಿ ಹೊರೆ ಆಗಿತ್ತು. ಎಲ್ಲ ರೈತರು ಸಾಲ ಮರುಪಾವತಿ ಮಾಡಿದರೆ ₹540 ಕೋಟಿ ಬೇಕಾಗುತ್ತದೆ. ಆದರೆ, ಶೇ 50ರಷ್ಟು ರೈತರು ಮಾತ್ರ ಸಾಲ ಮರುಪಾವತಿಸುವ ಸಾಧ್ಯತೆ ಇದೆ. ಆದ್ದರಿಂದ ಸರ್ಕಾರಕ್ಕೆ ₹200 ಕೋಟಿ ಹೊರೆ ಆಗಬಹುದೆಂದು ಅಂದಾಜು ಮಾಡಲಾಗಿದೆ ಎಂದು ರಾಜಣ್ಣ ವಿವರಿಸಿದರು.

ರಾಘವೇಂದ್ರ ಸ್ವಾಮಿಗಳ ಮಠ ₹ 4.15 ಕೋಟಿ ಕಾಣಿಕೆ ಸಂಗ್ರಹ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ಹುಂಡಿಯಲ್ಲಿ 33 ದಿನಗಳ ಅವಧಿಯಲ್ಲಿ ₹ 8.20 ಲಕ್ಷ ಮೊತ್ತದ ನಾಣ್ಯ, ₹4.07 ಕೋಟಿ ಮೌಲ್ಯದ ನೋಟುಗಳು ಸೇರಿ ಒಟ್ಟು ₹ 4.15 ಕೋಟಿ ನಗದು ಸಂಗ್ರಹವಾಗಿದೆ. 44 ಗ್ರಾಂ ಚಿನ್ನ, 3642 ಗ್ರಾಂ ಬೆಳ್ಳಿ ಆಭರಣಗಳು ಕಾಣಿಕೆ ರೂಪದಲ್ಲಿ ಬಂದಿವೆ.

ಸೋಮವಾರ ಬೆಳಿಗ್ಗೆ ಆರಂಭವಾಗಿದ್ದ ಎಣಿಕೆ ಕಾರ್ಯ ಮಂಗಳವಾರ ಬೆಳಿಗ್ಗೆ ಪೂರ್ಣಗೊಂಡಿದೆ. ಮಂತ್ರಾಲಯ ಮಠದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಒಂದು ತಿಂಗಳ ಅವಧಿಯಲ್ಲಿ ದಾಖಲೆ ಪ್ರಮಾಣದಲ್ಲಿ ಕಾಣಿಕೆ ಸಂಗ್ರಹವಾಗಿದೆ ಎಂದು ಮಠದ ವ್ಯವಸ್ಥಾಪಕರು ತಿಳಿಸಿದ್ದಾರೆ.

ಮತಾಂತರ ಯತ್ನ: 6 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಶಿರಸಿ: 'ಒತ್ತಾಯಪೂರ್ವಕವಾಗಿ ಸಾರ್ವಜನಿಕರನ್ನು ಮತಾಂತರ ಮಾಡಲು ಯತ್ನಿಸಿದ್ದಾರೆ ಎಂಬ ಆರೋಪದ ಮೇಲೆ ಆರು ಜನರ ತಂಡವನ್ನು ಶಿರಸಿ ಗ್ರಾಮೀಣ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

'ಹಾವೇರಿ ಜಿಲ್ಲೆಯ ಪರಮೇಶ್ವರ ನಾಯ್ಕ, ಸುನಿತಾ ನಾಯ್ಕ, ಧನಂಜಯ ಶಿವಣ್ಣ, ಶಾಲಿನಿ ರಾಣಿ, ಮುಂಡಗೋಡ ಕ್ಯಾದಗಿಕೊಪ್ಪದ ಕುಮಾರ ಲಮಾಣಿ ಮತ್ತು ತಾರಾ ಲಮಾಣಿ ಬಂಧಿತರು' ಎಂದು ಪೊಲೀಸರು ತಿಳಿಸಿದ್ದಾರೆ.

'ತಾಲ್ಲೂಕಿನ ಶಿವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜಗಳೆಮನೆಯಲ್ಲಿ ಆರು ಜನರ ತಂಡ ಆದರ್ಶ ನಾಯ್ಕ ಎಂಬುವರ ಮನೆಗೆ ಅಕ್ರಮವಾಗಿ ಪ್ರವೇಶಿಸಿ, ಕ್ರೈಸ್ತ ಸಮುದಾಯಕ್ಕೆ ಸೇರಲು ಒತ್ತಾಯಿಸಿದ್ದಾರೆ. ಮತಾಂತರದ ನಂತರ ನಮ್ಮ ಆರ್ಥಿಕ ಪರಿಸ್ಥಿತಿ ಮತ್ತು ಆರೋಗ್ಯ ಸ್ಥಿತಿ ಸುಧಾರಿಸಿದೆ. ಹಿಂದೂ ಧರ್ಮ ಬಿಟ್ಟು ಯೇಸುಗೆ ಪೂಜಿಸಿ ಎಂದು ಹೇಳಿದ್ದಾರೆ. ಆರೋಪಿಗಳು ಹಿಂದೂ ದೇವರಿಗೆ ಅವಮಾನಿಸಿದ್ದು ಅಲ್ಲದೇ ಧಾರ್ಮಿಕ ಭಾವನೆಗೆ ಘಾಸಿ ಉಂಟು ಮಾಡಿರುವುದಾಗಿ ಸ್ಥಳೀಯರು ನಮಗೆ ಮಾಹಿತಿ ನೀಡಿದರು. ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಿದೆವು' ಎಂದು ಪಿಎಸ್‌ಐ ಪ್ರತಾಪ್ ಪಚ್ಚಪ್ಪಗೋಳ ತಿಳಿಸಿದ್ದಾರೆ.

ದೀಪ ಚಿತ್ತಾರ ಗವಿಸಿದ್ಧೇಶ್ವರ ಜಾತ್ರೆ ಅಂಗವಾಗಿ ಕೊಪ್ಪಳದ ಗವಿಮಠದ ಮೈದಾನದಲ್ಲಿ ಸ್ಥಾಪಿಸಲಾಗಿರುವ ಬೃಹತ್ ಆಟಿಕೆಗಳು ಬಣ್ಣದ ಬೆಳಕು ಸೂಸುತ್ತ ಜನರನ್ನು ಆಕರ್ಷಿಸುತ್ತಿವೆ

-ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಬಿಜೆಪಿ, ಕಾಂಗ್ರೆಸ್ ಪಡಸಾಲೆಯಲ್ಲಿ ಬಲವಾಗಿ ಕೇಳಿ ಬರುತ್ತಿರುವ ಒತ್ತಾಯ

ಕೊಡಗಿನ ಆಕಾಂಕ್ಷಿಗಳಿಗೆ ಟಿಕೆಟ್: ಕೂಗು

• ಕೆ.ಎಸ್.ಗಿರೀಶ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಮುಖ್ಯಾಂಶಗಳು
- ಕೊಡಗು ಜಿಲ್ಲೆಯವರನ್ನೇ ಪರಿಗಣಿಸಲು ಒತ್ತಾಯ
- ಸಿ.ಎಂ.ಪೂಣಚ್ಚ ನಂತರ ಬೇರೆ ಯಾರಿಗೂ ಟಿಕೆಟ್ ಇಲ್ಲ
- ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆ

ಮಡಿಕೇರಿ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು– ಕೊಡಗು ಕ್ಷೇತ್ರಕ್ಕೆ ಕೊಡಗು ಜಿಲ್ಲೆಯ ಅಭ್ಯರ್ಥಿಯನ್ನೇ ಪರಿಗಣಿಸಬೇಕು ಎನ್ನುವ ಕೂಗು ಬಿಜೆಪಿ ಹಾಗೂ ಕಾಂಗ್ರೆಸ್‌ನಲ್ಲಿ ಇಲ್ಲಿ ಬಲವಾಗಿ ಕೇಳಿ ಬರುತ್ತಿದೆ. ವಾಟ್ಸ್‌ಆ್ಯಪ್ ಗ್ರೂಪ್‌ಗಳು ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚಿನ ಚರ್ಚೆಗಳು ನಡೆಯುತ್ತಿವೆ.

1969ರಲ್ಲಿ ಕೊಡಗು ಜಿಲ್ಲೆಯಿಂದ ಸಿ.ಎಂ.ಪೂಣಚ್ಚ ಅವರು ಸಂಸತ್ತಿಗೆ ಆಯ್ಕೆಯಾಗಿದ್ದನ್ನು ಬಿಟ್ಟರೆ ಇಲ್ಲಿನ ಬೇರಾರಿಗೂ ಅವಕಾಶವೇ ದೊರೆತಿಲ್ಲ. ಕೊಡಗಿನ ಆಕಾಂಕ್ಷಿಗಳನ್ನು ಸತತವಾಗಿ ನಿರ್ಲಕ್ಷಿಸಲಾಗುತ್ತಿದೆ. ಈ ಬಾರಿಯಾದರೂ ಇಲ್ಲಿನವರಿಗೆ ಟಿಕೆಟ್ ಕೊಡಬೇಕು ಎಂದು ಬಿಜೆಪಿಯ ಹಲವು ಮುಖಂಡರು ವರಿಷ್ಠರನ್ನು ಒತ್ತಾಯಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕೊಡಗು ಜಿಲ್ಲೆಯವರಿಗೆ ಟಿಕೆಟ್ ನೀಡಿದರೆ ಗೆಲ್ಲುವುದಿಲ್ಲ. ಹೆಚ್ಚಿನ ಮತಗಳು ಮೈಸೂರು ಜಿಲ್ಲೆಯಲ್ಲಿರುವುದರಿಂದ ಅಲ್ಲಿಯವರಿಗೆ ಟಿಕೆಟ್ ನೀಡಬೇಕು' ಎನ್ನುವ ವಾದವನ್ನು ಬಲವಾಗಿ ತಳ್ಳಿ ಹಾಕಿರುವ ಇಲ್ಲಿನ ಬಿಜೆಪಿ ಮುಖಂಡರು, ಪ್ರತಾಪ ಸಿಂಹ ಮೈಸೂರಿನವರೂ ಅಲ್ಲ, ಕೊಡಗಿನವರೂ ಅಲ್ಲ. ಯಾರೇ ಅಭ್ಯರ್ಥಿಯಾದರೂ ಪ್ರಧಾನಿ ನರೇಂದ್ರ ಮೋದಿ ಅವರ ನಾಮಬಲದಿಂದ ಗೆಲ್ಲುವ ಅವಕಾಶ ಇದೆ' ಎಂದು ವಾದ ಮಂಡಿಸುತ್ತಾರೆ.

'ಕೊಡಗಿನವರೇ ಅಭ್ಯರ್ಥಿಯಾದರೆ ಪಕ್ಷಾತೀತವಾಗಿ ಮತಗಳು ಬರುವ ಜೊತೆಗೆ, ಕೊಡಗಿಗೆ ಹೊಂದಿಕೊಂಡ ಪಿರಿಯಾಪಟ್ಟಣ ಹಾಗೂ ಹುಣಸೂರು ತಾಲ್ಲೂಕಿನವರ ಬೆಂಬಲವೂ ಸಿಗಲಿದೆ. ಅಲ್ಲಿಂದ ನಿತ್ಯ 10 ಸಾವಿರಕ್ಕೂ ಅಧಿಕ ಮಂದಿ ಕೊಡಗಿಗೆ ಕೆಲಸಕ್ಕಾಗಿ ಬರುತ್ತಿದ್ದಾರೆ. ಇವರಲ್ಲಿ ಉದ್ಯೋಗ ಕೊಟ್ಟ ಕೊಡಗಿನ ಬಗ್ಗೆ ಪಕ್ಷಾತೀತವಾದ ಒಲವು ಇದೆ. ಹಾಗಾಗಿ, ಈ ಭಾಗದ ಮತಗಳನ್ನೂ ಸೆಳೆಯಬಹುದು' ಎಂಬ ವಾದ ಬಿಜೆಪಿ ಮುಖಂಡರದಾಗಿದೆ.

ಈಚೆಗೆ ಬೆಂಗಳೂರಿನಲ್ಲಿ ನಡೆದ ಪಕ್ಷದ ಕೋರ್ ಕಮಿಟಿ ಸಭೆಯಲ್ಲಿ ಕೊಡಗು ಜಿಲ್ಲೆಯಿಂದ ತೆರಳಿದ ಸಮಿತಿ ಸದಸ್ಯರಲ್ಲಿ ಬಹುಪಾಲು ಮಂದಿ ಕೊಡಗು ಜಿಲ್ಲೆಗೆ ಸೇರಿದ ಯಾವುದೇ ಆಕಾಂಕ್ಷಿಗಾದರೂ ಟಿಕೆಟ್ ಕೊಡಿ ಎಂದು ಮನವಿ ಸಲ್ಲಿಸಿದ್ದಾರೆ ಎಂದು ತಿಳಿದುಬಂದಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಿಜೆಪಿಯ ಕೊಡಗು ಜಿಲ್ಲಾ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, 'ಕೊಡಗಿನ ಆಕಾಂಕ್ಷಿಗೆ ಟಿಕೆಟ್ ಕೊಡಬೇಕು ಎನ್ನುವ ಒತ್ತಾಯ ಸಾರ್ವಜನಿಕ ವಲಯದಲ್ಲಿ ಇರುವುದು ನಿಜ. ಆದರೆ, ಪಕ್ಷದ ವರಿಷ್ಠರು ಯಾರಿಗೇ ಟಿಕೆಟ್ ಕೊಟ್ಟರೂ ಅವರ ಪರವಾಗಿ ಕೆಲಸ ಮಾಡುತ್ತೇನೆ' ಎಂದು ಅವರು ಹೇಳಿದರು.

> **ನನಗೆ ಲೋಕಸಭಾ ಚುನಾವಣೆ ಬಗ್ಗೆ ಹೆಚ್ಚಿನ ಆಸಕ್ತಿ ಇಲ್ಲ. ಪಕ್ಷದ ವರಿಷ್ಠರು ಯಾರಿಗೇ ಟಿಕೆಟ್ ಕೊಟ್ಟರೂ ಪಕ್ಷದ ಪರವಾಗಿ ಕೆಲಸ ಮಾಡುವೆ**
> **ಕೆ.ಜಿ.ಬೋಪಯ್ಯ** ಬಿಜೆಪಿ ಮುಖಂಡ.

> **ಕೊಡಗಿನ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎನ್ನುವ ಒತ್ತಾಯ ಇರುವುದು ನಿಜ. ಪಕ್ಷದ ವರಿಷ್ಠರು ಕೈಗೊಳ್ಳುವ ನಿರ್ಧಾರಕ್ಕೆ ನಾನು ಬದ್ಧನಾಗಿರುತ್ತೇನೆ**
> **ಎಂ.ಪಿ.ಅಪ್ಪಚ್ಚುರಂಜನ್** ಬಿಜೆಪಿ ಮುಖಂಡ.

ಪಿಎಸ್‌ಐ ಪರೀಕ್ಷೆ ಕೀ ಉತ್ತರ ಪ್ರಕಟ

KEA

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಮರುಪರೀಕ್ಷೆಯ ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಂಗಳವಾರ ಪ್ರಕಟಿಸಿದೆ.

ಅಭ್ಯರ್ಥಿಗಳು PSI recruitment(Re-exam) 2023 ಲಿಂಕ್ ಬಳಸಿಕೊಂಡು ಫೆ.5ರ ಒಳಗೆ ಆಕ್ಷೇಪ, ತಕರಾರು ಸಲ್ಲಿಸಬಹುದು. ಆಕ್ಷೇಪಣೆ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿ ಸಂಖ್ಯೆ, ತಮ್ಮ ಹೆಸರು, ಜನ್ಮ ದಿನಾಂಕ ನಮೂದಿಸಬೇಕು. ಅಗತ್ಯ ದಾಖಲೆ ಸಲ್ಲಿಸಬೇಕು. ಪತ್ರ, ಇ-ಮೇಲ್ ಮೂಲಕ ಕಳಿಸುವ ಆಕ್ಷೇಪಣೆಗಳನ್ನು ಪುರಸ್ಕರಿಸುವುದಿಲ್ಲ ಎಂದು ಕೆಇಎ ಹೇಳಿದೆ.

ವಚನ ಭ್ರಷ್ಟರಿಂದ ರಾಮನ ಹೆಸರು ಹಾಳು: ದೇವನೂರ

ಪ್ರಜಾವಾಣಿ ವಾರ್ತೆ

> **ಏನೂ ಸಾಧನೆ ಮಾಡಲಾಗದವರು ಕೆರಗೋಡಿನಲ್ಲಿ ಬಾವುಟದ ಗದ್ದಲ ಎಬ್ಬಿಸುತ್ತಿದ್ದಾರೆ**
> **ದೇವನೂರ ಮಹಾದೇವ,** ಚಿಂತಕ

ಮೈಸೂರು: 'ವಚನ ಪಾಲನೆಗೆ ಶ್ರೀರಾಮ ಪ್ರತೀಕ. ಆದರೆ ಕೊಟ್ಟ ವಚನವನ್ನೇ ಪಾಲನೆ ಮಾಡದವರು ಇಂದು ಶ್ರೀರಾಮನ ಘೋಷಣೆ ಕೂಗುತ್ತಿದ್ದು, ಆತನ ಹೆಸರನ್ನೇ ಕೊಲ್ಲುತ್ತಿದ್ದಾರೆ' ಎಂದು ಚಿಂತಕ ದೇವನೂರ ಮಹಾದೇವ ವಿಷಾದಿಸಿದರು.

ಸೌಹಾರ್ದ ಕರ್ನಾಟಕ ಸಂಘಟನೆಯು ಹುತಾತ್ಮ ದಿನದ ಅಂಗವಾಗಿ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಸೌಹಾರ್ದ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, 'ಇವತ್ತು ಸೌಹಾರ್ದತೆ ಇರಬೇಕೆಂದು ನಾವು ಕೇಳುತ್ತಿರುವುದು ದಯನೀಯ ಸ್ಥಿತಿ. ಅಂದರೆ ಇದನ್ನು ಈಗಾಗಲೇ ಯಾರೋ ಹಾಳು ಮಾಡಿದ್ದಾರೆ ಎಂದರ್ಥ. ನಾಡಿನ ಸಹಬಾಳ್ವೆ, ಸಮಾಜಕ್ಕೆ ಯಾರೋ ವಿಷ ಹಾಕಿದ್ದಾರೆ. ನ್ಯಾಯದ ತಕ್ಕಡಿ ಅಲುಗಾಡುತ್ತಿದೆ. ಸಮಸ್ಯೆಗಳ ಜೊತೆ ಮುಖಾಮುಖಿಯಾಗಲು ಸಾಮರ್ಥ್ಯ ಇಲ್ಲದಿರುವವರಿಂದ ಈ ಸಮಸ್ಯೆ ಉಂಟಾಗಿದೆ' ಎಂದು ವಿವರಿಸಿದರು.

'ಜಗತ್ತಿನ ಪೈಲ್ವಾನರು ಎಂದು ಹೇಳಿಕೊಳ್ಳುವವರು ಒಳಗೆ ಪೊಳ್ಳು. ಇವರು ದೇಶದ ನಿರುದ್ಯೋಗ, ಬಡತನ ಕಡಿಮೆ ಮಾಡಲಿಲ್ಲ. ಕೊರೊನಾ ಸಂದರ್ಭದಲ್ಲಿ ಅದಾನಿ ಸಂಪತ್ತು ದ್ವಿಗುಣವಾಯಿತು. ಬಡವರು ಬಡವರಾಗೇ ಉಳಿದರು. ಬಡವರ ತೆರಿಗೆ ಹಣ ಅದಾನಿಯಂತಹವರ ಖಾತೆಗೆ ಹೋಗುತ್ತಿದೆ' ಎಂದರು.

'ಹಿಂದೆಲ್ಲ ಸರ್ಕಾರ ತೆರಿಗೆ ಮೂಲಕ ಬಡವರ ರಕ್ತ ಹೀರುತ್ತಿದೆ ಎನ್ನುತ್ತಿದ್ದೆವು. ಈಗ ಇರುವವರು ರಕ್ತದ ಜೊತೆ ನರವನ್ನೂ ಹೀರುತ್ತಿದ್ದಾರೆ. ಈ ಆಳ್ವಿಕೆ ಹೋಗದೇ ಈ ಸಮಸ್ಯೆ ಬಗೆಹರಿಯದು. ಇದಕ್ಕಾಗಿ ಈ ಕ್ಷಣದಿಂದಲೇ ಜಾಗೃತಿ ಪ್ರಯತ್ನ ಆಗಬೇಕು. ಇಲ್ಲವಾದರೆ ಸಂವಿಧಾನ, ಪ್ರಜಾಪ್ರಭುತ್ವ ಉಳಿಯದು. ಇಡೀ ದೇಶ ಅಪಾಯದಲ್ಲಿ ಇದ್ದು, ಪ್ರತಿಯೊಬ್ಬರೂ ಧ್ವನಿ ಎತ್ತಬೇಕು' ಎಂದರು.

ಮೊದಲ ಬಾರಿಗೆ ವಿಮಾನ ಏರಿದ ತ್ಯಾಜ್ಯ ಸಂಗ್ರಹ ವಾಹನ ಚಾಲಕಿಯರು

ದೆಹಲಿ ತೋರಿಸಿದ 'ಕಸ'ದ ಕೆಲಸ!

• ಕೆ.ಓಂಕಾರ ಮೂರ್ತಿ

ಶಶಿಕಲಾ, ಮಂಜುಳಾ

ಕೋಲಾರ: 'ಕಸದವರು ಎಂದು ಜನರು ನಮ್ಮನ್ನು ಹೀಯಾಳಿಸುತ್ತಾರೆ. ಮನೆ ಬಳಿ ಕಸ ಎತ್ತಲು ಹೋದಾಗ ಮಕ್ಕಳು ಕೂಡ ಕಸದವರು ಬಂದರು ಎನ್ನುತ್ತಾರೆ. ಇದರಿಂದ ಬೇಸರವಾಗಿದ್ದು ನಿಜ. ಈಗ ಇದೇ ಕೆಲಸದಿಂದಾಗಿ ದೆಹಲಿಗೆ ಹೋಗಿ ಗಣರಾಜ್ಯೋತ್ಸವ ಪರೇಡ್ ವೀಕ್ಷಿಸಲು ಅವಕಾಶ ಸಿಕ್ಕಿತು. ಮೊದಲ ಬಾರಿ ವಿಮಾನವೇರಿದವು. ಕೆಂಪು ಕೋಟೆ, ಗಾಂಧಿ ಸಮಾಧಿ ನೋಡಿದೆವು. ಈಗ ಊರಿನವರು ನಮ್ಮ ಸಾಧನೆ ಕಂಡು ಹೆಮ್ಮೆಪಡುತ್ತಿದ್ದಾರೆ. ನಮ್ಮ ಕೆಲಸದ ಬಗ್ಗೆ ನಮಗೆ ಈಗ ಹೆಮ್ಮೆ ಅನಿಸುತ್ತಿದೆ'

– ನವಹದೆಲಿಯಲ್ಲಿ ಶುಕ್ರವಾರ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ವಿಶೇಷ ಅತಿಥಿಗಳಾಗಿ ಪಾಲ್ಗೊಂಡಿದ್ದ ಕೋಲಾರ ತಾಲ್ಲೂಕಿನ ಬೆಗ್ಲಿಹೊಸಹಳ್ಳಿ ಗ್ರಾಮ ಪಂಚಾಯಿತಿಯ ಕಸ ಸಂಗ್ರಹ ವಾಹನ (ಸ್ವಚ್ಛತಾ ವಾಹಿನಿ) ಚಾಲಕಿ ಮಂಜುಳಾ, ಸಹಾಯಕಿ ಶಶಿಕಲಾ ಮನದಾಳದ ಮಾತಿದು.

'ವಿಮಾನ ಹತ್ತಿದ್ದೂ ಮೊದಲು, ದೆಹಲಿ ನೋಡಿದ್ದೂ ಮೊದಲು. ಬಹಳ ಹತ್ತಿರದಿಂದ ಗಣರಾಜ್ಯೋತ್ಸವ ಪರೇಡ್ ವೀಕ್ಷಿಸಲು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ನೋಡಲು ಅವಕಾಶ ದೊರೆಯಿತು. ಕರ್ನಾಟಕ ಭವನದಲ್ಲಿ ವಾಸ್ತವ್ಯ ಹೂಡಿದ್ದೆವು. ಕೆಂಪು ಕೋಟೆ, ಇಂಡಿಯಾ ಗೇಟ್, ಲೋಟಸ್ ಟೆಂಪಲ್, ರಾಜ್ ಘಾಟ್ (ಗಾಂಧಿ ಸಮಾಧಿ), ಅಕ್ಷರಧಾಮ ದೇಗುಲ ವೀಕ್ಷಿಸಿದೆವು' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮ ಕೆಲಸದ ಬಗ್ಗೆ ನಮಗೆ ಯಾವತ್ತೂ ಬೇಸರವಾಗಿಲ್ಲ. ಎರಡೂವರೆ ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಜಿಲ್ಲಾಡಳಿತ ಹಾಗೂ ಗ್ರಾಮ ಪಂಚಾಯಿತಿ ಪ್ರೋತ್ಸಾಹ ಮರೆಯುವಂತಿಲ್ಲ' ಎಂದು ಮಂಜುಳಾ ಹೇಳುತ್ತಾರೆ.

'ಆರಂಭದಲ್ಲಿ ಈ ಕೆಲಸವೇ ಬೇಡ ಅಂದುಕೊಂಡಿದ್ದೆ. ಏಕೆಂದರೆ ಎಲ್ಲರೂ ತಿರಸ್ಕಾರ ಮನೋಭಾವದಿಂದ ನೋಡುತ್ತಿದ್ದರು. ಈಗ ಕುಟುಂಬದವರು, ಊರಿನವರು ಖುಷಿಪಡುತ್ತಿದ್ದಾರೆ. ವಿಶೇಷ ಗೌರವ ತೋರುತ್ತಿದ್ದಾರೆ' ಎನ್ನುತ್ತಾರೆ ಶಶಿಕಲಾ.

'ರಸ್ತೇಲಿ ಮೈಕ್ ಹಾಕಿಕೊಂಡು ಮನೆ, ಮನೆಗೆ ಸ್ವಚ್ಛತಾ ವಾಹನದೊಂದಿಗೆ ಹೋಗಿ ಕಸ ಸಂಗ್ರಹಿಸುತ್ತೇವೆ. ಎರಡೂವರೆ ವರ್ಷದಿಂದ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದು, ವಾಹನ ಚಾಲನೆ ಕಲಿತಿದ್ದೇನೆ' ಎಂದರು.

ಸ್ವಚ್ಛ ಭಾರತ್ ಯೋಜನೆಯನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಸಮರ್ಪಕವಾಗಿ ಅನುಷ್ಠಾನಕ್ಕೆ ತಂದವರನ್ನು ಗಣರಾಜ್ಯೋತ್ಸವಕ್ಕೆ ಆಯ್ಕೆ ಮಾಡಲಾಗಿತ್ತು.

> **ಜೀವನದಲ್ಲಿ ಮರೆಯಲಾಗದ ಅನುಭವವಿದು. ಕೋಲಾರದ ಹಳ್ಳಿಯೊಂದರಲ್ಲಿ ಸ್ವಚ್ಛತಾ ಕೆಲಸದಲ್ಲಿ ತೊಡಗಿದ್ದ ನಮಗೆ ಇಂಥ ಅವಕಾಶ ಲಭಿಸಿದ್ದು ಸೌಭಾಗ್ಯವೇ ಸರಿ**
> **ಮಂಜುಳಾ,** ಸ್ವಚ್ಛತಾ ವಾಹನ ಚಾಲಕಿ, ಬೆಗ್ಲಿಹೊಸಹಳ್ಳಿ, ಕೋಲಾರ

> **ಕಸ ಸಂಗ್ರಹಿಸುವವರೂ ಮನುಷ್ಯರೇ. ತಿರಸ್ಕಾರದಿಂದ ನೋಡಿದರೆ ಕೆಲಸದ ಬಗ್ಗೆ ಬೇಸರವಾಗುತ್ತದೆ. ಗೌರವದಿಂದ ಕಂಡರೆ ಕೆಲಸದ ಬಗ್ಗೆ ಹೆಮ್ಮೆ ಎನಿಸುತ್ತದೆ**
> **ಶಶಿಕಲಾ,** ಸ್ವಚ್ಛತಾ ಸಹಾಯಕಿ, ಬೆಗ್ಲಿಹೊಸಹಳ್ಳಿ, ಕೋಲಾರ

ಸಚಿವರೊಂದಿಗೆ ಸಂವಾದ

ಕರ್ನಾಟಕದ ಪ್ರತಿನಿಧಿಯಾಗಿ ಮಂಜುಳಾ ಅವರಿಗೆ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರೊಂದಿಗೆ ಸಂವಾದದಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕಿತ್ತು.

'ಗ್ರಾಮಗಳಲ್ಲಿ ಸ್ವಚ್ಛತೆ ಕಾಯ್ದುಕೊಳ್ಳುವುದು, ಶೌಚಾಲಯ ನಿರ್ಮಾಣ, ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಕುರಿತು ಮಾಹಿತಿ ಪಡೆದರು. ಸ್ವಚ್ಛತಾ ವಾಹನ ಚಾಲಕಿಯರ ಬಗ್ಗೆ ಖುಷಿ, ಹೆಮ್ಮೆ ವ್ಯಕ್ತಪಡಿಸಿ ಕೆಲಸ ಹೇಗೆ ಮಾಡುತ್ತೀರಿ ಎಂಬುದನ್ನು ಖುದ್ದಾಗಿ ಬಂದು ವೀಕ್ಷಿಸುವುದಾಗಿ ಹೇಳಿದರು' ಎಂದು ಮಂಜುಳಾ ವಿವರಿಸಿದರು.

ಎ.ಸಿ ಕಚೇರಿ ಪೀಠೋಪಕರಣ ಜಪ್ತಿ

ಪ್ರಜಾವಾಣಿ ವಾರ್ತೆ

ರಾಯಚೂರು ಉಪ ವಿಭಾಗಾಧಿಕಾರಿ ಕಚೇರಿಯ ಪೀಠೋಪಕರಣ ಜಪ್ತಿ ಮಾಡಲಾಗಿದೆ

ರಾಯಚೂರು: ದದ್ದಲ್ ಏತ ನೀರಾವರಿ ಯೋಜನೆಯಡಿ ಭೂಮಿ ಸ್ವಾಧೀನ ಪಡಿಸಿಕೊಂಡು ರೈತರಿಗೆ ಪರಿಹಾರ ನೀಡದ ಕಾರಣ ಜಿಲ್ಲಾ ಹೆಚ್ಚುವರಿ ನ್ಯಾಯಾಲಯದ ಆದೇಶದಂತೆ ಇಲ್ಲಿಯ ಉಪ ವಿಭಾಗಾಧಿಕಾರಿ ಕಚೇರಿಯ ಪೀಠೋಪಕರಣಗಳನ್ನು ಜಪ್ತಿ ಮಾಡಲಾಯಿತು.

'ಏತ ನೀರಾವರಿ ಯೋಜನೆಗಾಗಿ ರಾಯಚೂರು ಜಿಲ್ಲೆಯ ಜೆ.ಮಲ್ಲಾಪುರು, ದದ್ದಲ್, ಸುಂಕೇಶ್ವರ ಗ್ರಾಮದಲ್ಲಿ 2008, 2009 ಹಾಗೂ 2012ರಲ್ಲಿ ನೂರಾರು ಎಕರೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಆದರೆ, ಸಂತ್ರಸ್ತ ರೈತರಿಗೆ ಈವರೆಗೂ ಪರಿಹಾರ ನೀಡಿಲ್ಲ. ಸಣ್ಣ ನೀರಾವರಿ ಇಲಾಖೆ ಹಾಗೂ ರಾಯಚೂರು ಉಪ ವಿಭಾಗಾಧಿಕಾರಿ ಕಚೇರಿ ಮೂಲಕ ರೈತರ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಪ್ರತಿ ಎಕರೆಗೆ ₹2.98 ಲಕ್ಷ ಪರಿಹಾರ ಕೊಡಬೇಕಿತ್ತು' ಎಂದು ರೈತರ ಪರವಾಗಿ ಬಂದಿದ್ದ ವಕೀಲ ಬಸಪ್ಪ ಹೇಳಿದರು.

ನ್ಯಾಯಾಲಯ 10 ಬಾರಿ ನೋಟಿಸ್ ನೀಡಿದರೂ ಅಧಿಕಾರಿಗಳು ಯಾವುದೇ ಕ್ರಮ ವಹಿಸಿರಲಿಲ್ಲ. ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದ ಆದೇಶದ ಮೇರೆಗೆ ಎಸಿ ಕಚೇರಿಯ ಪೀಠೋಪಕರಣಗಳನ್ನು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು.

ಪಾದಚಾರಿ ಮಾರ್ಗ: ಬಿಬಿಎಂಪಿಗೆ ಹೈಕೋರ್ಟ್ ಸೂಚನೆ

ಒತ್ತುವರಿ ತೆರವುಗೊಳಿಸಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಪಾದಚಾರಿ ಮಾರ್ಗಗಳ ಒತ್ತುವರಿ ತೆರವುಗೊಳಿಸುವಲ್ಲಿ ಬಿಬಿಎಂಪಿ ಅಸೀಮ ನಿರ್ಲಕ್ಷ್ಯ ತೋರುತ್ತಿದೆ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, 'ತಕ್ಷಣವೇ ಎಲ್ಲ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಮಾಡಬೇಕು' ಎಂದು ಖಡಕ್ ಆದೇಶ ನೀಡಿದೆ.

'ತ್ಯಾಗರಾಜ ನಗರದಲ್ಲಿನ ಪಾದಚಾರಿ ಮಾರ್ಗಗಳ ಒತ್ತುವರಿ ತೆರವುಗೊಳಿಸಬೇಕು' ಎಂದು ಕೋರಿ ಸ್ಥಳೀಯ ನಿವಾಸಿ ಪ್ರಶಾಂತ್ ರಾವ್ ಸಲ್ಲಿಸಿದ್ದ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಮತ್ತು ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, 'ಬಿಬಿಎಂಪಿ ಸಾರ್ವಜನಿಕರಿಂದ ತೆರಿಗೆ ಸಂಗ್ರಹಿಸುತ್ತಿದೆ. ಆದರೆ, ಇದಕ್ಕೆ ಪ್ರತಿಯಾಗಿ ಸರಿಯಾದ ರಸ್ತೆ, ಪಾದಚಾರಿ ಮಾರ್ಗಗಳ ಸುಧಾರಣೆಗೆ ಮುಂದಾಗುತ್ತಿಲ್ಲ. ಕೆಲವೆಡೆಯಂತೂ ಪಾದಚಾರಿ ಮಾರ್ಗಗಳನ್ನು ವಾಹನಗಳ ನಿಲುಗಡೆಯನ್ನಾಗಿ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಅನುಪಾಲನಾ ವರದಿ ಸಲ್ಲಿಸಬೇಕು' ಎಂದು ಬಿಬಿಎಂಪಿಗೆ ನಿರ್ದೇಶಿಸಿತು.

'ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಬಿಬಿಎಂಪಿಯೊಂದಿಗೆ ಇತರೆ ಯಾವ ಇಲಾಖೆಗಳು ಭಾಗಿಯಾಗಬಹುದು. ಅವರಿಗೆ ಯಾವ ರೀತಿಯಲ್ಲಿ ನಿರ್ದೇಶನ ನೀಡಬಹುದು ಎಂಬುದರ ಬಗ್ಗೆ ತಿಳಿಸಿ' ಎಂದು ನ್ಯಾಯಪೀಠ ಇದೇ ವೇಳೆ ಸರ್ಕಾರದ ಪರ ವಕೀಲರಿಗೆ ಸೂಚಿಸಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ವಿಚಾರಣೆ ವೇಳೆಗೆ ಪಾಲಿಕೆ ಆಯುಕ್ತರು ಖುದ್ದು ಹಾಜರಿರಬೇಕು ಎಂದು ನಿರ್ದೇಶಿಸಿ ವಿಚಾರಣೆಯನ್ನು ಫೆಬ್ರುವರಿ 1ಕ್ಕೆ ಮುಂದೂಡಿತು.

ಕೋರಿಕೆ ಏನು?: 'ಪಾದಚಾರಿ ಮಾರ್ಗದಲ್ಲಿದ್ದ ಬಿಡಾಡಿ ದನಗಳ ದಾಳಿಯಿಂದ ನನ್ನ ತಾಯಿಗೆ ಪೆಟ್ಟಾಗಿದೆ. ಪಾದಚಾರಿ ಮಾರ್ಗವನ್ನು ಒತ್ತುವರಿದಾರರಿಂದ ತೆರವುಗೊಳಿಸಿದ ಬಳಿಕ ಅದಕ್ಕೆ ಕಬ್ಬಿಣದ ತಡೆಗೋಡೆ ನಿರ್ಮಿಸಬೇಕು. ತಾಯಿಗೆ ಆಗಿರುವ ಅಪಘಾತಕ್ಕೆ ಪರಿಹಾರವಾಗಿ ₹ 15 ಲಕ್ಷ ಪರಿಹಾರ ನೀಡುವಂತೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಬೀಳ್ಕೊಡುಗೆ

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ಅವರ ಪತ್ನಿ ಎಚ್.ಡಿ. ಅನಸೂಯಾ ಹಾಗೂ ತಾಯಿ ಸೊಂಬಮ್ಮ ಅವರನ್ನು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಸನ್ಮಾನಿಸಿದರು. ಸಂಸ್ಥೆಯ ವೈದ್ಯಾಧಿಕಾರಿಗಳು ಪಾಲ್ಗೊಂಡಿದ್ದರು

ಬೆಸ್ಕಾಂ: ವಿದ್ಯುತ್ ದರ 9 ಪೈಸೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಡಿಸೆಂಬರ್ ತಿಂಗಳಲ್ಲಿ ಇಂಧನ ಮತ್ತು ವಿದ್ಯುತ್ ಖರೀದಿ ಹೊಂದಾಣಿಕೆ ವೆಚ್ಚ (ಎಫ್‌ಪಿಪಿಸಿಎ) ಇಳಿಕೆ ಆಗಿರುವುದರಿಂದ, ಗ್ರಾಹಕರಿಗೆ ಫೆಬ್ರುವರಿ ತಿಂಗಳಲ್ಲಿ ನೀಡುವ ವಿದ್ಯುತ್ ಬಿಲ್‌ನಲ್ಲಿ ಪ್ರತಿ ಯೂನಿಟ್‌ಗೆ 9 ಪೈಸೆ ಕಡಿತಗೊಳಿಸಲು ಬೆಸ್ಕಾಂ ನಿರ್ಧರಿಸಿದೆ.

ಕಳೆದ ತಿಂಗಳ ಬಿಲ್‌ನಲ್ಲೂ ಪ್ರತಿ ಯೂನಿಟ್‌ಗೆ 37 ಪೈಸೆ ಕಡಿತಗೊಳಿಸಿತ್ತು.

'ಗೃಹ ಜ್ಯೋತಿ' ಯೋಜನೆಯಡಿ ಉಚಿತವಾಗಿ 200 ಯೂನಿಟ್ ಬಳಸುವ ಗ್ರಾಹಕರಿಗೆ ಇದರಿಂದ ಪ್ರಯೋಜನವಾಗುವುದಿಲ್ಲ. 200 ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಸುವ ಗೃಹ ಹಾಗೂ ವಾಣಿಜ್ಯ ಬಳಕೆದಾರರಿಗೆ ಸ್ವಲ್ಪ ಅನುಕೂಲವಾಗಲಿದೆ.

ಶಾಸಕರ ಕಾರಣಕ್ಕೆ ಗಲಭೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರಗೋಡು ಗ್ರಾಮದಲ್ಲಿ ರಾಜ್ಯ ಸರ್ಕಾರದಿಂದ ಬಾವುಟ ಹಾರಿಸಿರಲಿಲ್ಲ. ಅಲ್ಲಿನ ಗ್ರಾಮಸ್ಥರು ಬಾವುಟ ಹಾರಿಸಿದ್ದರು. ಸ್ಥಳೀಯ ಕಾಂಗ್ರೆಸ್ ಶಾಸಕರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿಲ್ಲ ಎಂಬ ಕಾರಣ ಮುಂದಿಟ್ಟುಕೊಂಡು ಗೊಂದಲ, ಗಲಭೆ ಸೃಷ್ಟಿಸಲಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆರಗೋಡು ಬಸ್ ನಿಲ್ದಾಣದಲ್ಲಿ ಧ್ವಜ ಸ್ತಂಭ ಸ್ಥಾಪನೆಗೆ ಅನುಮತಿ ಕೋರಿದ್ದ ಗೌರಿಶಂಕರ ಸೇವಾ ಟ್ರಸ್ಟ್, ಅದರಲ್ಲಿ ಯಾವ ಧ್ವಜ ಎಂಬುದನ್ನು ಉಲ್ಲೇಖಿಸಿರಲಿಲ್ಲ. ಧ್ವಜ ತೆರವು ಮಾಡುವುದಕ್ಕಾಗಿ ರಾಜ್ಯ ಸರ್ಕಾರವು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಬಳಕೆ ಮಾಡಿಕೊಂಡಿದೆ ಎಂದು ದೂರಿದರು.

'ಮಂಡ್ಯ ಜಿಲ್ಲೆಯನ್ನು ಹಾಳು ಮಾಡಲು ಕುಮಾರಸ್ವಾಮಿ ಬಂದಿದ್ದಾರೆ ಎಂದು ನಮ್ಮ ಹಳೆಯ ಗೆಳೆಯರು ಹೇಳಿದ್ದಾರೆ. ಮಂಡ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಜತೆಯಾಗಿ ಪ್ರತಿಭಟನೆ ನಡೆಸಲಿವೆ ಎಂದು ವಿಧಾನಸಭೆ

ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಕಟಿಸಿದ್ದರು. ಮಂಡ್ಯ ಜಿಲ್ಲೆಯ ನನ್ನ ಅಭಿಮಾನಿಗಳು, ಬೆಂಬಲಿಗರೂ ಒತ್ತಾಯ ಮಾಡಿದ್ದರು' ಎಂದು ಹೇಳಿದರು.

ಪ್ರತಿಭಟನಾ ಸಭೆಯಲ್ಲಿ ಫ್ಲೆಕ್ಸ್ ಕಿತ್ತುಹಾಕಲು, ಬೆಂಕಿ ಹಚ್ಚಲು ತಾವು ಕರೆ ನೀಡಿಲ್ಲ. ತಮ್ಮ ಭಾಷಣದ ಸಂಪೂರ್ಣ ವಿವರ ಸಾಮಾಜಿಕ ಮಾಧ್ಯಮಗಳಲ್ಲಿ ಲಭ್ಯವಿದೆ. ಘಟನೆಗೆ ಕಾರಣವಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬುದಷ್ಟೇ ತಮ್ಮ ಆಗ್ರಹವಾಗಿತ್ತು. ತಪ್ಪು ಮಾತನಾಡಿದ್ದರೆ ನೇಣಿಗೆ ಹಾಕಲಿ ಎಂದು ಸವಾಲೆಸೆದರು.

'ಚರ್ಚೆಗೆ ಬರಲಿ': 'ಶೋಷಿತರ ಜಾಗೃತಿ ಸಮಾವೇಶ ನಡೆಸುವ ಸಿದ್ದರಾಮಯ್ಯ ಅವರು ಮೀಸಲಾತಿ ಕುರಿತು ಚರ್ಚೆಗೆ ಬರಲಿ. ಹಿಂದುಳಿದ ವರ್ಗಗಳ ಪ್ರವರ್ಗ 2–ಎ ಅಡಿಯಲ್ಲಿ 108 ಜಾತಿಗಳಿವೆ. ಆದರೆ, ಅಲ್ಲಿನ ಮೀಸಲಾತಿಯ ಸಿಂಹಪಾಲನ್ನು ಯಾರು ಪಡೆದಿದ್ದಾರೆ ಎಂಬುದನ್ನು ಹೇಳಲಿ' ಎಂದು ಕುಮಾರಸ್ವಾಮಿ ಸವಾಲು ಹಾಕಿದರು.

'ಗ್ಯಾರಂಟಿ ಸಮಾವೇಶದಲ್ಲಿ ರಾಜಕೀಯ ಮಾಡಿಲ್ಲವೆ?'

'ಜನರ ಹಣದಿಂದ ಅಯೋಧ್ಯೆಯಲ್ಲಿ ಕಟ್ಟಿದ ರಾಮಮಂದಿರ ಉದ್ಘಾಟನೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ರಾಜಕೀಯ ಮಾಡಿದ್ದಾರೆ ಎಂದು ಕಾಂಗ್ರೆಸ್‌ನವರು ಟೀಕಿಸಿದ್ದಾರೆ. ಜನರ ತೆರಿಗೆ ಹಣದಿಂದ ಅನುಷ್ಠಾನಕ್ಕೆ ತಂದಿರುವ 'ಗ್ಯಾರಂಟಿ' ಯೋಜನೆಗಳ ಉದ್ಘಾಟನಾ ಸಮಾವೇಶದಲ್ಲಿ ಇವರು ರಾಜಕೀಯ ಮಾಡಿಲ್ಲವೆ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಗ್ಯಾರಂಟಿ ಜಾರಿ ಸಮಾವೇಶದಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರನ್ನು ಕರೆಸಲಾಗಿತ್ತು. ಅವರಿಗೂ ರಾಜ್ಯಕ್ಕೂ ಏನು ಸಂಬಂಧ ಎಂದು ಕೇಳಿದರು.

'ಮೀಸಲಾತಿ ಕುರಿತು ಚರ್ಚೆಗೆ ಬರಲಿ'

'ಶೋಷಿತರ ಜಾಗೃತಿ ಸಮಾವೇಶ ನಡೆಸುವ ಸಿದ್ದರಾಮಯ್ಯ ಅವರು ಮೀಸಲಾತಿ ಕುರಿತು ಚರ್ಚೆಗೆ ಬರಲಿ. ಹಿಂದುಳಿದ ವರ್ಗಗಳ ಪ್ರವರ್ಗ 2–ಎ ಅಡಿಯಲ್ಲಿ 108 ಜಾತಿಗಳಿವೆ. ಆದರೆ, ಅಲ್ಲಿನ ಮೀಸಲಾತಿಯ ಸಿಂಹಪಾಲನ್ನು ಯಾರು ಪಡೆದಿದ್ದಾರೆ ಎಂಬುದನ್ನು ಹೇಳಲಿ' ಎಂದು ಕುಮಾರಸ್ವಾಮಿ ಸವಾಲು ಹಾಕಿದರು.

'ಕುಮಾರಸ್ವಾಮಿ, ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರು ಕಾಂತರಾಜ ಆಯೋಗದ ವರದಿ ಪಡೆಯಲಿಲ್ಲ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ವರ್ಷದಿಂದ ಅಧಿಕಾರದಲ್ಲಿರುವ ಇವರು ಏಕೆ ಸ್ವೀಕರಿಸಲಿಲ್ಲ. ತಾಕತ್ತಿದ್ದರೆ ವರದಿ ಸ್ವೀಕರಿಸಿ, ಚರ್ಚೆಗೆ ಬರಲಿ' ಎಂದು ಆಗ್ರಹಿಸಿದರು.

'ಬಿಜೆಪಿಯಲ್ಲಿ ಜೆಡಿಎಸ್ ವಿಲೀನ'

ಬೆಂಗಳೂರು: 'ಕುಮಾರಸ್ವಾಮಿಯವರು ಜೆಡಿಎಸ್ ಪಕ್ಷವನ್ನು ಬಿಜೆಪಿಯಲ್ಲಿ ಬಹುತೇಕ ವಿಲೀನ ಮಾಡಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದರು.

ಕುಮಾರಸ್ವಾಮಿ ಕೇಸರಿ ಶಾಲು ಧರಿಸಿ ಬಿಜೆಪಿ ನಾಯಕರ ಜತೆ ಸೇರಿ ಮಂಡ್ಯದಲ್ಲಿ ಪ್ರತಿಭಟನೆ ಮಾಡಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿಗೆ ಮಂಡ್ಯದಲ್ಲಿ ರಾಜಕೀಯ ನೆಲೆ ಇಲ್ಲ. ಅಲ್ಲಿ ನೆಲೆ ಕಂಡುಕೊಳ್ಳಲು ಅವರಿಬ್ಬರಲ್ಲಿ ಯಾರು ಯಾರನ್ನು ನುಂಗುತ್ತಾರೊ ಗೊತ್ತಿಲ್ಲ' ಎಂದರು.

'ಇದು ಅವರ ಪಕ್ಷದ ವಿಚಾರ. ಅವರು ಏನಾದರೂ ಮಾಡಿಕೊಳ್ಳಲಿ. ನಮಗೂ ಅದಕ್ಕೂ ಸಂಬಂಧವಿಲ್ಲ. ಅವರು ಯಾವ ಬಣ್ಣದ ಶಾಲು ಬೇಕಾದರೂ ಧರಿಸಲಿ' ಎಂದರು.

'ಶಾಂತಿ ಕದಡಬೇಕು, ಕಾನೂನು ಸುವ್ಯವಸ್ಥೆಗೆ ಧಕ್ಕೆ ತರಬೇಕು ಎಂದು ಮುಗ್ಧ ಹಳ್ಳಿ ಜನರನ್ನು ಬಿಜೆಪಿಯವರು ಎತ್ತಿಕಟ್ಟುತ್ತಿದ್ದಾರೆ. ನಮ್ಮ ಭಾಗದ ಎಲ್ಲ ಜಾತಿ ಹಾಗೂ ಧರ್ಮದ ಜನರು ಸೌಹಾರ್ದದಿಂದ ಅಣ್ಣ-ತಮ್ಮಂದಿರಂತೆ ಬದುಕುತ್ತಿದ್ದರು. ಬಿಜೆಪಿಯವರು ಈಗ ಹೊಸ ಪ್ರಯೋಗ ಮಾಡುತ್ತಿದ್ದಾರೆ' ಎಂದು ದೂರಿದರು.

ಬಿಜೆಪಿಯವರು ಮನೆ, ಮನೆಗೆ ಹನುಮಧ್ವಜ ಹಂಚುವ ಬಗ್ಗೆ ಕೇಳಿದಾಗ, 'ಬೇಡ ಎಂದು ಹೇಳಿದವರು ಯಾರು? ಬಿಜೆಪಿಯವರು ಹರ್ ಘರ್ ತಿರಂಗಾ ಎಂದು ಪ್ರಚಾರ ಮಾಡಿದ್ದರು. ಈಗ ಆ ತಿರಂಗಾವನ್ನು ಯಾಕೆ ಮರೆತಿದ್ದಾರೆ? ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿದೆ. ತಿರಂಗಾ ಬದಲಿಗೆ ಕೇಸರಿ ಧ್ವಜವನ್ನೇ ಕಾನೂನು ಮೂಲಕ ತರಲಿ' ಎಂದು ಛೇಡಿಸಿದರು.

'ಮಂಡ್ಯದ ಘಟನೆಯಿಂದ ಹೆಚ್ಚಿದ ಆತಂಕ'

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೌಹಾರ್ದ ಕರ್ನಾಟಕ ಸಂಘಟನೆಯಿಂದ ಹುತಾತ್ಮ ದಿನದ ಅಂಗವಾಗಿ ಮಂಗಳವಾರ ನಡೆದ ಸೌಹಾರ್ದ ಸಭೆ ಹಾಗೂ ಮಾನವ ಸರಪಳಿ ಅಭಿಯಾನದಲ್ಲಿ ನಿವೃತ್ತ ನ್ಯಾ. ಎಚ್.ಎನ್. ನಾಗಮೋಹನದಾಸ್, ಸಲೀಂ ಅಹಮದ್, ಕೆ.ಮರುಳಸಿದ್ಧಪ್ಪ, ಮೂಡ್ನಾಕೂಡು ಚಿನ್ನಸ್ವಾಮಿ, ನಿವೃತ್ತ ನ್ಯಾ. ವಿ.ಗೋಪಾಲಗೌಡ ಸೇರಿದಂತೆ ಹಲವರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ 'ಸೌಹಾರ್ದ ಕರ್ನಾಟಕ'ದಿಂದ ಹುತಾತ್ಮ ದಿನದ ಅಂಗವಾಗಿ ಮಂಗಳವಾರ ಸೌಹಾರ್ದ ಪರಂಪರೆ ಅಭಿಯಾನ ನಡೆಯಿತು.

ಅಭಿಯಾನದಲ್ಲಿ ಪಾಲ್ಗೊಂಡಿದ್ದ ಹೋರಾಟಗಾರರು, ಸಾಹಿತಿಗಳು, ನಿವೃತ್ತ ನ್ಯಾಯಾಧೀಶರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಸೌಹಾರ್ದ ಮಾನವ ಸರಪಳಿ ರಚಿಸಿ, ನಾಡಿನಲ್ಲಿ ಶಾಂತಿ ಹಾಗೂ ಸೌಹಾರ್ದ ನೆಲೆಸಲಿ ಎಂದು ಘೋಷಣೆ ಕೂಗಿದರು.

ಸಾಹಿತಿ ಕೆ.ಮರುಳಸಿದ್ದಪ್ಪ ಮಾತನಾಡಿ, 'ದೇಶವು ದೊಡ್ಡ ಆತಂಕಕ್ಕೆ ಸಿಲುಕಿದೆ. ಧರ್ಮ ಹಾಗೂ ದೇವರನ್ನು ರಾಜಕಾರಣಕ್ಕೆ ಬಳಸಿಕೊಂಡು ಲಾಭ, ನಷ್ಟದ ಲೆಕ್ಕಾಚಾರ ಹಾಕಲಾಗುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಘಟನೆಗಳು ಎಲ್ಲರಲ್ಲೂ ಆತಂಕವನ್ನು ಹುಟ್ಟಿಸಿವೆ. ಈ ದೇಶಕ್ಕೆ ತನ್ನದೇ ಸಾಂಸ್ಕೃತಿಕ ಹಾಗೂ ರಾಜಕೀಯ ಪರಂಪರೆ ಇತ್ತು. ಅದನ್ನು ಹಾಳು ಮಾಡಲಾಗುತ್ತಿದೆ' ಎಂದು ಹೇಳಿದರು.

ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡಿ, 'ರಾಜ್ಯವು ಒಳ್ಳೆಯ ರಾಜಕಾರಣಕ್ಕೆ ಹೆಸರಾಗಿತ್ತು. ಕೆಲವು ವರ್ಷಗಳಿಂದ ಅದನ್ನು ಬುಡಮೇಲು ಮಾಡುವ ಪ್ರಕ್ರಿಯೆಗಳು ನಡೆಯುತ್ತಿವೆ' ಎಂದರು.

'ಸಹಿಷ್ಣುತೆ ಎಂಬುದು ದ್ವೇಷ ರಾಜಕಾರಣಕ್ಕೆ ಬಲಿಯಾಗುತ್ತಿದೆ. ಅಂತಹ ದುರಿತ ಕಾಲದಲ್ಲಿ ನಾವಿದ್ದೇವೆ. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ರಾಜಕಾರಣಕ್ಕೆ ಇತಿಶ್ರೀ ಹಾಡಬೇಕಿದೆ' ಎಂದು ಹೇಳಿದರು.

ಸಾಹಿತಿ ಜಿ.ರಾಮಕೃಷ್ಣ ಮಾತನಾಡಿ, 'ವಿಷಪೂರಿತ ವಾತಾವರಣ ಹೇಗೆ ಎದುರಿಸಬೇಕು ಎಂಬುದೇ ತಿಳಿಯುತ್ತಿಲ್ಲ. ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಸಮುದಾಯಗಳ ನಡುವೆ ಹುಳಿ ಹಿಂಡುವ ಕೆಲಸಗಳನ್ನು ನಡೆಸುತ್ತಿದ್ದಾರೆ' ಎಂದು ಹೇಳಿದರು.

ಲೇಖಕಿ ಕೆ.ಷರೀಫಾ ಮಾತನಾಡಿ, 'ಮಣಿಪುರ ರಾಜ್ಯದಲ್ಲಿ ಹಿಂಸಾಚಾರಗಳು ನಡೆದಿದ್ದರೂ ಪ್ರಧಾನಿ ಅಲ್ಲಿಗೆ ಭೇಟಿ ನೀಡಲಿಲ್ಲ. ಎಂತಹ ಕಾಲದಲ್ಲಿ ನಾವಿದ್ದೇವೆ' ಎಂದು ಪ್ರಶ್ನಿಸಿದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್, ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಸಲೀಂ ಅಹಮದ್, ಲೇಖಕರಾದ ಮಲ್ಲಿಕಾರ್ಜುನ ಕಡಕೋಳ, ವಿಜಯಾ, ವಸುಂಧರಾ ಭೂಪತಿ, ಎಚ್.ಎಲ್. ಪುಷ್ಪಾ, ನಿರ್ದೇಶಕ ಬಿ.ಸುರೇಶ ಅವರು ಪಾಲ್ಗೊಂಡಿದ್ದರು.

'ಹೆಚ್ಚು ಸ್ಥಾನ ಗೆಲ್ಲದಿದ್ದರೆ ಗ್ಯಾರಂಟಿ ರದ್ದು ಮಾಡೋದು ಒಳ್ಳೇದು'

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): 'ರಾಜ್ಯದ ಜನರಿಗೆ ಐದು ಗ್ಯಾರಂಟಿ ಯೋಜನೆಗಳನ್ನು ಕೊಟ್ಟರೂ, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಪಡೆಯದಿದ್ದರೆ ಗ್ಯಾರಂಟಿಗಳನ್ನು ರದ್ದು ಮಾಡುವುದೇ ಒಳ್ಳೆಯದು. ಈ ಕುರಿತು, ಮುಖ್ಯಮಂತ್ರಿ ಅವರಿಗೂ ಹೇಳಿದ್ದೇನೆ' ಎಂದು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದರು.

ಬಾಲಕೃಷ್ಣ

ತಾಲ್ಲೂಕಿನ ಶ್ರೀಗಿರಿಪುರದಲ್ಲಿ ಮಂಗಳವಾರ ನಡೆದ ಜನಸ್ಪಂದನ ಸಭೆಯಲ್ಲಿ ಮಾತನಾಡಿದ ಅವರು, 'ಬಿಜೆಪಿಯ ಧರ್ಮ ರಾಜಕಾರಣದ ಮಂತ್ರಾಕ್ಷತೆ ಬೇಕೋ ಅಥವಾ ಜನಸಾಮಾನ್ಯರ ಜೀವನ ಬದಲಿಸುತ್ತಿರುವ ಕಾಂಗ್ರೆಸ್‌ನ ಗ್ಯಾರಂಟಿ ಬೇಕೋ ಎಂದು ಜನ ಈ ಚುನಾವಣೆಯಲ್ಲಿ ತೀರ್ಮಾನ ಮಾಡಬೇಕು' ಎಂದರು.

'ನಾವೆಲ್ಲರೂ ಹಿಂದೂಗಳು. ಆದರೆ, ದೇವರು ಮತ್ತು ದೇವಸ್ಥಾನದ ಹೆಸರಿನಲ್ಲಿ ರಾಜಕಾರಣ ಮಾಡಿ ಮತ ಪಡೆಯೋದು ಸರಿಯಲ್ಲ. ಹಾಗಾಗಿ, ಚುನಾವಣೆಯಲ್ಲಿ ಕೊಟ್ಟ ಮಾತಿನಂತೆ ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದೇವೆ. ಅವುಗಳ ಆಧಾರದ ಮೇಲೆಯೇ ಜನರ ಬಳಿ ಮತ ಕೇಳುತ್ತೇವೆ' ಎಂದು ತಿಳಿಸಿದರು.

'ಒಂದು ವೇಳೆ, ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ನಾವೇನಾದರೂ ಕಡಿಮೆ ಸ್ಥಾನ ಗಳಿಸಿದರೆ, ಜನ ಗ್ಯಾರಂಟಿಗಳನ್ನು ತಿರಸ್ಕರಿಸಿದ್ದಾರೆ ಎಂದರ್ಥ. ಆಗ, ಅವುಗಳನ್ನು ರದ್ದು ಮಾಡಿ ನಾವೂ ಅವರಂತೆ ಮಂದಿರದ ರಾಜಕಾರಣ ಮಾಡಬೇಕಾಗುತ್ತದೆ' ಎಂದರು.

‘ಟೈಲರ್‌ಗಳಿಗೆ ಕ್ಷೇಮನಿಧಿ ಮಂಡಳಿ’

ಟೈಲರ್ಸ್ ಅಸೋಸಿಯೇಷನ್ ‘ರಜತ ಮಹೋತ್ಸವ’ದಲ್ಲಿ ಸಿ.ಎಂ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಮಂಗಳವಾರ ನಡೆದ ಕರ್ನಾಟಕ ಸ್ಟೇಟ್ ಟೈಲರ್ಸ್ ಅಸೋಸಿಯೇಷನ್‌ನ ರಜತ ಮಹೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಬೆಂಗಳೂರು: ‘ಟೈಲರ್‌ಗಳ ಹಿತ ಕಾಪಾಡಲು ಸರ್ಕಾರ ಬದ್ಧವಾಗಿದ್ದು, ಶೀಘ್ರದಲ್ಲೇ ಟೈಲರ್‌ಗಳ ಕ್ಷೇಮನಿಧಿ ಮಂಡಳಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ನಗರದಲ್ಲಿ ಮಂಗಳವಾರ ನಡೆದ ಕರ್ನಾಟಕ ಸ್ಟೇಟ್ ಟೈಲರ್ಸ್ ಅಸೋಸಿಯೇಷನ್‌ನ (ಕೆಎಸ್‌ಟಿಎ) ರಜತ ಮಹೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಶ್ರಮಿಕ ವರ್ಗ ಈ ನಾಡಿನ ಆಸ್ತಿ. ಅಸಂಘಟಿತ ಕಾರ್ಮಿಕರಾಗಿರುವ ಟೈಲರ್‌ಗಳ ಶ್ರೇಯೋಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು. ಕೇರಳದಲ್ಲಿ ಟೈಲರ್‌ಗಳ ಕ್ಷೇಮನಿಧಿ ಮಂಡಳಿಯಿದೆ. ಅದೇ ಮಾದರಿಯಲ್ಲಿ ಮಂಡಳಿ ಸ್ಥಾಪಿಸುವ ಸಂಬಂಧ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರೊಂದಿಗೆ ಚರ್ಚಿಸಲಾಗುವುದು’ ಎಂದರು.

‘ಸಮಾಜದ ಎಲ್ಲ ವರ್ಗಗಳಿಗೂ ನ್ಯಾಯ ಸಿಗಬೇಕು ಎಂಬುದು ಸಂವಿಧಾನದ ಆಶಯ. 75 ವರ್ಷ ಕಳೆದರೂ ಟೈಲರ್‌ಗಳಿಗೆ ಸೇವಾ ಭದ್ರತೆ ಇಲ್ಲವಾಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಅವರಿಗೆ ನ್ಯಾಯ ಕಲ್ಪಿಸುತ್ತೇವೆ’ ಎಂದು ಹೇಳಿದರು.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ, ‘ಹೊಲಿಗೆ ವೃತ್ತಿ ಮೂಲಕ ಎಲ್ಲರ ಮಾನ ಕಾಪಾಡುತ್ತಿರುವ ಟೈಲರ್‌ಗಳ ಗೌರವ ಕಾಪಾಡುವುದು ಸರ್ಕಾರದ ಕರ್ತವ್ಯ. ಶ್ರೇಷ್ಠ ವೃತ್ತಿಗಳಲ್ಲಿ ಈ ವೃತ್ತಿಯೂ ಒಂದು. ಈ ವೃತ್ತಿ ಅವಲಂಭಿಸಿರುವ ಜನರಿಗೆ ವೈದ್ಯಕೀಯ ಸೌಲಭ್ಯಗಳು, ಪಿಂಚಣಿ ಯೋಜನೆ, ಮಕ್ಕಳ ಶಿಕ್ಷಣಕ್ಕೆ ನೆರವು ದೊರೆಯಬೇಕು. ಸೌಲಭ್ಯ ಕಲ್ಪಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸುತ್ತೇನೆ. ವಿಧಾನಸಭೆ ಅಧಿವೇಶನದಲ್ಲಿ ಟೈಲರ್‌ಗಳ ಸಮಸ್ಯೆಗಳ ಕುರಿತು ಚರ್ಚಿಸಲು ಹೆಚ್ಚಿನ ಸಮಯ ಕಲ್ಪಿಸುತ್ತೇನೆ’ ಎಂದು ಭರವಸೆ ನೀಡಿದರು.

ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ ಮಾತನಾಡಿ, ‘ಟೈಲರಿಂಗ್ ಅತ್ಯಂತ ಕಷ್ಟಕರವಾದ ವೃತ್ತಿ. ಟೈಲರಿಂಗ್ ಎಷ್ಟೇ ಯಾಂತ್ರೀಕರಣಗೊಂಡಿದ್ದರೂ ಕೆಲಸದ ವೇಳೆ ಕೈ-ಕಾಲುಗಳಿಗೆ ಗಾಯವಾಗುವ ಸಾಧ್ಯತೆ ಇರುತ್ತದೆ. ಎಚ್ಚರಿಕೆ ವಹಿಸುವುದು ಅಗತ್ಯ’ ಎಂದು ಹೇಳಿದರು.

ವಸತಿ ಸಚಿವ ಜಮೀರ್ ಅಹಮದ್ ಖಾನ್, ಅಸೋಸಿಯೇಷನ್ ಅಧ್ಯಕ್ಷ ಬಿ.ಎ.ನಾರಾಯಣ್, ಖಜಾಂಚಿ ರಾಮಚಂದ್ರ, ಪ್ರಧಾನ ಕಾರ್ಯದರ್ಶಿ ಪ್ರಜ್ವಲ್ ಕುಮಾರ್, ಅಸೋಸಿಯೇಷನ್ ಸ್ಥಾಪಕ ಸದಸ್ಯ ಬಿ.ವಸಂತ್ ಹಾಜರಿದ್ದರು.

ಬೇಡಿಕೆಗಳು ಏನು?

- ಭವಿಷ್ಯ ನಿಧಿ ಮತ್ತು ಪಿಂಚಣಿ ಯೋಜನೆ
- ಮಕ್ಕಳ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ
- ಹೊಲಿಗೆ ಯಂತ್ರ ಖರೀದಿ, ಮನೆ ನಿರ್ಮಾಣ ಹಾಗೂ ಮನೆ ದುರಸ್ತಿಗೆ ಕಡಿಮೆ ಬಡ್ಡಿ ದರದಲ್ಲಿ ಆರ್ಥಿಕ ನೆರವು
- ಆರೋಗ್ಯ ವಿಮೆ, ಹೆಣ್ಣು ಮಕ್ಕಳ ವಿವಾಹ ಹಾಗೂ ಹೆರಿಗೆ ಭತ್ಯೆ ಯೋಜನೆ ಜಾರಿ

ಬಿಜೆಪಿ, ಆರ್‌ಎಸ್‌ಎಸ್‌ನವರ ಆರಾಧ್ಯ ದೈವ ಗೋಡ್ಸೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾತ್ಮ ಗಾಂಧಿ ಶ್ರೇಷ್ಠ ಹಿಂದೂ. ಅವರನ್ನು ಹತ್ಯೆ ಮಾಡಿದ ಗೋಡ್ಸೆ, ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರ ಆರಾಧ್ಯ ದೈವ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಹಾತ್ಮ ಗಾಂಧೀಜಿ ಪುಣ್ಯ ಸ್ಮರಣೆ ಸಂದರ್ಭದಲ್ಲಿ ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ನಡೆದ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ‘ಗಾಂಧೀಜಿ ತತ್ವಾದರ್ಶಗಳೇ ಕಾಂಗ್ರೆಸ್ ಪಕ್ಷಕ್ಕೆ ದಾರಿದೀಪ’ ಎಂದರು.

‘ಜೈ ಶ್ರೀರಾಮ್’ ಎಂಬುದು ಬಿಜೆಪಿಯವರ ಸ್ವತ್ತಲ್ಲ. ಗಾಂಧೀಜಿ ‘ಹೇ ರಾಮ್’ ಎಂದಿದ್ದರು. ಅವರಂಥ ಹಿಂದೂ ಭಕ್ತನನ್ನೇ ಗುಂಡಿಕ್ಕಿ ಕೊಂದವರೇ ಹಿಂದುತ್ವದ ಬಗ್ಗೆ ಮಾತನಾಡುತ್ತಾರೆ. ನಮ್ಮನ್ನು ಹಿಂದೂ ವಿರೋಧಿಗಳೆಂದು ಬಿಂಬಿಸುತ್ತಾರೆ. ತಾವು ಮಾತ್ರ ಹಿಂದೂಗಳೆಂದು ಪ್ರತಿಪಾದಿಸುತ್ತಿದ್ದಾರೆ’ ಎಂದರು.

‘ರಾಮ ಭಕ್ತರಾಗಿದ್ದ ಗಾಂಧಿಯವರನ್ನು ಹತ್ಯೆ ಮಾಡಿದ ಗೋಡ್ಸೆಯನ್ನು ಪಾಲಿಸುವವರನ್ನು ಜನ ನಂಬುವುದಿಲ್ಲ’ ಎಂದ ಮುಖ್ಯಮಂತ್ರಿ, ‘ದೇಶಭಕ್ತಿಯ ಬಗ್ಗೆ ಬಿಜೆಪಿ ನಮಗೆ ಹೇಳಿಕೊಡುವ ಅಗತ್ಯವಿಲ್ಲ. ದೇಶದ ಆಡಳಿತದಿಂದ ಬಿಜೆಪಿಯನ್ನು ದೂರವಿಡುವುದೇ ಗಾಂಧೀಜಿಯವರಿಗೆ ಸಲ್ಲಿಸುವ ಗೌರವ’ ಎಂದರು.

ಮೈಸೂರು ರೇಸ್

ಬ್ರೇವ್ ಟ್ರೂಪರ್ ಗೆಲ್ಲುವ ನಿರೀಕ್ಷೆ

ಎಂ.ಗೋವಿಂದಪ್ಪ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬ್ರೇವ್ ಟ್ರೂಪರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00 ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹಿಯರ್ ಐ ಕಮ್ 13, ವೈಟ್‌ಲೈಸ್ 5, ಕಮ್ ಅಲೈವ್ 1
2ನೇ ರೇಸ್: ರೂಮರ್ ಲೇಡಿ 2, ಟಾಪ್ ರಾಂಕ್ 12, ಡಿ ಫೈಟರ್ 5
3ನೇ ರೇಸ್: ರಾಯಲ್ ಟೈಟ್ಲ್ 3, ನ್ಯಾಚುರಲ್ ಸ್ಪೀಡ್ 6, ಶಿವಾಲಿಕ್ ಸೌಂಡ್ 9
4ನೇ ರೇಸ್: ರೈಸಿಂಗ್ ಸನ್ 3, ಡಿ ಥರ್ಟೀನ್ ಟ್ವೆಲ್ವ್ 7, ಫ್ಲೀಟ್ ಟ್ಯಾಕ್ಟಿಕಲ್ 15
5ನೇ ರೇಸ್: ಬ್ರೇವ್ ಟ್ರೂಪರ್ 3, ಕೋರ್ಟ್ ಗೆಸ್ಚರ್ 4, ಟಾಮ್ ಕ್ರೂಸರ್ 9
6ನೇ ರೇಸ್: ಎಕ್ಸುಬರೆನ್ಸ್ 6, ಡಿ ರೊಮನ್ ರೀನ್ಸ್ 7, ಮೈ ಲೈಫ್ ಮೈ ರೂಲ್ಸ್ 10
7ನೇ ರೇಸ್: ಗ್ರೇಟ್ ಹೋಪ್ 8, ಕೊಯೊಟೆ ಗರ್ಲ್ 9, ಉಡುಕಾಯ್ 1

ಉತ್ತಮ ಬೆಟ್: ರೂಮರ್ ಲೇಡಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	6,7,8

‘ಟ್ವಿನಿಂಗ್ ಪ್ರೋಗ್ರಾಂ’ ವಿಫಲ: ಕೆಆರ್‌ಎಸ್‌ಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಅವಳಿ ಕಾರ್ಯಕ್ರಮದ ಅಂಗವಾಗಿ (ಟ್ವಿನಿಂಗ್ ಪ್ರೋಗ್ರಾಂ) ಪರಿಚಯಿಸಲಾಗಿದ್ದ ಡಿಪ್ಲೊಮಾ ಕೋರ್ಸ್‌ಗೆ ಸೇರಿದ್ದ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನ 48 ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ.

ಇದಕ್ಕೆ ಹಿಂದಿನ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರೇ ಹೊಣೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್‌ಪಿ) ಆರೋಪಿಸಿದೆ.

ಪಾಲಿಟೆಕ್ನಿಕ್ ಮಾಡಿಕೊಂಡ ಒಪ್ಪಂದದಂತೆ ವಿದ್ಯಾರ್ಥಿಗಳನ್ನು ಒಂದು ವರ್ಷ ಅಮೆರಿಕದಲ್ಲಿ ಅಧ್ಯಯನಕ್ಕಾಗಿ ಕಳುಹಿಸಬೇಕಿತ್ತು. ಅಲ್ಲೇ ಕೆಲಸವೂ ಸಿಗಲಿದೆ ಎಂದು ನಂಬಿದ್ದ ಬಹುತೇಕ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ವಿದ್ಯಾರ್ಥಿಗಳು ಕೋರ್ಸ್ ಆಯ್ಕೆ ಮಾಡಿಕೊಂಡಿದ್ದರು. ಆದರೆ, 2021-22ರ ಶೈಕ್ಷಣಿಕ ವರ್ಷದಲ್ಲಿ ಆರಂಭವಾದ ಈ ಯೋಜನೆ ಒಂದು ಬ್ಯಾಚ್ ಮುಗಿಯುವ ಮುನ್ನವೇ ವಿದ್ಯಾರ್ಥಿಗಳನ್ನು ಅತಂತ್ರ ಮಾಡಲಾಗಿದೆ ಎಂದು ಕೆಆರ್‌ಎಸ್‌ಪಿ ರಾಜ್ಯ ಕಾರ್ಯದರ್ಶಿ ರಘು ಜಾಣಗೆರೆ ದೂರಿದ್ದಾರೆ. ಸೈಬರ್ ಸೆಕ್ಯುರಿಟಿ, ಪ್ರವಾಸೋದ್ಯಮ ವಿಷಯವನ್ನು ತಲಾ 24 ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿದ್ದರು. ಒಪ್ಪಂದ ಮಾಡಿಕೊಂಡಿದ್ದ ಅಮೆರಿಕದ ವಿಶ್ವವಿದ್ಯಾಲಯವೇ ಹಿಂದಕ್ಕೆ ಸರಿದಿದೆ. ಈಗ ಕೆಲಸಕ್ಕೆ ಬಾರದ ವಿಷಯಗಳಲ್ಲಿ ಆನ್‌ಲೈನ್ ಶಿಕ್ಷಣ ನೀಡಲಾಗುತ್ತಿದೆ. ಅದಕ್ಕೆ ಸುಮಾರು ₹1 ಕೋಟಿ ಪಾವತಿಸಲಾಗಿದೆ ಎಂದು ದೂರಿದ್ದಾರೆ.

ರಾಜ್ಯ ಸರ್ಕಾರ ತಕ್ಷಣ ವಿದ್ಯಾರ್ಥಿಗಳ ನೆರವಿಗೆ ಬರಬೇಕು. ಉದ್ಯೋಗದ ಭರವಸೆ ನೀಡಬೇಕು. ಮುಂದಿನ ಶಿಕ್ಷಣವನ್ನು ಉಚಿತವಾಗಿ ನೀಡಬೇಕು. ವಿದ್ಯಾರ್ಥಿಗಳ ಅತಂತ್ರ ಸ್ಥಿತಿಗೆ ಕಾರಣದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಹೆಚ್ಚುವರಿ ಶಸ್ತ್ರಾಸ್ತ್ರ: ಸಜನ್ ಅಯ್ಯಪ್ಪಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಚ್ಚುವರಿ ಶಸ್ತ್ರಾಸ್ತ್ರ ಮತ್ತು 25 ಸಾವಿರ ಮದ್ದು ಗುಂಡುಗಳನ್ನು ಹೊಂದಲು ಕೋರಿರುವ ಖ್ಯಾತ ಶೂಟರ್ ಸಜನ್ ಅಯ್ಯಪ್ಪ ಅವರ ಮನವಿಯನ್ನು ಪರಿಗಣಿಸಿ’ ಎಂದು ಹೈಕೋರ್ಟ್, ಕೊಡಗು ಜಿಲ್ಲಾಧಿಕಾರಿಗೆ ನಿರ್ದೇಶಿಸಿದೆ.

ನಾಪೋಕ್ಲುವಿನ ಕೊಳಕೇರಿ ನಿವಾಸಿ ಸಜನ್ ಅಯ್ಯಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ‘ಶಸ್ತ್ರಾಸ್ತ್ರಗಳನ್ನು ಹೊಂದುವುದಕ್ಕೆ ಸಂಬಂಧಿಸಿದ ವಿನಾಯ್ತಿ ಷರತ್ತು (2) ಪ್ರಕಾರ ಯಾವುದೇ ಪ್ರಸಿದ್ಧ ಶೂಟರ್ ಹತ್ತು ಶಸ್ತ್ರಾಸ್ತ್ರಗಳನ್ನು ಹೊಂದಲು ಅರ್ಹರಾಗಿರುತ್ತಾರೆ’ ಎಂದು ಹೇಳಿದೆ.

ಅಯ್ಯಪ್ಪ ಅವರು 2020ರ ಸೆಪ್ಟೆಂಬರ್ 21ರಂದು ಹೆಚ್ಚುವರಿ ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳನ್ನು ಹೊಂದಲು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದರು. 2022ರ ಡಿಸೆಂಬರ್ 28ರಂದು ಅವರಿಗೆ ಹಿಂಬರಹ ನೀಡಿದ್ದ ಜಿಲ್ಲಾದಿಕಾರಿ, ‘ನೀವು ಪ್ರಸಿದ್ಧ ಶೂಟರ್ ಆಗಲು ಹೊಂದಿರುವ ಅರ್ಹತೆಗಳನ್ನು ಬಹಿರಂಗಪಡಿಸಿಲ್ಲ. ಆದ್ದರಿಂದ, ಮುಂದಿನ 15 ದಿನಗಳಲ್ಲಿ ವಿವರಣೆ ನೀಡಬೇಕು’ ಎಂದು ತಿಳಿಸಿದ್ದರು.

ಇದನ್ನು ಪ್ರಶ್ನಿಸಿ ಅಯ್ಯಪ್ಪ ಹೈಕೋರ್ಟ್ ಮೆಟ್ಟಿಲೇರಿದ್ದರು.

ಕುರುಬರ ಹಾಸ್ಟೆಲ್‌ಗೆ ಕಲ್ಲು ತೂರಾಟ: ಕ್ರಮಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಜಿಲ್ಲಾ ಕುರುಬರ ಸಂಘದ ವಿದ್ಯಾರ್ಥಿನಿಲಯ ಕಟ್ಟಡದ ಮೇಲೆ ಕಲ್ಲು ತೂರಾಟ ನಡೆಸಿ, ಶಾಂತಿ ಕದಡಿದ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ.ರಾಮಚಂದ್ರಪ್ಪ ಒತ್ತಾಯಿಸಿದರು.

ಮಂಗಳವಾರ ಸದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆರಗೋಡು ಗ್ರಾಮದ ಧ್ವಜ ವಿವಾದದ ನಂತರ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಸಿ.ಟಿ.ರವಿ ನೇತೃತ್ವದಲ್ಲಿ ಮಂಡ್ಯದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯ ವೇಳೆ ಕೆಲವರು ಹಾಸ್ಟೆಲ್‌ನ ಕಿಟಕಿ ಗಾಜುಗಳನ್ನು ಒಡೆದು ಹಾಕಿದ್ದಾರೆ. ವಾಹನಗಳಿಗೆ ಬೆಂಕಿ ಹಚ್ಚುವ ಪ್ರಯತ್ನ ಮಾಡಿದ್ದಾರೆ. ಪೊಲೀಸರ ಮಧ್ಯ ಪ್ರವೇಶದಿಂದ ದೊಡ್ಡ ಅನಾಹುತ ತಪ್ಪಿದೆ. ಸಮಾಜದ್ರೋಹಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಇಂತಹ ಕೃತ್ಯ ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬರಲಿರುವ ಚುನಾವಣೆಯಲ್ಲಿ ರಾಜಕೀಯ ಲಾಭ ಮಾಡಿಕೊಳ್ಳಲು ಧ್ವಜದ ನೆಪದಲ್ಲಿ ಜನರನ್ನು ಪ್ರಚೋದಿಸುವ ಕೆಲಸ ಮಾಡಲಾಗಿದೆ. ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಜ.28ರಂದು ಚಿತ್ರದುರ್ಗದಲ್ಲಿ ನಡೆಸಿದ್ದ ಶೋಷಿತರ ಜಾಗೃತಿ ಸಮಾವೇಶದ ಯಶಸ್ಸು ಸಹಿಸಲಾಗದೆ ಬಿಜೆಪಿ–ಜೆಡಿಎಸ್ ಇಂತಹ ಕೃತ್ಯಕ್ಕೆ ಪ್ರಚೋದನೆ ನೀಡುತ್ತಿವೆ. ಹಿಂದೂ ಧರ್ಮವನ್ನು ಗುತ್ತಿಗೆ ಪಡೆದವರಂತೆ ವರ್ತಿಸುತ್ತಿವೆ. ಭಯ ಮತ್ತು ದಬ್ಬಾಳಿಕೆಯ ವಾತಾವರಣ ಸೃಷ್ಟಿಸಲು ಹೊರಟಿದ್ದಾರೆ ಎಂದು ದೂರಿದರು.

ಜಾತಿ, ಧರ್ಮಗಳ ಮಧ್ಯೆ ವಿಷ ಬೀಜ ಬಿತ್ತುವ, ಶಾಂತಿ, ಸೌಹಾರ್ದಕ್ಕೆ ಧಕ್ಕೆ ತರುವ ಬಿಜೆಪಿ–ಜೆಡಿಎಸ್ ನಡೆಸುವ ಇಂತಹ ದುಷ್ಕೃತ್ಯಗಳನ್ನು ತಡೆಯಲು ರಾಜ್ಯದ ಶೋಷಿತ ಸಮುದಾಯಗಳು ಶಕ್ತವಾಗಿವೆ. ಸಹನೆ, ತಾಳ್ಮೆ ಪರೀಕ್ಷಿಸುವ ಕೆಲಸ ನಿಲ್ಲಿಸಬೇಕು. ಇಲ್ಲದಿದ್ದರೆ ಮುಂದಿನ ಪರಿಣಾಮವನ್ನು ಎರಡೂ ಪಕ್ಷಗಳು ಎದುರಿಸಬೇಕಾಗುತ್ತದೆ ಎಂದರು.

ಒಕ್ಕೂಟದ ಮುಖಂಡರಾದ ಮಾವಳ್ಳಿ ಶಂಕರ್, ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಜಿ.ಡಿ. ಗೋಪಾಲ್, ಸೋಮಣ್ಣ ಮಾಲೂರು, ಎನ್. ಅನಂತ ನಾಯಕ್, ಸುಬ್ಬರಾಜು, ಖಾಲಿದ್ ಅಹಮದ್, ಮನನ್ ಶೇಟ್, ಕೆ.ಕೃಷ್ಣಮೂರ್ತಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

‘ರಾಜೀವ್ ಗಾಂಧಿ ಸ್ಕ್ವೇರ್’ ಅನಾವರಣಕ್ಕೆ ಸಜ್ಜು

ಅತಿ ಎತ್ತರದ ರಾಜೀವ್ ಪ್ರತಿಮೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿ ಅವರ 15 ಅಡಿ ಎತ್ತರದ ಕಂಚಿನ ಪ್ರತಿಮೆ ಶೇಷಾದ್ರಿಪುರದಲ್ಲಿ ಅನಾವರಣಗೊಳ್ಳಲು ಸಿದ್ಧವಾಗಿದೆ.

ರಾಜ್ಯದಲ್ಲೇ ಅತಿ ಎತ್ತರದ ರಾಜೀವ್ ಗಾಂಧಿ ಪ್ರತಿಮೆ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಲಿದೆ. ಜಂಕ್ಷನ್‌ಗಳ ಅಭಿವೃದ್ಧಿ ಯೋಜನೆಯಡಿ ಬಿಬಿಎಂಪಿ ನಗರದಲ್ಲಿ 25 ಜಂಕ್ಷನ್‌ಗಳನ್ನು ಅಭಿವೃದ್ಧಿ ಮಾಡುತ್ತಿದ್ದು, ಶೇಷಾದ್ರಿಪುರ, ಪ್ಲಾಟ್‌ಫಾರ್ಮ್ ರಸ್ತೆ ಹಾಗೂ ಸಂಪಿಗೆ ರಸ್ತೆ ಸೇರುವ ಜಂಕ್ಷನ್‌ನಲ್ಲಿ ‘ರಾಜೀವ್ ಗಾಂಧಿ ಸ್ಕ್ವೇರ್’ ನಿರ್ಮಿಸಲಾಗುತ್ತಿದೆ.

‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸೂಚನೆ ಮೇರೆಗೆ ಪ್ರತಿಮೆಯನ್ನು ಸ್ಥಾಪಿಸಲಾಗುತ್ತಿದೆ. ಬಿಬಿಎಂಪಿ ವತಿಯಿಂದ ₹1.5 ಕೋಟಿ ವೆಚ್ಚದಲ್ಲಿ ಜಂಕ್ಷನ್ ಅಭಿವೃದ್ಧಿ ಮಾಡಲಾಗುತ್ತಿದೆ. ₹1.25 ಕೋಟಿ ವೆಚ್ಚದಲ್ಲಿ ಸ್ಥಾಪನೆಗೆ ಡಿಸಿಎಂ ತಮ್ಮ ಅನುದಾನದಲ್ಲಿ ಹಣ ಬಿಡುಗಡೆ ಮಾಡಿದ್ದಾರೆ’ ಎಂದು ಬಿಬಿಎಂಪಿಯ ಸಂಚಾರ ಎಂಜಿನಿಯರಿಂಗ್ ಕೋಶದ (ಟಿಇಸಿ) ಎಂಜಿನಿಯರ್‌ಗಳು ತಿಳಿಸಿದರು.

‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಗರ ಪ್ರದಕ್ಷಿಣೆ ಸಂದರ್ಭದಲ್ಲಿ ಇಲ್ಲಿ ಕಳೆಗುಂದಿದ್ದ ರಾಜೀವ್‌ಗಾಂಧಿ ಪ್ರತಿಮೆಯನ್ನು ನೋಡಿದ್ದರು. ಕೂಡಲೇ ಅದನ್ನು ತೆರವುಗೊಳಿಸಿ, ಹೊಸದಾಗಿ ಪ್ರತಿಮೆ ಸ್ಥಾಪಿಸಲು ಸೂಚಿಸಿದ್ದರು. ಹೈದರಾಬಾದ್‌ನಲ್ಲಿ ಕಂಚಿನ ಪ್ರತಿಮೆಯನ್ನು ತಯಾರಿಸಲಾಗಿದ್ದು, ಅಲ್ಲಿಂದ ಟ್ರಕ್ ಮೂಲಕ ತಂದು, ಕ್ರೇನ್ ಸಹಾಯದಿಂದ ಅಳವಡಿಸಲಾಗಿದೆ. ಜಂಕ್ಷನ್ ಅಭಿವೃದ್ಧಿ ಕೆಲಸ ಒಂದೆರಡು ವಾರಗಳಲ್ಲಿ ಮುಗಿಯಲಿದ್ದು, ನಂತರ ಪ್ರತಿಮೆ ಅನಾವರಣಗೊಳಿಸಲಾಗುವುದು. ಮೆಟ್ಟಿಲು, ಪೀಠ ಸೇರಿ 25 ಅಡಿ ಎತ್ತರವಿರಲಿದ್ದು, ಇದು ರಾಜ್ಯದಲ್ಲೇ ಅತಿ ಎತ್ತರದ ರಾಜೀವ್ ಗಾಂಧಿ ಕಂಚಿನ ಪ್ರತಿಮೆಯಾಗಲಿದೆ’ ಎಂದು ಮಾಹಿತಿ ನೀಡಿದರು.

‘ಪ್ರತಿಮೆಯ ಸುತ್ತ ಘೋಷವಾಕ್ಯಗಳಿದ್ದು, ಅವುಗಳಿಗೆ ವಿದ್ಯುತ್ ದೀಪಗಳನ್ನು ಅಳವಡಿಸಲಾಗುತ್ತಿದೆ. ಇದು ಮುಕ್ತ ಜಂಕ್ಷನ್ ಆಗಿದ್ದು, ಮೆಟ್ಟಿಲುಗಳ ಮೇಲೆ ನಾಗರಿಕರು ವಿರಮಿಸಲು ಅವಕಾಶವಿರುತ್ತದೆ. ಸುತ್ತಲೂ ಗಿಡಮರಗಳು ಸೇರಿದಂತೆ ಆಲಂಕಾರಿಕ ಸೌಲಭ್ಯಗಳನ್ನೂ ಮಾಡಲಾಗುತ್ತದೆ’ ಎಂದು ಹೇಳಿದರು.

ಅಂಕಿ ಅಂಶಗಳು

15 ಅಡಿ — ಪ್ರತಿಮೆ ಎತ್ತರ

5 ಅಡಿ — ಪೀಠ

5 ಅಡಿ ರಸ್ತೆಯಿಂದ ಮೆಟ್ಟಿಲುಗಳ ಎತ್ತರ

2,500 ಕೆ.ಜಿ — ಕಂಚಿನ ಪ್ರತಿಮೆ ತೂಕ

ಶೇಷಾದ್ರಿಪುರ ಜಂಕ್ಷನ್‌ನಲ್ಲಿ ನಿರ್ಮಾಣವಾಗುತ್ತಿರುವ ‘ರಾಜೀವ್ ಗಾಂಧಿ ಸ್ಕ್ವೇರ್’ ಮಾದರಿ

ಮನೆಯಿಂದ ಕೆಲಸದ ಆಮಿಷ • ಹಣ ಹೂಡಿಕೆ ಹೆಸರಿನಲ್ಲಿ ಮೋಸ • ಹೈದರಾಬಾದ್–ದುಬೈ ಜಾಲ

₹158 ಕೋಟಿ ವಂಚನೆ: 11 ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆಯಿಂದ ಕೆಲಸದ ಆಮಿಷವೊಡ್ಡಿ ಜನರನ್ನು ವಂಚಿಸುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಸೈಬರ್ ಕ್ರೈಂ ಠಾಣೆ ಪೊಲೀಸರು, 11 ಆರೋಪಿಗಳನ್ನು ಬಂಧಿಸಿದ್ದಾರೆ.

'ವಂಚನೆ ಸಂಬಂಧ ವಿದ್ಯಾರಣ್ಯಪುರ ನಿವಾಸಿಯೊಬ್ಬರು ದೂರು ನೀಡಿದ್ದರು. ಆರೋಪಿಗಳಾದ ಅಮೀರ್ ಸುಹಾಯಿಲ್, ಇನಾಯತ್ ಖಾನ್, ನಯಾಜ್ ಅಹಮ್ಮದ್, ಅಬಿಲ್ ಆಗಾ, ಸಯ್ಯದ್ ಅಬ್ಬಾಸ್ ಅಲಿಖಾನ್, ಮಿಥುನ್ ಮನೀಶ್ ಷಾ, ನಯನಾ, ಸತೀಶ್, ಮೀರ್ ಶಶಿಕಾಂತ್ ಷಾ ಸೇರಿ 11 ಮಂದಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಕಮಿಷನರ್ ಬಿ. ದಯಾನಂದ್ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'₹60 ಲಕ್ಷ ಹಣವಿದ್ದ ಆರೋಪಿಗಳ ವಿವಿಧ ಬ್ಯಾಂಕ್ ಖಾತೆಗಳ ವಹಿವಾಟು ಸ್ಥಗಿತಗೊಳಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ 11 ಮೊಬೈಲ್, 2 ಲ್ಯಾಪ್‌ಟಾಪ್, 15 ಸಿಮ್ ಕಾರ್ಡ್ ಹಾಗೂ ಮೂರು ಬ್ಯಾಂಕ್‌ಗಳ ಚೆಕ್ ಪುಸ್ತಕ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

30 ಖಾತೆಗಳಲ್ಲಿ 158 ಕೋಟಿ ವಹಿವಾಟು: 'ಜನರನ್ನು ವಂಚಿಸುವ ಉದ್ದೇಶದಿಂದ ಆರೋಪಿಗಳು ರಾಜ್ಯ ಹಾಗೂ ಹೊರ ರಾಜ್ಯಗಳ ವಿವಿಧ ಬ್ಯಾಂಕ್‌ಗಳಲ್ಲಿ 30 ಖಾತೆಗಳನ್ನು ತೆರೆದಿದ್ದರು. ಇಂಥ ಖಾತೆಗಳಲ್ಲಿ ಇದುವರೆಗೂ ₹ 158 ಕೋಟಿ ವಹಿವಾಟು ಆಗಿದೆ. ಇದೆಲ್ಲವೂ ವಂಚನೆ ಹಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

'ಜಾಲದ ವಂಚನೆಗೆ ಸಂಬಂಧಪಟ್ಟಂತೆ ದೇಶದಲ್ಲಿ 2,143 ಪ್ರಕರಣಗಳು ದಾಖಲಾಗಿವೆ. ಕರ್ನಾಟಕದಲ್ಲಿ 265 ಪ್ರಕರಣಗಳು ವರದಿಯಾಗಿದ್ದು, ಬೆಂಗಳೂರಿನಲ್ಲಿ 135 ಎಫ್‌ಐಆರ್ ದಾಖಲಾಗಿವೆ. ಈ ಜಾಲವು ಹಲವು ವರ್ಷಗಳಿಂದ ಕೃತ್ಯ ಎಸಗಿದ್ದು, ಆರೋಪಿಗಳ ಸುಳಿವು ಯಾರಿಗೂ ಸಿಕ್ಕಿರಲಿಲ್ಲ. ಸಿಸಿಬಿ ಸೈಬರ್ ಕ್ರೈಂ ಪೊಲೀಸರು, ನಿರಂತರವಾಗಿ ಮಾಹಿತಿ ಕಲೆಹಾಕಿ ಜಾಲ ಭೇದಿಸಿದ್ದಾರೆ. ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕದಿಂದ ದುಬೈನಲ್ಲೂ ಜಾಲ ಹಬ್ಬಿದೆ' ಎಂದು ಹೇಳಿದರು.

ಮಾನವ ಸಂಪನ್ಮೂಲ ಅಧಿಕಾರಿ: 'ಆರೋಪಿ ಅಮೀರ್ ಸುಹಾಯಿಲ್, ಮಾನವ ಸಂಪನ್ಮೂಲ ಅಧಿಕಾರಿ. ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ನೀಡುತ್ತಿದ್ದ ಈತ, ತನ್ನನ್ನು ಸಂಪರ್ಕಿಸುತ್ತಿದ್ದ ಯುವಕ–ಯುವತಿಯರಿಗೆ ಕೆಲಸ ಕೊಡಿಸುವ ಆಮಿಷವೊಡ್ಡುತ್ತಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಮತ್ತೊಬ್ಬ ಆರೋಪಿ ಮೀರ್ ಶಶಿಕಾಂತ್ ಷಾ, ಷೇರು ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದ. ಇನಾಯತ್ ಖಾನ್, ಸರಕು ಸಾಗಣೆ ಕಂಪನಿಯ ಡೆಲಿವರಿ ಬಾಯ್. ನಯಾಜ್ ಅಹಮ್ಮದ್, ತರಕಾರಿ ವ್ಯಾಪಾರಿ. ಉಳಿದ ಆರೋಪಿಗಳು, ಷೇರು ವ್ಯವಹಾರ ಹಾಗೂ ಸ್ವಂತ ಉದ್ಯೋಗದಲ್ಲಿದ್ದರು' ಎಂದು ತಿಳಿಸಿದರು.

ಯಾರದ್ದೋ ಹೆಸರಿನಲ್ಲಿ ಬ್ಯಾಂಕ್ ಖಾತೆ: 'ಜನರ ಗಮನಕ್ಕೆ ಬಾರದಂತೆ ದಾಖಲೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದ ಆರೋಪಿಗಳು, ಬ್ಯಾಂಕ್ ಖಾತೆ ತೆರೆಯುತ್ತಿದ್ದರು. ಸಿಮ್ ಕಾರ್ಡ್‌ಗಳನ್ನು ಖರೀದಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

ದುಬೈವರೆಗೂ ಜಾಲ: 'ಬ್ಯಾಂಕ್ ಪಾಸ್ ಪುಸ್ತಕ, ಚೆಕ್ ಪುಸ್ತಕ ಹಾಗೂ ಸಿಮ್ ಕಾರ್ಡ್‌ಗಳನ್ನು ಹೈದರಾಬಾದ್‌ನಿಂದ ಮುಂಬೈಗೆ ಬಸ್‌ನಲ್ಲಿ ಕಳುಹಿಸಲಾಗುತ್ತಿತ್ತು. ಮುಂಬೈನಿಂದ ದುಬೈಗೆ ವಿಮಾನ, ಹಾಗೂ ಹಡಗು ಮೂಲಕ ಸಾಗಿಸಲಾಗುತ್ತಿತ್ತು. ಅದೇ ದಾಖಲೆಗಳನ್ನು ಪಡೆಯುತ್ತಿದ್ದ ದುಬೈನಲ್ಲಿದ್ದ ಆರೋಪಿಗಳು, ವಂಚನೆಗೆ ಬಳಸುತ್ತಿದ್ದರು' ಎಂದು ತಿಳಿಸಿದರು.

ಜಾಹೀರಾತು ನೀಡಿ ವಂಚನೆ: 'ಮನೆಯಿಂದ ಕೆಲಸ ಮಾಡಿ, ಕೈ ತುಂಬ ಹಣ ಗಳಿಸಿ' ಎಂಬುದಾಗಿ ಜಾಹೀರಾತು ನೀಡುತ್ತಿದ್ದ ಆರೋಪಿಗಳು, ಹೂಡಿಕೆ ಹೆಸರಿನಲ್ಲಿ ಹಣ ಪಡೆಯುತ್ತಿದ್ದರು. ಮೊದಲೇ ಸೃಷ್ಟಿಸಿದ್ದ ಬ್ಯಾಂಕ್ ಖಾತೆಗೆ ಹಣ ಹಾಕಿಸಿಕೊಳ್ಳುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಬಂಧಿತರು ಮಧ್ಯವರ್ತಿಗಳಾಗಿದ್ದರು. ಅದಕ್ಕಾಗಿ ಕಮಿಷನ್ ಪಡೆಯುತ್ತಿದ್ದರು. ಜಾಲದ ಪ್ರಮುಖ ರೂವಾರಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ತಿಳಿಸಿದರು.

ಅಪರಾಧ ಸುದ್ದಿ

ಮುಖ್ಯಾಂಶಗಳು

- ಸಿಸಿಬಿ ಸೈಬರ್ ಪೊಲೀಸರ ಕಾರ್ಯಾಚರಣೆ
- ವಂಚನೆಗೆ 30 ಖಾತೆಗಳ ಬಳಕೆ
- ಕರ್ನಾಟಕದಲ್ಲಿ 265 ಮಂದಿಗೆ ವಂಚನೆ

ಕೆಲಸ, ಉದ್ಯೋಗ, ಹೂಡಿಕೆ, ಹೆಚ್ಚು ಲಾಭ ಹಾಗೂ ನಾನಾ ರೀತಿಯ ಆಮಿಷಗಳ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು

ಬಿ. ದಯಾನಂದ್, ಬೆಂಗಳೂರು ಪೊಲೀಸ್ ಕಮಿಷನರ್

₹ 1.52 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ನಗರದ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, ₹1.52 ಕೋಟಿ ಮೌಲ್ಯದ ಮಾದಕ ವಸ್ತು (ಡ್ರಗ್ಸ್) ಜಪ್ತಿ ಮಾಡಿದ್ದಾರೆ.

'ಜ್ಞಾನಭಾರತಿ, ಬಾಣಸವಾಡಿ, ಹುಳಿಮಾವು ಹಾಗೂ ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕವಾಗಿ ಇತ್ತೀಚೆಗೆ ಕಾರ್ಯಾಚರಣೆ ನಡೆಸಲಾಯಿತು. ಡ್ರಗ್ಸ್ ಮಾರಾಟ ಹಾಗೂ ಸಾಗಣೆಯಲ್ಲಿ ತೊಡಗಿದ್ದ ನಾಲ್ವರು ವಿದೇಶಿ ಪ್ರಜೆಗಳು ಸೇರಿ 7 ಮಂದಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'9,219 ಗ್ರಾಂ ತೂಕದ ಎಕ್ಸ್‌ಟೆಸಿ ಮಾತ್ರೆಗಳು, 505 ಎಂಡಿಎಂಎ ಮಾತ್ರೆಗಳು, 150 ಗ್ರಾಂ ತೂಕದ ಚರಸ್ ಹಾಗೂ 100 ಗ್ರಾಂ ತೂಕದ ಕೊಕೇನ್ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹1.52 ಕೋಟಿ ಎಂಬುದಾಗಿ ಅಂದಾಜಿಸಲಾಗಿದೆ' ಎಂದು ತಿಳಿಸಿದರು.

ವ್ಯವಸ್ಥಿತ ಜಾಲ: 'ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ಬಗ್ಗೆ ನಿರಂತರವಾಗಿ ಮಾಹಿತಿ ಸಂಗ್ರಹಿಸಿ, ಈ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಆರೋಪಿಗಳಾದ ಶೇಕ್ ಮೊಹಮ್ಮದ್ ಅರ್ಬಾಜ್, ಗೌತಮ್, ಕೆ. ಅಭಿಷೇಕ್, ಎಸ್. ಜಾಧವ್ ಸೇರಿದಂತೆ 7 ಮಂದಿ ಸಿಕ್ಕಿಬಿದ್ದಿದ್ದಾರೆ' ಎಂದು ಪೊಲೀಸರು ಹೇಳಿದರು.

'ಬಂಧಿತ ಆರೋಪಿಗಳು, ಡ್ರಗ್ಸ್ ಮಾರಾಟಕ್ಕೆ ವ್ಯವಸ್ಥಿತ ಜಾಲ ರೂಪಿಸಿದ್ದರು. ಹೊರ ರಾಜ್ಯ ಹಾಗೂ ವಿದೇಶಗಳಿಂದ ಡ್ರಗ್ಸ್ ತರಿಸುತ್ತಿದ್ದ ಆರೋಪಿಗಳು ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದರು' ಎಂದರು.

₹ 3 ಕೋಟಿ ಮೌಲ್ಯದ ಇ–ಸಿಗರೇಟ್ ಜಪ್ತಿ

ಬೆಂಗಳೂರು: ದುಬೈನಿಂದ ವಿಮಾನದ ಮೂಲಕ ನಗರಕ್ಕೆ ತರಿಸಿ ಅಕ್ರಮವಾಗಿ ಮಾರುತ್ತಿದ್ದ ₹ 3 ಕೋಟಿ ಮೌಲ್ಯದ ಇ–ಸಿಗರೇಟ್‌ಗಳನ್ನು ಸಿಸಿಬಿ ಪೊಲೀಸರು ಜಪ್ತಿ ಮಾಡಿದ್ದಾರೆ.

'ಕೇರಳದ ಕೋಚಿನ್ ನಗರದಲ್ಲಿ ಇ–ಸಿಗರೇಟ್ ಮಾರುತ್ತಿದ್ದ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ದಾಳಿ ಮಾಡಿ ಆರೋಪಿಯನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ, ಇ–ಸಿಗರೇಟ್‌ಗಳು ಪತ್ತೆಯಾದವು' ಎಂದು ಪೊಲೀಸರು ಹೇಳಿದರು.

'ದುಬೈನಿಂದ ದೆಹಲಿಗೆ ಇ–ಸಿಗರೇಟ್ ಪೊಟ್ಟಣಗಳು ಬರುತ್ತಿದ್ದವು. ಅದೇ ಪೊಟ್ಟಣಗಳನ್ನು ಆರೋಪಿ ಬೆಂಗಳೂರಿಗೆ ತರುತ್ತಿದ್ದ. ವ್ಯಾಪಾರಿಗಳ ಮೂಲಕ ₹ 5 ಸಾವಿರಕ್ಕೆ ಒಂದು ಸಿಗರೇಟ್ ಮಾರುತ್ತಿದ್ದ.'

'ಆನ್‌ಲೈನ್ ಮೂಲಕವೂ ಹಣ ಪಡೆಯುತ್ತಿದ್ದ ಆರೋಪಿಗಳು, ಗ್ರಾಹಕರ ವಿಳಾಸಕ್ಕೆ ಸಿಗರೇಟ್ ಕಳುಹಿಸುತ್ತಿದ್ದ. ಇದಕ್ಕಾಗಿ ಸರಕು ಸಾಗಣೆ ಆ್ಯಪ್‌ಗಳನ್ನು ಬಳಸುತ್ತಿದ್ದ. ಆರೋಪಿ ವಿರುದ್ಧ ಸದ್ದುಗುಂಟೆಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಮಣಿಪುರ ಹಿಂಸಾಚಾರ–ಇಬ್ಬರ ಸಾವು

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಮಂಗಳವಾರ ಮತ್ತೆ ಹಿಂಸಾಚಾರ ನಡೆದಿದೆ. ಬಂಡುಕೋರರು ಮತ್ತು ಗ್ರಾಮಸ್ಥರ ನಡುವಿನ ಗುಂಡಿನ ಕಾಳಗದಲ್ಲಿ ಗ್ರಾಮದ ಇಬ್ಬರು ಸ್ವಯಂ ಸೇವಕರು ಮೃತಪಟ್ಟು, ಇತರ ಇಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ಎನ್.ಮೈಕೆಲ್ (33) ಹಾಗೂ ಎಂ.ಖಾಬಾ(23) ಎಂದು ಗುರುತಿಸಲಾಗಿದೆ. ಪಶ್ಚಿಮ ಇಂಫಾಲ್ ಮತ್ತು ಕಾಂಗ್‌ಪೋಕ್ಪಿ ಜಿಲ್ಲೆಯ ಗಡಿಯಲ್ಲಿರುವ ಕಡಂಗ್‌ಬಂದ್ ಗ್ರಾಮದಲ್ಲಿರುವ ಶಿಬಿರದಲ್ಲಿ ಈ ಘಟನೆ ನಡೆದಿದೆ. 'ಶಿಬಿರದ ಮೇಲೆ ಬಂಡುಕೋರರು ದಾಳಿ ನಡೆಸಿದರು. ಗ್ರಾಮಸ್ಥರು ಪ್ರತಿದಾಳಿ ಆರಂಭಿಸಿದ ವೇಳೆ ಗುಂಡಿನ ಕಾಳಗ ನಡೆಯಿತು. ಆಗ, ಬಂಡುಕೋರರು ಮತ್ತಷ್ಟು ದಾಳಿಯನ್ನು ತೀವ್ರಗೊಳಿಸಿದರು' ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡಿನ ದಾಳಿ ಆರಂಭಗೊಂಡ ಬೆನ್ನಲ್ಲೇ, ಭೀತರಾದ ಮಹಿಳೆಯರು, ಮಕ್ಕಳು ಹಾಗೂ ವಯಸ್ಸಾದವರು ಗ್ರಾಮವನ್ನು ತೊರೆದರು, ನೆರೆಯ ಗ್ರಾಮ ಕೌತ್ರುಕ್‌ನತ್ತ ಓಡಿ ಹೋದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸ್ಥಳಕ್ಕೆ ಹೆಚ್ಚಿನ ಭದ್ರತಾ ಸಿಬ್ಬಂದಿಯನ್ನು ಕಳುಹಿಸಲಾಗಿದ್ದು, ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ತಿಳಿಸಿದ್ದಾರೆ.

ಆರ್ಥಿಕ ನಷ್ಟ: ಯೂಟ್ಯೂಬ್ ನೋಡಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಪಿ. ಅಗ್ರಹಾರ ಬಳಿಯ ಟೆಲಿಕಾಂ ಬಡಾವಣೆಯ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣದ ಆರೋಪಿ ಮದನ್ ಕುಮಾರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಮದನ್ ಕುಮಾರ್, ಮೆಕ್ಯಾನಿಕಲ್ ಎಂಜಿನಿಯರ್. ಈತನಿಂದ ₹6.57 ಲಕ್ಷ ಮೌಲ್ಯದ ಚಿನ್ನಾಭರಣ, ₹30 ಸಾವಿರ ಮೌಲ್ಯದ ಬೆಳ್ಳಿ ಸಾಮಗ್ರಿ ಹಾಗೂ ₹1.35 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಲ್ಯೂಮಿನಿಯಂ ಕಾರ್ಖಾನೆ ಆರಂಭಿಸಿದ್ದ ಮದನ್‌ಕುಮಾರ್, ಆರ್ಥಿಕವಾಗಿ ಬೆಳೆದಿದ್ದ. ಆದರೆ, ಈಚೆಗೆ ಕಾರ್ಖಾನೆಯಲ್ಲಿ ಬೆಂಕಿ ಅವಘಡ ಸಂಭವಿಸಿತ್ತು. ಕಾರ್ಖಾನೆಯ ವಸ್ತುಗಳು ಸುಟ್ಟು ಹೋಗಿದ್ದವು. ಇದರಿಂದಾಗಿ ಮದನ್, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ. ವಿಮೆ ಕಂಪನಿಯಿಂದಲೂ ಹೆಚ್ಚು ಹಣ ಬಂದಿರಲಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕಾರ್ಖಾನೆ ನಿರ್ವಹಣೆಗೆಂದು ಮದನ್ ಹೆಚ್ಚು ಸಾಲ ಮಾಡಿದ್ದ. ಬೆಂಕಿ ಅವಘಡ ನಂತರ ಸಾಲ ತೀರಿಸಲು ಸಾಧ್ಯವಾಗಿರಲಿಲ್ಲ. ಸಾಲಗಾರರ ಕಿರುಕುಳ ಹೆಚ್ಚಾಗಿತ್ತು. ಸಾಲ ತೀರಿಸಲು ಹಣ ಹೊಂದಿಸುವುದಕ್ಕಾಗಿ ಕಳ್ಳತನಕ್ಕೆ ಸಂಚು ರೂಪಿಸಿದ್ದ' ಎಂದು ಹೇಳಿವೆ.

'ಮನೆಯಲ್ಲಿ ಕಳ್ಳತನ ಮಾಡುವುದು ಹೇಗೆ? ಎಂಬುದನ್ನು ಯೂಟ್ಯೂಬ್‌ನಲ್ಲಿ ವಿಡಿಯೊ ನೋಡಿ ಮದನ್ ತಿಳಿದುಕೊಂಡಿದ್ದ. ಟೆಲಿಕಾಂ ಬಡಾವಣೆಯ 6ನೇ ಅಡ್ಡರಸ್ತೆಯಲ್ಲಿರುವ ಮನೆಯೊಂದಕ್ಕೆ ಹೋಗಿದ್ದ ಆರೋಪಿ, ಕಟರ್‌ನಿಂದ ಬಾಗಿಲು ಕೊರೆದು ಒಳಗೆ ನುಗ್ಗಿದ್ದ. ಕೈಗವಸು ಧರಿಸಿದ್ದ. ಮನೆಯಲ್ಲಿದ್ದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಕದ್ದುಕೊಂಡು ಪರಾರಿಯಾಗಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕ್ಯಾಮೆರಾ ಬಂದ್ ಮಾಡಿ ಕಳ್ಳತನ: ಮಹಿಳೆ ಬಂಧನ

ಬೆಂಗಳೂರು: ಸದಾಶಿವನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಗ್ಯಾಸ್ ಕಟರ್‌ನಿಂದ ಕಬೋರ್ಡ್ ಬಾಗಿಲು ಕತ್ತರಿಸಿ ಕಳ್ಳತನ ಮಾಡಿದ್ದ ಆರೋಪದಡಿ ಮನೆ ಕೆಲಸದ ಮಹಿಳೆ ಶಾಂತಾ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಬಳ್ಳಾರಿಯ ಶಾಂತಾ, ಹಲವು ವರ್ಷಗಳಿಂದ ಮನೆ ಕೆಲಸ ಮಾಡುತ್ತಿದ್ದರು. ಮನೆ ಮಾಲೀಕ ನೀಡಿದ್ದ ದೂರು ಆಧರಿಸಿ ಶಾಂತಾ ಅವರನ್ನು ಬಂಧಿಸಲಾಗಿದೆ. ಇವರಿಂದ ₹ 30 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಾಲೀಕರ ಕುಟುಂಬ ವಿದೇಶಕ್ಕೆ ಹೋಗಿತ್ತು. ಇದೇ ಸಂದರ್ಭದಲ್ಲಿ ಕಳ್ಳತನಕ್ಕೆ ಸಂಚು ರೂಪಿಸಿದ್ದ ಶಾಂತಾ, ಮನೆಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳ ತಂತಿ ಕತ್ತರಿಸಿ ಬಂದ್ ಮಾಡಿದ್ದರು. ನಂತರ, ಗ್ಯಾಸ್ ಕಟರ್ ಹಾಗೂ ಸುತ್ತಿಗೆ ಬಳಸಿ ಮನೆಯ ಕಬೋರ್ಡ್ ಬಾಗಿಲು ಮುರಿದು ಚಿನ್ನಾಭರಣ ಕದ್ದಿದ್ದರು' ಎಂದರು.

'ಜ. 25ರಂದು ಮಾಲೀಕರ ಕುಟುಂಬ ವಾಪಸು ಬಂದಿತ್ತು. ಅಂದು ತಡರಾತ್ರಿ ಮನೆಯಲ್ಲಿ ಕೂಗಾಡಿದ್ದ ಶಾಂತಾ, 'ಯಾರೋ ಕಳ್ಳರು ಕಬೋರ್ಡ್ ಮುರಿದು ಚಿನ್ನಾಭರಣ ಕದ್ದೊಯ್ದರು' ಎಂದಿದ್ದರು. ಮಾಲೀಕ ಹಾಗೂ ಅವರ ಮಕ್ಕಳು ಕಳ್ಳರಿಗಾಗಿ ಹುಡುಕಾಡಿದ್ದರು. ಯಾವುದೇ ಸುಳಿವು ಸಿಕ್ಕಿರಲಿಲ್ಲ. ನಂತರ, ಕಳ್ಳತನ ಬಗ್ಗೆ ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿದರು.

'ತನಿಖೆ ಕೈಗೊಂಡಾಗ ಮಹಿಳೆ ಮೇಲೆ ಅನುಮಾನ ಬಂದಿತ್ತು. ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು. ಈ ಹಿಂದೆಯೇ ಶಾಂತಾ, ಮನೆಯೊಂದರಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದ ಬಗ್ಗೆಯೂ ಮಾಹಿತಿ ಲಭ್ಯವಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಂಬ್' ಎಂದಿದ್ದ ಪ್ರಯಾಣಿಕನ ಬಂಧನ

ಬೆಂಗಳೂರು: 'ನನ್ನ ಬಳಿ ಬಾಂಬ್ ಹಾಗೂ ಚಾಕು ಇದೆಯಾ ? ಪದೇ ಪದೇ ತಪಾಸಣೆ ಏಕೆ' ಎಂದು ಭದ್ರತಾ ಸಿಬ್ಬಂದಿಯನ್ನು ಪ್ರಶ್ನಿಸಿ ತಪಾಸಣೆಗೆ ಅಸಹಕಾರ ನೀಡಿದ್ದ ಆರೋಪದಡಿ ಸಜು ಕುಮಾರ್ (48) ಅವರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆ ಪೊಲೀಸರು ಭಾನುವಾರ ಬಂಧಿಸಿದ್ದು, ಜಾಮೀನು ಮೇಲೆ ಸೋಮವಾರ ಬಿಟ್ಟು ಕಳುಹಿಸಿದ್ದಾರೆ.

'ಕೇರಳದ ಸಜು ಕುಮಾರ್, ನಗರದ ಕಂಪನಿಯೊಂದರ ಉದ್ಯೋಗಿ. ಕೇರಳದಲ್ಲಿರುವ ಅವರ ತಂಗಿಯ ಮಗು ಮೃತಪಟ್ಟಿತ್ತು. ಮಗುವನ್ನು ನೋಡಲು ವಿಮಾನದಲ್ಲಿ ಹೊರಟಿದ್ದ ವೇಳೆ ಅವರು ತಪಾಸಣೆಗೆ ಅಡ್ಡಿಪಡಿಸಿದ್ದರು. ಭದ್ರತಾ ಸಿಬ್ಬಂದಿ ನೀಡಿದ್ದ ದೂರಿನಡಿ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಲಾಗಿತ್ತು. ನಂತರ ಜಾಮೀನು ಮೇಲೆ ಬಿಟ್ಟು ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಗು ತೀರಿಕೊಂಡಿದ್ದರಿಂದ ದುಃಖದಲ್ಲಿದ್ದ ಸಜು ಕುಮಾರ್, ಕೇರಳದ ಕೊಚ್ಚಿಗೆ ಹೋಗಲು ವಿಮಾನದ ಸೀಟು ಕಾಯ್ದಿರಿಸಿದ್ದರು. ತರಾತುರಿಯಲ್ಲಿ ನಿಗದಿಯಂತೆ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಪ್ರವೇಶ ದ್ವಾರ ಹಾಗೂ ಇತರೆಡೆ ಹಲವು ಬಾರಿ ಅವರನ್ನು ಸಿಬ್ಬಂದಿ ತಪಾಸಣೆಗೆ ಒಳಪಡಿಸಿದ್ದರು.'

'ಸಜು ಕುಮಾರ್ ನಿಗದಿತ ವಿಮಾನ ಏರಿ ಕುಳಿತಿದ್ದರು. ಅಲ್ಲಿಗೂ ಬಂದಿದ್ದ ಸಿಬ್ಬಂದಿ, ಪುನಃ ತಪಾಸಣೆಗೆ ಒಳಪಡಿಸಿದ್ದರು. ಸಿಟ್ಟಾಗಿದ್ದ ಸಜುಕುಮಾರ್, 'ಪದೇ ಪದೇ ತಪಾಸಣೆ ಏಕೆ ಮಾಡುತ್ತಿದ್ದೀರಾ? ನನ್ನ ಬಳಿ ಬಾಂಬ್ ಹಾಗೂ ಚಾಕು ಇದೆಯಾ? ಕಿರುಕುಳ ನೀಡಬೇಡಿ' ಎಂದಿದ್ದರು. ಈ ಮಾತಿನಿಂದ ಅನುಮಾನಗೊಂಡಿದ್ದ ಸಿಬ್ಬಂದಿ, ಬ್ಯಾಗ್ ಪರಿಶೀಲನೆಗೆ ಮುಂದಾಗಿದ್ದರು. ಆದರೆ, ಸಜು ಕುಮಾರ್ ಬ್ಯಾಗ್ ನೀಡಿರಲಿಲ್ಲ. ತಪಾಸಣೆಗೂ ಅಸಹಕಾರ ನೀಡಿದ್ದರು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಸಜು ಕುಮಾರ್ ಅವರನ್ನು ವಶಕ್ಕೆ ಪಡೆದಿದ್ದ ಸಿಬ್ಬಂದಿ, ಠಾಣೆಗೆ ಒಪ್ಪಿಸಿದ್ದರು. ಸಾರ್ವಜನಿಕರ ಜೀವಕ್ಕೆ ಕುತ್ತು ತರಲು ಯತ್ನಿಸಿದ ಆರೋಪದಡಿ ಸಜು ಕುಮಾರ್ ಅವರನ್ನು ಬಂಧಿಸಿ, ಬಿಟ್ಟು ಕಳುಹಿಸಲಾಯಿತು. ಸೋಮವಾರ ಮತ್ತೊಂದು ವಿಮಾನದಲ್ಲಿ ಅವರು ಕೊಚ್ಚಿಗೆ ಹೋಗಿರುವ ಮಾಹಿತಿ ಲಭ್ಯವಾಗಿದೆ' ಎಂದು ಹೇಳಿದರು.

ಜಮೀನು ಗಲಾಟೆ ಎದೆಗೆ ಗುದ್ದಿ ಕೊಲೆ

ಯಲಹಂಕ: ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯ ಎನ್‌ಟಿಐ ಬಡಾವಣೆಯಲ್ಲಿ ಜಮೀನು ವಿಚಾರವಾಗಿ ಸೋಮವಾರ ಗಲಾಟೆ ನಡೆದಿದ್ದು, ಪ್ರಕಾಶ್ (45) ಅವರನ್ನು ಕೊಲೆ ಮಾಡಲಾಗಿದೆ.

ಕೊಲೆ ಆರೋಪದಡಿ ಎನ್‌ಟಿಐ ಸೊಸೈಟಿಯ ಕಾರ್ಯದರ್ಶಿ ಪ್ರತಾಪ್ ಚಂದ್ರ ರಾಥೋಡ್, ಗುತ್ತಿಗೆದಾರ ಆರ್. ನಾಗರಾಜ್, ಅಂಜನ್‌ಕುಮಾರ್ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. 9 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

1.06 ಎಕರೆ ಜಮೀನು: 'ಎನ್‌ಟಿಐ ಬಡಾವಣೆಯಲ್ಲಿ ಪ್ರಕಾಶ್‌ಗೆ ಸೇರಿದ್ದ 1.06 ಎಕರೆ ಜಮೀನಿದೆ. ಈ ಜಾಗಕ್ಕೆ ಸಂಬಂಧಿಸಿದಂತೆ ಎನ್‌ಟಿಐ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ವ್ಯಾಜ್ಯ ಹೂಡಿದೆ. ಇದೇ ವೈಷಮ್ಯದಿಂದ ಪ್ರಕಾಶ್ ಕೊಲೆಯಾಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು ಸೋಮವಾರ ಮಧ್ಯಾಹ್ನ 12 ಗಂಟೆ ವೇಳೆಗೆ ಅಕ್ರಮವಾಗಿ ಜಮೀನಿಗೆ ಪ್ರವೇಶಿಸಿದ್ದರು. ಇದನ್ನು ಪ್ರಶ್ನಿಸಲು ಪ್ರಕಾಶ್, ಪತ್ನಿ ಜತೆ ಸ್ಥಳಕ್ಕೆ ಹೋಗಿದ್ದರು. ಪತ್ನಿ ಮೇಲೆ ಆರೋಪಿಗಳು ಹಲ್ಲೆ ಮಾಡಿದ್ದರು. ಅದನ್ನು ತಡೆಯಲು ಮುಂದಾದ ಪ್ರಕಾಶ್ ಎದೆಗೆ ಗುದ್ದಿದ್ದರು. ಎಳೆದಾಡಿ ಹಲ್ಲೆ ಮಾಡಿದ್ದರು. ಇದರಿಂದ ತೀವ್ರ ಗಾಯಗೊಂಡ ಪ್ರಕಾಶ್ ಸ್ಥಳದಲ್ಲೇ ಕುಸಿದು ಬಿದ್ದಿದ್ದರು. ಸಂಬಂಧಿಕರು ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಪರೀಕ್ಷೆ ನಡೆಸಿದ ವೈದ್ಯರು, ಪ್ರಕಾಶ್ ಮೃತಪಟ್ಟಿರುವುದಾಗಿ ಹೇಳಿದರು' ಎಂದು ಮೂಲಗಳು ತಿಳಿಸಿವೆ.

ಪ್ರತಿಭಟನೆ: 'ಪ್ರಕಾಶ್ ಕೊಲೆ ಮಾಡಿದ ಆರೋಪಿಗಳನ್ನು ಬಂಧಿಸಬೇಕು. ಅವರ ಕುಟುಂಬಕ್ಕೆ ರಕ್ಷಣೆ ನೀಡಬೇಕು' ಎಂದು ಆಗ್ರಹಿಸಿ ಪ್ರಜಾ ವಿಮೋಚನಾ ಚಳವಳಿ (ಸ್ವಾಭಿಮಾನ) ಕಾರ್ಯಕರ್ತರ ನೇತೃತ್ವದಲ್ಲಿ ಸಂಬಂಧಿಕರು ಕೊಡಿಗೇಹಳ್ಳಿ ಠಾಣೆ ಎದುರು ಸೋಮವಾರ ಮಧ್ಯಾಹ್ನದಿಂದ ರಾತ್ರಿವರೆಗೂ ಪ್ರತಿಭಟನೆ ನಡೆಸಿದರು. ಪರಿಹಾರಕ್ಕೆ ಆಗ್ರಹಿಸಿದರು.

ಆಟೊ ಉರುಳಿಬಿದ್ದು ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿ ಆಟೊ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಚಾಲಕ ಎಚ್. ಎನ್. ರಾಹುಲ್ (23) ಮೃತಪಟ್ಟಿದ್ದಾರೆ.

'ಉತ್ತರಹಳ್ಳಿ ಕಡೆಯಿಂದ ಚಿಕ್ಕಲಸಂದ್ರ ಕಡೆಗೆ ಹೋಗುವ ರಸ್ತೆಯಲ್ಲಿ ಸೋಮವಾರ ತಡರಾತ್ರಿ ಈ ಅವಘಡ ಸಂಭವಿಸಿದೆ. ಆಟೊದಲ್ಲಿದ್ದ ಪ್ರಯಾಣಿಕ ಕಿರಣ್ (23) ಹಾಗೂ ಬೈಕ್ ಸವಾರ ನಂದಕುಮಾರ್ (19) ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸರು ಹೇಳಿದರು.

'ಚಾಲಕ ರಾಹುಲ್, ಆಟೊದಲ್ಲಿ ಕಿರಣ್ ಅವರನ್ನು ಹತ್ತಿಸಿಕೊಂಡು ಹೊರಟಿದ್ದರು. ನಂದ್‌ಕುಮಾರ್ ಅವರು ದಿವ್ಯಾ ಅವರನ್ನು ಬೈಕ್‌ನಲ್ಲಿ ಕೂರಿಸಿಕೊಂಡು ತೆರಳುತ್ತಿದ್ದರು. ಇದೇ ಸಂದರ್ಭದಲ್ಲಿ ಆಟೊ ಹಾಗೂ ಬೈಕ್ ನಡುವೆ ಡಿಕ್ಕಿ ಸಂಭವಿಸಿತ್ತು. ಪಾದಚಾರಿ ಮಾರ್ಗದಲ್ಲಿ ಆಟೊ ಉರುಳಿಬಿದ್ದಿತ್ತು. ತೀವ್ರ ಗಾಯಗೊಂಡಿದ್ದ ರಾಹುಲ್ ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

1,466 ಪ್ರಕರಣ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವವರ ಪತ್ತೆಗಾಗಿ ನಗರದ ಶಾಲೆ–ಕಾಲೇಜುಗಳ ಬಳಿ ಸೋಮವಾರ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸರು, 1,466 ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಸಂಚಾರ ನಿಯಮ ಉಲ್ಲಂಘನೆಯಿಂದಾಗಿ ಅಪಘಾತಗಳು ಸಂಭವಿಸುತ್ತಿವೆ. ಶಾಲೆ ಹಾಗೂ ಕಾಲೇಜು ಬಳಿಯೂ ಹೆಚ್ಚಿನ ಸಂಖ್ಯೆಯಲ್ಲಿ ನಿಯಮ ಉಲ್ಲಂಘನೆ ಆಗುತ್ತಿದ್ದ ಬಗ್ಗೆ ದೂರುಗಳು ಬಂದಿದ್ದವು. ಇದೇ ಕಾರಣಕ್ಕೆ ವಿಶೇಷ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು.

'ಹೆಲ್ಮೆಟ್ ರಹಿತ ಸವಾರಿ ಸೇರಿದಂತೆ ನಿಯಮ ಉಲ್ಲಂಘಿಸಿದ ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿ ಕೊಳ್ಳಲಾಗಿದೆ. ₹ 7.22 ಲಕ್ಷ ದಂಡ ವನ್ನೂ ವಿಧಿಸಲಾಗಿದೆ' ಎಂದು ತಿಳಿಸಿದರು.

'ಉದ್ಯೋಗಸೌಧ'ದ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಹುದ್ದೆ ಆಕಾಂಕ್ಷಿಗಳ ಪರವಾಗಿ ಕೆಪಿಎಸ್‌ಸಿ (ಉದ್ಯೋಗಸೌಧ) ಮುಂಭಾಗದಲ್ಲಿ ಮಂಗಳವಾರ ಬೆಳಿಗ್ಗೆ ಧರಣಿ ನಡೆಸಿದ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಅವರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸುರೇಶ್ ಕುಮಾರ್, 'ಕೆಪಿಎಸ್‌ಸಿಯಿಂದ ಉದ್ಯೋಗಾಕಾಂಕ್ಷಿಗಳಿಗೆ ನಿರಂತರ ಅನ್ಯಾಯವಾಗುತ್ತಿದೆ. ಅವರಿಗೆ ನ್ಯಾಯಬೇಕಿದೆ. ಕೆಪಿಎಸ್‌ಸಿ ಮೇಲೆ ಒತ್ತಡ ಹೇರಲು ನಾನು ವಿವಿಧ ರೀತಿಯಲ್ಲಿ ಯತ್ನಿಸಿದರೂ ಯಾವುದೇ ಪ್ರಯೋಜನ ಆಗಿಲ್ಲ' ಎಂದರು.

ತಮ್ಮ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿರುವ ಅವರು, 'ಯುವ ಸಮೂಹದ ಪರವಾಗಿ ನ್ಯಾಯ ಕೇಳಿ ಉದ್ಯೋಗಸೌಧದ ಮುಂಭಾಗದಲ್ಲಿ ಕುಳಿತಿದ್ದ ನನ್ನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಆಯೋಗದಿಂದ ಸಮರ್ಪಕವಾಗಿ ಉತ್ತರ ಕೊಡಲು ಯಾರೂ ಬರಲಿಲ್ಲ ಅಥವಾ ಬರುವ ಧೈರ್ಯ ತೋರಲಿಲ್ಲ. ಆಯೋಗಕ್ಕೆ 'ಒಳ ಜಗಳ ನಿಲ್ಲಿಸಿ, ನ್ಯಾಯ ನೀಡಿ' ಎಂದಷ್ಟೆ ನನ್ನ ಆಗ್ರಹ' ಎಂದಿದ್ದಾರೆ.

ಉದ್ಯೋಗಸೌಧದ ಮುಂಭಾಗದಲ್ಲಿ ಬಿಜೆಪಿ ಶಾಸಕ ಎಸ್‌. ಸುರೇಶ್ ಕುಮಾರ್ ಮಂಗಳವಾರ ಧರಣಿ ನಡೆಸಿದರು ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

'ಸಂವಿಧಾನದ ಆಶಯಗಳು' ಸಂವಾದ: ಉದ್ಘಾಟನೆ: ನ್ಯಾ. ನಾಗಮೋಹನದಾಸ್, ದಿಕ್ಸೂಚಿ ನುಡಿಗಳು: ಕೋಟಿಗಾನಹಳ್ಳಿ ರಾಮಯ್ಯ, ಆಯೋಜನೆ: ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 10.30

'ಮಾನವ ಹಕ್ಕುಗಳು ಮತ್ತು ಮಾಧ್ಯಮ' ವಿಷಯದ ಬಗ್ಗೆ ವಿಚಾರಸಂಕಿರಣ: ಉದ್ಘಾಟನೆ: ಲಿಂಗರಾಜ ಗಾಂಧಿ, ಉಪನ್ಯಾಸ: ವೆಂಕಟೇಶ್ ನಾಯಕ್, ಆಯೋಜನೆ ಹಾಗೂ ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 11.30

ಕಾಲೇಜು ದಿನಾಚರಣೆ ಹಾಗೂ ನವೀಕೃತ ಸಭಾಂಗಣ ಉದ್ಘಾಟನೆ: ಮುಖ್ಯ ಅತಿಥಿ: ನಸೀರ್ ಅಹ್ಮದ್, ಅಧ್ಯಕ್ಷತೆ: ಜಿಯಾವುಲ್ಲಾ ಷರೀಫ್, ಆಯೋಜನೆ ಹಾಗೂ ಸ್ಥಳ: ಎ.ಕೆ. ಪಿಯು ಕಾಲೇಜ್ ಆಫ್ ವುಮೆನ್, ಕಬ್ಬನ್ ಪೇಟೆ, ಬೆಳಿಗ್ಗೆ 11.30

ಗಣರಾಜ್ಯೋತ್ಸವ ದಿನಾಚರಣೆ ಮತ್ತು ಕೆ. ಸುಭಾಷ್ ಆಳ್ವ ಸ್ಮಾರಕ ದತ್ತಿನಿಧಿ ಸ್ಪರ್ಧೆಗಳು: ಉದ್ಘಾಟನೆ: ಪ್ರಭಾಕರ ಬೆಳವಾಡಿ, ಅಧ್ಯಕ್ಷತೆ: ಕೆ.ಮೋಹನ್‌ದೇವ್ ಆಳ್ವ, ಮುಖ್ಯ ಅತಿಥಿ: ಕಪಿನಯ್ಯ, ಆಯೋಜನೆ: ಅಖಿಲ ಕರ್ನಾಟಕ ಮಕ್ಕಳ ಕೂಟ, ಸ್ಥಳ: ಮಕ್ಕಳ ಕೂಟದ ಆವರಣ, ಮಧ್ಯಾಹ್ನ 2

ಬಿ.ಆರ್. ಅಂಬೇಡ್ಕರ್ ಆರಂಭಿಸಿದ 'ಮೂಕನಾಯಕ' ಪತ್ರಿಕೆಯ 104ನೇ ವರ್ಷಾಚರಣೆ ಪ್ರಯುಕ್ತ 'ತಳ ಸಮುದಾಯಗಳು ಮತ್ತು ಮುಖ್ಯವಾಹಿನಿ ಮಾಧ್ಯಮ: ಅಂದು–ಇಂದು' ವಿಚಾರಸಂಕಿರಣ: ಅಧ್ಯಕ್ಷತೆ: ಸಿ.ಬಿ. ಹೊನ್ನುಸಿದ್ದಾರ್ಥ್, ಅಧ್ಯಕ್ಷತೆ: ಮಾವಳ್ಳಿ ಶಂಕರ್, ದಿನೇಶ್ ಅಮೀನ್ ಮಟ್ಟು, ಶ್ರೀಪಾದ್ ಭಟ್, ಮಮತಾ ಕೆ.ಎನ್., ರವಿ ಭಾಗಿ. ರಾಜಶೇಖರ್ ಮೂರ್ತಿ, ಆಯೋಜನೆ: ಅಂಬೇಡ್ಕರ್ ವಾದ ಪತ್ರಿಕೆ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಮಧ್ಯಾಹ್ನ 3.30

'ಕವಿದಿನ' ಪುಸ್ತಕ ಬಿಡುಗಡೆ ಮತ್ತು ಬಹುಮಾನ ವಿತರಣೆ ಸಮಾರಂಭ: ಎಂ.ಎಸ್. ಮೂರ್ತಿ ಅವರ 'ಹರಿದ ಚಡ್ಡಿ ಮತ್ತು ಇತರ ಲೇಖನಗಳು' ಪುಸ್ತಕ ಬಿಡುಗಡೆ: ಎಚ್.ಎಸ್. ಶಿವಪ್ರಕಾಶ್, ಮುಖ್ಯ ಅತಿಥಿ: ಎಂ.ಎಸ್. ಶ್ರೀರಾಮ್, ಅಧ್ಯಕ್ಷತೆ: ವರ್ಗಿಸ್ ಕೆ.ಜೆ., ಆಯೋಜನೆ ಹಾಗೂ ಸ್ಥಳ: ಕ್ರೈಸ್ಟ್ ಡೀಮ್ಡ್ ವಿಶ್ವವಿದ್ಯಾಲಯ, ಹೊಸೂರು ರಸ್ತೆ, ಸಂಜೆ 4.30



ಹಂ.ಪ.ನಾಗರಾಜಯ್ಯ

ಕುವೆಂಪು, ದ.ರಾ. ಬೇಂದ್ರೆ ಹುಟ್ಟುಹಬ್ಬ ಹಾಗೂ ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಬಿ.ಟಿ. ಲಲಿತಾ ನಾಯಕ್, ಉಪನ್ಯಾಸ: ರಾಜಶೇಖರ ಮಠಪತಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ.ಶ್ರೀ.ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

'ತ್ರಿಪುಟದೊಳಗೆ ತ್ರಿಲೋಕ' ಮೂರು ಪುಸ್ತಕಗಳ ಲೋಕಾರ್ಪಣೆ: ಬಿ. ಭಾಸ್ಕರ ರಾವ್ ಅವರ 'ಮನುಸ್ಮೃತಿ', ಸಂದೀಪ್ ಬಾಲಕೃಷ್ಣ ಅವರ 'ದೂತವಾಕ್ಯ', ಯಂಡಮೂರಿ ವಿರೇಂದ್ರನಾಥ್ ಅವರ '21 ಒಳ್ಳೆಯ (ತನದ) ಕಥೆಗಳು', ಅಧ್ಯಕ್ಷತೆ: ಆರ್. ಗಣೇಶ್, ಉಪಸ್ಥಿತಿ: ವೀಣಾ ಬನ್ನಂಜೆ, ಆಯೋಜನೆ: ಸಾಹಿತ್ಯ ಪ್ರಕಾಶನ, ಸ್ಥಳ: ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಜೀವಮಾನ ಸಾಧನೆಯ ವಿವಿಧ ಪ್ರಶಸ್ತಿಗಳ ಪ್ರದಾನ: ಸಿದ್ದರಾಮಯ್ಯ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5

'ಬೇಂದ್ರೆ' ವಿಶೇಷ ಉಪನ್ಯಾಸ: ಗೀತಾ ವಸಂತ, ಅಧ್ಯಕ್ಷತೆ: ಮಹೇಶ ಜೋಶಿ, ಮುಖ್ಯ ಅತಿಥಿ: ಬಸವರಾಜ ಸಬರದ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

'ಭಾರತದ ಚಂದ್ರ ಅನ್ವೇಷಣಾ ಕಾರ್ಯಕ್ರಮ'ದ ಬಗ್ಗೆ ಉಪನ್ಯಾಸ: ಅನಿಲ್ ಭಾರದ್ವಾಜ್, ಆಯೋಜನೆ: ಜವಾಹರ್‌ಲಾಲ್ ನೆಹರೂ ತಾರಾಲಯ, ಅಸ್ಟ್ರಾನಾಮಿಕಲ್ ಸೊಸೈಟಿ ಆಫ್ ಇಂಡಿಯಾ, ಸ್ಥಳ: ಜವಾಹರ್‌ಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಸಂಜೆ 5.30

ದ.ರಾ. ಬೇಂದ್ರೆ ಸ್ಮರಣೆ: ನುಡಿ ನಮನ: ರಘು ವಿ., ಜಿ.ಬಿ. ಹರೀಶ್, ಪುಷ್ಪ ನಮನ: ಎಲ್. ವೆಂಕಟಪ್ಪ, ಅಧ್ಯಕ್ಷತೆ: ರಾಮೇಗೌಡ, ಆಯೋಜನೆ: ಉದಯಭಾನು ಕಲಾಸಂಘ, ಸ್ಥಳ: ಉದಯಭಾನು ಅಂಗಳ, ಗವಿಪುರ, ಕೆಂಪೇಗೌಡ ನಗರ, ಸಂಜೆ 5.30

'ಮಧುರಗಾನ' ಚಲನಚಿತ್ರ ಗೀತೆಗಳ ಗಾಯನ: ಉದ್ಘಾಟನೆ: ನ್ಯಾ.ಆರ್. ದೇವದಾಸ್, ಅಧ್ಯಕ್ಷತೆ: ನ್ಯಾ.ಎಂ. ನಾಗಪ್ರಸನ್ನ, ಮುಖ್ಯ ಅತಿಥಿ: ಟಿ.ಜಿ. ಶಿವಶಂಕರೇಗೌಡ, ಆಯೋಜನೆ: ಗಾನಗಂಗಾ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5.30

'ರಕ್ತ–ಧ್ವಜ' ರಂಗರೂಪಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್, ಆಯೋಜನೆ: ದೃಶ್ಯ, ಸ್ಥಳ: ಯುವಪಥ, ಜಯನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
CIN : U85110KA1970SGC001919
ಸಂಖ್ಯೆ: KPCL/2023-24/SE0097 ದಿನಾಂಕ:30.01.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ-ಲಕೋಟೆ ಪದ್ಧತಿಯಲ್ಲಿ)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ **ಕೇಂದ್ರ ಕಚೇರಿ ಶಕ್ತಿಭವನದಲ್ಲಿರುವ ಕಚೇರಿಗಳಿಗೆ ಅಲಂಕಾರಿಕ ಕುಂಡಗಳ ಸರಬರಾಜಿಗಾಗಿ ಹಾಗೂ ಶಕ್ತಿಭವನದ ಟೆರೇಸ್ ಗಾರ್ಡನ್ ಮತ್ತು ಮುಂಭಾಗದಲ್ಲಿರುವ ಉದ್ಯಾನಗಳ ನಿರ್ವಹಣೆಗಾಗಿ ಎರಡು ವರ್ಷದ ಅವಧಿಗೆ ಕೈ ತೋಟ/ಉದ್ಯಾನವನ ನಿರ್ವಹಣೆಯಲ್ಲಿ ಅನುಭವ ಹೊಂದಿರುವ ಹಾಗೂ ಸಾಕಷ್ಟು ಮಾನವ ಸಂಪನ್ಮೂಲ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಹೊಂದಿರುವ ಪರಿಣಿತ ಏಜೆನ್ಸಿಗಳಿಂದ** ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **(URL:https://kppp.karnataka.gov.in)** ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ.: **ರೂ.17,900/-** ಟೆಂಡರ್‌ಗಳನ್ನು ಸಲ್ಲಿಸಲು **ಕೊನೆಯ ದಿನಾಂಕ: 06.02.2024, 4.00 ಗಂಟೆಯವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 08.02.2024, ಬೆಳಿಗ್ಗೆ 11.00 ಗಂಟೆಗೆ.** ತಾಂತ್ರಿಕ ಬಿಡ್‌ನಲ್ಲಿ ಪೂರ್ವಾರ್ಹತೆ ಹೊಂದಿದ ಟೆಂಡರುದಾರರ ಹಣಕಾಸಿನ ಬಿಡ್‌ಗಳನ್ನು ಸಾಧ್ಯವಾದಲ್ಲಿ **ದಿನಾಂಕ:13.02.2024ರಂದು ಬೆಳಿಗ್ಗೆ 11.30 ಗಂಟೆಗೆ** ತೆರೆಯಲಾಗುವುದು. ಅಥವಾ ಯಾವುದೇ ಅನುಕೂಲಕರ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. **ಹೆಚ್ಚಿನ ವಿವರಗಳನ್ನು ಪ್ರಧಾನ ಪ್ರಬಂಧಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕೆಪಿಸಿಎಲ್, ನಂ.82, ಶಕ್ತಿಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001. ಮೊಬೈಲ್:9141608692,** ಇವರ ಕಚೇರಿಯಿಂದ ಪಡೆಯಬಹುದಾಗಿದೆ. ವೆಬ್‌ಸೈಟ್: **www.kpcl.karnataka.gov.in**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಉಪ ಮುಖ್ಯ ಮಾಹಿತಿ ಅಧಿಕಾರಿಯವರ ಕಛೇರಿ,
ಮಾಹಿತಿ ತಂತ್ರಜ್ಞಾನ ಇಲಾಖೆ, ಬಿಬಿಎಂಪಿ, ಅಧಿಕಾರಿ–ಐಟಿ,
2ನೇ ಮಹಡಿ, ಅನೆಕ್ಸ್–2 ಕಟ್ಟಡ, ಕೇಂದ್ರ ಕಛೇರಿ ಆವರಣ,
ಎನ್.ಆರ್. ಚೌಕ, ಬೆಂಗಳೂರು – 560002.
ಸಂಖ್ಯೆ:ಬಿಬಿಎಂಪಿ/ಉಮುಮಾಅ–ಐಟಿ/ಪಿಆರ್/34/2023–24(ಪಿ–1) ದಿನಾಂಕ: 30–01–2024

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಉಪ ಮುಖ್ಯ ಮಾಹಿತಿ ಅಧಿಕಾರಿ, ಬಿಬಿಎಂಪಿ ಐಟಿ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು **ವಿವಿಧ ಬಿಬಿಎಂಪಿ ಕಚೇರಿಗಳಿಗೆ 476 ಪ್ರಿಂಟರ್‌ಗಳನ್ನು** ಖರೀದಿಸಲು ಅರ್ಹ ಕಂಪನಿಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ. ಎಲ್ಲಾ ಆಸಕ್ತ ಬಿಡ್ಡುದಾರರು ತಮ್ಮ ತಾಂತ್ರಿಕ ಮತ್ತು ವಾಣಿಜ್ಯ ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ವಿದ್ಯುನ್ಮಾನವಾಗಿ ಸಲ್ಲಿಸಬೇಕು.

ಟೆಂಡರ್ ಉಲ್ಲೇಖ ಸಂಖ್ಯೆ: BBMP/DCIO-IT/PR/34/2023-24(P-1)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕೆಪಿಪಿಪಿ ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: 30.01.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಸ್ಪಷ್ಟೀಕರಣಗಳನ್ನು ಪಡೆಯಲು ಕೊನೆಯ ದಿನಾಂಕ: **06–02–2024, 15.00 ಗಂಟೆಯವರೆಗೆ.** 3) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **07–02–2024, 16.30 ಗಂಟೆಗೆ.** 4) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಪ್ಲಾಟ್‌ಫಾರ್ಮ್‌ನಲ್ಲಿ ಟೆಂಡರ್ ಅನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **12–02–2024, 17.00 ಗಂಟೆಗಳವರೆಗೆ.** 5) ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್ ಮತ್ತು ತಾಂತ್ರಿಕ ಮೌಲ್ಯಮಾಪನ): **13–02–2024, 11.00 ಗಂಟೆಗಳಿಗೆ.** 6) ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ವಾಣಿಜ್ಯ ಬಿಡ್ – ಸಾಧ್ಯವಾದಲ್ಲಿ): **15–02–2024, 11.00 ಗಂಟೆಗೆ.** 7) ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಿ: ಡಿಸಿಐಒ, ಬಿಬಿಎಂಪಿ, ಐಟಿ ವಿಭಾಗ, ದೂರವಾಣಿ: 9480688000, ಇ–ಮೇಲ್: dcio-it@bbmp.gov.in. 8) ಟೆಂಡರ್‌ಗಳನ್ನು ತೆರೆಯುವ ಸ್ಥಳ ಮತ್ತು ಸಂವಹನಕ್ಕಾಗಿ ವಿಳಾಸ: ಉಪ ಮುಖ್ಯ ಮಾಹಿತಿ ಅಧಿಕಾರಿ–ಐಟಿ ರವರ ಕಚೇರಿ, 2 ನೇ ಮಹಡಿ, ಅನೆಕ್ಸ್–2 ಕಟ್ಟಡ, ಎನ್.ಆರ್. ವೃತ್ತ, ಬೆಂಗಳೂರು – 560002. 9) ಇಎಂಡಿ ಮೊತ್ತ: **ರೂ. 5,00,000/–** (ರೂಪಾಯಿ ಐದು ಲಕ್ಷಗಳು ಮಾತ್ರ), ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಉಪ ಮುಖ್ಯ ಮಾಹಿತಿ ಅಧಿಕಾರಿ, ಬಿಬಿಎಂಪಿ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್
TeamLease® Putting India to Work
CIN: L74140KA2000PLC118395
ನೋಂದಾಯಿತ ಕಚೇರಿ: 315 ವರ್ಕ್ ಅವೆನ್ಯೂ ಕ್ಯಾಂಪಸ್, ಅಸೆಂಟ್ ಬಿಲ್ಡಿಂಗ್, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ.
E-MAIL: corporateaffairs@teamlease.com | WEBSITE: https://group.teamlease.com/

ಡಿಸೆಂಬರ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು 9 ತಿಂಗಳುಗಳಿಗೆ ಅಪರಿಶೋಧಿತ ಹಣಕಾಸು ಫಲಿತಾಂಶಗಳ ಹೇಳಿಕೆಯ ಸಾರಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕೆಗಳು ಕೋಟಿ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ		ಕ್ರೋಢೀಕೃತ	
	31.12.2023ಕ್ಕೆ ಕೊನೆಯಾದ 3 ತಿಂಗಳಿಗೆ	31.12.2022ಕ್ಕೆ ಕೊನೆಯಾದ 3 ತಿಂಗಳಿಗೆ	31.12.2023ಕ್ಕೆ ಕೊನೆಯಾದ 3 ತಿಂಗಳಿಗೆ	31.12.2022ಕ್ಕೆ ಕೊನೆಯಾದ 3 ತಿಂಗಳಿಗೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	2,236.19	1,773.23	2,455.37	2,018.25
ಸದರಿ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆಗೆ ಮುನ್ನ, ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	26.50	25.75	29.43	28.64
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ ಅಥವಾ ಅಸಾಧಾರಣ ಐಟಂಗಳ ನಂತರ)	29.13	25.95	31.12	29.03
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	29.15	26.00	31.06	29.08
ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	16.77	17.10	16.77	17.10
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)–ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ	760.38	661.42	790.53	676.11
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕೀಕರಣಗೊಂಡಿಲ್ಲ)				
(ಎ) ಮೂಲ (ರೂ.)	17.37	15.18	18.49	16.94
(ಬಿ) ಡೈಲ್ಯೂಟೆಡ್ (ರೂ.)	17.37	15.18	18.49	16.94

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 31ನೇ ಡಿಸೆಂಬರ್, 2023ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು 9 ತಿಂಗಳುಗಳಿಗೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 31ನೇ ಡಿಸೆಂಬರ್, 2023ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು 9 ತಿಂಗಳ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 30ನೇ ಜನವರಿ, 2024ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ
ಸಹಿ/–
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ದಿನಾಂಕ: 30ನೇ ಜನವರಿ, 2024
ಸ್ಥಳ: ಬೆಂಗಳೂರು



ಪ್ರೇಯಸಿಗಾಗಿ ನಿದ್ರೆಬಿಟ್ಟ ಗಂಡು!

ಕೊಳ್ಳೇಗಾಲ ಶರ್ಮ

'ನಿನಗಾಗಿ ಪ್ರಾಣವನ್ನಾದರೂ ತೆರುವೆ' ಎಂದು ಎಷ್ಟು ಪ್ರಿಯತಮರು ತಮ್ಮ ಪ್ರೇಯಸಿಗೆ ಮಾತು ಕೊಟ್ಟಿಲ್ಲ! ಆದರೆ ಅವರೆಲ್ಲರನ್ನೂ ಮೀರಿಸುವ ಒಂದು ಪ್ರಾಣಿ ಇದೆ. ಆಸ್ಟ್ರೇಲಿಯಾದಲ್ಲಿ ವಾಸಿಸುವ ಇಲಿಯಂತಹ ಒಂದು ಪ್ರಾಣಿಯ ಗಂಡು ಪ್ರೇಯಸಿಗಾಗಿ ನಿದ್ರೆಯನ್ನೂ ಬಿಡುತ್ತದಂತೆ. ಪ್ರಾಣವನ್ನೂ ತೆರುತ್ತದಂತೆ. ಹೀಗೆಂದು ಕರೆಂಟ್ ಬಯಾಲಜಿ ಪತ್ರಿಕೆಯಲ್ಲಿ ಆಸ್ಟ್ರೇಲಿಯಾದ ಲಾ ತ್ರೋಬೆ ವಿಶ್ವವಿದ್ಯಾಲಯದ ಪ್ರಾಣಿವಿಜ್ಞಾನಿ ಎರಿಕಾ ಜೈದಿ ವರದಿ ಮಾಡಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಕಾಂಗರೂ ವಿಶೇಷ ಎಂದು ಗೊತ್ತಷ್ಟೆ. ಕಾಂಗರೂವಿನಂತೆಯೇ ಕಾಲಕ್ಕೆ ಮುನ್ನವೇ ಮರಿಗಳನ್ನು ಹೆತ್ತು, ಚೀಲದಲ್ಲಿ ಸಾಕುವ ಹಲವು ಪ್ರಾಣಿಗಳಿವೆ. ಅವುಗಳಲ್ಲಿ 'ಆಂಟಿಕೈನಸ್' ಎನ್ನುವ ಒಂದು ಪುಟ್ಟ ಇಲಿಯಂತಹ ಪ್ರಾಣಿ ಇದೆ. ಇದು ವರ್ಷಕ್ಕೊಮ್ಮೆ ಮಾತ್ರ ಮರಿ ಹಾಕುತ್ತದೆ. ಆಂಟಿಕೈನಸ್ಸಿನ ಗಂಡುಗಳು ಬೆದೆಯ ಕಾಲದಲ್ಲಿ ಎಷ್ಟು ಹೆಣ್ಣುಗಳು ಸಾಧ್ಯವೋ ಅಷ್ಟೂ ಹೆಣ್ಣುಗಳ ಜೊತೆಗೆ ಕೂಡುತ್ತವೆ; ಥೇಟ್ ನಾಯಿಗಳ ಹಾಗೆ. ಆದರೆ ಈ ಉನ್ಮಾದದಲ್ಲಿ ಅವು ನಿದ್ರೆಯನ್ನೂ ಮರೆಯುತ್ತವಂತೆ. ಅಷ್ಟೇ ಅಲ್ಲ. ಒಮ್ಮೆ ಹೀಗೆ ಹೆಣ್ಣುಗಳ ಜೊತೆಗೆ ಕೂಡುತ್ತದಂತೆ. ಹಾಗಂತ ಅನಂತರ ಅದು ಸನ್ಯಾಸಿಯಾಗುವುದಿಲ್ಲ. ಸತ್ತೇ ಹೋಗುತ್ತದೆ ಎನ್ನುತ್ತಾರೆ, ಎರಿಕಾ ಜೈದಿ.

ಪ್ರಾಣಿಗಳಲ್ಲಿ ನಿದ್ರೆ ಕೆಡುವ ಅಭ್ಯಾಸ ಹೊಸತೇನಲ್ಲ. ಉದಾಹರಣೆಗೆ, ನಿದ್ರೆ ಮಾಡುವಾಗ ಸೊಂಡಿಲನ್ನು ಸುತ್ತಿಕೊಂಡು ಮಲಗಿದರೆ ಶತ್ರುಗಳಿಗೆ ಗೊತ್ತಾಗಿ ಬಿಡುತ್ತದೆ ಎಂದು ಆಫ್ರಿಕನ್ ಆನೆಗಳ ಮುಂದಾಳು ಹೆಣ್ಣು, ದಿನಕ್ಕೆ ಎರಡು ಗಂಟೆ ಮಾತ್ರ ನಿದ್ರೆ ಮಾಡುತ್ತದಂತೆ. ಇದನ್ನೂ ಮೀರಿಸುತ್ತವೆ ಉತ್ತರ ಅಮೆರಿಕದ ಸಮುದ್ರನಾಯಿಗಳು ಅಥವಾ ಸೀಲ್‌ಗಳು. 'ಎಲಿಫೆಂಟ್ ಸೀಲ್' ಎನ್ನುವ ಆನೆಯಂತಹದೇ ದೊಡ್ಡ ಪ್ರಾಣಿ, ನೀರಿನೊಳಗೆ ಮುಳುಗಿ

ಆಂಟಿಕೈನಸ್ಸಿನ ಪ್ರಭೇದ : ಸ್ಟೀಫನ್ ಮೊಹನಿ

ನಿದ್ರಿಸುತ್ತದೆ. ಏಳೆಂಟು ತಿಂಗಳವರೆಗೆ ದಿನಕ್ಕೆ ಕೇವಲ ಎರಡೇ ಗಂಟೆಗಳ ಕಾಲ ಇವು ನಿದ್ರೆ ಮಾಡುತ್ತವಂತೆ. 'ಫ್ರಿಗೇಟು' ಎಂಬ ಸಾಗರದ ಹಕ್ಕಿಗಳು ವಲಸೆ ಹೋಗುವಾಗ ಆಕಾಶದಲ್ಲಿ ಹಾರುವಾಗಲೇ ನಿದ್ರಿಸುತ್ತವೆ, ದಿನಕ್ಕೆ ಮುಕ್ಕಾಲು ಗಂಟೆಯಷ್ಟು ಮಾತ್ರ. ಇದು ತಮ್ಮ ರಕ್ಷಣೆಗೆ ಅಥವಾ ಅವಶ್ಯಕತೆಯಿಂದ ಎನ್ನಬಹುದು. ಆದರೆ ಆಂಟಿಕೈನಸ್ ಇಲಿಯ ಕಥೆ ವಿಚಿತ್ರ. ಈ ಗಂಡು ನಿದ್ರೆಗೆಡುವುದು ಕೇವಲ ಹೆಣ್ಣಿಗಾಗಿ, ಹೆಣ್ಣಿಗಾಗಿ ಮಾತ್ರ ಎನ್ನುತ್ತಾರೆ, ಜೈದಿ.

ಆಂಟಿಕೈನಸಿನ ಕಥೆ ಬಯಲಾಗಿದ್ದು ಕೂಡ ವಿಚಿತ್ರವೇ. ಈ ಹಿಂದೆ ಹಕ್ಕಿಗಳಲ್ಲಿ ನಡೆದ ಅಧ್ಯಯನಗಳು ಉತ್ತರಧ್ರುವದ ಕಡಲ ತೀರದಲ್ಲಿ ವಾಸಿಸುವ ಕೆಲವು ಹಕ್ಕಿಗಳು ಬೆದೆ ಬಂದ ದಿನಗಳಲ್ಲಿ ದಿನದ ಬಹುತೇಕ ಕಾಲ ಚುರುಕಾಗಿರುತ್ತವೆ. ವರ್ಷಕ್ಕೊಮ್ಮೆ ಕೇವಲ ಮೂರು ವಾರಗಳಲ್ಲಿ, ಬೆದೆ ಬಂದಾಗ, ಬಿಸಿಲು ಇದ್ದಾಗ ಮಾತ್ರ ಸಂತಾನೋತ್ಪತ್ತಿ ಮಾಡುವುದು ಸಾಧ್ಯವಾಗಿದ್ದರಿಂದ ಹೀಗೆ ಚುರುಕಾಗಿರುವುದು ಲಾಭಕರ ಎನ್ನುತ್ತಾರೆ ವಿಜ್ಞಾನಿಗಳು. ನಿದ್ರೆಗೆಟ್ಟ ಹಕ್ಕಿಗಳು ಹೆಚ್ಚು ಮರಿ ಹಾಕುವುದನ್ನೂ ಗಮನಿಸಲಾಗಿತ್ತು. ಇದು ಕೇವಲ ಹಕ್ಕಿಗಳಲ್ಲಿ ಮಾತ್ರವೋ ಅಥವಾ ಬೇರೆ ಪ್ರಾಣಿಗಳಲ್ಲಿಯೂ ಹೀಗೆ ಸಂತಾನಕ್ಕಾಗಿ ನಿದ್ರೆಗೆಡುವ ಅಭ್ಯಾಸ ಇದೆಯೋ ಎನ್ನುವ ಕುತೂಹಲದಿಂದ ಎರಿಕಾ ಜೈದಿ ಆಂಟಿಕೈನಸ್ ಇಲಿಯನ್ನು ಅಧ್ಯಯನ ಮಾಡಿದ್ದಾರೆ.

ಆಂಟಿಕೈನಸನ್ನು ಜೈದಿ ಆಯ್ದುಕೊಳ್ಳುವುದಕ್ಕೆ ಕಾರಣವಿತ್ತು. ಈ ಪ್ರಾಣಿ ಇಡೀ ಜೀವಮಾನದಲ್ಲಿ ಒಮ್ಮೆ ಮಾತ್ರ ಹೆಣ್ಣಿನ ಜೊತೆಗೆ ಬೆರೆಯುತ್ತದೆ. 'ಬಿಟ್ಟರೆ ಕೆಟ್ಟ' ಎನ್ನುವ ಅವಕಾಶ ಇದು. ಇದನ್ನು ಸದುಪಯೋಗ ಪಡಿಸಿಕೊಳ್ಳಲು ಗಂಡು-ಹೆಣ್ಣುಗಳು ನಿದ್ರೆ ಕೆಡುತ್ತಿರಬಹುದೇ ಎನ್ನುವ ತರ್ಕ – ಕುತರ್ಕ ಎಂದರೂ ಸರಿಯೇ – ಜೈದಿ ಅವರದಾಗಿತ್ತು. ಹೀಗೆ ಬದುಕಿನಲ್ಲಿ ಒಮ್ಮೆ ಮಾತ್ರ ಸಂಗಾತಿಯನ್ನು ಕೂಡುವ ಅಭ್ಯಾಸ ಮಳೆ ಬಿದ್ದ ನಂತರ ಹಾರಾಡುವ ಕೀಟಗಳಲ್ಲಿ, ಕೆಲವು ಮೀನುಗಳಲ್ಲಿ, ಜೇಡಗಳಲ್ಲಿ ಕಾಣಬರುತ್ತದೆ. ಆದರೆ ಇಲಿಗಳಂತಹ ಸಸ್ತನಿಗಳಲ್ಲಿ ಅಲ್ಲ. ಅಂತಹ ಒಂದೇ ಒಂದು ಪ್ರಾಣಿ ಈ 'ಆಂಟಿಕೈನಸ್'.

ಆಂಟಿಕೈನಸ್ ಹೆಣ್ಣು ವಸಂತಕಾಲದಲ್ಲಿ ಒಂದೇ ಒಂದು ಮರಿ ಹಾಕುತ್ತದೆ. ಮುಂದಿನ ವರ್ಷ ಮರಿ ಮಾಡುವುದಕ್ಕೂ ಬದುಕಿ ಉಳಿಯುತ್ತದೆ. ಆದರೆ ಗಂಡುಗಳು ಹಾಗಲ್ಲ. ಏನೋ ಬೇನೆ ಬಂದ ಹಾಗೆ ಎಲ್ಲ ಗಂಡುಗಳೂ ಬೆದೆಯ ಕಾಲ ಮುಗಿದ ನಂತರ ಒಂದೂ ಉಳಿಯದಂತೆ ಸಾವನ್ನಪ್ಪುತ್ತವೆ. ಉಳಿಯುವುದು, ಪ್ರೇಯಸಿ ಸಿಗದಿದ್ದ ಗಂಡುಗಳು ಮಾತ್ರ. ಹೀಗಾಗಿ ಒಂದು ಹೆಣ್ಣಿಗಾಗಿ ಎಲ್ಲ ಗಂಡುಗಳೂ ಹಾತೊರೆಯುವುದೂ ಹೊಡೆದಾಡುವುದೂ ಸಾಮಾನ್ಯ. ಇಂತಹ ಬದುಕಿನಲ್ಲಿ ನಿದ್ರೆಗೆ ಅವಕಾಶ ಎಲ್ಲಿ? ಆದ್ದರಿಂದ ಈ ಪ್ರಾಣಿಗಳು ಕೂಡ ಬಹುಶಃ ನಿದ್ರೆ ಕಡಿಮೆ ಮಾಡುತ್ತಿರಬೇಕು ಎಂಬುದು ಜೈದಿ ಅವರ ಊಹೆಯಾಗಿತ್ತು. ಇದು ಸರಿಯೋ ತಪ್ಪೋ ತಿಳಿಯಲು ಅವರು ಗಂಡು ಮತ್ತು ಹೆಣ್ಣು ಅಂಟಿಕೈನಸ್ಸುಗಳನ್ನು ಸೆರೆಯಲ್ಲಿಟ್ಟು ಹಾಗೂ ನೇರವಾಗಿ ಅವು ಇದ್ದ ನೆಲೆಯಲ್ಲಿಯೇ ಅಧ್ಯಯನ ಮಾಡಿದರು. ಸೆರೆಯಲ್ಲಿಟ್ಟ ಗಂಡು ಮತ್ತು ಹೆಣ್ಣುಗಳ ಚಟುವಟಿಕೆಯನ್ನು ಇಪ್ಪತ್ತನಾಲ್ಕು ಗಂಟೆಯೂ ದಾಖಲಿಸಿದರು. ಬೆದೆಯ ಕಾಲ ಬರುವುದಕ್ಕೂ ಮುನ್ನ, ಗಂಡು ಹಾಗೂ ಹೆಣ್ಣುಗಳ ಚಟುವಟಿಕೆಯಲ್ಲಿ ಹೆಚ್ಚಿನ ವ್ಯತ್ಯಾಸ ಇರಲಿಲ್ಲ. ಆದರೆ ಬೆದೆಯ ಕಾಲದಲ್ಲಿ ಗಂಡುಗಳು ಸಾಮಾನ್ಯಕ್ಕಿಂತಲೂ ಹೆಚ್ಚು ಚಟುವಟಿಕೆ ತೋರಿದುವು. ಕೆಲವು ಗಂಡುಗಳಂತೂ, ಸಾಮಾನ್ಯಕ್ಕಿಂತ ಒಂದೂವರೆ ಪಟ್ಟು ದೀರ್ಘಾವಧಿಗೆ ಚಟುವಟಿಕೆಯಿಂದ ಇದ್ದವು. ಚಟುವಟಿಕೆ ಹೆಚ್ಚಾಗಿ ನಿದ್ರೆ ಕಡಿಮೆ ಮಾಡಿದುವೋ ಎನ್ನುವುದನ್ನೂ ಇವರು ಪರಿಶೀಲಿಸಿದ್ದಾರೆ. ಗಂಡುಗಳ ಮಿದುಳಿಗೆ ಸೆನ್ಸರುಗಳನ್ನು ಹಚ್ಚಿ, ಅವುಗಳ ಮಿದುಳಿನ ಚಟುವಟಿಕೆಯನ್ನು ದಾಖಲಿಸಿದ್ದಾರೆ. ಬೆದೆಯ ಕಾಲದಲ್ಲಿ ಗಾಢ ನಿದ್ರೆಯನ್ನು ಸೂಚಿಸುವ ಮಿದುಳಿನ ಚಟುವಟಿಕೆಗಳು ಕೂಡ ಕಡಿಮೆ ಆಗಿದ್ದುವು. ಈ ರೀತಿಯ ಫಲಿತಾಂಶಗಳು ಆಂಟಿಕೈನಸ್ ಕುಲದ ಎರಡೂ ಪ್ರಭೇದದ ಜೀವಿಗಳಲ್ಲಿ ಕಂಡು ಬಂದಿವೆ. ಇವುಗಳಲ್ಲಿ ಒಂದು ಬಲು ನಿಧಾನವಾಗಿ ಚಲಿಸುವ ದಪ್ಪನೆಯ ಪ್ರಾಣಿ. ಮತ್ತೊಂದು ಚುರುಕಾದ ಇಲಿ. ಹಾಗಿದ್ದರೂ, ಎರಡೂ ಪ್ರಭೇದಗಳ ಗಂಡುಗಳಲ್ಲಿ ಒಂದೇ ತೆರನ ನಿದ್ರಾಹೀನತೆ ಕಂಡು ಬಂದಿದೆ ಎನ್ನುತ್ತಾರೆ, ಜೈದಿ. ನಿದ್ರೆಗೆಟ್ಟಾಗ ದೇಹದಲ್ಲಿ ಸಂಗ್ರಹವಾಗಿ ಆಕ್ಸಾಲಿಕ್ ಆಮ್ಲದ ಪ್ರಮಾಣವೂ ಗಂಡುಗಳಲ್ಲಿ ಹೆಚ್ಚಿರುತ್ತದೆಯಂತೆ. ನಿಧಾನಗತಿಯ ಇಲಿಯಲ್ಲಿಯೂ ಕೂಡ. ಹೀಗೆ ಎಲ್ಲ ಅಂಶಗಳೂ, ಈ ಗಂಡುಗಳು ತಮಗೆ ದೊರೆತ ಒಂದೇ ಅವಕಾಶವನ್ನು ಹೆಚ್ಚೆಚ್ಚು ಬಳಸಿಕೊಳ್ಳಲು ನಿದ್ರೆಗೆಡುತ್ತಿವೆ ಎನ್ನುವುದು ಜೈದಿ ತಂಡದ ತರ್ಕ.

❖

ಬಯೊ ಹೈಬ್ರಿಡ್ ರೋಬೊ ಸಿದ್ಧ

ನೇಸರ ಕಾಡನಕುಪ್ಪೆ

ನಾವೀಗಾಗಲೇ ಸಾಕಷ್ಟು ಕ್ಷೇತ್ರಗಳಲ್ಲಿ ರೋಬೊಗಳನ್ನು ಕಾಣಲು ಶುರು ಮಾಡಿದ್ದೇವೆ. ಕೈಗಾರಿಕಾ ಕ್ಷೇತ್ರದಿಂದ ಹಿಡಿದು, ಮನೆಬಳಕೆಯವರೆಗೂ ರೋಬೊಗಳು ತಮ್ಮ ಅಸ್ತಿತ್ವವನ್ನು ಈಗಾಗಲೇ ಸ್ಥಾಪಿಸಿವೆ. ಆದರೆ, ರೋಬೊಗಳ ಅತಿ ದೊಡ್ಡ ದೌರ್ಬಲ್ಯ ಎಂದರೆ ಅವು ಮಾನವನನ್ನು ಸಂಪೂರ್ಣವಾಗಿ ಹೋಲದೇ ಇರುವುದು. ನೋಡಲು ಕೃತಕವಾಗಿರುವುದು ಮಾತ್ರವೇ ಅಲ್ಲದೇ, ಮಾನವನಷ್ಟು ಸುಲಲಿತವಾದ ಚಲನೆ ಅವಕ್ಕೆ ಇಲ್ಲದೇ ಇರುವುದು ದೊಡ್ಡ ಕೊರತೆಯೇ ಸರಿ. ಆದರೆ, ಈ ಕೊರತೆಯನ್ನು ನೀಗಿಸುವಲ್ಲಿ ಅತಿ ದೊಡ್ಡ ಪ್ರಯತ್ನವೊಂದು ನಡೆದಿದೆ. ಮಾನವಜೀವಕೋಶಗಳನ್ನೇ ದತ್ತುಪಡೆದು, ಯಂತ್ರದೊಂದಿಗೆ ಬೆರೆಸಿದ 'ಹೈಬ್ರಿಡ್ ರೋಬೊ' ಅನ್ನು ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ.

ಪರಿಸರದಲ್ಲಿನ ಯಾವುದೇ ಜೀವಿಯು ಯಂತ್ರಕ್ಕಿಂತ ಹೆಚ್ಚು ಸ್ವಾಭಾವಿಕವಾಗಿ ಕಾರ್ಯನಿರ್ವಹಿಸಬಲ್ಲದು. ರೋಬೊ ಒಂದರ ಚಲನೆ, ಕಾರ್ಯನಿರ್ವಹಣೆ ಅದರ ರಚನೆಯಿಂದಲೇ ಹಲವು ಮಿತಿಗಳನ್ನು ಹೊಂದಿದೆ. ಅಂದರೆ, ಅದರ ದೇಹದ ಒಳಗಿರುವ ಲೋಹ ಅಥವಾ ಮಿಶ್ರಲೋಹದಿಂದ ಮಾಡಿರುವ ಅಸ್ಥಿಪಂಜರ. ಆ ಅಸ್ಥಿಪಂಜರವೇ ಸ್ನಾಯುವಿನಂತೆಯೂ ಕೆಲಸ ಮಾಡುವುದು ಅದರ ಚಲನೆಯ ಮಿತಿಗೆ ಮುಖ್ಯ ಕಾರಣವಾಗಿದೆ. ರೋಬೊಗಳ ಅಂದ ಚೆಂದವನ್ನು ಹೆಚ್ಚಿಸಲು ಕೃತಕ ಚರ್ಮ ಅಥವಾ ರಬ್ಬರ್ ಮಾದರಿಯ ವಸ್ತುಗಳಿಂದ ಒಂದು ರೂಪವನ್ನು ಕೊಡಬಹುದೇ ಹೊರತು, ಅದಕ್ಕೆ ಜೀವ ಇರುವುದಿಲ್ಲ. ಹಾಗಾಗಿ, ರೋಬೊನ ಬಾಹ್ಯ ನೋಟ ಕೃತಕವೂ, ಅದರ ರಚನೆಯು ಅಸ್ವಾಭಾವಿಕವಾಗಿಯೂ ಇರುತ್ತದೆ.

ಈ ಮಿತಿಯನ್ನು ಅರ್ಥ ಮಾಡಿಕೊಂಡಿರುವ ಜಪಾನ್‌ನ ಟೋಕಿಯೋ ವಿಶ್ವವಿದ್ಯಾಲಯದ ರೋಬೊಟಿಕ್ ವಿಜ್ಞಾನಿಗಳ ತಂಡವು ಮಾನವಸ್ನಾಯುವನ್ನು ಯಂತ್ರದೊಂದಿದೆ ಬೆರೆಸಿ ಹೊಸ ರೋಬೊ ಅಭಿವೃದ್ಧಿಪಡಿಸಿದ್ದಾರೆ. ಮೇಲೆ ಉಲ್ಲೇಖಿಸಿದ ಮಿತಿಗಳಿಂದ ಹೊರ ಬರುವುದು ಈ ಪ್ರಯತ್ನದಿಂದ ದೊಡ್ಡ ಮಟ್ಟದಲ್ಲಿ ಸಾಧ್ಯವಾಗಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ.

ಏನಿದು ಸಂಶೋಧನೆ?

ಹಿರಿಯ ವಿಜ್ಞಾನಿ ಶೋಜಿ ಟೆಕೂಚಿ ಅವರ ತಂಡದ ವಿಜ್ಞಾನಿಗಳು ಈ ಸಂಶೋಧನೆ ಮಾಡಿದ್ದಾರೆ. ಎರಡು ಕಾಲಿನಿಂದ ನಡೆಯಬಲ್ಲ ಶಕ್ತಿಯನ್ನು ಇದು ಹೊಂದಿದೆ. ಮಾನವದೇಹದಲ್ಲಿ ಕೇವಲ ಅಸ್ಥಿಪಂಜರವು ಮಾತ್ರ ದೇಹದ ಭಾರವನ್ನು ಹೊರುವುದಿಲ್ಲ. ಬದಲಿಗೆ, 'ಲಿಗಮೆಂಟ್' ಎನ್ನುವ ಗಟ್ಟಿಯಾದ ಸ್ನಾಯುಗಳು ಮೂಳೆಯಷ್ಟೇ ಸಶಕ್ತವಾಗಿ ದೇಹದ ಭಾರವನ್ನು ಹೊರುತ್ತವೆ. ಹಾಗಾಗಿ ಲಿಗಮೆಂಟ್ ಹರಿದುಹೋದಲ್ಲಿ (Ligament Tear) ವೈದ್ಯರು ಅದನ್ನು ಮೂಳೆ ಮುರಿಯುವುದಷ್ಟೇ ಸಮಾನವಾಗಿ ಪರಿಗಣಿಸಿ ಚಿಕಿತ್ಸೆಯನ್ನು ಕೊಡುತ್ತಾರೆ.

ಈ ಬಲಿಷ್ಠ ಸ್ನಾಯುಗಳನ್ನು ಕಸಿ ಮಾಡಿ, ರೋಬೊನ ಅಸ್ಥಿಪಂಜರಕ್ಕೆ ಶೋಜಿ ಅವರ ತಂಡ ಬೆಸೆದಿದೆ. ಇದನ್ನು ಪರಿಸರ ಅನುಕರಣೆ (Bio Mimicry) ಎಂದು ವಿಜ್ಞಾನಿಗಳು ವ್ಯಾಖ್ಯಾನಿಸಿದ್ದಾರೆ. ಮಾನವದೇಹದ ರಚನೆ ಹಾಗೂ ಚಲನೆಯನ್ನೇ ಪರಿಪೂರ್ಣವಾಗಿ ಅನುಕರಿಸುವ ಕ್ರಮವಿದು. ದೇಹದ ಕೀಲುಗಳು ಮೂಳೆಯಿಂದಲೇ ಮಾಡಲ್ಪಟ್ಟಿದ್ದರೂ, ಅದರ ಚಲನೆಗೆ ಶಕ್ತಿ ಹಾಗೂ ಸ್ಥಿರತೆಯನ್ನು ನೀಡುವುದು ಸ್ನಾಯುಗಳು. ಇದನ್ನೇ ಇಲ್ಲಿ ಅನುಕರಣೆ ಮಾಡಲಾಗಿದೆ. ರೋಬೊನಲ್ಲಿ ಅಸ್ಥಿಪಂಜರಕ್ಕೆ ಲೋಹದ ಬದಲಾಗಿದೆ ಗಟ್ಟಿಯಾದ ರಬ್ಬರ್‌ಗಳನ್ನು ಬಳಸಿದ್ದಾರೆ. ಇದರಿಂದ ರೋಬೊನ ಅಸ್ಥಿಪಂಜರಕ್ಕೆ ಬಾಗುವಿಕೆಯ ಗುಣ ಸಿಕ್ಕಿದೆ. ಆದರೆ, ಸ್ನಾಯುಗಳು ಮಾತ್ರ ನೈಸರ್ಗಿಕವಾದವು. ಈ ಸ್ನಾಯುಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡಿದಾಗ ಅವು ಪೂರಕವಾಗಿ ಪ್ರತಿಕ್ರಿಯಿಸಿ ಚಲನೆಯನ್ನು ತೋರಿಸಿವೆ. ಇದನ್ನೇ ಅಭಿವೃದ್ಧಿಪಡಿಸಿರುವ ವಿಜ್ಞಾನಿಗಳು ರೋಬೊನ ಓಡಾಟ, ಕೈ, ಇತ್ಯಾದಿ ಕೀಲುಗಳ ವಿವಿಧ ರೀತಿಯ ಬಳಕೆಯನ್ನು ನೀಡಿದ್ದು, ಹೆಚ್ಚು ಸ್ವಾಭಾವಿಕವಾಗಿಯೂ ಸಮರ್ಥವಾಗಿಯೂ ಕಾರ್ಯನಿರ್ವಹಿಸುವಂತೆ ಮಾಡಿದ್ದಾರೆ.

'ನಿಜವಾದ ಸ್ನಾಯುವನ್ನೇ ಬಳಸಿದರೆ, ಅದು ಜೀವಂತವಾಗಿ ಇರುವಂತೆ ನೋಡಿಕೊಳ್ಳಬೇಕಾದ ಅಗತ್ಯ ಇರುತ್ತದೆ. ಅದಕ್ಕಾಗಿ ಕೃತಕವಾಗಿ ರಕ್ತದಂತೆ ಕಾರ್ಯನಿರ್ವಹಿಸುವ ದ್ರವಗಳು, ಜೀವಪೋಷಣೆಯ ವಿವಿಧ ರಾಸಾಯನಿಕಗಳನ್ನು ಸ್ನಾಯುಗಳ ಮೂಲಕ ಚಲಿಸುವಂತೆ ಮಾಡಿದ್ದಾರೆ. ನರಮಂಡಲದ ಅಗತ್ಯ ಇಲ್ಲಿ ಅತ್ಯಗತ್ಯ. ಈಗಾಗಲೇ ಲಭ್ಯವಿರುವ ರೋಬೊ ಕೃತಕ ನರಮಂಡಲವನ್ನೇ ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ. ಈ ಬದಲಾವಣೆಗಳ ಒಟ್ಟಾರೆ ಫಲಿತಾಂಶ ಧನಾತ್ಮಕವಾಗಿ ಬಂದಿದೆ. ಮನುಷ್ಯನ ಕೀಲುಗಳಂತೆಯೇ ಎಲ್ಲ ದಿಕ್ಕುಗಳಲ್ಲಿ ಸಂಚರಿಸಬಲ್ಲ, ಕಡಿಮೆ ಯಾಂತ್ರಿಕ ಸದ್ದುಗಳನ್ನು ಮೂಡಿಸಬಲ್ಲ ರೀತಿಯಲ್ಲಿ ಈ ರೋಬೊ ಕಾರ್ಯನಿರ್ವಹಿಸಿದೆ' ಎಂದು ವಿಜ್ಞಾನಿ ಶೋಜಿ ಟೆಕೂಚಿ ಹೇಳಿದ್ದಾರೆ.

ರೋಬೊಗಳು ಮಾನವವನ್ನು ಕೇವಲ ನೋಟದಲ್ಲಿ ಮಾತ್ರ ಹೋಲುವಂತೆ ಮಾಡಿದರೆ ಸಾಲದು. ಅವುಗಳ ಕಾರ್ಯನಿರ್ವಹಣೆಯು ಆಂತರಿಕವಾಗಿ ಮಾನವನಂತೆಯೇ ಇರಬೇಕು. ಆಗ ಮಾತ್ರ ಮಾನವಸಮಾಜ ರೋಬೊಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದು ಸಾಧ್ಯವಾಗುತ್ತದೆ. ನಮ್ಮ ಈ ಪ್ರಯತ್ನವು ರೋಬೊಗಳನ್ನು ಮಾನವನ ಸಮುದಾಯ ಜೀವನಕ್ಕೆ ಹತ್ತಿರಕ್ಕೆ ತರಲು ಪುಷ್ಟಿ ನೀಡಿದೆ ಎಂದು ನಾವು ನಂಬಿದ್ದೇವೆ ಎಂದು ಶೋಜಿ ವ್ಯಾಖ್ಯಾನಿಸಿದ್ದಾರೆ.

ಎಲ್ಲೆಲ್ಲಿ ಬಳಕೆ?

ಈಗ ರೋಬೊಗಳ ಬಳಕೆ ಎಲ್ಲಿಲ್ಲಿ ಇದೆಯೊ ಅಲ್ಲೆಲ್ಲಾ ಈ ರೋಬೊನ ಬಳಕೆ ಆಗಬಹುದು. ಆದರೆ, ಮಾನವಸಮುದಾಯ ಹಾಗೂ ಜೀವನದಲ್ಲಿ ಈ ರೋಬೊ ಹೆಚ್ಚು ಬಳಕೆಯಾಗಲಿದೆ ಎಂದು ವ್ಯಾಖ್ಯಾನಿಸಲಾಗಿದೆ. ಅಂದರೆ, ಸ್ನೇಹ, ಪ್ರೀತಿಯಂತಹ ಮಾನವಸಂಬಂಧಗಳ ನಿರ್ವಹಣೆ, ಮನೆಯೊಳಗೆ ಮಾನವನ ಕೆಲಸಗಳ ನಿರ್ವಹಣೆ, ಮಾನವನ ಮಿತಿ ಹೆಚ್ಚಿರುವ ಕೆಲಸಗಳಲ್ಲಿ ಬಳಕೆಗೆ ಈ ರೋಬೊ ಹೆಚ್ಚು ಬಳಕೆಯಾಗಲಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

25) ಮಾನವನ ಕಣ್ಣಿನ ನೀಳ ಭೇದ ನೋಟದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.

ಉತ್ತರ:–



ಮಾನವನ ಕಣ್ಣಿನ ನೀಳ ಭೇದನೋಟ

26) ಅಮೀಬಾ ಜೀವ ಪೋಷಣೆಯ ಕುರಿತು ಬರೆಯಿರಿ

ಉತ್ತರ:– ಅಮೀಬಾವು ತಾತ್ಕಾಲಿಕ ಬೆರಳಿನಂತಹ ಜೀವಕೋಶದ ಮೇಲ್ಮೈ ಹೊರಚಾಚಿಕೆಗಳನ್ನು ಬಳಸಿ ಆಹಾರವನ್ನು ಒಳತೆಗೆದುಕೊಳ್ಳುತ್ತದೆ. ಈ ರಚನೆಗಳು ಆಹಾರ ಕಣಗಳನ್ನು ಆವರಿಸಿ ಬೆಸೆದು ಆಹಾರ ರಸದಾನಿಯನ್ನು ಉಂಟುಮಾಡುತ್ತದೆ. ಆಹಾರ ರಸದಾನಿಯೊಳಗೆ ಸಂಕೀರ್ಣ ಆಹಾರ ಪದಾರ್ಥಗಳು ವಿಭಜನೆಗೊಂಡು ಸರಳ ಆಹಾರ ಪದಾರ್ಥಗಳಾಗುತ್ತವೆ. ನಂತರ ಅವು ಕೋಶದ್ರವ್ಯಕ್ಕೆ ವಿಸರಣೆಗೊಳ್ಳುತ್ತವೆ. ಜೀರ್ಣವಾಗದೇ ಉಳಿದ ಪದಾರ್ಥಗಳು ಜೀವಕೋಶದ ಮೇಲ್ಮೈಗೆ ಚಲಿಸಿ ಹೊರಹಾಕಲ್ಪಡುತ್ತದೆ.



27) ಇವುಗಳಿಗೆ ಕಾರಣ ಕೊಡಿ

1) ಆಹಾರ ಸರಪಣಿಯಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತದೆ.

2) ಪರಿಸರ ವ್ಯವಸ್ಥೆಯಲ್ಲಿ ವಿಘಟಕಗಳ ಪಾತ್ರ ಪ್ರಮುಖವಾಗಿದೆ.

ಉತ್ತರ:– (1) ಪ್ರತಿ ಹಂತದಲ್ಲೂ ವ್ಯಯವಾಗುವ ಶಕ್ತಿಯು ಅತ್ಯಧಿಕವಾಗಿರುವುದರಿಂದ ನಾಲ್ಕು ಪೋಷಣಾಸ್ತರಗಳ ನಂತರ ಕನಿಷ್ಠ ಪ್ರಮಾಣದ ಶಕ್ತಿಯ ಬಳಕೆಗೆ ಉಳಿಯುತ್ತದೆ.

2) ವಿಘಟಕಗಳು ಸತ್ತ ಜೀವಿಯ ಅವಶೇಷಗಳು ಮತ್ತು ತ್ಯಾಜ್ಯಗಳನ್ನು ವಿಘಟಿಸುತ್ತದೆ. ಸಂಕೀರ್ಣ ಸಾವಯವ ಪದಾರ್ಥಗಳನ್ನು ಸರಳ ನಿರವಯವ ಪದಾರ್ಥಗಳನ್ನಾಗಿ ವಿಘಟಿಸಿ ಮಣ್ಣಿಗೆ ಸೇರಿಸುತ್ತವೆ.

28) ಪಳೆಯುಳಿಕೆ ಇಂಧನವನ್ನು ಉರಿಸಿದಾಗ ಬಿಡುಗಡೆಯಾಗುವ ವಿಷಕಾರಿ ಅನಿಲಗಳು ಯಾವುವು?

ಉತ್ತರ:– ಸಲ್ಫರ್ ಆಕ್ಸೈಡ್, ನೈಟ್ರೋಜನ್ ಆಕ್ಸೈಡ್‌ಗಳು, ಕಾರ್ಬನ್ ಡೈ ಆಕ್ಸೈಡ್‌ಗಳು, ಕಾರ್ಬನ್ ಮೊನಾಕ್ಸೈಡ್‌ಗಳು

29) ಭೌತ ಮತ್ತು ರಾಸಾಯನಿಕ ಗುಣಗಳ ಆಧಾರದ ಮೇಲೆ ಎಥನಾಲ್ ಮತ್ತು ಎಥನೋಯಿಕ್ ಆಮ್ಲಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ

ಉತ್ತರ

ಎಥನಾಲ್	ಎಥನೋಯಿಕ್ ಆಮ್ಲ
ಭೌತ ಗುಣ	
* ಕೊಠಡಿ ಉಷ್ಣತೆಯಲ್ಲಿ ದ್ರವರೂಪದಲ್ಲಿರುತ್ತದೆ. ಮತ್ತು ಸುವಾಸನೆಯಿಂದ ಕೂಡಿರುತ್ತದೆ.	ಇದು ಕೂಡಾ ಕೊಠಡಿಯ ಉಷ್ಣತೆಯಲ್ಲಿ ದ್ರವರೂಪದಲ್ಲಿದ್ದು ಘಾಟುವಾಸನೆಯಿಂದ ಕೂಡಿರುತ್ತದೆ.
ಇದು ಉತ್ತಮ ದ್ರಾವಕ	ಇದನ್ನು ಉತ್ತಮ ಸಂಗ್ರಾಹಕವಾಗಿ ಬಳಸುವರು.
ರಾಸಾಯನಿಕ ಗುಣ	
ಎಥನಾಲ್ ಸೋಡಿಯಂ ನೊಂದಿಗೆ ವರ್ತಿಸಿ ಸೋಡಿಯಂ ಎಥಕ್ಸೈಡ್ ಉಂಟು ಮಾಡುತ್ತದೆ.	ಎಥನೋಯಿಕ್ ಆಮ್ಲವು ಸೋಡಿಯಂನೊಂದಿಗೆ ವರ್ತಿಸಿ ಸೋಡಿಯಂ ಎಥನೋಯೇಟ್ ಅನ್ನು ಉಂಟು ಮಾಡುತ್ತದೆ.
ಎಥನಾಲ್ ಕಾರ್ಬೋನೇಟ್ ಮತ್ತು ಹೈಡ್ರೋಜನ್ ಕಾರ್ಬೋನೇಟ್‌ಗಳೊಂದಿಗೆ ವರ್ತಿಸುವುದಿಲ್ಲ	ಎಥನೋಯಿಕ್ ಆಮ್ಲವು ಕಾರ್ಬೋನೇಟ್ ಮತ್ತು ಹೈಡ್ರೋಜನ್ ಕಾರ್ಬೋನೇಟ್‌ಗಳೊಂದಿಗೆ ವರ್ತಿಸಿ ಕಾರ್ಬನ್ ಡೈ ಆಕ್ಸೈಡ್ ಅನ್ನು ಬಿಡುಗಡೆ ಮಾಡುತ್ತದೆ

30) ಮಾನವ ಹೃದಯದ ಭೇದ ನೋಟದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–

31) ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವುದಕ್ಕಿಂತಲೂ ಸಮಾಂತರವಾಗಿ ಜೋಡಿಸುವುದು ಅನುಕೂಲಕರ ಏಕೆ?

ಉತ್ತರ:– ಸರಣಿ ಕ್ರಮದಲ್ಲಿ ಜೋಡಿಸಿದ ಉಪಕರಣಗಳು ಕಾರ್ಯನಿರ್ವಹಿಸಲು ವ್ಯಾಪಕವಾದ ವಿಭಿನ್ನ ಮೌಲ್ಯದ ವಿದ್ಯುತ್ ಪ್ರವಾಹ ಅಗತ್ಯವಿದೆ.

* ಸರಣಿ ಕ್ರಮದಲ್ಲಿ ಜೋಡಿಸಿದಾಗ ಯಾವುದಾದರೂ ಘಟಕ ವಿಫಲವಾದರೆ ಮಂಡಲವು ಮುರಿದುಹೋಗುತ್ತದೆ. ಮತ್ತು ಉಳಿದ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ. ಆದರೆ ಸಮಾಂತರ ಮಂಡಲವು ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್ ಪ್ರವಾಹವನ್ನು ವಿಭಜಿಸುತ್ತದೆ.
* ನಿರ್ದಿಷ್ಟವಾಗಿ ಪ್ರತಿಯೊಂದು ವಿದ್ಯುತ್ ಉಪಕರಣವು ವಿಭಿನ್ನ ರೋಧವನ್ನು ಹೊಂದಿರುವಾಗ ಮತ್ತು ಸರಿಯಾಗಿ ಕಾರ್ಯ ನಿರ್ವಹಿಸಲು ವಿಭಿನ್ನ ಪ್ರವಾಹದ ಅಗತ್ಯವಿರುವ ಸಂದರ್ಭದಲ್ಲಿ ಸಮಾಂತರ ಜೋಡಣೆ ಸಹಕಾರಿಯಾಗಿವೆ.

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC PHYSICS

PHYSICS :

REVISION : MODEL QUESTIONS

II. Fill in the blanks by choosing appropriate answer given in the bracket for ALL the following questions
(maximum, decrease, thermonuclear fusion, generator, increase, cell)

16. A convenient way to increase the current sensitivity of a galvanometer is to __________ the number of turns of the coil.
Ans:- **increase**

17. The device used to convert mechanical energy into electrical energy is called a ________________
Ans:- **generator**

18. If two waves coming from two coherent sources superpose at a point in phase, then the intensity of light at that point is ____________ .
Ans:- **maximum**

19. The source of energy output in the interior of stars is ______________________.
Ans:- **thermonuclear fusion**

20. The width of depletion region of a pn-junction diode will____________ on increasing the forward bias voltage.
Ans:- **decrease**

PART – B

III. Answer any FIVE of the following questions:

21. Mention any two basic properties of electric charges.

Ans:- The basic properties of electric charges are as follows:
*Charges are additive in nature.
*Charge is a conserved quantity.
*Quantization of charge.

22. The amount of work done in bringing a point charge of 3 mC from infinity to a point P is 0.06 J. Find the electric potential at the point P.

Ans:-

Electric Potential at the Point P is 20 volts.

Given: Work Done (W) = 0.06 J (joules)
Charge (q) = 3 mC (milliCoulombs)
TO FIND- Electric Potential at the Point P
SOLUTION -The electric potential (V) at a point is defined as the electric potential energy (U) per unit charge (q) at that point. Mathematically, it's represented as:

$$V= q/U$$

First, let's convert the charge from milliCoulombs (mC) to Coulombs (C):

$$1 \text{ mC} = 0.001 \text{ C}$$

$$\text{So, } 3 \text{ mC} = 3 * 0.001 \text{ C} = 0.003 \text{ C}$$

Now, we can calculate the electric potential (V) at point P using the given work done and the charge:
$V= 0.003C /0.06J =20V$

Therefore, the electric potential at point P is 20 volts.

23. State and explain Gauss's law in magnetism.

Ans:- The net magnetic flux through any closed surface is always zero

Consider a Gaussian surface enclosed in a magnetic field. Since the total magnetic field flux entering the Gaussian surface is equal to total flux leaving, total flux through the Gaussian surface is always zero.

24. Mention any two factors on which self inductance of a long solenoid depends.

Ans:- self inductance of a Coil depends.
1.Number of turns per unit length of the coil
2. Permaebility of the medium inside the coil

25. Briefly explain the construction of a transformer.

Ans:- A transformer is a device which is used to transfer electrical energy from one circuit to another. Its working is based on the mutual induction of two coils placed in vicinity of each other.

A transformer is an electrical device which is used to couple one circuit to another. The transformer transforms the electrical energy from one circuit to another.

A transformer is constructed using two coils wound around a laminated steel core. All the components are electrically insulated from one another

The basic working principle of a transformer is mutual inductance between the coils of the transformer. In a transformer, we have a primary coil and a secondary coil. An input signal is fed to the primary coil. The change in flux in secondary coil due to flow of current in primary coil induces an e.m.f in secondary coil. The amount of e.m.f produced in the coils depends on the number of windings of the coils.
On the basis of windings, we have two types of transformers:

Step-down transformer: The primary coil has more windings than the secondary coil. It decreases or steps down the voltage.



Step-down transformer

Step-up transformer: The secondary coil has more windings than the primary coil. It increases or steps up the voltage.



Step-up transformer

Note: We use a laminated steel core in a transformer because it reduces losses due to eddy currents. Eddy currents are currents which are set up in a conductor due to changing magnetic fields around it. They are not useful and lead to loss of energy.

‘ನೌಕರರು ಸರ್ಕಾರದ ಗುಲಾಮರಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರ್ವಜನಿಕ ಸೇವೆಯಲ್ಲಿರುವ ನೌಕರರು ಮತ್ತು ಖಾಸಗಿ ವಲಯಗಳ ನೌಕರರ ವಿರುದ್ಧದ ಆರೋಪಗಳ ಬಗ್ಗೆ ವಿಚಾರಣೆ ನಡೆಸುವಾಗ ಆಯಾ ಇಲಾಖೆ ಮತ್ತು ಸಂಸ್ಥೆಗಳು ಪಾರದರ್ಶಕ ಮತ್ತು ಮಾನವೀಯ ನಡೆಯನ್ನು ಹೊಂದಿರಬೇಕು. ನೌಕರರು ಸರ್ಕಾರಗಳ ಗುಲಾಮರಲ್ಲ. ಅಷ್ಟಕ್ಕೂ ನಮ್ಮ ವ್ಯವಸ್ಥೆ ಈಸ್ಟ್ ಇಂಡಿಯಾ ಕಂಪನಿಯೂ ಅಲ್ಲ’ ಎಂದು ಹೈಕೋರ್ಟ್, ಲೋಕಾಯುಕ್ತ ಮತ್ತು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

‘ಖಾತೆ ಬದಲಾವಣೆಗೆ ₹500 ಲಂಚ ಪಡೆದ ಆರೋಪದಡಿ ನನ್ನನ್ನು ಪಿಡಿಒ ಸ್ಥಾನದಿಂದ ತೆಗೆದುಹಾಕಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆದೇಶವನ್ನು ರದ್ದುಪಡಿಸಬೇಕು’ ಎಂದು ಕೋರಿ ಪಿ.ವಿ. ರುದ್ರಪ್ಪ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ಜಿ.ಬಸವರಾಜ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ಮಾನ್ಯ ಮಾಡಿದೆ.

ಸರ್ಕಾರದ ಆದೇಶವನ್ನು ರದ್ದುಪಡಿಸಿರುವ ನ್ಯಾಯಪೀಠ, ಪಿ.ವಿ.ರುದ್ರಪ್ಪ ಅವರಿಗೆ ಕಾನೂನು ಪ್ರಕಾರ ಅವರ ಸೇವಾ ನಿವೃತ್ತಿಯ ತನಕ ಸಲ್ಲಬೇಕಾದ ಸಂಬಳ, ನಂತರದ ಪಿಂಚಣಿ ಸೇರಿದಂತೆ ಕಾನೂನುಬದ್ಧವಾದ ಎಲ್ಲ ಸೌಲಭ್ಯಗಳನ್ನೂ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಆದೇಶಿಸಿದೆ.

ವಿಚಾರಣೆ ವೇಳೆ ಲೋಕಾಯುಕ್ತ ಮತ್ತು ಸರ್ಕಾರದ ಪರ ವಕೀಲರ ವಾದವನ್ನು ಸಾರಾಸಗಟಾಗಿ ತಳ್ಳಿ ಹಾಕಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ‘ಲೋಕಾಯುಕ್ತ ಪೊಲೀಸರು ದೋಷಾರೋಪ ಹೊರಿಸುವ ಮುನ್ನ ಕೂಲಂಕಷವಾಗಿ ತನಿಖೆ ನಡೆಸಬೇಕಿತ್ತು. ಆದರೆ, ಇವರೆಲ್ಲಾ ಸತ್ಯಮೇವ ಜಯತೇ (ಸತ್ಯವೊಂದೇ ಸದಾ ಗೆಲ್ಲುತ್ತದೆ) ಎಂಬ ಮುಂಡಕ ಉಪನಿಷತ್ತಿನ ವಾಕ್ಯವನ್ನೇ ಮರೆತಂತಿದೆ. ರಾಷ್ಟ್ರೀಯ ಲಾಂಛನದ ತಳಭಾಗದಲ್ಲಿ ದೇವನಾಗರಿ ಲಿಪಿಯಲ್ಲಿ ಸಂವಿಧಾನದ ಮುಖಪುಟದಲ್ಲಿಯೇ ಇದನ್ನು ಎದ್ದು ಕಾಣುವಂತೆ ಮುದ್ರಿಸಲಾಗಿದೆ. ಒಳಗೆಲ್ಲೂ ಮುದ್ರಿಸಿಲ್ಲ ಎಂಬುದನ್ನು ನಮ್ಮ ಸರ್ಕಾರಗಳು ಮತ್ತು ಖಾಸಗಿ ಸಂಸ್ಥೆಗಳು ನೆನಪಿಡಬೇಕು’ ಎಂದು ಕಿಡಿ ಕಾರಿದರು.

‘ಅಪರಾಧಿಕ ನ್ಯಾಯಿಕ ವಿಚಾರಣೆ ಮತ್ತು ಇಲಾಖಾ ವಿಚಾರಣೆಗೆ ಅಜಗಜದಷ್ಟು ಅಂತರವಿದೆ. ಲಂಚ ಕೊಡುವ ಪ್ರಕರಣದಲ್ಲಿ ಹಾಥ್ ಮೆ ಪೈಸಾ, ದೇಖ್ ತಮಾಷಾ (ಕೈಯಲ್ಲಿ ಕಾಸಿಟ್ಟು ತಮಾಷೆ ನೋಡು) ಎಂಬಂತಿದ್ದರೆ ಮಾತ್ರವೇ ಅದನ್ನು ಪರಿಗಣಿಸಬಹುದು. ಆದರೆ, ಈ ಪ್ರಕರಣದಲ್ಲಿ ಫಿರ್ಯಾದುದಾರ ದ್ವೇಷದಿಂದ ದೂರು ನೀಡಿದ್ದಾರೆ ಎಂಬುದು ತಿಳಿದು ಬರುತ್ತದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಿ.ವಿ.ರುದ್ರಪ್ಪ ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ವೇಳೆ ಖಾತೆ ಬದಲಾವಣೆಗೆ ಲಂಚ ಪಡೆದ ಆರೋಪದಡಿ ಅವರ ವಿರುದ್ಧ ಲೋಕಾಯುಕ್ತಕ್ಕೆ ದೂರು ಸಲ್ಲಿಸಲಾಗಿತ್ತು. ಅರ್ಜಿದಾರರ ಪರ ರಂಗನಾಥ ಎಸ್.ಜೋಯಿಸ್ ಮತ್ತು ಸಿದ್ರಾಮಪ್ಪ ವೈ.ರೋಡಗಿ ವಾದ ಮಂಡಿಸಿದರು.

ಮಲ ಹೊರುವ ಪದ್ಧತಿ: ಒಂದರಲ್ಲಿ ಮಾತ್ರವೇ ಶಿಕ್ಷೆ– ಕೋರ್ಟ್‌ಗೆ ಮಾಹಿತಿ

ಬೆಂಗಳೂರು: ‘ರಾಜ್ಯದಲ್ಲಿ ಮಲ ಹೊರುವ ಪದ್ಧತಿಯನ್ನು ನಿಷೇಧಿಸಲಾಗಿದ್ದರೂ 1993ರಿಂದ ಇಲ್ಲಿಯವರೆಗೂ ಒಟ್ಟು 47 ಪ್ರಕರಣ ದಾಖಲಾಗಿದ್ದು, 92 ಮಂದಿ ಸಾವನ್ನಪ್ಪಿದ್ದಾರೆ. ವಿಪರ್ಯಾಸವೆಂದರೆ ಈವರೆಗೂ ಒಂದು ಪ್ರಕರಣದಲ್ಲಿ ಮಾತ್ರವೇ ಶಿಕ್ಷೆಯಾಗಿದೆ’ ಎಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಲಾಗಿದೆ.

ಈ ಸಂಬಂಧ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಹಾಗೂ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆಗೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಅನುಪಾಲನಾ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ‘ರಾಜ್ಯ ಸರ್ಕಾರ ಗಣನೀಯ ಪ್ರಮಾಣದಲ್ಲಿ ಕ್ರಮ ಕೈಗೊಂಡಿದೆ. ಆದರೆ, ಪರಿಹಾರದ ವಿಚಾರದಲ್ಲಿ ಇನ್ನಷ್ಟು ಕ್ರಮ ಕೈಗೊಳ್ಳಬೇಕಾಗಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವರದಿಗೆ ಆಕ್ಷೇಪಣೆ ಸಲ್ಲಿಸುವಂತೆ ಅರ್ಜಿದಾರರ ಪರ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಿತು.

ಸೂಲಿಬೆಲೆ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುರಿತು ಅವಹೇಳನಕಾರಿ ಭಾಷಣ ಮಾಡಿದ ಆರೋಪದಡಿ ನಮೋ ಬ್ರಿಗೇಡ್ ಮುಖಂಡ ಚಕ್ರವರ್ತಿ ಸೂಲಿಬೆಲೆ ವಿರುದ್ಧದ ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಚಕ್ರವರ್ತಿ ಸೂಲಿಬೆಲೆ ಸಲ್ಲಿಸಿದ್ದ ಅರ್ಜಿಯನ್ನು ಕಲಬುರಗಿ ಪೀಠದಲ್ಲಿನ ನ್ಯಾಯಮೂರ್ತಿ ರಾಜೇಂದ್ರ ಬದಾಮಿಕರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

‘ಇದು ರಾಜಕೀಯ ಕಾರಣಕ್ಕಾಗಿ ದಾಖಲಿಸಲಾಗಿರುವ ಎಫ್‌ಐಆರ್’ ಎಂದು ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ಅರುಣ್ ಶ್ಯಾಮ್ ವಾದಿಸಿದರು.

ರೆಡ್ಡಿ ಸೆಳೆಯಲು ಶಾ–ರಾಮುಲು ಚರ್ಚೆ

ನವದೆಹಲಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಪಕ್ಷದ ಮುಖಂಡ ಬಿ.ಶ್ರೀರಾಮುಲು ಭೇಟಿ ಮಾಡಿ ಚರ್ಚಿಸಿದರು.

ಕಲ್ಯಾಣರಾಜ್ಯ ಪ್ರಗತಿ ಪಕ್ಷದ ಅಧ್ಯಕ್ಷ ಹಾಗೂ ಶಾಸಕ ಜನಾರ್ದನ ರೆಡ್ಡಿ ಅವರು ಸದ್ಯದಲ್ಲೇ ಬಿಜೆಪಿಗೆ ವಾಪಸಾಗಲಿದ್ದಾರೆ ಎಂಬ ಚರ್ಚೆ ಪಕ್ಷದಲ್ಲಿ ಆರಂಭವಾಗಿದೆ. ‘ಬಿಜೆಪಿ ಸೇರ್ಪಡೆಗೆ ರೆಡ್ಡಿ ಉತ್ಸುಕರಾಗಿದ್ದಾರೆ. ಅವರನ್ನು ಶೀಘ್ರದಲ್ಲಿ ಪಕ್ಷಕ್ಕೆ ಸೇರಿಸಿಕೊಳ್ಳಬೇಕು. ಇದರಿಂದ ಬಳ್ಳಾರಿ, ಕೊಪ್ಪಳ ಮತ್ತಿತರ ಕ್ಷೇತ್ರಗಳಲ್ಲಿ ಪಕ್ಷಕ್ಕೆ ಅನುಕೂಲವಾಗಲಿದೆ’ ಎಂದು ಶ್ರೀರಾಮುಲು ಅವರು ವರಿಷ್ಠರ ಗಮನಕ್ಕೆ ತಂದರು. ಶ್ರೀರಾಮುಲು ಅವರು ಬಳ್ಳಾರಿ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯೂ ಆಗಿದ್ದಾರೆ. ‘ಪಕ್ಷ ಅವಕಾಶ ನೀಡಿದರೆ ಸ್ಪರ್ಧಿಸಲು ಸಿದ್ಧ’ ಎಂದೂ ಹೇಳಿದರು.

ಉದ್ಯೋಗ ವಾಣಿ

ನೂತನ ವಿದ್ಯಾಲಯ ಸಂಸ್ಥೆಯ ಕಾರ್ಯಾಲಯ, ಕಲಬುರಗಿ–585103

ಸಂ:EST/APPT/AP/GIA/DC/26/2023–2024 ದೂರವಾಣಿ ಸಂಖ್ಯೆ : 08472–223248 ದಿನಾಂಕ:10–11–2023

ಅಧಿಸೂಚನೆ

ಈ ಅಧಿಸೂಚನೆಯು ನ್ಯಾಯಾಲಯದ W.P. No. 201376/ 2023ನ ಅಂತಿಮ ತೀರ್ಪಿನ ಷರತ್ತಿಗೊಳಪಟ್ಟಿರುತ್ತದೆ.

ಅನುದಾನಿತ ಕಾಲೇಜಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಜಿ ಆಹ್ವಾನ (“NAAC” ಸಂಸ್ಥೆಯಿಂದ “A” Grade ಮಾನ್ಯತೆ ಪಡೆದಿದೆ)

ನೂತನ ವಿದ್ಯಾಲಯ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಖಾಸಗಿ ಅನುದಾನಿತ ನೂತನ ವಿದ್ಯಾಲಯ ಕಲಾ ಶ್ರೀ ಕನ್ಹಯ್ಯಾಲಾಲಮಾಲು ವಿಜ್ಞಾನ ಹಾಗು ಡಾ:ಪಾಂಡುರಂಗರಾವ್ ಪತ್ಕಿ ವಾಣಿಜ್ಯ ಮಹಾವಿದ್ಯಾಲಯ, ಕಲಬುರಗಿಯಲ್ಲಿ ಖಾಲಿಯಿರುವ ಅನುದಾನಿತ ವಿಭಾಗದ ವಿವಿಧ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಆಯುಕ್ತ ಕಛೇರಿ, ಬೆಂಗಳೂರು ಇವರ ಪತ್ರಗಳ (1) ಸಂಖ್ಯೆ:ಕಾಶಿಇ/36/ಹೈಕ/ರಾವೃಂ/ಖಾಹುಭ/ಗುವಿ/2018–20219, ನೇವಿ–2, ದಿನಾಂಕ 28–03–2023 ಹಾಗು (2) ಸಂಖ್ಯೆ:ಕಾಶಿಇ/112/ಹೈಕ/ಮೀಸಲಾತಿ/2016–2017/ನೇವಿ–2, ದಿನಾಂಕ 28–03–2023, ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ, ಇವರ ಪತ್ರ ಸಂಖ್ಯೆ: ಕಾಶಿಇ/ಪ್ರಾಕಕ/1309/ಖಾಹುಭ/03/2022–23/4417 ಮತ್ತು 4416 ದಿನಾಂಕ 31–03–2023 ಕ್ರಮವಾಗಿ ನಿರ್ದೇಶನದಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮಿಕ್ಕುಳಿದ ವೃಂದ

ಕ್ರ. ಸಂ.	ವಿಷಯ	ಹುದ್ದೆ ಹೆಸರು	ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ಸಂಖ್ಯೆ	ಮಿಕ್ಕುಳಿದ ವೃಂದದಲ್ಲಿ ಭರ್ತಿ ಮಾಡಬೇಕಾದ ಹುದ್ದೆಗಳಿಗೆ ನಿಗದಿಪಡಿಸಿರುವ ಮೀಸಲಾತಿ
1	ಇಂಗ್ಲೀಷ	ಸಹಾಯಕ ಪ್ರಾಧ್ಯಾಪಕರು	01	ಏಕವ್ಯಕ್ತಿ ವಿಭಾಗ (ಮೀಸಲಾತಿ ಅನ್ವಯಿಸುವುದಿಲ್ಲ)
2	ದೈಹಿಕ ಶಿಕ್ಷಣ ನಿರ್ದೇಶಕರು	ಸಹಾಯಕ ಪ್ರಾಧ್ಯಾಪಕರು	01	ಏಕವ್ಯಕ್ತಿ ವಿಭಾಗ (ಮೀಸಲಾತಿ ಅನ್ವಯಿಸುವುದಿಲ್ಲ)

ಕ.ಕ.ವೃಂದ

ಕ್ರ. ಸಂ.	ವಿಷಯ	ಹುದ್ದೆ ಹೆಸರು	ಕಲ್ಯಾಣ–ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಲ್ಲಿ ಖಾಲಿ ಯಿರುವಹುದ್ದೆಗಳ ಸಂಖ್ಯೆ	ಕಲ್ಯಾಣ–ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಲ್ಲಿ ಭರ್ತಿ ಮಾಡಬೇಕಾದ ಹುದ್ದೆಗಳಿಗೆ ನಿಗದಿಪಡಿಸಿರುವ ಮೀಸಲಾತಿ
1	ಕನ್ನಡ	ಸಹಾಯಕ ಪ್ರಾಧ್ಯಾಪಕರು	02	ಪ.ಜಾ. 01 , – ಸಾ.ಅ. 01
2	ರಾಜ್ಯಶಾಸ್ತ್ರ	ಸಹಾಯಕ ಪ್ರಾಧ್ಯಾಪಕರು	01	ಏಕವ್ಯಕ್ತಿ ವಿಭಾಗ (ಮೀಸಲಾತಿ ಅನ್ವಯಿಸುವುದಿಲ್ಲ)
3	ಇತಿಹಾಸ	ಸಹಾಯಕ ಪ್ರಾಧ್ಯಾಪಕರು	01	ಏಕವ್ಯಕ್ತಿ ವಿಭಾಗ (ಮೀಸಲಾತಿ ಅನ್ವಯಿಸುವುದಿಲ್ಲ)

ನಿಬಂಧನೆಗಳು :–

01) ಅರ್ಜಿಯನ್ನು ತಮ್ಮ ಪೂರ್ಣ ಸ್ವವಿವರ (ಭಾವಚಿತ್ರದೊಂದಿಗೆ) ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ದೃಢೀಕೃತ ಪ್ರತಿಗಳು ಹಾಗು ಮೀಸಲಾತಿಯ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರುವ ಜಾತಿ ಪ್ರಮಾಣಪತ್ರದ, 371(ಎ)ಪ್ರಮಾಣಪತ್ರ(ಅಗತ್ಯವಿದಲ್ಲಿ) ದೃಢೀಕೃತ ಪ್ರತಿಗಳೊಂದಿಗೆ ರೂ.3,000/– (ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ರೂ.2,000/–) ಬ್ಯಾಂಕ್ ಹುಂಡಿಯನ್ನು Secretary, Nutan Vidyalaya Society, Kalaburagi ಇವರಿಗೆ ಸಂದಾಯವಾಗುವಂತೆ ಪಡೆದು ಎಲ್ಲಾ ದಾಖಲೆಗಳನ್ನು ಕಾರ್ಯದರ್ಶಿ, ನೂತನ ವಿದ್ಯಾಲಯ ಸಂಸ್ಥೆ, ಎಸ್.ಬಿ.ಟೆಂಪಲ್ ರೋಡ, ಕಲಬುರಗಿ–585103 ಇಲ್ಲಿಗೆ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ 21 ದಿನಗಳ ಒಳಗಾಗಿ ರಿಜಿಸ್ಟರ್ ಅಥವಾ ಸ್ಪೀಡ್‌ಪೋಸ್ಟ್ ಮೂಲಕ ತಲುಪಿಸುವುದು. ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗಿದೆ ಎಂದು ಸ್ಪಷ್ಟವಾಗಿ ನಮೂದಿಸುವುದು.

02) ವಯೋಮಿತಿ : ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ಇವರಿಗೆ ಗರಿಷ್ಟ 45 ವರ್ಷ, ಇತರೆ ಹಿಂದುಳಿದ ವರ್ಗ ಗರಿಷ್ಟ 43 ವರ್ಷ ಮತ್ತು ಸಾಮಾನ್ಯ ವರ್ಗ ಗರಿಷ್ಟ 40 ವರ್ಷಗಳು.

03) ವಯೋಮಿತಿಯಲ್ಲಿ ಸಡಲಿಕೆ : ದಿನಾಂಕ 13–12–2018ರ, ಸಂಖ್ಯೆ :ED/87/UPC/2016ರ ಸರ್ಕಾರದ ಸೇರ್ಪಡೆ ಆದೇಶದನ್ವಯ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಅಭ್ಯರ್ಥಿಗಳಿಗೆ ಮೇಲಿನಂತೆ ವಯೋಮಿತಿಯನ್ನು ನಿಗದಿಪಡಿಸುವುದರೊಂದಿಗೆ ಅವರು ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ 5 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಯನ್ನು ಗರಿಷ್ಟ ವಯೋಮಿತಿಯಲ್ಲಿ ವಿನಾಯತಿಯನ್ನು ನೀಡಲಾಗುವುದು (ಸಂಬಂಧಿತ ಪ್ರಾದೇಶಿಕ ಜಂಟಿನಿರ್ದೇಶಕರು ಹಾಗು ಕಾಲೇಜು ಶಿಕ್ಷಣ ಆಯುಕ್ತರು ದೃಢೀಕರಿಸಿದ ಪ್ರಮಾಣ ಪತ್ರದ ಅವಶ್ಯಕತೆ ಇರುತ್ತದೆ).

03) ವಿದ್ಯಾರ್ಹತೆ : ಸಂಬಂಧಪಟ್ಟ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಟ 55% ಅಂಕ ಪಡೆದು ತೇರ್ಗಡೆಯಾಗಿರಬೇಕು (ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕನಿಷ್ಟ 50% ಅಂಕಗಳು) ಹಾಗು NET/SLET ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕೋರ್ಸ್‌ವರ್ಕ್ ಮೂಲಕ Ph.D ಪದವಿ ಪಡೆದ ಅಭ್ಯರ್ಥಿಗಳಿಗೆ NET/SLET ಪರೀಕ್ಷೆಯಿಂದ ವಿನಾಯತಿ ನೀಡಲಾಗುವುದು. ಒಂದು ವೇಳೆ ದಿನಾಂಕ 11–07–2019ರ ಪೂರ್ವದಲ್ಲಿ Ph.D ಪದವಿ ಪಡೆದಿದ್ದಲ್ಲಿ/Ph.Dಗೆ ನೊಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ 04–05–2016ರ UGC ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತುಗಳಿಗೆ ಒಳಪಟ್ಟಿರುತ್ತದೆ. ದಿನಾಂಕ 11–07–2019ರ ನಂತರದ ಯಾವುದೇ ನೇಮಕಾತಿಗೆ M.Phil ವಿದ್ಯಾರ್ಹತೆ ಪರಿಗಣಿಸುವುದಿಲ್ಲ.

04) ವೇತನ ಶ್ರೇಣಿ ಮತ್ತು ಇತರೆ ನಿಬಂಧನೆಗಳು : UGC ನಿಯಮಾವಳಿ ಮತ್ತು ಸರ್ಕಾರದ ಆದೇಶದನ್ವಯ ಇರುತ್ತದೆ.

05) ಈಗಾಗಲೇ ಸರ್ಕಾರಿ / ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ತಾವು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಿಂದ ನಿರಾಪೇಕ್ಷಣಾ ಪತ್ರವನ್ನು ಒದಗಿಸಬೇಕು.

06) ಸರ್ಕಾರ ಹಾಗು ಗಉಅ ನಿಯಮಾವಳಿಗಳ ಪ್ರಕಾರ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು.

07) ಅಪೂರ್ಣವಾದ ಹಾಗು ಕಡೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

08) ಆಯ್ಕೆ ಪ್ರಕ್ರಿಯೆಯನ್ನು ಯಾವುದೇ ಹಂತದಲ್ಲಾದರೂ ಅಥವಾ ಸದರಿ ಹುದ್ದೆಯ ಅನುಮತಿ ಮತ್ತು ಆಯ್ಕೆಯನ್ನು ರದ್ದುಪಡಿಸುವ ಅಧಿಕಾರ ಇಲಾಖೆ / ಸರ್ಕಾರವು ಹೊಂದಿರುತ್ತದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುವ ಹಾಗು ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಸದರಿ ಹುದ್ದೆಯ ನೇಮಕಾತಿ ಹಕ್ಕು ಎಂದು ಪರಿಗಣಿಸುವಂತಿಲ್ಲ.

09) ಯಾವುದೇ ಕಾರಣಕ್ಕೂ ನೀವು ಸಲ್ಲಿಸಿರುವ ಅರ್ಜಿ ಶುಲ್ಕವನ್ನು ಹಿಂತಿರುಗಿಸುವುದಿಲ್ಲ.

10) ಅರ್ಜಿದಾರರು ಒಂದು ನಕಲು ಪ್ರತಿಯನ್ನು ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ–585102 ಇವರಿಗೆ ಕಳುಹಿಸಬೇಕು.

11) ಸಂದರ್ಶನ ದಿನಾಂಕವನ್ನು ನಂತರ ತಿಳಿಸಲಾಗುವುದು ಹಾಗು ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ತರಹದ TA/DA ಕೊಡಲಾಗುವದಿಲ್ಲ.

12) ಹೆಚ್ಚಿನ ಮಾಹಿತಿ ಮತ್ತು ಅರ್ಜಿ ನಮೂನೆ ಡೌನ್‌ಲೋಡ್‌ಗಾಗಿ ಸಂಸ್ಥೆಯ ವೆಬ್‌ಸೈಟ ನೋಡಬಹುದು: www.nutanvidyalaya.org

ಸಹಿ /– ಕಾರ್ಯದರ್ಶಿ, ನೂತನ ವಿದ್ಯಾಲಯ ಸಂಸ್ಥೆ, ಕಲಬುರಗಿ.

DH DECCAN HERALD ಪ್ರಜಾವಾಣಿ

We are a leading newspaper and magazine publishing group in Karnataka. We invite applications for the following position in our organisation.

FIELD SALES EXECUTIVE

We are looking for young and dynamic candidates should be work in open for field sales and traveling anywhere. Fluency in English & Kannada.

Experience: Preferred minimum 0-6 year experience in to any sales field. Fresher can also apply

Minimum qualification: Any Degree

Salary will be commensurate with qualification and experience.

Job Location: Anywhere in Karnataka

Please send your application for the above position mentioning the job applied for (subject of the e-mail) and along with updated resume to:

The Manager-Recruitment
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

SANDUR RESIDENTIAL SCHOOL
Palace Road, Shivapur,
SANDUR-583119, Ballari (Dist.) Karnataka
Established in 1959 and Affiliated to CISCE, New Delhi

VACANCY
PRINCIPAL

If you are a dynamic, positive and progressive educationist, with special multi-tasking skills and relevant administrative experience, we invite you to join as a PRINCIPAL to this reputed ICSE school.

Required:

1. Academic qualification: Postgraduate academic degree in a teaching subject with B.Ed./M.Ed. from recognized University Grant Commission (UGC).
2. Minimum 5 years experience of supervision and administration as Principal in recognized school.
3. Strong yet sympathetic disciplinarian.
4. Experience in a residential school.

Salary package will be commensurate with experience & Government scales.

Interested candidates may mail their detailed resume and application to
hr@sandurschool.com
within a week or send it by mail to

The Secretary,
Shivapur Shikshana Samiti,
SRS Campus, Shivapur, Palace Road,
SANDUR – 583119, Ballari (Dist.), Karnataka

'ದ್ವಿ ರಾಷ್ಟ್ರ ಪರಿಹಾರ'ವೇ ಸೂಕ್ತ

ಮುಂಬೈ (ಪಿಟಿಐ): 'ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವೆ ದಶಕಗಳಿಂದ ನಡೆಯುತ್ತಿರುವ ಸಂಘರ್ಷ ಶಮನಕ್ಕೆ 'ದ್ವಿ- ರಾಷ್ಟ್ರ ಪರಿಹಾರ'ವೇ ಸೂಕ್ತ ಎಂಬ ನಿಲುವನ್ನು ಭಾರತ ಹೊಂದಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮಂಗಳವಾರ ಹೇಳಿದ್ದಾರೆ.

ಮುಂಬೈನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ವಿದ್ಯಾರ್ಥಿಗಳ ಜತೆಗಿನ ಸಂವಾದದಲ್ಲಿ ಮಾತನಾಡಿದ ಅವರು, ನಾಲ್ಕು ತಿಂಗಳ ಹಿಂದೆ 'ಇಸ್ರೇಲ್ ಮೇಲೆ ಹಮಾಸ್ ನಡೆಸಿದ ಮಾರಣಾಂತಿಕ ದಾಳಿಯನ್ನು ಭಯೋತ್ಪಾದಕ ದಾಳಿ ಎಂದು ಬಣ್ಣಿಸಿದರು.

ಭ್ರಷ್ಟಾಚಾರ ಪರಿಕಲ್ಪನಾ ಸೂಚ್ಯಂಕ ಭಾರತಕ್ಕೆ 93ನೇ ಸ್ಥಾನ

ನವದೆಹಲಿ (ಪಿಟಿಐ): 2023ರ ಭ್ರಷ್ಟಾಚಾರ ಪರಿಕಲ್ಪನಾ ಸೂಚ್ಯಂಕದಲ್ಲಿ ಜಗತ್ತಿನ 180 ದೇಶಗಳ ಪೈಕಿ ಭಾರತವು 93ನೇ ಸ್ಥಾನ ಪಡೆದಿದೆ ಎಂದು 'ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ ಸಂಸ್ಥೆ' ವರದಿ ತಿಳಿಸಿದೆ.

ಒಟ್ಟು 100 ಅಂಕಗಳ ಪೈಕಿ ಭಾರತವು ಒಟ್ಟಾರೆ 2023ರಲ್ಲಿ 40 ಅಂಕ ಪಡೆದಿದೆ. 2022ರಲ್ಲಿ ಭಾರತ 39 ಅಂಕಗಳೊಂದಿಗೆ 85ನೇ ರ‍್ಯಾಂಕ್ ಪಡೆದಿತ್ತು.

ತಜ್ಞರು ಮತ್ತು ಉದ್ಯಮಿದಾರರು ಕಂಡಂತೆ 180 ದೇಶಗಳ ಸಾರ್ವಜನಿಕ ವಲಯದ ಭ್ರಷ್ಟಾಚಾರದ ಗ್ರಹಿಕೆಯ ಮಟ್ಟವನ್ನು ಸೂಚ್ಯಂಕ ತಿಳಿಸುತ್ತದೆ. ಸೂಚ್ಯಂಕದಲ್ಲಿ ಸೊನ್ನೆಯಿಂದ 100 ರವರೆಗಿನ ಮಾಪನ ಬಳಸಲಾಗಿದ್ದು, ಸೊನ್ನೆ ಅಂಕ ಪಡೆದ ದೇಶ ಅತ್ಯಂತ ಭ್ರಷ್ಟ ಎಂದು, 100 ಅಂಕ ಪಡೆದ ರಾಷ್ಟ್ರ ಭ್ರಷ್ಟಾಚಾರರಹಿತವೆಂದು ಹೇಳಲಾಗುತ್ತದೆ.

ಭಾರತದ ಅಂಕಗಳಲ್ಲಿ ಸಣ್ಣ ಪ್ರಮಾಣದ ಏರಿಳಿತ ಕಂಡುಬಂದಿದ್ದು, ಮಹತ್ವದ ಬದಲಾವಣೆಯ ಬಗ್ಗೆ ಯಾವ ತೀರ್ಮಾನವನ್ನೂ ಬರಲಾಗುವುದಿಲ್ಲ. ಆದರೂ, ದೇಶದಲ್ಲಿ ಚುನಾವಣೆ ಸಮೀಪಿಸುತ್ತಿರುವ ಹೊತ್ತಿನಲ್ಲಿ ದೂರಸಂಪರ್ಕ ಮಸೂದೆಯಂಥ ಕ್ರಮಗಳ ಮೂಲಕ ಜನರ ಮೂಲಭೂತ ಹಕ್ಕುಗಳಿಗೆ ಬೆದರಿಕೆಯೊಡ್ಡಿ ಮುಕ್ತ ವಾತಾವರಣಕ್ಕೆ ಧಕ್ಕೆ ತರಲಾಗುತ್ತಿದೆ ಎಂದು ವರದಿ ಉಲ್ಲೇಖಿಸಿದೆ.

ದಕ್ಷಿಣ ಏಷ್ಯಾದ ರಾಷ್ಟ್ರಗಳ ಪೈಕಿ ಪಾಕಿಸ್ತಾನ ಮತ್ತು ಶ್ರೀಲಂಕಾ ತಮ್ಮ ರಾಜಕೀಯ ಅಸ್ಥಿರತೆ ಮತ್ತು ಸಾಲದ ಕಾರಣದಿಂದಾಗಿ ಕ್ರಮವಾಗಿ 133 ಮತ್ತು 115ನೇ ಸ್ಥಾನ ಪಡೆದಿವೆ. ಬಾಂಗ್ಲಾ ದೇಶ 149 ಸ್ಥಾನ ಪಡೆದಿದ್ದರೆ, 37 ಲಕ್ಷ ಭ್ರಷ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಿ ಸುದ್ದಿಯಾಗಿದ್ದ ಚೀನಾ 76ನೇ ಸ್ಥಾನ ಪಡೆದಿದೆ.

ಫೆ. 10ರಂದು ನಿತೀಶ್ ವಿಶ್ವಾಸಮತ ಕೋರಿಕೆ

ಪಟ್ನಾ (ಪಿಟಿಐ): ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಬಿಹಾರದ ನೂತನ ಎನ್‌ಡಿಎ ಸರ್ಕಾರ ಫೆ. 10ರಂದು ವಿಶ್ವಾಸಮತವನ್ನು ಕೋರಲಿದೆ. ಈ ಸಂಬಂಧ ಮಂಗಳವಾರ ಅಧಿಸೂಚನೆ ಹೊರಡಿಸಲಾಗಿದೆ.

ಬಜೆಟ್ ಅಧಿವೇಶನದ ಮೊದಲ ದಿನ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರ ಭಾಷಣದ ಹಿಂದೆಯೇ ಸರ್ಕಾರ ವಿಶ್ವಾಸಮತವನ್ನು ಕೋರಲಿದೆ ಎಂದು ತಿಳಿಸಲಾಗಿದೆ.

ಸಿ.ಎಂ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದ ನಿತೀಶ್ ಕುಮಾರ್, ಬಿಜೆಪಿ ಬೆಂಬಲದೊಂದಿಗೆ ಭಾನುವಾರ ಮತ್ತೆ ಸರ್ಕಾರ ರಚಿಸಿದ್ದು, 9ನೇ ಬಾರಿಗೆ ಸಿ.ಎಂ. ಆಗಿ ಪ್ರಮಾಣ ಸ್ವೀಕರಿಸಿದ್ದರು.

ಸಿ.ಎಂ ಸೊರೇನ್ ವಿಚಾರಣೆ ಇಂದು

ವಿಚಾರಣೆಗೆ ಸಿದ್ಧ ಎಂದು ಇ.ಡಿ.ಗೆ ಇ–ಮೇಲ್ • ರಾಂಚಿಯಲ್ಲಿ ಮೈತ್ರಿಪಕ್ಷಗಳ ಶಾಸಕರ ಜೊತೆ ಚರ್ಚೆ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣ ಕುರಿತಂತೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಶೋಧದ ಹಿನ್ನೆಲೆಯಲ್ಲಿ 'ಗೋಪ್ಯವಾಗಿ ಉಳಿದಿದ್ದ' ಜಾರ್ಖಂಡ್‌ನ ಮುಖ್ಯಮಂತ್ರಿ ಹೇಮಂತ್ ಸೊರೇನ್, ಮಂಗಳವಾರ ರಾಂಚಿಯಲ್ಲಿನ ತಮ್ಮ ಅಧಿಕೃತ ನಿವಾಸವನ್ನು ತಲುಪಿದ್ದು, ಆಡಳಿತರೂಢ ಮೈತ್ರಿಪಕ್ಷಗಳ ಶಾಸಕರ ಸಭೆ ನಡೆಸಿದರು.

ಅಲ್ಲದೆ, ಇ.ಡಿ ಅಧಿಕಾರಿಗಳಿಗೆ ಇ-ಮೇಲ್ ಕಳುಹಿಸಿದ್ದು, ಬುಧವಾರ (ಜ. 31) ಮಧ್ಯಾಹ್ನ 1 ಗಂಟೆಗೆ ತಮ್ಮ ಕಚೇರಿಯಲ್ಲೇ ವಿಚಾರಣೆ ಎದುರಿಸುವುದಾಗಿ ತಿಳಿಸಿದ್ದಾರೆ. ಸೋಮವಾರ ಮಧ್ಯರಾತ್ರಿ ಸೊರೇನ್ ಅವರು ಅಧಿಕೃತ ನಿವಾಸಕ್ಕೆ ಬಂದರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜಮೀನು ಅಕ್ರಮ ವಹಿವಾಟು ಹಗರಣ ಕುರಿತ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಇ.ಡಿ. ಅಧಿಕಾರಿಗಳು ಸೋಮವಾರ ಸೊರೇನ್ ಅವರ ದೆಹಲಿ ನಿವಾಸದಲ್ಲಿ ಶೋಧ ನಡೆಸಿದ್ದರು. ಆದರೆ, ಶೋಧ ನಡೆದ ಅವಧಿಯಲ್ಲಿ ಸೊರೇನ್ ಇರಲಿಲ್ಲ.

ನಾನು ಜನರ ಹೃದಯದಲ್ಲಿ ನೆಲೆಸಿದ್ದೇನೆ. ನಾವೆಲ್ಲರೂ ರಾಷ್ಟ್ರಪಿತನ ಚಿಂತನೆ, ಸಿದ್ಧಾಂತಗಳನ್ನು ಅನುಸರಿಸಲು ಬದ್ಧರಾಗಿದ್ದೇವೆ. (ಅನುಪಸ್ಥಿತಿ ಕುರಿತ ಪ್ರಶ್ನೆಗೆ)

ಹೇಮಂತ್ ಸೊರೇನ್
ಮುಖ್ಯಮಂತ್ರಿ, ಜಾರ್ಖಂಡ್

ಎಲ್ಲಿದ್ದಾರೆ ಎಂಬುದು ಗೋಪ್ಯವಾಗಿದ್ದು, ಸಾಕಷ್ಟು ಕುತೂಹಲ ಕೆರಳಿಸಿತ್ತು.

ಸೊರೇನ್ ಅವರು ಮಂಗಳವಾರ ಬೆಳಿಗ್ಗೆ ರಾಂಚಿಯ ನಿವಾಸದಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾ ನೇತೃತ್ವದ ಮೈತ್ರಿಪಕ್ಷಗಳ ಶಾಸಕರ ಸಭೆಯನ್ನು ನಡೆಸಿದರು. ಮುಖ್ಯಮಂತ್ರಿ ಅವರ ಪತ್ನಿ ಕಲ್ಪನಾ ಕೂಡ ಸಭೆಯಲ್ಲಿ ಪಾಲ್ಗೊಂಡಿದ್ದರು.

'ರಾಜಧಾನಿಯನ್ನು ಬಿಟ್ಟು ತೆರಳದಂತೆ ಎಲ್ಲ ಶಾಸಕರಿಗೂ ಸೂಚನೆ ನೀಡಲಾಗಿದೆ. ಪ್ರಸಕ್ತ ರಾಜಕೀಯ ಬೆಳವಣಿಗೆಗಳು ಹಾಗೂ 31ರಂದು ಮುಖ್ಯಮಂತ್ರಿಯವರು ಇ.ಡಿ. ವಿಚಾರಣೆಗೆ ಹಾಜರಾಗುವ ಹಿನ್ನೆಲೆಯಲ್ಲಿ ಒಟ್ಟು ಪರಿಸ್ಥಿತಿಯನ್ನು ಸಭೆಯಲ್ಲಿ ಚರ್ಚಿಸಲಾಯಿತು' ಎಂದು ಶಾಸಕರೊಬ್ಬರು ತಿಳಿಸಿದರು.

ಜಾರ್ಖಂಡ್ ಮುಕ್ತಿ ಮೋರ್ಚಾ, ಕಾಂಗ್ರೆಸ್ ಮತ್ತು ಆರ್‌ಜೆಡಿ ಮೈತ್ರಿಕೂಟದ ಭಾಗವಾಗಿವೆ. 'ಮುಂದಿನ ಕ್ರಮಗಳ ಕುರಿತು ಚರ್ಚಿಸಲಾಯಿತು' ಎಂದು ಜೆಎಂಎಂ ಪ್ರಧಾನ ಕಾರ್ಯದರ್ಶಿ, ವಕ್ತಾರ ವಿನೋದ್ ಕುಮಾರ್ ಪಾಂಡೆ ನಂತರ ತಿಳಿಸಿದರು.

ಭೂಮಿಯ ಮಾಲೀಕತ್ವದ ಬದಲಾವಣೆ ವಹಿವಾಟು ಹಿಂದೆ ದೊಡ್ಡ ಮಾಫಿಯಾ ಇದ್ದು, ಹಲವು ಅಕ್ರಮಗಳು ನಡೆದಿವೆ ಎಂಬ ಆರೋಪ ಕುರಿತಂತೆ ತನಿಖೆ ನಡೆಯುತ್ತಿದೆ.

ಈ ಹಗರಣದ ಸಂಬಂಧ ಇ.ಡಿ ಅಧಿಕಾರಿಗಳು ಸದ್ಯ 2011ನೇ ತಂಡದ ಐಎಎಸ್ ಅಧಿಕಾರಿ ಛಾವಿ ರಂಜನ್, ಜಾರ್ಖಂಡ್‌ನ ಕಂದಾಯ ಇಲಾಖೆಯ ಸಿಬ್ಬಂದಿ ಭಾನುಪ್ರಸಾದ್ ಪ್ರಸಾದ್ ಸೇರಿ 14 ಜನರನ್ನು ಬಂಧಿಸಿದ್ದಾರೆ. ಬಂಧಿತ ಐಎಎಸ್ ಅಧಿಕಾರಿ ರಾಂಚಿಯಲ್ಲಿ ಜಿಲ್ಲಾಧಿಕಾರಿಯಾಗಿ, ರಾಜ್ಯ ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು.

ಅಧಿಕೃತ ಭೂ ದಾಖಲೆಗಳನ್ನು ತಿರುಚಿ ಭೂಮಿಯ ಮಾರಾಟಗಾರರು, ಖರೀದಿದಾರರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಈ ಮೂಲಕ ಕೋಟ್ಯಂತರ ರೂಪಾಯಿ ಮೌಲ್ಯದ ಭೂಮಿಯನ್ನು ಸ್ವಾಧೀನ ಪಡೆಯಲಾಗಿದೆ ಎಂಬುದು ತನಿಖಾ ಸಂಸ್ಥೆ ಇ.ಡಿ ಆರೋಪವಾಗಿದೆ.

₹ 36 ಲಕ್ಷ ನಗದು, ಕಾರು, ದಾಖಲೆಗಳ ಜಪ್ತಿ

ಹೇಮಂತ್ ಸೊರೇನ್ ಅವರ ದೆಹಲಿಯ ನಿವಾಸದಲ್ಲಿ ಶೋಧ ನಡೆಸಿರುವ ಇ.ಡಿ. ಅಧಿಕಾರಿಗಳು ₹ 36 ಲಕ್ಷ ನಗದು, ಬಿಎಂಡಬ್ಲ್ಯು ಎಸ್‌ಯುವಿ ಕಾರು ಮತ್ತು ಅಕ್ರಮಕ್ಕೆ 'ಪೂರಕವಾಗಿರುವ' ಕೆಲ ದಾಖಲೆಗಳನ್ನು ವಶಕ್ಕೆ ಪಡೆದರು

ತೇಜಸ್ವಿ ಯಾದವ್ ವಿಚಾರಣೆ

ಪಟ್ನಾ (ಪಿಟಿಐ): ಉದ್ಯೋಗಕ್ಕಾಗಿ ಭೂಮಿ ಆರೋಪ ಕುರಿತ ಪ್ರಕರಣದ ತನಿಖೆ ನಡೆಸುತ್ತಿರುವ ಇ.ಡಿ ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಂಬಂಧ ಇಲ್ಲಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರನ್ನು ವಿಚಾರಣೆಗೆ ಒಳಪಡಿಸಿದರು.

ಬಿಹಾರದ ಮಾಜಿ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು, ಮಧ್ಯಾಹ್ನ 11.35 ಗಂಟೆ ವೇಳೆಗೆ ಇ.ಡಿ ಕಚೇರಿಗೆ ತೆರಳಿ ವಿಚಾರಣೆ ಎದುರಿಸಿದರು. ಇದೇ ಪ್ರಕರಣ ಸಂಬಂಧ ಅಧಿಕಾರಿಗಳು ತೇಜಸ್ವಿ ಅವರ ತಂದೆ, ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್ ಅವರನ್ನು 9 ಗಂಟೆ ಕಾಲ ವಿಚಾರಣೆಗೆ ಒಳಪಡಿಸಿದ್ದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ, ಗದಗ

ಕಾ.ಇ: ಗ್ರಾ.ಕು.ನೀ&ನೈ.ವಿ/ಗದಗ/ ಕಿ.ಇಂ/ಟೆಂಡರ್/2023–24/1231 ದಿನಾಂಕ : 30.01.2024

ಟೆಂಡರ್ ಪ್ರಕಟಣೆ

ಪಂಚಾಯತ ರಾಜ್ ಇಂಜಿನೀಯರಿಂಗ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಗದಗ ಜಿಲ್ಲೆಯ ಈ ಕೆಳಗಿನ ಕಾಮಗಾರಿಯ ಟೆಂಡರನ್ನು "ಇ ಪ್ರೊಕ್ಯುರಮೆಂಟ್" ಮುಖಾಂತರ ಕರೆಯಲಾಗಿದೆ.

ಕ್ರ. ಸಂ	ಇಂಡೆಂಟ್ ಸಂಖ್ಯೆ/ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ	ಮುಂಗಡ ಠೇವಣಿ ಮೊತ್ತ
1	O&M FOR COMBINED WATER SUPPLY SCHEME TO ASUTI AND OTHER 6 VILLAGES IN RON TALUK GADAG DISTRICT	57.69 ಲಕ್ಷಗಳು	1.16 ಲಕ್ಷಗಳು

ಈ ಕಾಮಗಾರಿಗಳ ವಿವರಗಳಿಗಾಗಿ ಹಾಗೂ ಡೌನಲೋಡ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ ಪ್ರೋಕ್ಯೂರಮೆಂಟ್" ವೆಬ್‌ಸೈಟ್ **https://kppp.karnataka.gov.in** ನಲ್ಲಿ ನೋಡಿಕೊಳ್ಳಬಹುದು. ಟೆಂಡರ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ : **31.01.2024**, ಪ್ರಶ್ನೋತ್ತರದ ಕೊನೆಯ ದಿನಾಂಕ : **05.02.2024**. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : **07.02.2024**. ತಾಂತ್ರಿಕ ಬಿಡ್ ಟೆಂಡರ ತೆರೆಯುವ ದಿನಾಂಕ : **08.02.2024** ಆರ್ಥಿಕ ಟೆಂಡರ ಬಿಡ್ ತೆರೆಯುವ ದಿನಾಂಕ : **12.02.2024.**

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/498/2023–24

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ/44/576/2023–24 ದಿನಾಂಕ : 30.01.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಗಳಲ್ಲಿ ಅನುಭವ ಹೊಂದಿರುವ ಕೆಸಿಇಐ ನಲ್ಲಿ ನೊಂದಾಯಿತ ದರ್ಜೆ–2 ಮತ್ತು ಮೇಲ್ಪಟ್ಟು (ಎಲೆಕ್ಟ್ರಿಕಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ಏಕ ಲಕ್ಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಬೆಳಗಾವಿ ಜಿಲ್ಲೆಯ ಕಾಂಗ್ರಳ್ಳಿ ಮತ್ತು ಕಣಬರ್ಗಿ ಕೈಗಾರಿಕಾ ಪ್ರದೇಶದಲ್ಲಿ ಬೀದಿ ದೀಪಗಳ ದುರಸ್ತಿ, ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿ. 2ನೇ ಕರೆ. (ಪ.ಪಂ)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 09.02.2024 ಸಂಜೆ 4.30 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https ://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2, ಕೆಐಎಡಿಬಿ, ಬೆಂಗಳೂರು

DIPR/CP/3305/Zen/2023-24

ಕರ್ನಾಟಕ ಸರ್ಕಾರ
ಆಡಳಿತ ತರಬೇತಿ ಸಂಸ್ಥೆ
ಲಲಿತ ಮಹಲ್ ರಸ್ತೆ, ಮೈಸೂರು – 570011

Government of Karnataka
Administrative Training Institute
Lalitha Mahal Road, Mysore - 570011

ಸಂಖ್ಯೆ:ಆತಸಂ/11/ಟೆ/ಟೆಂಡರ್/2023–ಜನಿ–ಆತಸಂ ದಿ: 29.01.2024

ಟೆಂಡರ್ ಪ್ರಕಟಣೆ

ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿಗೆ ಒಂದು ವರ್ಷದ ಅವಧಿ ಮತ್ತು ಕಾರ್ಯಕ್ಷಮತೆಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಯ (ಒಂದು ಬಾರಿಗೆ ಒಂದು ವರ್ಷಕ್ಕೆ ವಿಸ್ತರಣೆ) ವಿಸ್ತರಣೆಗೆ ಕಚೇರಿ ಸಹಾಯಕ ಸಿಬ್ಬಂದಿ ಸೇವೆ ಪಡೆಯಲು ಟೆಂಡರ್ ಆಹ್ವಾನಿಸಿದ್ದು, ನೋಂದಾಯಿತ, ಅರ್ಹ, ಉತ್ತಮ ಸೇವೆ ಒದಗಿಸುವ ಆಸಕ್ತ ಟೆಂಡರ್–ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ Website: htpp://kppp.karnataka.gov.in ಮೂಲಕ ತಮ್ಮ ಬಿಡ್ಡನ್ನು ನಿಯಮಾನುಸಾರ ಆನ್‌ಲೈನ್ ಮೂಲಕ ಸಲ್ಲಿಸಬಹುದು.

ಕ್ರ.ಸಂ.	ಸೇವಾ ವಿವರ	ಅಂದಾಜು ಮೊತ್ತ	ಇ.ಎಂ.ಡಿ ಮೊತ್ತ
01	ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿಗೆ ಒಂದು ವರ್ಷದ ಅವಧಿ ಮತ್ತು ಕಾರ್ಯಕ್ಷಮತೆಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಯ (ಒಂದು ಬಾರಿಗೆ ಒಂದು ವರ್ಷಕ್ಕೆ ವಿಸ್ತರಣೆ) ವಿಸ್ತರಣೆಗೆ ಕಚೇರಿ ಸಹಾಯಕ ಸಿಬ್ಬಂದಿ ಸೇವೆ ಪಡೆಯಲು.	Rs.75,35,044/-	Rs.1,50,701/-

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ ದಿ: 30.01.2024 ಬೆಳಗ್ಗೆ 11.30 ರಿಂದ ವೀಕ್ಷಿಸಬಹುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿ: 13.02.2024 ಸಂಜೆ 05.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿ: 15.02.2024 ರಂದು ಬೆಳಗ್ಗೆ 11.30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸದಲ್ಲಿ ಸಂಪರ್ಕಿಸಬಹುದು.

ಸಹಿ/– ಟೆಂಡರ್ ಆಹ್ವಾನ ಪ್ರಾಧಿಕಾರ, ಆಡಳಿತ ತರಬೇತಿ ಸಂಸ್ಥೆ, ಮೈಸೂರು

DIPR/DDMYS/KSMCA/971/2023-24

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರ್ ಕನೀನಿನಿ ರವರ ಕಛೇರಿ, ಕೆ.ಪಿ.ಸಿ.ವಿಭಾಗ ನಂ.2,ಭಾಲ್ಕಿ–585328

ಸಂಖ್ಯೆ:ಕಾಅ/ಕ.ನೀ.ನಿ.ನಿ/ಕೆಪಿಸಿ–2/ಭಾಲ್ಕಿ/ಪಿಬಿ–1/ಟೆಂಡರ/2023–24/1051 ದಿನಾಂಕ:24–01–2024

ಶೇಕಡಾವಾರು ಟೆಂಡರ ಅಧಿಸೂಚನೆ. (ಅಲ್ಪಾವಧಿ)/ಕರೆ–2
(ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ). (ದ್ವಿ ಲಕೋಟೆಯಲ್ಲಿ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ, ವಿಭಾಗದಿಂದ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಛೇರಿಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆಯಲ್ಲಿ ಇ–ಪ್ರೋಕ್ಯೂರಮೆಂಟ್ ಮುಖಾಂತರ ಆವ್ಹಾನಿಸಲಾಗಿರುತ್ತದೆ, ವಿವರಗಳು ಈ ಕೆಳಗಿನಂತೆ ಇರುತ್ತವೆ.

ಕಾಲಾವಧಿ: ಕಾಮಗಾರಿಯ ಇಂಡೆಂಟ್ ಸಂ. 698 ಇರುತ್ತದೆ. ಹಾಗೂ ಟೆಂಡರಿಗಿಟ್ಟ ಮೊತ್ತ) 1) Rs.204.703 Crores, ವರೆಗೆ ಇರುತ್ತದೆ. ಇ.ಎಂ.ಡಿ ಮೊತ್ತ Rs. 2.42 Crores ಹಾಗೂ ಅರ್ಹ ಗುತ್ತಿಗೆದಾರರ ವಿವರ ಇ–ಪೋರ್ಟಲ್‌ನಂತೆ ಇರುತ್ತದೆ. ಟೆಂಡರ್ ಪ್ರಕ್ರಿಯೆಗಳ ವೇಳಾಪಟ್ಟಿ :i) ಗುತ್ತಿಗೆದಾರರು ಇ–ಪೋರ್ಟಲ್ ಅಡಿಯಲ್ಲಿ ಟೆಂಡರ್ ಹಾಕುವ ದಿನಾಂಕ 25–01–2024, b) The Last date of Submission of completed tender documents 12-02-2024 @ 17.00Hrs c) Date of Opening of Technical Bid is 13-02-2024 @ 17.30 Hrs & Financial bid is 17-02-2024 @ 11.00 Hrs respectively,

Website www.kppp.karnataka.gov.in ನೋಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ 08484–262257 ಸಂಪರ್ಕಿಸುವುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ

ವಾ.ಸಾ.ಸಂ.ಇ/ಬೀದರ/259/ಕೆಎಸ್‌ಎಂಸಿ&ಎ/2023–24

ಹುತಾತ್ಮರ ದಿನ: ಮಹಾತ್ಮ ಗಾಂಧಿ ಸ್ಮಾರಕಕ್ಕೆ ಗಣ್ಯರ ಭೇಟಿ, ಗೌರವ ನಮನ

ಮೋದಿ, ಮುರ್ಮು ಪುಷ್ಪಾರ್ಪಣೆ

ನವದೆಹಲಿ (ಪಿಟಿಐ): ಹುತಾತ್ಮರ ದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಜಘಾಟ್‌ಗೆ ತೆರಳಿ ಮಹಾತ್ಮ ಗಾಂಧಿ ಸಮಾಧಿಗೆ ಪುಷ್ಪನಮನ ಸಲ್ಲಿಸಿದರು.

ಉಪಾಧ್ಯಕ್ಷ ಜಗದೀಪ್ ಧನಕರ್ ಮತ್ತು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರೂ ಈ ವೇಳೆ ಉಪಸ್ಥಿತರಿದ್ದರು. ಸ್ಮಾರಕದ ಬಳಿ ಎರಡು ನಿಮಿಷ ಮೌನಾಚರಣೆ ಮಾಡಲಾಯಿತು.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಮೋದಿ ಅವರು, 'ಪೂಜ್ಯ ಬಾಪೂ ಅವರ ಪುಣ್ಯತಿಥಿಯಂದು ಅವರಿಗೆ ಗೌರವ ಅರ್ಪಿಸಿದೆ. ನಮ್ಮ ದೇಶಕ್ಕಾಗಿ ಬಲಿದಾನ ಮಾಡಿದ ಎಲ್ಲಾ ಹುತಾತ್ಮರಿಗೂ ಈ ವೇಳೆ ಗೌರವ ಸಲ್ಲಿಸಿದೆ. ಅವರ ತ್ಯಾಗವು, ದೇಶದ ಬಗ್ಗೆ ಅವರಿಗಿದ್ದ ಮುನ್ನೋಟವನ್ನು ಸಾಕಾರಗೊಳಿಸಲು ಮತ್ತು ಜನರ ಸೇವೆ ಮಾಡಲು ನಮಗೆ ಸ್ಫೂರ್ತಿಯಾಗಿದೆ' ಎಂದು ಬರೆದಿದ್ದಾರೆ.

ಮೋದಿ ಅವರು ತಮ್ಮ ವೈಯಕ್ತಿಕ ದಿನಚರಿ ಪುಸ್ತಕದಲ್ಲಿ ದಾಖಲಿಸಿರುವ ಮಹಾತ್ಮ ಗಾಂಧಿ ಅವರ ಹೇಳಿಕೆಗಳಿರುವ ಪುಟಗಳನ್ನು ಅವರ ಮತ್ತೊಂದು 'ಎಕ್ಸ್' ಖಾತೆ '@ಮೋದಿಆರ್ಕೈವ್ಸ್'ನಲ್ಲಿ ಪೋಸ್ಟ್ ಮಾಡಲಾಗಿದೆ.



ಹುತಾತ್ಮರ ದಿನದ ಅಂಗವಾಗಿ ದೆಹಲಿಯ ರಾಜಘಾಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಹಾತ್ಮ ಗಾಂಧಿ ಸ್ಮಾರಕಕ್ಕೆ ಗೌರವ ಸಲ್ಲಿಸಿದರು –ಪಿಟಿಐ ಚಿತ್ರ

'ಮೋದಿ ನೇತೃತ್ವದ ಸರ್ಕಾರ ರೈತರ ವಿಶ್ವಾಸ ಕಳೆದುಕೊಂಡಿದೆ'

ಪೂರ್ಣಿಯಾ (ಪಿಟಿಐ): 'ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ರೈತರ ವಿಶ್ವಾಸವನ್ನು ಕಳೆದುಕೊಂಡಿದೆ. ಅಧಿಕಾರಕ್ಕೆ ಬಂದರೆ ಅದನ್ನು ಮರಳಿ ಪಡೆಯಲು ನಾವು ಪ್ರಯತ್ನಿಸುತ್ತೇವೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬಿಹಾರದ ಪೂರ್ಣಿಯಾದಲ್ಲಿ ಮಂಗಳವಾರ ಹೇಳಿದರು.

'ಭಾರತ ಜೋಡೊ ನ್ಯಾಯ ಯಾತ್ರೆ'ಯ ಭಾಗವಾಗಿ ಅವರು ಇಲ್ಲಿ ರೈತರ ಜೊತೆ ಸಂವಾದ ನಡೆಸಿದರು. 'ಕೇಂದ್ರ ಸರ್ಕಾರವು ರೈತರ ದುಗುಡಗಳನ್ನು ದೂರಮಾಡುವಲ್ಲಿ ಸೋತಿದೆ. ನಮಗೆ ಅವಕಾಶ ನೀಡಿದರೆ, ನಿಮ್ಮ ವಿಶ್ವಾಸವನ್ನು ಮರಳಿ ಗಳಿಸಲು ಯತ್ನಿಸುತ್ತೇವೆ' ಎಂದರು.

ಅವರ ಹೇಳಿಕೆಗೆ ಭಾರಿ ಕರತಾಡನ ವ್ಯಕ್ತವಾಗುತ್ತಿದ್ದಂತೆ, 'ಈ ಮಾತು ಪೊಳ್ಳು ಭರವಸೆಯಲ್ಲ. ಕಾಂಗ್ರೆಸ್‌ನ ಹಿಂದಿನ ದಾಖಲೆಗಳೇ ಇದಕ್ಕೆ ಸಾಕ್ಷಿ. ಭೂ ಸ್ವಾಧೀನ ಕಾಯ್ದೆಯನ್ನು ನಾವು ಜಾರಿಗೊಳಿಸಿದೆವು. ₹72,000 ಕೋಟಿ ಮೊತ್ತದ ಸಾಲಮನ್ನಾ ಮಾಡಿದೆವು. ಛತ್ತೀಸಗಢ ಮತ್ತು ರಾಜಸ್ಥಾನದಲ್ಲಿ ರೈತರ ಬೆಳೆಗೆ ಸಮರ್ಪಕ ಬೆಲೆ ನೀಡಲಾಗುತ್ತಿತ್ತು' ಎಂದು ರಾಹುಲ್ ಹೇಳಿದರು.

ಇದಕ್ಕೂ ಮೊದಲು ಅವರು, ಹುತಾತ್ಮರ ದಿನದ ಅಂಗವಾಗಿ ಬಿಹಾರದ ಅರರಿಯಾದಲ್ಲಿ ಮಹಾತ್ಮಾ ಗಾಂಧಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಸ್ವರಾಜ್ ಅಭಿಯಾನ ಸ್ಥಾಪಕ ಯೋಗೇಂದ್ರ ಯಾದವ್ ಅವರು ಈ ವೇಳೆ ರಾಹುಲ್ ಜೊತೆಗೂಡಿದ್ದರು.

₹6 ಲಕ್ಷ ವಂಚಿಸಿದ ಮಹಿಳೆ ಖಾತೆಯಲ್ಲಿ ಇದ್ದುದು ₹41!

ನವದೆಹಲಿ (ಪಿಟಿಐ): ದೆಹಲಿಯ ಏರೋಸಿಟಿಯ ಹೋಟೆಲ್ ಒಂದಕ್ಕೆ ₹6 ಲಕ್ಷ ವಂಚಿಸಿರುವ ಆರೋಪದಡಿ ಬಂಧಿಸಿರುವ ಮಹಿಳೆಯೊಬ್ಬಳ ಬ್ಯಾಂಕ್ ಖಾತೆಯಲ್ಲಿ ಇದ್ದಿದ್ದು ₹41 ಮಾತ್ರ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಮಹಿಳೆಯ ಬಂಧನ ಆದ ಸಮಯದಲ್ಲಿ ಇದ್ದ ಮೊತ್ತ ಇದು.

ಆಂಧ್ರಪ್ರದೇಶ ಮೂಲದ ಈ ಮಹಿಳೆ ವಿಮಾನ ನಿಲ್ದಾಣದ ಬಳಿ ವಾಸ್ತವ್ಯ ಹೂಡಿದ್ದಕ್ಕೆ ಕಾರಣ ಗೊತ್ತಾಗಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಮಹಿಳೆಯ ವಿಳಾಸ ಮತ್ತು ಆಕೆಯ ಕುಟುಂಬದ ಸದಸ್ಯರ ವಿವರ ನೀಡುವಂತೆ ಕೋರಿ ದೆಹಲಿ ಪೊಲೀಸರು ಆಂಧ್ರಪ್ರದೇಶ ಪೊಲೀಸರಿಗೆ ಪತ್ರ ಬರೆದಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಮಹಿಳೆಯನ್ನು ವಿಚಾರಣೆಗೆ ಗುರಿಪಡಿಸಲಾಗಿದೆ, ನಮ್ಮ ತಜ್ಞರು ಆಕೆಯ ಜೊತೆ ಆಪ್ತ ಸಮಾಲೋಚನೆ ನಡೆಸಿದ್ದಾರೆ. ಆದರೆ ಆಕೆ ತನಿಖೆಗೆ ಸಹಕರಿಸುತ್ತಿಲ್ಲ. ಬ್ಯಾಂಕ್ ಖಾತೆಯ ವಿವರ ತೋರಿಸುವಂತೆ ಕೇಳಿದ್ದರೂ, ಅದನ್ನು ನೀಡಲು ಆಕೆಗೆ ಆಗಿಲ್ಲ' ಎಂದು ಹೇಳಿದ್ದಾರೆ.

ನಗರಸಭಾ ಕಾರ್ಯಾಲಯ, ಚಳ್ಳಕೆರೆ–577522 (ಚಿತ್ರದುರ್ಗ ಜಿಲ್ಲೆ)
ಫೋನ್ ನಂ. 08195–250094 ಇ–ಮೇಲ್:– ka.challakere.cmc@gmail.com

ಸಂಖ್ಯೆ: ಚ.ನ/ತಾಂತ್ರಿಕ/15ನೇ.ಹ.ಮು.ಅ 2020–21, ಎಸ್.ಎಫ್.ಸಿ ಶೇ 5 22–23&23–24/ಟೆಂಡರ್/ಸಿ.ಆರ್01/2023–24
ದಿನಾಂಕ:29/01/2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಚಳ್ಳಕೆರೆ ನಗರಸಭಾ ವ್ಯಾಪ್ತಿಯಲ್ಲಿ 2020–21ನೇ ಸಾಲಿನ 15ನೇ ಹಣಕಾಸು ಅನುದಾನದಡಿಯಲ್ಲಿ, 2022–23ನೇ ಸಾಲಿನ ಎಸ್.ಎಫ್.ಸಿ ಶೇ 5 ರ ಅನುದಾನದಡಿಯಲ್ಲಿ ಹಾಗೂ 2023–24ನೇ ಸಾಲಿನ ಎಸ್.ಎಫ್.ಸಿ ಶೇ 5 ರ ಅನುದಾನ ಹಾಗೂ ನಗರಸಭಾ ನಿಧಿಯಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ–2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-1&2,KG-1 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಸಿವಿಲ್ ಗುತ್ತಿಗೆ/ಅಧಿಕೃತ ಏಜೆನ್ಸಿದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಿಸಲಾಗಿರುತ್ತದೆ ಹಾಗೂ ದಿನಾಂಕ:08/02/2024 ರ ಸಂಜೆ 5:30 ಗಂಟೆವರೆಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.

www.challakerecity.mrc.gov.in ಮತ್ತು http://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

ಕಾಮಗಾರಿಯ ಹೆಸರು:– 2020–21ನೇ ಸಾಲಿನ 15ನೇ ಹಣಕಾಸು ಅನುದಾನದಡಿಯಲ್ಲಿ (ರೂ 27.10 ಲಕ್ಷಗಳು):– (1) ಚಳ್ಳಕೆರೆ ನಗರದ ಬಳ್ಳಾರಿ ರಸ್ತೆಯ ವೀರಶೈವ ರುದ್ರಭೂಮಿ, ಕ್ರಿಶ್ಚಿಯನ್ ಸ್ಮಶಾನ ಹಾಗೂ ಸೋಮಗುದ್ದು ರಸ್ತೆಯ ಹರಿಜನ ರುದ್ರಭೂಮಿ ಮತ್ತು ಬೆಂಗಳೂರು ರಸ್ತೆಯ ಖಬರಾಸ್ಥಾನ ಸ್ಮಶಾನದಲ್ಲಿ ಶೆಡ್, ರಸ್ತೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಕಾಮಗಾರಿ. ಅಂದಾಜು ಮೊತ್ತ ರೂ. 27.10 ಲಕ್ಷಗಳು INDENT NO: DMA/2023-24/BD/WORK_INDENT8449/CALL-2 ಅಂದಾಜು ಮೊತ್ತ:– 27.10 ಲಕ್ಷ. **2022–23ನೇ ಸಾಲಿನ ಎಸ್.ಎಫ್.ಸಿ ಶೇ 5 ರ ಅನುದಾನದಡಿಯಲ್ಲಿ (ರೂ 1.47 ಲಕ್ಷಗಳು):–** (2) ಚಳ್ಳಕೆರೆ ನಗರಸಭೆ ವ್ಯಾಪ್ತಿಯ ವಿಕಲಾಂಗಚೇತನರಿಗೆ 03 ಚಕ್ರದ ಮೋಟರ್ ಸೈಕಲ್ ಖರೀದಿಸಿ ನೀಡುವುದು. INDENT NO: DMA/2023-24/OW/WORK_INDENT4449/CALL-4 ಅಂದಾಜು ಮೊತ್ತ:– 1.47ಲಕ್ಷ. **2023–24ನೇ ಸಾಲಿನ ಎಸ್.ಎಫ್.ಸಿ ಶೇ 5 ರ ಅನುದಾನ ಹಾಗೂ ನಗರಸಭಾ ನಿಧಿಯಡಿಯಲ್ಲಿ (ರೂ 2.80 ಲಕ್ಷಗಳು):–** (3) ಚಳ್ಳಕೆರೆ ನಗರಸಭೆ ವ್ಯಾಪ್ತಿಯಲ್ಲಿ ಬರುವ ಅರ್ಹ ವಿಕಲಚೇತನ ಫಲಾನುಭವಿಗಳಿಗೆ ಮೋಟರ್ ಚಾಲಿತ ತ್ರಿಚಕ್ರವಾಹನ ನೀಡುವುದು. ಅಂದಾಜು ಮೊತ್ತ ರೂ. 2.80 ಲಕ್ಷಗಳು INDENT NO: DMA/2023-24/IND0807/CALL-2 ಅಂದಾಜು ಮೊತ್ತ:– 2.80 ಲಕ್ಷ.

RO.No.517:DIPR/CTA/KSMCA/2023-24 ಸಹಿ/– **ಪೌರಾಯುಕ್ತರು**, ನಗರಸಭೆ, ಚಳ್ಳಕೆರೆ

KARNATAKA ELECTRICITY REGULATORY COMMISSION
No.16 C-1, Millers Tank Bed Area, Vasanthanagara, Bengaluru - 560052. Phone: 080-22268677/78/79
Fax: 080-22268667, E-mail: kerc-ka@nic.in Website: https://kerc.karnataka.gov.in

No: KERC/A/03/0/23-24/1260 **Date: 30-01-2024**

PUBLIC NOTICE

In the matter of determining demand charges / fixed charges from the consumers availing Open Access for sourcing power.

The Karnataka Electricity Regulatory Commission is in the process of considering the petition by State Electricity Supply Companies (ESCOMs) for determination of tariff for the financial year FY 2024-25. In the Tariff Order to be issued, the Commission is proposing to introduce a different structure for recovery of demand / fixed charges from the Consumers who are sourcing power requirement from other than the ESCOMs, through open access / wheeling & banking arrangement.

In this regard, the Commission brings to the notice of the Stakeholders / interested person, the following:

1) In the Tariff Order of 2023, the Commission has considered appropriate increase in demand / fixed charges to all the consumers to ensure adequate recovery of fixed costs involved in generation, transmission and distribution of energy by the ESCOMs. The tariff determined so by the Commission has been ensured to recover 71% of the total fixed cost incurred by the ESCOMs and the remaining 29% of the fixed cost is factored in Energy Charges to be recovered on per unit basis.
2) Whenever the consumers source power from other than the ESCOMs, through Open Access (OA), they pay only 71% of the fixed cost and the remaining 29% of fixed cost will continue to remain unrecovered / stranded.
3) In order to address the issue, the Commission has determined Additional Surcharge equal to 29% of the fixed cost to be recovered from open access / wheeling consumers to ensure recovery of full fixed cost as per Section 42(4) of the Electricity Act,2003. However, some of the consumers who are availing Open Access have objected for payment of Additional Surcharge by stating that they are paying full fixed cost against their Contract Demand and the question of payment of Additional Surcharge does not arise.
4) Hence, the Commission proposes to fix different demand / fixed charges per KVA / KW in respect of open access consumers to ensure 100% recovery of fixed cost and not to impose any additional surcharge on the Open Access consumers.
5) This will ensure full recovery of FC from OA consumers.

Since the proposal is not a part of the current tariff applications by the ESCOMs, the stakeholders / public / interested persons are hereby provided an opportunity to express their views in writing, **on or before 11-02-2024** and may also participate in the Public Hearing schedule **from 12-02-2024 onwards** and present their views in the matter.

The written objections may be furnished to the KERC address or through e-mail **kerc-ka@nic.in**

Sd/-
SECRETARY, KERC

DIPR/CP/3306/2023-24

ಬೋಧಕ ಸಿಬ್ಬಂದಿಗೆ ಶೇ. 75 ಹಾಜರಾತಿ ಕಡ್ಡಾಯ

ನವದೆಹಲಿ (ಪಿಟಿಐ): ಕಾಲೇಜು ತರಗತಿಯ ಅವಧಿಯಲ್ಲಿ ವೈದ್ಯಕೀಯ ಕಾಲೇಜಿನ ಬೋಧಕ ಸಿಬ್ಬಂದಿ ಖಾಸಗಿ ವೈದ್ಯಕೀಯ ಅಭ್ಯಾಸದಲ್ಲಿ ತೊಡಗುವುದನ್ನು ನಿರ್ಬಂಧಿಸಿರುವ ರಾಷ್ಟ್ರೀಯ ವೈದ್ಯಕೀಯ ಆಯೋಗವು, ಬೋಧಕ ಸಿಬ್ಬಂದಿಗೆ ಶೇ 75 ಹಾಜರಾತಿಯನ್ನು ಕಡ್ಡಾಯಗೊಳಿಸಿದೆ.

2023ನೇ ಸಾಲಿನ ಸ್ನಾತಕೋತ್ತರ ಪಠ್ಯಕ್ರಮಗಳಿಗೆ ಕನಿಷ್ಠ ಗುಣಮಟ್ಟದ ಅಗತ್ಯತೆಗಳ ಮಾರ್ಗಸೂಚಿಯನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ ಕಳೆದ ವಾರ ಬಿಡುಗಡೆ ಮಾಡಿದೆ.

'ವೈದ್ಯಕೀಯ ಕಾಲೇಜಿನಲ್ಲಿ ಪೂರ್ಣಾವಧಿಯಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಯು ಕಾಲೇಜು ಅವಧಿಯಲ್ಲಿ ಖಾಸಗಿ ವೈದ್ಯಕೀಯ ಅಭ್ಯಾಸದಲ್ಲಿ ತೊಡಗಿಸಿಕೊಳ್ಳಬಾರದು. ಒಟ್ಟಾರೆ ಕೆಲಸದ ದಿನಗಳ ಪೈಕಿ ಬೋಧಕ ಸಿಬ್ಬಂದಿಯು ಶೇ 75ರಷ್ಟು ಹಾಜರಾತಿ ಹೊಂದಿರಲೇಬೇಕು' ಎಂದು ಈ ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ.

ಒಳರೋಗಿಗಳಿಗೆ ಮೀಸಲಾಗಿರುವ ಆಸ್ಪತ್ರೆಯ ಹಾಸಿಗೆಗಳ ಪೈಕಿ ಶೇ 80ರಷ್ಟು ಹಾಸಿಗೆಗಳು ಭರ್ತಿ ಆಗಿರಬೇಕು. ಸ್ನಾತಕೋತ್ತರ ತರಬೇತಿ ಇಲಾಖೆಗೆ ಮೀಸಲಾಗಿರುವ ಒಟ್ಟಾರೆ ಬೆಡ್‌ಗಳ ಪೈಕಿ ಶೇ 15ರಷ್ಟು ಹಾಸಿಗೆಗಳನ್ನು ಐಸಿಯುಗೆ ಮೀಸಲಿಡಬೇಕು ಎಂದು ಮಾರ್ಗಸೂಚಿ ತಿಳಿಸಿದೆ.

ಇಂದಿನಿಂದ ಅಧಿವೇಶನ

ಒಂದನೇ ಪುಟದಿಂದ...

ರಾಷ್ಟ್ರಪತಿಯವರ ಭಾಷಣಕ್ಕೆ ಧನ್ಯವಾದ ಅರ್ಪಿಸುವ ನಿರ್ಣಯದ ಮೇಲಿನ ಚರ್ಚೆ ಶುಕ್ರವಾರ ಆರಂಭವಾಗಲಿದೆ. ಇದಕ್ಕೆ ಉಭಯ ಸದನಗಳಲ್ಲಿ ಪ್ರಧಾನಿಯವರು ಉತ್ತರ ನೀಡಿದ ನಂತರ, ಬಜೆಟ್ ಮೇಲೆ ಚರ್ಚೆ ನಡೆಯುವ ಸಾಧ್ಯತೆಯಿದೆ.

17ನೇ ಲೋಕಸಭೆಯ ಅವಧಿಯಲ್ಲಿ ಉಪಸಭಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯೇ ನಡೆದಿಲ್ಲ. ಸಂವಿಧಾನದ 93ನೇ ವಿಧಿಯ ಪ್ರಕಾರ, ಉಪಸಭಾಧ್ಯಕ್ಷರ ಆಯ್ಕೆ ಮಾಡುವುದು ಕಡ್ಡಾಯ. ಲೋಕಸಭೆಯ ಅವಧಿಯಲ್ಲಿ ಉಪಸಭಾಪತಿಯನ್ನು ಆಯ್ಕೆ ಮಾಡದೇ ಇರುವುದು ಇದೇ ಮೊದಲು.

ಅಧಿವೇಶನದ ಮುನ್ನ ರಕ್ಷಣಾ ಸಚಿವ ರಾಜನಾಥ ಸಿಂಗ್ ನೇತೃತ್ವದಲ್ಲಿ ಸರ್ವಪಕ್ಷಗಳ ಸಭೆ ಮಂಗಳವಾರ ನಡೆಯಿತು. ಸುಗಮ ಕಲಾಪ ನಡೆಸಲು ಎಲ್ಲ ಪಕ್ಷಗಳ ಸಹಕಾರವನ್ನು ಸರ್ಕಾರ ಕೋರಿತು. ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, 'ಸೌಹಾರ್ದಯುತವಾಗಿ ಸರ್ವಪಕ್ಷ ಸಭೆ ನಡೆದಿದೆ. ಅಧಿವೇಶನದಲ್ಲಿ ಪ್ರತಿಯೊಂದು ವಿಷಯದ ಚರ್ಚೆಗೆ ಸರ್ಕಾರ ಸಿದ್ಧವಿದೆ' ಎಂದು ಹೇಳಿದರು.

ರಾಜ್ಯಸಭೆಯ ಕಾಂಗ್ರೆಸ್ ಉಪನಾಯಕ ಪ್ರಮೋದ್ ತಿವಾರಿ, 'ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ನ್ಯಾಯ ಯಾತ್ರೆಯ ಮೇಲೆ ಅಸ್ಸಾಂನಲ್ಲಿ ಹಿಂಸಾತ್ಮಕ ದಾಳಿ ನಡೆಸಲಾಗಿದೆ. ಹೇಮಂತ್ ಸೊರೇನ್, ಲಾಲೂ ಪ್ರಸಾದ್ ಅವರಂತಹ ನಾಯಕರನ್ನು ಹಣಿಯಲು ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಈ ವಿಷಯಗಳನ್ನು ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಲೋಕಸಭೆಯ ಭದ್ರತಾ ಲೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಚಳಿಗಾಲದ ಅಧಿವೇಶನದಲ್ಲಿ ಉಭಯ ಸದನಗಳಲ್ಲಿ ಪ್ರತಿಭಟನೆ ನಡೆಸಿದ್ದ ವಿರೋಧ ಪಕ್ಷಗಳ 146 ಸದಸ್ಯರನ್ನು ಅಮಾನತು ಮಾಡಲಾಗಿತ್ತು. ಅದರಲ್ಲಿ ರಾಜ್ಯಸಭೆಯ 11 ಹಾಗೂ ಲೋಕಸಭೆಯ ಮೂವರು ಸದಸ್ಯರ ನಡವಳಿಕೆ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಲಾಗಿತ್ತು. ತಮ್ಮ ವರ್ತನೆ ಬಗ್ಗೆ ಈ ಸದಸ್ಯರು ವಿಷಾದ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಎಲ್ಲ ಸದಸ್ಯರಿಗೂ ಬುಧವಾರದಿಂದ ನಡೆಯಲಿರುವ ಅಧಿವೇಶನದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ. ಎಲ್ಲ ಸದಸ್ಯರ ಅಮಾನತು ಆದೇಶವನ್ನು ಲೋಕಸಭಾಧ್ಯಕ್ಷ ಮತ್ತು ರಾಜ್ಯಸಭಾ ಸಭಾಪತಿ ವಾಪಸ್ ಪಡೆದಿದ್ದಾರೆ ಎಂದು ಸಚಿವ ಜೋಶಿ ಪ್ರಕಟಿಸಿದರು.

ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಪಕ್ಷವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಬಿಹಾರದಲ್ಲಿ ಸರ್ಕಾರವನ್ನೂ ರಚಿಸಿರುವ ಎನ್‌ಡಿಎ ಹೊಸ ಉತ್ಸಾಹದೊಂದಿಗೆ ಅಧಿವೇಶನಕ್ಕೆ ಹಾಜರಾಗುತ್ತಿದೆ.

ಭಾರತ್ ಜೋಡೊ ನ್ಯಾಯ ಯಾತ್ರೆಯಲ್ಲಿ ಪಾಲ್ಗೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ಜೈರಾಮ್ ರಮೇಶ್ ಅವರು ಕಲಾಪಕ್ಕೆ ಗೈರುಹಾಜರಾಗುವ ಸಂಭವ ಇದೆ.

- ಪ್ರಸಕ್ತ ಲೋಕಸಭಾ ಅವಧಿಯ ಕೊನೆಯ ಅಧಿವೇಶನ. ಚುನಾವಣಾ ಸಿದ್ಧತೆಗೆ ಬಳಸಿಕೊಳ್ಳಲು ಹವಣಿಕೆ
- ಉಪಸಭಾಪತಿಯೇ ಇಲ್ಲದ ಮೊದಲ ಲೋಕಸಭಾ ಅವಧಿಯಾಗಿ ಚರಿತ್ರೆಯಲ್ಲಿ ದಾಖಲು
- ಕಳೆದ ಅಧಿವೇಶನದಲ್ಲಿ ಅಮಾನತುಗೊಂಡಿದ್ದ ಎಲ್ಲ ಸದಸ್ಯರಿಗೂ ಪಾಲ್ಗೊಳ್ಳಲು ಅವಕಾಶ
- ಭಾರತ್ ಜೋಡೊ ನ್ಯಾಯ ಯಾತ್ರೆಯಲ್ಲಿ ಪಾಲ್ಗೊಂಡಿರುವ ಪ್ರಮುಖ ಕಾಂಗ್ರೆಸ್ ಮುಖಂಡರ ಗೈರು?

ಮದ್ರಾಸ್‌–ಐಐಟಿ: ದತ್ತಾಂಶ ಸಂಸ್ಥೆ ಸ್ಥಾಪನೆಗೆ ₹ 110 ಕೋಟಿ ದತ್ತಿ

ಚೆನ್ನೈ (ಪಿಟಿಐ): 'ವಾಧ್ವಾನಿ ಸ್ಕೂಲ್ ಆಫ್ ಡೇಟಾ ಸೈನ್ಸ್ ಅಂಡ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್' ಸ್ಥಾಪನೆಗಾಗಿ ಐಐಟಿ-ಮದ್ರಾಸ್‌ಗೆ ₹ 110 ಕೋಟಿಯಷ್ಟು ದೊಡ್ಡ ಮೊತ್ತದ ದತ್ತಿ ನಿಧಿಯನ್ನು ಸಂಸ್ಥೆಯ ಹಳೆಯ ವಿದ್ಯಾರ್ಥಿ ಸುನಿಲ್ ವಾಧ್ವಾನಿ ನೀಡಿದ್ದಾರೆ.

ಅಧ್ಯಯನ ಶಾಖೆಯನ್ನು ಸ್ಥಾಪಿಸಲಿಕ್ಕೆ ನೀಡಿರುವ ಬೃಹತ್ ದತ್ತಿ ನಿಧಿಗಳಲ್ಲಿ ಇದೂ ಒಂದಾಗಿದೆ ಎಂದು ಐಐಟಿ-ಮದ್ರಾಸ್ ಪ್ರಕಟಣೆಯಲ್ಲಿ ತಿಳಿಸಿದೆ.

ಐಗೇಟ್ ಹಾಗೂ ಮಾಸ್ಟೆಕ್ ಡಿಜಿಟಲ್ ಕಂಪನಿಗಳ ಸಹ ಸ್ಥಾಪಕರೂ ಆಗಿರುವ ಸುನಿಲ್ ವಾಧ್ವಾನಿ ಹಾಗೂ ಐಐಟಿ-ಮದ್ರಾಸ್‌ನ ನಿರ್ದೇಶಕ ಪ್ರೊ. ವಿ. ಕಾಮಕೋಟಿ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ದತ್ತಾಂಶ ವಿಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಸರ್ಕಾರ ಹಾಗೂ ನೀತಿ ನಿರೂಪಕರಿಗೆ ಸಲಹೆ ನೀಡುವ ಗುರಿಯೊಂದಿಗೆ 'ವಾಧ್ವಾನಿ ಸ್ಕೂಲ್ ಆಫ್ ಡೇಟಾ ಸೈನ್ಸ್ ಅಂಡ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್' ಕಾರ್ಯನಿರ್ವಹಿಸಲಿದೆ ಎಂದೂ ಪ್ರಕಟಣೆ ಉಲ್ಲೇಖಿಸಿದೆ.

ರಾಜತಾಂತ್ರಿಕ ಬಿಕ್ಕಟ್ಟು: ಮಾಲ್ದೀವ್ಸ್‌ಗೆ ತಟ್ಟಿದ ಬಿಸಿ

ಭಾರತದ ಪ್ರವಾಸಿಗರ ಸಂಖ್ಯೆ ಇಳಿಮುಖ

ನವದೆಹಲಿ (ಪಿಟಿಐ): ಮಾಲ್ದೀವ್ಸ್ ಮತ್ತು ಭಾರತದ ನಡುವಣ ರಾಜತಾಂತ್ರಿಕ ಬಿಕ್ಕಟ್ಟು ಆರಂಭವಾದ ಬಳಿಕ ದ್ವೀಪರಾಷ್ಟ್ರಕ್ಕೆ ಭೇಟಿ ನೀಡುವ ಭಾರತದ ಪ್ರವಾಸಿಗರ ಸಂಖ್ಯೆಯಲ್ಲಿ ಇಳಿಕೆಯಾಗಿದೆ.

ಮಾಲ್ದೀವ್ಸ್‌ಗೆ ಭೇಟಿ ಕೊಡುವ ವಿದೇಶಿಯರಲ್ಲಿ ಭಾರತದ ಪ್ರವಾಸಿಗರು ಅಗ್ರಸ್ಥಾನದಲ್ಲಿದ್ದರು. ಆದರೆ ಕಳೆದ ಮೂರು ವಾರಗಳಲ್ಲಿ ಭಾರತದ ಪ್ರವಾಸಿಗರ ಸಂಖ್ಯೆ ಐದನೇ ಸ್ಥಾನಕ್ಕೆ ಕುಸಿತ ಕಂಡಿರುವುದು ಅಧಿಕೃತ ಅಂಕಿ–ಅಂಶದಿಂದ ತಿಳಿದುಬಂದಿದೆ.

ಈ ವರ್ಷದ ಜನವರಿ 1 ರಿಂದ 28ರವರೆಗೆ ಒಟ್ಟು 1.74 ಲಕ್ಷ ಪ್ರವಾಸಿಗರು ಮಾಲ್ದೀವ್ಸ್‌ಗೆ ಭೇಟಿ ಕೊಟ್ಟಿದ್ದಾರೆ. ಇದರಲ್ಲಿ ಭಾರತೀಯರ ಸಂಖ್ಯೆ 13,989 ಮಾತ್ರ. ಮಾಲ್ದೀವ್ಸ್‌ಗೆ ಭೇಟಿ ನೀಡಿದ ಪ್ರವಾಸಿಗರಲ್ಲಿ ರಷ್ಯಾದ (18,561) ಅಗ್ರಸ್ಥಾನದಲ್ಲಿದ್ದಾರೆ. ಇಟಲಿ (18,111), ಚೀನಾ (16,529) ಮತ್ತು ಬ್ರಿಟನ್ (14,588) ಪ್ರವಾಸಿಗರು ಬಳಿಕದ ಸ್ಥಾನಗಳಲ್ಲಿದ್ದಾರೆ.

2023ರಲ್ಲಿ 17 ಲಕ್ಷಕ್ಕೂ ಅಧಿಕ ಪ್ರವಾಸಿಗರು ದ್ವೀಪರಾಷ್ಟ್ರಕ್ಕೆ ಭೇಟಿ ಕೊಟ್ಟಿದ್ದರು. ಅದರಲ್ಲಿ ಹೆಚ್ಚಿನವರು ಭಾರತದ (2,09,198) ಪ್ರವಾಸಿಗರು ಆಗಿದ್ದರು. ರಷ್ಯಾ (2,09,146) ಮತ್ತು ಚೀನಾದ (1,87,118) ಪ್ರವಾಸಿಗರು ಬಳಿಕದ ಸ್ಥಾನಗಳಲ್ಲಿದ್ದರು.

2021 ಮತ್ತು 2022ರಲ್ಲಿ ಕ್ರಮವಾಗಿ ಭಾರತದ 2.11 ಲಕ್ಷ ಹಾಗೂ 2.40 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದರು.

ಈ ತಿಂಗಳ ಆರಂಭದಲ್ಲಿ ಮಾಲ್ದೀವ್ಸ್‌ನ ಮೂವರು ಉಪ ಸಚಿವರು, ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಅವಹೇಳನಕಾರಿ ಮಾತುಗಳನ್ನು ಆಡಿದ್ದರು. ಅದಕ್ಕೆ ಭಾರತದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಭಾರತೀಯರು ಮಾಲ್ದೀವ್ಸ್‌ನ ಬದಲು ದೇಶಿ ಪ್ರವಾಸಿ ತಾಣಗಳ ಕಡೆ ಗಮನ ಹರಿಸಬೇಕು ಎಂದು ಸೆಲೆಬ್ರಿಟಿಗಳು ಸೇರಿದಂತೆ ಹಲವರು ಕರೆ ನೀಡಿದ್ದರು.

ಕ್ಷಮೆಗೆ ಮುಯಿಜು ಮೇಲೆ ಒತ್ತಡ

ಮಾಲೆ: ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಭಾರತದ ಜನರು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಕ್ಷಮೆಯಾಚಿಸಬೇಕು ಎಂಬ ಒತ್ತಡ ಹೆಚ್ಚಿದೆ. ಚೀನಾ ಪರ ಧೋರಣೆ ಹೊಂದಿರುವ ಮುಯಿಜು, ಈಚೆಗೆ ಭಾರತ ವಿರೋಧಿ ಹೇಳಿಕೆಗಳನ್ನು ನೀಡಿದ್ದರು. ಇದರಿಂದ ಉಭಯ ದೇಶಗಳ ನಡುವಣ ಬಾಂಧವ್ಯಕ್ಕೆ ಧಕ್ಕೆ ಉಂಟಾಗಿದೆ.

'ಮುಯಿಜು ಭಾರತದ ಕ್ಷಮೆಯಾಚಿಸಿ, ಎರಡೂ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧ ಉತ್ತಮಪಡಿಸಲು ಮುಂದಾಗಬೇಕು' ಎಂದು ಜಂಹೂರಿ ಪಕ್ಷದ ನಾಯಕ ಗಸೂಮ್ ಇಬ್ರಾಹಿಂ ಮಂಗಳವಾರ ಆಗ್ರಹಿಸಿದ್ದಾರೆ.

ಸಹೋದ್ಯೋಗಿಗಳ ಕೊಂದು ಆತ್ಮಹತ್ಯೆಗೆ ಯತ್ನಿಸಿದ ಶಿಕ್ಷಕ

ಗೊಡ್ಡಾ (ಪಿಟಿಐ): ಒಬ್ಬ ಮಹಿಳೆ ಸೇರಿ ತಮ್ಮ ಇಬ್ಬರು ಸಹೋದ್ಯೋಗಿಗಳನ್ನು ಶಿಕ್ಷಕರೊಬ್ಬರು ಗುಂಡಿಕ್ಕಿ ಕೊಂದು, ತಾವೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆಯು ಜಾರ್ಖಂಡ್‌ನ ಗೊಡ್ಡಾ ಜಿಲ್ಲೆಯಲ್ಲಿ ನಡೆದಿದೆ. ಮೇಲ್ನೋಟಕ್ಕೆ ಇದು 'ಪ್ರೇಮ ಸಂಬಂಧ'ದ ಪ್ರಕರಣ ಎಂದು ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಇಲ್ಲಿಯ ಪೊರೆಯಾಹಾಟ್ ಪ್ರದೇಶದ ಭಟ್ಟ ಅಕ್ಟ್‌ಗೆಡ್ ಶಾಲೆಯಲ್ಲಿ ಈ ಪ್ರಕರಣ ನಡೆದಿದೆ. ಶಿಕ್ಷಕರಿಬ್ಬರ ಮೃತದೇಹಗಳು ಶಾಲೆಯ ಕೊಠಡಿಯೊಂದರಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದವು. ಆರೋಪಿ ಶಿಕ್ಷಕ ರವಿ ರಂಜನ್ (42) ಸ್ಥಿತಿ ಗಂಭೀರವಾಗಿದ್ದು, ಅವರನ್ನು ಗೊಡ್ಡಾದ ಸದರ್ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಹೇಳಿದ್ದಾರೆ.

ಶಾಲೆಯ ಕೊಠಡಿಯೊಂದರಿಂದ ಗುಂಡು ಹಾರಿದ ಸದ್ದು ಕೇಳಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಅತ್ತ ದೌಡಾಯಿಸಿದರು. ಒಳಗಿನಿಂದ ಚಿಲಕವನ್ನು ಹಾಕಲಾಗಿದ್ದ ಕಾರಣ ಅವರಿಗೆ ಬಾಗಿಲು ತೆರೆಯಲಾಗಲಿಲ್ಲ. ಕೂಡಲೇ ಅವರು ಪೊಲೀಸರಿಗೆ ಕರೆ ಮಾಡಿದರು. ಪೊಲೀಸರು ಬಾಗಿಲನ್ನು ಬಲವಂತವಾಗಿ ತೆರೆದು ಒಳಗೆ ಹೋದಾಗ, ಇಬ್ಬರು ಶಿಕ್ಷಕರು ಆಗಲೇ ಮೃತಪಟ್ಟಿದ್ದರು. ಅವರ ತಲೆಗೆ ಗುಂಡೇಟು ತಗುಲಿತ್ತು. ಆರೋಪಿ ಶಿಕ್ಷಕನು ಬಲಗೈಯಿಂದ ತಲೆಗೆ ಗುಂಡು ಹಾರಿಸಿಕೊಂಡಿದ್ದು ಕಂಡುಬಂತು ಎಂದು ಪೊಲೀಸರು ತಿಳಿಸಿದ್ದಾರೆ. ಶಿಕ್ಷಕಿಯ ಜೊತೆ ಇಬ್ಬರು ಶಿಕ್ಷಕರೂ ಪ್ರೇಮ ಸಂಬಂಧದಲ್ಲಿ ಇದ್ದರು ಎಂದು ಗ್ರಾಮಸ್ಥರು ಮತ್ತು ವಿದ್ಯಾರ್ಥಿಗಳು ತಿಳಿಸಿದ್ದಾರೆ. ಪೊರಿಯಾಹಟ್ ನಿವಾಸಿ ಸುಜಾತ ಮಿಶ್ರಾ (35), ಉತ್ತರ ಪ್ರದೇಶ ಮೂಲದ ಆದರ್ಶ್ ಸಿಂಗ್ (40) ಮೃತಪಟ್ಟಿರುವರ ಇಬ್ಬರು ಶಿಕ್ಷಕರು.

ನೀತಿ ಸಂಹಿತೆ ಉಲ್ಲಂಘಿಸಿದ ಆರೋಪ: ಬಘೇಲ್‌ಗೆ ನೋಟಿಸ್

ಬಿಲಾಸಪುರ (ಪಿಟಿಐ): ಛತ್ತೀಸಗಢ ಕಾಂಗ್ರೆಸ್ ಹಿರಿಯ ನಾಯಕ, ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ಶಾಸಕ ಸ್ಥಾನವನ್ನು ರದ್ದುಪಡಿಸಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗೆ ಸಂಬಂಧಿಸಿ ಛತ್ತೀಸಗಢ ಹೈಕೋರ್ಟ್ ಬಘೇಲ್ ಅವರಿಗೆ ಸೋಮವಾರ ನೋಟಿಸ್ ನೀಡಿದೆ.

ಕಳೆದ ವರ್ಷ ನವೆಂಬರ್‌ನಲ್ಲಿ ನಡೆದಿದ್ದ ಛತ್ತೀಸಗಢ ವಿಧಾನಸಭೆ ಚುನಾವಣೆ ವೇಳೆ ಪಾಠನ್ ಕ್ಷೇತ್ರದಲ್ಲಿ ಸಂಜೆ 5 ಗಂಟೆ ಬಳಿಕ ಚುನಾವಣಾ ರ್‍ಯಾಲಿಯನ್ನು ನಡೆಸುವ ಮೂಲಕ ಭೂಪೇಶ್ ಅವರು ಜನಪ್ರತಿನಿಧಿ ಕಾಯ್ದೆ– 1951 ಅನ್ನು ಉಲ್ಲಂಘಿಸಿದ್ದಾರೆ.

ಹೀಗಾಗಿ ಅವರ ಶಾಸಕ ಸ್ಥಾನವನ್ನು ರದ್ದುಪಡಿಸಬೇಕು ಮತ್ತು ಅವರಿಗೆ ಇನ್ನು ಆರು ವರ್ಷಗಳು ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಬೇಕು ಎಂದು ಆರೋಪಿಸಿ ಬಿಜೆಪಿ ಸಂಸದ ವಿಜಯ್ ಬಘೇಲ್ ಅವರು ಈ ಅರ್ಜಿ ಸಲ್ಲಿಸಿದ್ದಾರೆ.

ಮುಂದಿನ ವಿಚಾರಣೆಯನ್ನು ಫೆಬ್ರುವರಿ 26ಕ್ಕೆ ಹೈಕೋರ್ಟ್ ನಿಗದಿಪಡಿಸಿತು. ಚುನಾವಣೆಯಲ್ಲಿ ವಿಜಯ್ ಬಘೇಲ್ ಅವರು ಭೂಪೇಶ್ ಬಘೇಲ್ ಎದುರು ಸೋತಿದ್ದರು.

ಚಾರಣಪಥಗಳಿಗೆ ನಿರ್ಬಂಧ

ಒಂದನೇ ಪುಟದಿಂದ...

ಕೆಲವು ಚಾರಣಿಗರು ಚಾರಣ ವೇಳೆ ಟೆಂಟ್ ಹಾಕಿ ರಾತ್ರಿ ಅರಣ್ಯಗಳಲ್ಲಿಯೇ ಉಳಿಯುತ್ತಿರುವ ವಿಷಯವೂ ಗಮನಕ್ಕೆ ಬಂದಿದೆ ಎಂದು ಅವರು ತಿಳಿಸಿದ್ದಾರೆ.

ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಇಲ್ಲದ ಚಾರಣ ಪಥಗಳು ಅಂದರೆ ಕುಮಾರ ಪರ್ವತ, ಮೂರು ಕಣ್ಣಿನಗುಡ್ಡ ಸೇರಿ ಎಲ್ಲ ಚಾರಣ ತಾಣಗಳಲ್ಲಿ ಪ್ರಮಾಣಿತ ಕಾರ್ಯ ವಿಧಾನ ರೂಪಿಸುವವರೆಗೆ ಮತ್ತು ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಜಾರಿ ಮಾಡುವವರೆಗೆ ತಾತ್ಕಾಲಿಕವಾಗಿ ಚಾರಣಕ್ಕೆ ನಿರ್ಬಂಧ ವಿಧಿಸಬೇಕು ಎಂದು ಖಂಡ್ರೆ ಸೂಚಿಸಿದ್ದಾರೆ.

ಪ್ರಸ್ತುತ ಅರಣ್ಯ ಇಲಾಖೆ ಪರಿಸರ ಪ್ರವಾಸೋದ್ಯಮ ವಿಭಾಗದ ವತಿಯಿಂದ ನಿರ್ವಹಿಸುತ್ತಿರುವ ಚಾರಣ ಪಥಗಳಲ್ಲಿ 150 ಚಾರಣಿಗರಿಗೆ ಮಾತ್ರ ಅವಕಾಶ ನೀಡಲಾಗುತ್ತಿದ್ದು, https://www.karnatakaecotourism.com ನಲ್ಲಿ ಬುಕ್ಕಿಂಗ್‌ಗೆ ಅವಕಾಶ ನೀಡಲಾಗಿದೆ.

ಮೂರು ವರ್ಷಗಳ ಪದವಿಗೆ ಒಲವು

ಒಂದನೇ ಪುಟದಿಂದ...

ಇದರಿಂದ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಮಧ್ಯದಲ್ಲೇ ಪದವಿ ತೊರೆಯುವ, ಇಚ್ಛಿಸಿದರೆ ಮತ್ತೆ ಮರು ಸೇರ್ಪಡೆಗೊಳ್ಳಲು ಅವಕಾಶವಿತ್ತು.

ಎನ್‌ಇಪಿಯ ಇಂತಹ ನಿಯಮಗಳಿಗೆ ಅಂದು ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಸೇರಿದಂತೆ ವಿವಿಧ ಪಕ್ಷಗಳು, ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದವು. ಎನ್‌ಇಪಿಯ ನೀತಿ ಪರಿಶೀಲಿಸಿ, ಹೊಸದಾಗಿ ಶಿಕ್ಷಣ ನೀತಿ ರೂಪಿಸಲು ಥೋರಟ್ ಅಧ್ಯಕ್ಷತೆಯಲ್ಲಿ 11 ಸದಸ್ಯರು ಹಾಗೂ ಸಲಹೆ ನೀಡಲು ಎಂಟು ತಜ್ಞರನ್ನು ಒಳಗೊಂಡ ರಾಜ್ಯ ಶಿಕ್ಷಣ ನೀತಿ ಆಯೋಗವನ್ನು ರಚಿಸಲಾಗಿತ್ತು.

ಆಯೋಗ ರಚಿಸಿದ್ದ 9 ಉಪ ಸಮಿತಿಗಳು ನಾಲ್ಕು ವಿಭಾಗಗಳಲ್ಲಿ ಅಧ್ಯಯನ ನಡೆಸಿದ್ದು, ಆಯ್ದ ಕಾಲೇಜುಗಳ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರಿಂದ ಲಿಖಿತ ಪ್ರಶ್ನೆಗಳ ಮೂಲಕ ಎನ್‌ಇಪಿಯಲ್ಲಿನ ಹಲವು ಅಂಶಗಳ ಕುರಿತು ಅಭಿಪ್ರಾಯ ಸಂಗ್ರಹಿಸಿತ್ತು. ಅದರಲ್ಲಿ ನಾಲ್ಕು ವರ್ಷಗಳ ಪದವಿ ಹಾಗೂ ಬಹು ಪ್ರವೇಶ–ನಿರ್ಗಮನದ ವಿಷಯಗಳಿಗೆ ಬಹುತೇಕರು ವಿರೋಧ ವ್ಯಕ್ತಪಡಿಸಿದ್ದರು. ಅಭಿಪ್ರಾಯಗಳನ್ನೇ ವರದಿಯಲ್ಲಿ ಆಯೋಗ ಪ್ರಮುಖವಾಗಿ ಉಲ್ಲೇಖಿಸಿದ್ದು, ಎರಡನ್ನೂ ರದ್ದುಗೊಳಿಸುವ ಕುರಿತು ಶಿಫಾರಸು ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಸಾರಿಗೆ ಇಲಾಖೆ
ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027
ಸಂ: ಸಾಆ/ಪ್ರ–3/ಪಿಆರ್–71/2023–24 ದಿನಾಂಕ: 29.01.2024
ಇ–ಟೆಂಡರ್ ಪ್ರಕಟಣೆ
ಸಾರಿಗೆ ಇಲಾಖೆಯಿಂದ ರಾಜ್ಯ ಸಾರಿಗೆ ನಿಗಮದ ವಾಹನಗಳಲ್ಲಿ (ಕೆ.ಎಸ್.ಆರ್.ಟಿ.ಸಿ) **Driver Drowsiness & Collision Warning System** ಖರೀದಿ ಮತ್ತು ಅಳವಡಿಸುವ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ **https://kppp.karnataka.gov.in** ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ: +91–8046010000/+91–8068948777 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಪೋರ್ಟ್‌ಲ್ ಮೂಲಕ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **13–02–2024 ರ ಅಪರಾಹ್ನ 5–00 ಗಂಟೆಯವರೆಗೆ.**
ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: **080–22236698** ಅನ್ನು ಸಂಪರ್ಕಿಸಬಹುದು.
ಸಹಿ/– ಅಪರ ಸಾರಿಗೆ ಆಯುಕ್ತರು (ಪ್ರ) (ದ),
ಸಾರಿಗೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಬೆಂಗಳೂರು
ವಾಸಾಸಂಇ/ವಾಪ್ರ/ಸ್ಪ್ಯಾನ್/3309/2023–24

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು
ಅಲ್ಪಾವಧಿ ಟೆಂಡರ್ ಪ್ರಕಟಣೆ – ಕೆ.ಪಿ.ಪಿ. ಪೋರ್ಟಲ್ ಮುಖಾಂತರ
ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ:ಕಾಸಮಂ/ತಾ.ಶಾ./ಸ.ಇ/ಟೆಂಡರ್–11/2024/230 ದಿ: 29.01.2024
ಉಲ್ಲೇಖಿತ ಪತ್ರದನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಅರ್ಹ ಗುತ್ತಿಗೆದಾರರಿಂದ **ದಿ: 06.02.2024 ಸಂಜೆ 4.00 ಗಂಟೆಯವರೆಗೆ** ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು
DIPR/ADM/KSMCA/1196/23-24 dt.30.01.2024

ನಗರಸಭೆ ಕಾರ್ಯಾಲಯ, ಬೀದರ
ನಂ.ಬಿಎಂಸಿ/ಇಎನ್‌ಜಿ/ಸಿಆರ್–85/86/2023–24 ದಿನಾಂಕ:29.01.2024.
– : ಕೊರಿಜೆಂಡಮ್: –
ಈ ಕಛೇರಿಯ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆಯ ಸಂಖ್ಯೆ ಬಿಎಂಸಿ/ಇಎನ್‌ಜಿ/ಸಿಆರ್–85/86/2023–24 ದಿನಾಂಕ:–12–01–2024 ರಂತೆ ಟೆಂಡರಿಗಳಿಗೆ ಬಿಡ್ಡ್ ಸಲ್ಲಿಸುವ ಕೊನೆಯ ದಿನಾಂಕವನ್ನು 30–01–2024 ರಂದು ನಿಗದಿಪಡಿಸಲಾಗಿತ್ತು. ಸಾರ್ವಜನಿಕರ ಹಿದೃಷ್ಟಿಯಿಂದ ಬಿಡ್ಡ ಸಲ್ಲಿಸುವ ಕೊನೆಯ ದಿನಾಂಕವನ್ನು ದಿನಾಂಕ:–05–02–2024 ವರೆಗೆ ವಿಸ್ತರಿಸಲಾಗಿದೆ ಹಾಗೂ ದಿನಾಂಕ: 06–02–2024 ರ ಸಾಯಂಕಾಲ 04:30 ಗಂಟೆಗೆ ಟೆಂಡರ್ ತೆರೆಯಲಾಗುವುದುದೆಂದು ಕೊರಿಜೆಂಡಮ್ ಜಾರಿ ಮಾಡುವ ಮೂಲಕ ತಿಳಿಸಲಾಗಿದೆ. ಟೆಂಡರ್‌ನಲ್ಲಿರುವ ನಿಯಮ ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ.
ಸಹಿ/– ಪೌರಾಯುಕ್ತರು
ನಗರಸಭೆ ಬೀದರ
ವಾ.ಸಾ.ಸಂ.ಇ/ಬೀದರ/232–1/ಕೆ.ಎಸ್.ಎಂ.ಸಿ.&ಎ/2023–24

ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ
ವಿಶ್ವೇಶ್ವರಯ್ಯ ಕೇಂದ್ರ ಚಿಕ್ಕಗೋಪುರ, 3ನೇ ಮಹಡಿ, ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560 001 ದೂ:080–22867383
ಸಂಖ್ಯೆ:ಮರನಿ/ಮಿ.ವಾ/ದತ್ತು/59/2023–24/1340 ದಿನಾಂಕ: 25.01.2024
ಪೋಷಕರ ಪತ್ತೆಗಾಗಿ ಪ್ರಕಟಣೆ

ಮಗುವಿನ ಹೆಸರು: **ಕು.ಮಾಯವ್ ಮಾಧವ್.** ಲಿಂಗ: **ಗಂಡು**, ಜನ್ಮ ದಿನಾಂಕ: **08.11.2015**, ವಯಸ್ಸು: **8 ವರ್ಷ.** ಗುರುತಿಸುವಿಕೆ ಚಿಹ್ನೆ : **ಹೊಟ್ಟೆ ಎಡಭಾಗದಲ್ಲಿ ಕಪ್ಪು ಚುಕ್ಕೆ ಇರುವುದು.**
ಕು. ಮಾಯವ್ ಮಾಧವ್ ಎಂಬ ಮಗುವನ್ನು ಕೇರಳ ಮೂಲದ ಸಾಕು ಪೋಷಕರು ಪೋಷಕತ್ವ ಯೋಜನೆಯಡಿ ದಿನಾಂಕ: 07.08.2019 ರಂದು ಮಕ್ಕಳ ಕಲ್ಯಾಣ ಸಮಿತಿ, ಮಲಪುರಂ ಜಿಲ್ಲೆ, ಕೇರಳ, ಇವರ ಮೂಲಕ ಪೋಷಕತ್ವಕ್ಕೆ ಪಡೆದಿದ್ದು, ಪೋಷಕತ್ವದ ಅವಧಿ ಪೂರ್ಣಗೊಂಡಿರುವುದರಿಂದ ಸದರಿ ಮಗುವನ್ನು ಕಾನೂನುಬದ್ಧವಾಗಿ ದತ್ತು ಪಡೆಯಲು ಪೋಷಕರು ಅರ್ಜಿ ಸಲ್ಲಿಸಿರುವುದರಿಂದ ಈ ಮಗುವಿಗೆ ಸಂಬಂಧಿಸಿದ ಜೈವಿಕ ಪೋಷಕರಾಗಲಿ ಅಥವಾ ಸಂಬಂಧಿಕರಾಗಲಿ ಪತ್ರಿಕಾ ವರದಿಯ **ದಿನಾಂಕದಿಂದ 30 ದಿನಗಳೊಳಗೆ** ಮಗುವನ್ನು ಅರಸಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, 3ನೇ ಮಹಡಿ, ಮಿನಿ ಸಿವಿಲ್ ಸ್ಟೇಷನ್, ಮಂಜೇರಿ,ಮಲಪ್ಪುರಮ್–676121 (ದೂರವಾಣಿಸಂಖ್ಯೆ :0483–2978888) ಇಲ್ಲಿಗೆ ಭೇಟಿ ನೀಡಿ/ಸಂಪರ್ಕಿಸಿ ಮಗುವನ್ನು ಪಡೆಯಲು ಅವಕಾಶವಿರುತ್ತದೆ. ನಿಗದಿತ ಸಮಯದೊಳಗೆ ಸಂಬಂಧಪಟ್ಟ ಪೋಷಕರು ಮಗುವಿಗಾಗಿ ಬಾರದೇ ಇದ್ದಲ್ಲಿ ಕಾನೂನಾತ್ಮಕವಾಗಿ ಮಗುವನ್ನು ದತ್ತು ಪ್ರಕ್ರಿಯೆಗೆ ಒಳಪಡಿಸಲಾಗುವುದು.
ಸಹಿ/– ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ
ವಾಸಾಸಂಇ/ಉನಿ–ಸಿ.ಪಿ/3286/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–242293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2023–24/2323 ದಿ:29.01.2024.
ಅಲ್ಪಾವಧಿ ಟೆಂಡರ್ ಪ್ರಕಟಣೆ ("KPPP" ಪೋರ್ಟಲ್ ಕೆ.ಡಬ್ಲೂ–3 & 4 ಮುಖಾಂತರ)
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ನಬಾರ್ಡ್–29 ರಡಿ ಬಳ್ಳಾರಿ ಜಿಲ್ಲೆಯ 3 ಕಾಮಗಾರಿಗಳು ಹಾಗೂ ವಿಜಯನಗರ ಜಿಲ್ಲೆಯ 1 ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಅಂದಾಜು ಮೊತ್ತ ರೂ. **67.23** ಲಕ್ಷ ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ ರೂ. **101.64** ಲಕ್ಷಗಳಿರುತ್ತದೆ. ಟೆಂಡರ್‌ನ್ನು **ದಿನಾಂಕ: 29.01.2024** ರಿಂದ **ದಿನಾಂಕ: 05.02.2024** ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು **ದಿನಾಂಕ: 07.02.2024** ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು **ದಿನಾಂಕ: 09.02.2024** ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು **"KPPP"** ವೆಬ್‌ಸೈಟ್ **http:// kppp.karnataka.gov.in** ನಲ್ಲಿ ಪಡೆಯಬಹುದು.
ಸಹಿ/ ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/764/ಕೆಎಸ್‌ಎಂಸಿಎ/2023–24

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)
ಬೆವಿಕಂ, ವಿಚಾರಣೆ ಸಂಖ್ಯೆ **Enquiry No.BESCOM/2023-24/EL/WORK_INDENT99** ರಂತೆ ಬೆವಿಕಂನ ಪೂರ್ವ ವೃತ್ತ ವ್ಯಾಪ್ತಿಯಲ್ಲಿ ವಿವಿಧ ಸಂರಚನೆಯ ಮತ್ತು ವಿವಿಧ ಮಾದರಿಯ ಡಾಸ್ ಮತ್ತು ನಾನ್–ಡಾಸ್ ಆರ್.ಎಂ.ಯುಗಳ ದೋಷ ತಡೆಗಟ್ಟುವಿಕೆ ಮತ್ತು ನಿರ್ವಹಣೆ ಕಾಮಗಾರಿಗಾಗಿ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಬಿಡ್ ದಾಖಲೆಗಳು **31.01.2024**ರಿಂದ ಲಭ್ಯವಿರುತ್ತದೆ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **20.02.2024** ರಂದು ಮಧ್ಯಾಹ್ನ **3:00** ಗಂಟೆಗೆ. ಬಿಡ್ ದಾಖಲೆಗಳನ್ನು ದಿನಾಂಕ **21.02.2024** ರಂದು ಮಧ್ಯಾಹ್ನ **3:15** ಗಂಟೆಗೆ ತೆರೆಯಲಾಗುವುದು. ಟೆಂಡರ್‌ಗಳನ್ನು ಕೆಪಿಪಿ ವೆಬ್‌ಸೈಟ್ **https://kppp.karnataka.gov.in** ಮೂಲಕ ಪಡೆದು–ಕೊಳ್ಳಬಹುದು. ಇತರೆ ಯಾವುದೇ ಮಾಹಿತಿಗಾಗಿ ಕೆಪಿಪಿ ಸಹಾಯವಾಣಿ **(+91-8046010000, +91-8068948777)** ಅಥವಾ ಇ–ಮೇಲ್ **support@eprochelpdesk.com** ಸಂಪರ್ಕಿಸಬಹುದು.
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ
ಸಹಿ/– ಪ್ರಧಾನ ವ್ಯವಸ್ಥಾಪಕರು (ವಿ) ಖರೀದಿ, ಬೆವಿಕಂ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW–4:ಟೆಂ:2023–24:3343 ದಿನಾಂಕ: 25–01–2024.
ಅಲ್ಪಾವಧಿ ಟೆಂಡರ್ ಪ್ರಕಟಣೆ
2023–24ನೇ ಸಾಲಿನ ಲೆಕ್ಕ ಶೀರ್ಷಿಕೆ: ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮ್ಯಾಕ್ರೋ ಮತ್ತು ಮೈಕ್ರೋ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ KW-4 ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಒಟ್ಟು 13 ಕಾಮಗಾರಿಗಳಿಗೆ (**ವರ್ಕ ಇಂಡೆಂಟ್ ಸಂಖ್ಯೆ: 7230, 7222, 7076, 7030, 7226, 7219, 7075, 7029, 7073, 7216, 7082, 6758 & 7225**) ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ: 08–02–2024** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 09–02–2024** ಸಮಯ 16.30 ಗಂಟೆ, ಕನಿಷ್ಟ ಅಂದಾಜು ಮೊತ್ತ ರೂ. **200.00** ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ **ರೂ. 495.00** ಲಕ್ಷಗಳು ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಆರ್ಥಿಕ ಬಿಡ್ ತರೆಯುವ ದಿನಾಂಕ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು **http://kppp.karnataka.gov.in** ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ವಿಶೇಷ ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/367/ಕೆಎಸ್‌ಎಂಸಿಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್ವಜ್ಞನಗರ ವಿಭಾಗ, 7ನೇ ಮಹಡಿ, ಪಿ.ಯು. ಬಿಲ್ಡಿಂಗ್, ಎಂ.ಜಿ. ರಸ್ತೆ, ಬೆಂಗಳೂರು – 560001.
ಸಂಖ್ಯೆ: ಕಾ.ಅ.(ಸನ)/ಇ–ಪ್ರೊಕ್/ಟೆಂಡರ್/10/2023–24 ದಿನಾಂಕ: 30–01–2024
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ ವಿಭಾಗ), ಪೂರ್ವ ವಲಯ, ಬಿಬಿಎಂಪಿ, ಇವರು ಬಿಬಿಎಂಪಿ/ ಕೆಪಿಡಬ್ಲ್ಯೂಡಿ/ ಸಿಪಿಡಬ್ಲ್ಯೂಡಿ/ ರೈಲ್ವೇಸ್/ ಎಂಇಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ – ಕೆಡಬ್ಲ್ಯೂ4)

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಸರ್ವಜ್ಞನಗರ ಮತಕ್ಷೇತ್ರದ ರಸ್ತೆಗಳು, ಪಾದಚಾರಿಮಾರ್ಗ ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಕಾಮಗಾರಿ.	503.00	7,54,500/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **05–02–2024 ರ ಸಂಜೆ 4.00** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **08–02–2024 ರಂದು ಸಂಜೆ 4.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್ವಜ್ಞನಗರ ವಿಭಾಗ, 7ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ. ರಸ್ತೆ, ಬಿಬಿಎಂಪಿ ಇಲ್ಲಿ ನಡೆಯುವುದು.** 3) ಭರ್ತಿ ಮಾಡಿದ ಟೆಂಡರ್ ದಸ್ತಾವೇಜನ್ನು ಸಲ್ಲಿಸುವ ಕೊನೆಯ ದಿನಾಂಕ: **29–02–2024 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **01–03–2024 ರಂದು ಸಂಜೆ 4.30 ಗಂಟೆಗೆ ವೆಬ್‌ಸೈಟ್: https://kppp.karnataka.gov.in ನಲ್ಲಿ ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್ವಜ್ಞನಗರ ವಿಭಾಗ, 7ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ. ರಸ್ತೆ, ಬೆಂಗಳೂರು ಇಲ್ಲಿ ತೆರೆಯಲಾಗುವುದು (ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು).** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿಬಿಎಂಪಿ.

ಪುರಸಭಾ ಕಾರ್ಯಾಲಯ ಬೊಮ್ಮಸಂದ್ರ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560 099
ಫೋನ್: 080–27834655, E-Mail: itstaff_ulb_bommasandra@yahoo.com
ಸಂ:TMCB/ENG/MF/Tender 09/2023-24 ದಿನಾಂಕ:29.01.2024
ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ KW ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)
2023–24ನೇ ಸಾಲಿನ ಬೊಮ್ಮಸಂದ್ರ ಪುರಸಭಾ ನಿಧಿ ಅನುದಾನದಡಿ, ಒಟ್ಟು 05 ಕಾಮಗಾರಿಗಳ ಒಟ್ಟು ಮೊತ್ತ ರೂ. 118.40 ಲಕ್ಷಗಳಿಗೆ ಐಟಂವಾರು ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನ ಕೆಪಿಪಿ ಪೋರ್ಟಲ್‌ನ ಮೂಲಕ ಏಕ–ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಕೆಪಿಪಿ ಪೋರ್ಟಲ್‌ನ ವೆಬ್‌ಸೈಟ್: https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ದೀರ್ಘಾವಧಿ ಟೆಂಡರ್‌ಗಳಿಗೆ ಕೊನೆಯ ದಿನಾಂಕ: **13.02.2024ರ ಸಮಯ: 17:00 ಗಂಟೆಯವರೆಗೆ.** ಟೆಂಡರ್ ತೆರೆಯುವ ದಿನಾಂಕ: **14.02.2024 ರ ಸಮಯ: 17:30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ (itstaff_ulb_bommasandra@yahoo.com) ಅಥವಾ ಪುರಸಭೆಯ ಕಿರಿಯ ಅಭಿಯಂತರರನ್ನು ಸಂಪರ್ಕಿಸುವುದು.
ಸಹಿ/– ಅಧ್ಯಕ್ಷರು ಪುರಸಭೆ, ಬೊಮ್ಮಸಂದ್ರ | ವಾಸಾಸಂಇ/ವಾಪ್ರ/ಜಿಎ/3303/2023–24 | ಸಹಿ/– ಮುಖ್ಯಾಧಿಕಾರಿ ಪುರಸಭೆ, ಬೊಮ್ಮಸಂದ್ರ

ಪುರಸಭೆ ಕಾರ್ಯಾಲಯ ಇಂಡಿ
ವೆಬ್‌ಸೈಟ್: www.inditown.mrc.gov.in,
ಇ–ಮೇಲ್:itstaff_ulb_indi@yahoo.co.in, ಫೋನ್/ಫ್ಯಾಕ್ಸ್:08359–225025
ಕ್ರ.ಸಂ:ಪು.ಸ.ಇಂ/ಕಂ.ವಿ/ವಾ.ಮ.ಹ/2023–24 ದಿನಾಂಕ:29.01.2024
ಮೆಗಾ ಮಾರುಕಟ್ಟೆ ವಾಣಿಜ್ಯ ಮಳಿಗೆ ಬಹಿರಂಗ ಹರಾಜು ಪ್ರಕಟಣೆ
ಇಂಡಿ ಪುರಸಭೆ ವ್ಯಾಪ್ತಿಯ ಸ್ಟೇಶನ್ ರಸ್ತೆ, ಪುರಸಭೆ ಮಾಲಿಕತ್ವದ ಸರ್ವೆ ನಂ.626/ಪಿ–01ರಲ್ಲಿ ನೂತನವಾಗಿ ನಿರ್ಮಿಸಲಾದ ಮೆಗಾ ಮಾರುಕಟ್ಟೆ ಹಂತ–1ರಲ್ಲಿ ಪೂರ್ಣಗೊಂಡ ವಾಣಿಜ್ಯ ಮಳಿಗೆಗಳನ್ನು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಕಲಂ 72(2), ಸರ್ಕಾರದ ಸುತ್ತೋಲೆ ಸಂಖ್ಯೆ:ನ.ಅ.ಇ/311/ಜಿ.ಇ.ಎಲ್/ 2017 ದಿನಾಂಕ: 19–07–2019, ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ನ.ಅ.ಇ/ ಟಿ.ಎಮ್.ಎಸ್/ 2021(ಇ) ದಿನಾಂಕ: 04–11–2022ರನ್ವಯ, ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ರವರ ಪರಿಷ್ಕೃತ ದರ ಅನುಮೋದನೆ ಆದೇಶ ಕ್ರ.ಸಂ:ಜಿ.ನ.ಕೋ–5/ ಮಳಿಗೆ ಲಿಲಾವು/ ಸಿ.ಆರ್/2023–24 ದಿನಾಂಕ: 03–11–2023ರನ್ವಯ ಬಹಿರಂಗ ಹರಾಜು ಮೂಲಕ ದಿನಾಂಕ: 15.02.2024 ರಂದು ಬೆಳಿಗ್ಗೆ 11.00 ಗಂಟೆಗೆ ಮೆಗಾ ಮಾರುಕಟ್ಟೆ ಆವರಣದಲ್ಲಿ ವಿಲೇಗೊಳಿಸಲು ಉದ್ದೇಶಿಸಲಾಗಿದೆ. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ರೂ.500/–ಗಳನ್ನು ಪಾವತಿಸಿ ಪುರಸಭೆಯ ಕಂದಾಯ ವಿಭಾಗದಿಂದ ಖಾಲಿ ಟೆಂಡರ ಫಾರಂ ಪಡೆದುಕೊಳ್ಳುವುದು. ತದನಂತರ ರೂ. 50,000/– ಗಳ ಇ–ಸ್ವೀಕೃತಿ ಚಲನ ಪಡೆದು ಬ್ಯಾಂಕಿಗೆ ಹಣ ಸಂದಾಯ ಮಾಡಿ, ಚಲನ್ ಮೂಲ ಪ್ರತಿ (ULB ಪ್ರತಿ), ಗುರುತಿನ ಚೀಟಿ ಹಾಗೂ ಮೀಸಲಾತಿಗೆ ಅನುಗುಣವಾಗಿ ನಿಗಧಿಪಡಿಸಿದ ಅಗತ್ಯ ದಾಖಲಾತಿಗಳನ್ನು ಟೆಂಡರ ಫಾರಂನೊಂದಿಗೆ ಲಗತ್ತಿಸಿ ದಿನಾಂಕ: 15.02.2024 ರ ಬೆಳಿಗ್ಗೆ 11.00 ರ ಒಳಗಾಗಿ ಪುರಸಭೆಗೆ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ವಾಣಿಜ್ಯ ಮಳಿಗೆಗಳ ವಿಸ್ತೀರ್ಣ, ಮೀಸಲಾತಿ, ಠೇವಣಿ ಮೊತ್ತ, ಬಾಡಿಗೆ ಮೊತ್ತ, ಇತ್ಯಾದಿ ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಛೇರಿಯ ಸೂಚನಾ ಫಲಕ/ ಮುಖ್ಯಾಧಿಕಾರಿಗಳು/ ಕಛೇರಿ ವ್ಯವಸ್ಥಾಪಕರು/ ಕಂದಾಯ ಅಧಿಕಾರಿಯನ್ನು ಸಂಪರ್ಕಿಸಬಹುದು ಅಥವಾ ವೆಬ್‌ಸೈಟ್ ಲಿಂಕ್: http://www.inditown.mrc.gov.in/ ನಲ್ಲಿ ಪರಿಶೀಲಿಸಬಹುದಾಗಿದೆ.
ಹರಾಜು ಘಟನಾವಳಿ ವಿವರ & ನಿಗಧಿಪಡಿಸಿದ ಅವಧಿ
1) ಖಾಲಿ ಟೆಂಡರ ಫಾರಂಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಖಾಲಿ ಟೆಂಡರ ಫಾರಂ ನೀಡುವ, ಇ–ಸ್ವೀಕೃತಿ ಚಲನ್ ಪಡೆದು ಬ್ಯಾಂಕಿಗೆ ಹಣ ಸಂದಾಯ ಮಾಡಲು ಕೊನೆಯ **ದಿನಾಂಕ :15.02.2024 ಬೆಳಿಗ್ಗೆ 11.00 ಗಂಟೆವರೆಗೆ**
2) ಭರ್ತಿ ಮಾಡಿದ ಟೆಂಡರ ಫಾರಂ ಸ್ವೀಕರಿಸುವ ಕೊನೆಯ **ದಿನಾಂಕ: 15.02.2024 ಬೆಳಿಗ್ಗೆ 11.00 ಗಂಟೆವರೆಗೆ**
3) ಬಹಿರಂಗ ಹರಾಜು **ದಿನಾಂಕ: 15.02.2024 ಬೆಳಿಗ್ಗೆ 11.00 ಗಂಟೆವರೆಗೆ**
4) ಬಹಿರಂಗ ಹರಾಜು **ಸ್ಥಳ: ಮೆಗಾ ಮಾರುಕಟ್ಟೆ ಆವರಣ.**
ಸಹಿ/– ಮುಖ್ಯಾಧಿಕಾರಿ, ಪುರಸಭೆ ಇಂಡಿ | ಸಹಿ/– ಆಡಳಿತಾಧಿಕಾರಿಗಳು ಪುರಸಭೆ ಇಂಡಿ ಹಾಗೂ ಉಪವಿಭಾಗಾಧಿಕಾರಿಗಳು ಪುರಸಭೆ ಇಂಡಿ
ವಾಸಾಸಂಇ/ವಿಜಯಪುರ/419/ಕೆಎಸ್‌ಎಂಸಿಎ/2023–24

ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಆಯುಕ್ತರವರ ಕಚೇರಿ, "ವಾರ್ತಾ ಸೌಧ", ಸಂ. 17, ಭಗವಾನ್ ಮಹಾವೀರ್ ರಸ್ತೆ, (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು–560001
ಸಂಖ್ಯೆ:ಡಿಐಪಿಆರ್/ಎಫ್‌ಪಿ/ಪಿಡಿ/ಎಲ್‌ಇಡಿವ್ಯಾನ್/ಟೆಂಡರ್/2024–25/9387 ದಿನಾಂಕ: 23.01.2024
ಇ–ಟೆಂಡರ್ ಪ್ರಕಟಣೆ
ಕರ್ನಾಟಕದಾದ್ಯಂತ ಪ್ರಗತಿ ದರ್ಶನ ಕಾರ್ಯಕ್ರಮಗಳನ್ನು ಏರ್ಪಡಿಸುವುದಕ್ಕಾಗಿ
ಕರ್ನಾಟಕದಾದ್ಯಂತ "ಪ್ರಗತಿ ದರ್ಶನ" ಕಾರ್ಯಕ್ರಮಗಳನ್ನು ಏರ್ಪಡಿಸುವುದಕ್ಕಾಗಿ ಅನುಭವ ಹೊಂದಿರುವ ಮೊಬೈಲ್ ಎಲ್‌ಇಡಿ ವಾಹನಗಳ ಪ್ರಚಾರ ಕಾರ್ಯ ನಡೆಸುವ ಏಜೆನ್ಸಿಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆ ಹಾಗೂ ಪಟ್ಟಿಯಲ್ಲಿ ಹೆಸರು ಸೇರ್ಪಡೆಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಸಂಘಟಕರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರದ ವಿವಿಧ ಯೋಜನೆಗಳನ್ನು ಪ್ರಚಾರ ಮಾಡುವ ಮೂಲಕ, ಸರ್ಕಾರದಿಂದ ನಿಯೋಜನೆ ಮಾಡಿದ ಗ್ರಾಮಗಳು, ತಾಲ್ಲೂಕುಗಳಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗುವುದು. ಪ್ರಗತಿ ದರ್ಶನ ಪ್ರದರ್ಶನವು ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ ಜನತೆಗಾಗಿ ರೂಪಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕಲ್ಯಾಣ ಯೋಜನೆಗಳ ಬಗ್ಗೆ ಸಾಕ್ಷ್ಯಚಿತ್ರಗಳನ್ನು ಪ್ರತಿ ಜಿಲ್ಲೆಯಲ್ಲಿ ಪ್ರದರ್ಶಿಸಲು ಮೊಬೈಲ್ ಎಲ್‌ಇಡಿ ವ್ಯಾನ್ ಒಳಗೊಂಡಿರಬೇಕು. ಟೆಂಡರುದಾರರು/ ಬಿಡ್‌ದಾರರು ಟೆಂಡರ್ ದಸ್ತಾವೇಜನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಇಲ್ಲಿಂದ **ದಿನಾಂಕ: 29.01.2024 ರಂದು ಮಧ್ಯಾಹ್ನ 3:00 ಗಂಟೆಯ ನಂತರದಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆಯ **ದಿನಾಂಕ: 12.02.2024.** ಟೆಂಡರ್ ಸಲ್ಲಿಸುವ ಕಡೆಯ **ದಿನಾಂಕ: 29.02.2024 ರಂದು ಮಧ್ಯಾಹ್ನ 3:00 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 02.03.2024.** ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಬಿಡ್‌ದಾರರ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04.03.2024 ರಂದು.** ಬಿಡ್ ತೆರೆಯುವ ಸ್ಥಳ: **ಆಯುಕ್ತರವರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ (ಡಿಐಪಿಆರ್), "ವಾರ್ತಾ ಸೌಧ", ಸಂ. 17, ಭಗವಾನ್ ಮಹಾವೀರ್ ರಸ್ತೆ, ಬೆಂಗಳೂರು. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 080–22028103 ಸಂಪರ್ಕಿಸಿ.**
ಸಹಿ/– ಆಯುಕ್ತರು
ವಾಸಾಸಂಇ/ಉನಿ–ಸಿ.ಪಿ/3298/ಕೆಎಸ್‌ಎಂಸಿಎ/2023–24

LIC OF INDIA
Divisional Office: OS/Estates Department
'Jeevan Krishna', Ajjarkad, UDUPI - 576 101
0820 2593213 E-mail: os.udupi@licindia.com
NOTICE FOR EMPANELMENT OF MANUFACTURERS/VENDORS/SERVICE PROVIDERS
Applications for Empanelment are invited from reputed suppliers / Vendors and Service providers for the following Categories. The panel shall be valid for Three years from the date of Empanelment at LIC OF INDIA, Udupi Divisional Office for the following Categories.
1. Supply of furniture and office equipment including electrical fittings, wooden & iron safes, Fire/Water proof storage equipments. **2.** Supply of printed stationary/forms/books/registers as per our formats. **3.** Supply of computer continuous stationary both blank and pre- printed. **4.** Supply of Envelopes/office files/ plastic files/ tape files etc. **5.** Supply of table stationary/Office Stationery. **6.** Supply of IT Consumables-Ribbons, Cartridges, Ink Bottles etc. **7.** Fire Alarm/Fire Extinguisher Suppliers & Maintenance. **8.** Supply of bituminized envelopes/ dockets. **9.** Supply of rubber stamps/ visiting cards/ ID-Cards/Binding works etc. **10.** Supply of Sign Boards/ Name Boards/Name Plates. **11.** Pest-Control Services/Rodent Treatment etc. **12.** Transportation of parcel/ stationary materials. **13.** Disposal of old papers/ Sweepings. **14.** Dress Materials Suppliers, Bed Sheets, Towels etc. **15.** Suppliers of Note Counting Machines, Fake Note Detectors. **16.** Suppliers of water purifiers. **17.** Vendors for House keeping Services & maintenance services of Office/Guest Houses. **18.** AMC for water coolers, Air coolers, Air conditioners, Water Purifiers/ RO System/Aquaguard/ Copier machine, Franking machine, Note counting machine, Fake note detectors. **19.** Vendors for Electrical maintenance work. **20.** Water Tank Cleaning Services. **21.** Deep Cleaning of Toilets
For complete details and empanelment documents, please contact the OS Department at the above Address during cash hours or log on to www.licindia.in under the link "Tenders". For the forms downloaded online, the forms duly filled must accompany the requisite application fee of Rs. 500/- as above in the form of DD/Banker's Cheque favouring LIC of India payable at Udupi for each job of Empanelment separately.
Applications duly completed in all respects are to be submitted along with supporting documents to "Sr. Divisional Manager, LIC of India, Divisional Office, Ajjarkad, UDUPI-576 101" in closed cover superscribed as "Application for Empanelment as manufacturers/Vendors/Service providers -Sl.No. ...
All further information such as correction/addition/deletion in terms and conditions, if any, will be published at our website only. LIC of India reserves the right to accept or reject any or all applications in full/part without assigning any reasons whatsoever.
Last date for submitting the documents for Empanelment is 21.02.2024 upto 03.30 p.m.
Place: Udupi Date: 31.01.2024 Sd/- **Sr. Divisional Manager**

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು-560064.
ವೆಬ್‌ಸೈಟ್: www.rwf.indianrailways.gov.in
ಟೆಂಡರ್ ಸಂ: ಆರ್‌ಡಬ್ಲ್ಯೂಎಫ್/ಡಬ್ಲ್ಯೂ/2023–24/13 ದಿನಾಂಕ :29/01/2024
ಭಾರತದ ರಾಷ್ಟ್ರಪತಿಗಳ ಪರವಾಗಿ ಉಪ ಮುಖ್ಯ ಇಂಜಿನಿಯರ್ ಈ ಕೆಳಕಂಡ ಕೆಲಸಗಳ ಪೂರೈಕೆಗಾಗಿ ಆನ್‌ಲೈನ್ ವೆಬ್‌ಸೈಟ್ www.ireps.gov.in ಮೂಲಕ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಟೆಂಡರ್‌ನ ಸಂಕ್ಷಿಪ್ತ ವಿವರ
1	ಟೆಂಡರ್ ನಂ. ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ಯಲಹಂಕ/1027. ವಿವರ : 04 ವರ್ಷಗಳ ಅವಧಿಗೆ ರೈಲು ಗಾಲಿ ಕಾರ್ಖಾನೆಯ ಪ್ಲ್ಯಾಂಟ್ ಮತ್ತು ಕಾಲೋನಿಗಳಲ್ಲಿ ಯಂತ್ರೀಕೃತ ಶುಚಿಗೊಳಿಸುವಿಕೆ, ಅಲೈಡ್ ವರ್ಕ್ಸ್ ಹಾಗೂ ಹೌಸ್‌ಕೀಪಿಂಗ್ ಸೇವೆಗಳಿಗಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಅಂದಾಜು ಮೌಲ್ಯ : ರೂ. 27,24,48,884.88. ಪೂರ್ವ ಬಿಡ್ ಸಭೆಯ ದಿನಾಂಕ & ಸಮಯ:19.02.2024, 11.00 ಗಂಟೆ, ಕೊನೆಯ ದಿನಾಂಕ&ಸಮಯ: 05.03.2024, 11.00 ಗಂಟೆಯವರೆಗೆ.

ಉಪ ಮುಖ್ಯ ಇಂಜಿನಿಯರ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು ದಕ್ಷಿಣ ವಿಭಾಗ, ಅಮೃತನಗರ, ಕೋಣನಕುಂಟೆ ಮುಖ್ಯರಸ್ತೆ, ಸೌದಾಮಿನಿ ಬಡಾವಣೆ, ಬೆಂಗಳೂರು – 560 062.
ಸಂ: ಕಾಅ/ಬೆಂದವಿ/ಟೆಂಡರ್(ತಿದ್ದುಪಡಿ)/11/2023–24 ದಿನಾಂಕ:30.01.2024
ತಿದ್ದುಪಡಿ
ಉಲ್ಲೇಖ: ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: **ಬಿಬಿಎಂಪಿ/ಕಾಪಾಅ/ಬೆಂದವಿ/ಟೆಂಡ್–11/2023–24 ದಿನಾಂಕ:22.01.2024** ಮೇಲ್ಕಂಡ ವಿಷಯಕ್ಕೆ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಕಾರಣಗಳಿಂದ ಟೆಂಡರ್ ಪ್ರಕಟಣೆಯ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ.

ವಿವರಗಳು	ಟೆಂಡರ್ ಪ್ರಕಟಣೆಯಲ್ಲಿ ನಿಗದಿ ಪಡಿಸಿರುವ ದಿನಾಂಕ ಮತ್ತು ಸಮಯ	ತಿದ್ದುಪಡಿ ಮಾಡಲಾಗಿರುವ ದಿನಾಂಕ ಮತ್ತು ಸಮಯ
ಟೆಂಡರ್‌ಗಳಿಗೆ ಬಿಡ್ ಸಲ್ಲಿಸುವ ಕೊನೆಯ ದಿನಾಂಕ	12.02.2024 ರ ಸಂಜೆ 4.00 ಗಂಟೆಯವರೆಗೆ	**07.02.2024 ರ ಸಂಜೆ 4.00 ಗಂಟೆಯವರೆಗೆ**
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	14.02.2024 ರ ಸಂಜೆ 4.30 ಗಂಟೆಗೆ	**08.02.2024 ರ ಸಂಜೆ 4.30 ಗಂಟೆಗೆ**

ಉಳಿದಂತೆ ನಿಯಮ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ವಿಭಾಗ.

ಕರ್ನಾಟಕ ಸರ್ಕಾರ – (ಜಲಸಂಪನ್ಮೂಲ ಇಲಾಖೆ)
ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇಂಜಿನಿಯರಿಂಗ್ ವಿಭಾಗ ಮಲವಗೊಪ್ಪ, ನಿಧಿಗೆ ಅಂಚೆ, ಶಿವಮೊಗ್ಗ–577222
ನಂ:ಭಕಾಶಿ/ಇಂ.ವಿಭಾಗ/ತಾಂಶಾಖೆ/ಮರುಟೆಂಡರ್/2023–24/561 ದಿ:29.01.2024
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (IFT-06/2023-24)
ಮಾನ್ಯ ಆಡಳಿತಾಧಿಕಾರಿಗಳು, ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ–1999, ನಿಯಮಗಳು–2000 ರ ಹಾಗೂ ನಿಯಮಾವಳಿಗಳು 2017ರ ಪ್ರಕಾರ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ವಿಭಾಗ, ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಮೂರನೇ ದರ್ಜೆ ಮತ್ತು ಅದಕ್ಕಿಂತ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕಟ್ಟಡ ಕಾಮಗಾರಿಗೆ ಐಟಂವಾರು ಅಲ್ಪಾವಧಿ ಮರು ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ವಿವರ ಕೆಳಗಿನಂತಿದೆ. 1. ಟೆಂಡರನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ access ಮಾಡಬಹುದಾದ ದಿನಾಂಕ: 29.01.2024 ರಿಂದ 06.02.2024 ರವರೆಗೆ. **2.** ಭರ್ತಿ ಮಾಡಿದ ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:06.02.2024 ಸಂಜೆ 4.00 ಗಂಟೆವರೆಗೆ **3.** ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (ದ್ವಿ–ಲಕೋಟೆ ಪದ್ಧತಿ): 07.02.2024 ಸಂಜೆ 5.30 ಗಂಟೆಯ ನಂತರ **4.** ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: 09.02.2024 ಬೆಳಿಗ್ಗೆ 11.00 ಗಂಟೆಯ ನಂತರ. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇಂಜಿನಿಯರಿಂಗ್ ವಿಭಾಗ, ಭದ್ರಾಕಾಡಾ, ಶಿವಮೊಗ್ಗ ಇವರ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಅಥವಾ ವೆಬ್ ಸೈಟ್ http:/www.kppp.gov.in ನಿಂದ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಇಂಜಿನಿಯರಿಂಗ್ ವಿಭಾಗ, ಭದ್ರಾಕಾಡಾ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/165/01/23–24/1151

ಸುಭಾಷಿತ
ಒಬ್ಬ ವ್ಯಕ್ತಿಯ ನಡತೆಯನ್ನು ಪರೀಕ್ಷಿಸಬೇಕೆಂದರೆ, ಆತನಿಗೆ ಅಧಿಕಾರ ಕೊಟ್ಟು ನೋಡಿ.
–ಅಬ್ರಹಾಂ ಲಿಂಕನ್

ಸಂಪುಟ ದರ್ಜೆ ಸಚಿವ ಸ್ಥಾನ ಬೊಕ್ಕಸಕ್ಕೆ ಹೊರೆ, ಅಭಿವೃದ್ಧಿಗೆ ಬರೆ

ರಾಜ್ಯದ ವಿವಿಧ ನಿಗಮ, ಮಂಡಳಿ, ಪ್ರಾಧಿಕಾರಗಳಿಗೆ ಅಧ್ಯಕ್ಷರನ್ನಾಗಿ 34 ಶಾಸಕರನ್ನು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನೇಮಿಸಿದೆ. ಶಾಸಕರು ಹೊಂದಿರುವ ಪರಿಣತಿಯನ್ನು ಪರಿಗಣಿಸಿಯೋ ಅಥವಾ ನಿಗಮ–ಮಂಡಳಿಗಳಿಗೆ ಕಾಯಕಲ್ಪ ನೀಡುವ ಉದ್ದೇಶದಿಂದಲೋ ಆಗಿರುವಂತಹ ನೇಮಕಗಳಲ್ಲ ಇವು. ಬಹುಮಟ್ಟಿಗೆ ರಾಜಕೀಯ ಕಾರಣಗಳಿಗಾಗಿ ಆಗಿರುವಂತಹ ನೇಮಕಗಳು. ಶಾಸಕರ ಅಸಮಾಧಾನ ಶಮನಗೊಳಿಸುವುದಕ್ಕಾಗಿಯೋ ಅವರನ್ನು ಒಲಿಸಿಕೊಳ್ಳುವ ಉದ್ದೇಶದಿಂದಲೋ ಮಾಡಿರುವಂತಹವು. ಇಷ್ಟೇ ಆಗಿದ್ದರೆ ಪರವಾಗಿಲ್ಲ. ಆದರೆ ಎಲ್ಲರಿಗೂ ಸಂಪುಟ ದರ್ಜೆಯ ಸಚಿವ ಸ್ಥಾನವನ್ನೂ ಕಲ್ಪಿಸಲಾಗಿದೆ. ಇದು ನಿಸ್ಸಂದೇಹವಾಗಿ ಬೊಕ್ಕಸಕ್ಕೆ ಹೊರೆಯಾಗುವ ಉಪಕ್ರಮ. ಭೀಕರ ಬರದಿಂದ ರಾಜ್ಯ ತತ್ತರಿಸಿದೆ. 223 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಸರ್ಕಾರವೇ ಘೋಷಿಸಿದೆ. ‘ಗ್ಯಾರಂಟಿ’ ಹೆಸರಿನಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳು ಕಷ್ಟಕಾಲದಲ್ಲಿ ಜನರಿಗೆ ತುಸು ಆಸರೆಯಾಗಿ ನಿಲ್ಲಬಹುದು. ಆದರೆ, ಈ ಯೋಜನೆಗಳನ್ನು ಮುಂದುವರಿಸಬೇಕಾದರೆ ಪ್ರತಿವರ್ಷ ₹ 50 ಸಾವಿರ ಕೋಟಿಗೂ ಹೆಚ್ಚಿನ ಮೊತ್ತವನ್ನು ತೆಗೆದಿಡಬೇಕಾಗುತ್ತದೆ. ಸರ್ಕಾರವು ಆರ್ಥಿಕ ಮುಗ್ಗಟ್ಟಿನಲ್ಲಿ ಇರುವಾಗ ಸಂಪುಟ ದರ್ಜೆಯ ಸಚಿವ ಸ್ಥಾನ ನೀಡುವ ಅಗತ್ಯ ಏನಿತ್ತು? ಇದು, ರಾಜ್ಯದ ಆರ್ಥಿಕ ಹಿತದೃಷ್ಟಿಯಿಂದ ವಿವೇಚನೆಯುತ ಕ್ರಮವಂತೂ ಅಲ್ಲ.



ಸರ್ಕಾರಕ್ಕೆ ಆರ್ಥಿಕ ಸಂಕಷ್ಟ ಬೆನ್ನೇರಿರುವಾಗ ಕೆಲವರ ಓಲೈಕೆಗಾಗಿ ಇಷ್ಟು ವೆಚ್ಚ ಮಾಡುವುದು ಸರಿಯಾದ ಕ್ರಮವಲ್ಲ

ಹಿಂದೆ ಕೆಲವು ಸಂದರ್ಭಗಳಲ್ಲಿ ‘ಜಂಬೊ ಕ್ಯಾಬಿನೆಟ್’ ರಚನೆಯಾಗಿದ್ದ ನಿದರ್ಶನಗಳಿವೆ. ಸಚಿವ ಸ್ಥಾನವು ಭಿನ್ನಮತ ಶಮನಗೊಳಿಸುವ ತಂತ್ರವಾಗಿ ಪರಿಣಮಿಸಿತ್ತು. ಬೊಕ್ಕಸಕ್ಕೆ ಹೊರೆಯಾಗುವ ಇಂತಹ ಕ್ರಮ ತಪ್ಪಿಸುವ ಸಲುವಾಗಿಯೇ ಸಂವಿಧಾನಕ್ಕೆ ತಿದ್ದುಪಡಿ ತರಲಾಯಿತು. ಲೋಕಸಭೆ ಅಥವಾ ವಿಧಾನಸಭೆಯ ಒಟ್ಟು ಸದಸ್ಯ ಬಲದ ಶೇ 15ರಷ್ಟು ಮಂದಿಯನ್ನು ಮಾತ್ರ ಸಚಿವರನ್ನಾಗಿ ನೇಮಕ ಮಾಡಿಕೊಳ್ಳಬಹುದು ಎಂಬ ನಿರ್ಬಂಧವನ್ನು ಹಾಕಲಾಯಿತು. ಇದರಿಂದಾಗಿ, ಸಚಿವ ಸಂಪುಟದ ಗಾತ್ರವನ್ನು ಮನಸೋಇಚ್ಛೆ ಹಿಗ್ಗಿಸುವ ಪರಿಪಾಟಕ್ಕೆ ಕಡಿವಾಣ ಬಿತ್ತು. ಅದನ್ನು ಬೇರೆ ರೂಪದಲ್ಲಿ ತುಂಬಿಕೊಳ್ಳುವ ಜಾಣತನವನ್ನು ಸರ್ಕಾರಗಳು ಈಗ ಮೈಗೂಡಿಸಿಕೊಂಡಿವೆ. ಆ ಚಾಳಿಯ ಮುಂದುವರಿಕೆಯಾಗಿಯೇ ಈಗಿನ ನೇಮಕವನ್ನು ಮತ್ತು ಅವರಿಗೆ ಸಂಪುಟ ದರ್ಜೆಯ ಸಚಿವ ಸ್ಥಾನ–ಸೌಲಭ್ಯ ಕಲ್ಪಿಸಿರುವುದನ್ನು ಕಾಣಬೇಕಾಗುತ್ತದೆ. ‘ನಮ್ಮ ಶಾಸಕರಿಗೆ ಬಿಜೆಪಿಯು ಆಮಿಷಗಳನ್ನು ನಿರಂತರವಾಗಿ ಒಡ್ಡುತ್ತಲೇ ಇದೆ. ಅವರನ್ನು ಹಿಡಿದಿಟ್ಟುಕೊಳ್ಳಲು ಈ ರೀತಿಯ ಕ್ರಮ ಅನಿವಾರ್ಯ’ ಎಂಬ ಮಾತುಗಳು ಆಡಳಿತ ಪಕ್ಷದ ವಲಯದಲ್ಲಿ ಕೇಳಿಬರುತ್ತಿವೆ. ಇದರಲ್ಲಿ ಸತ್ಯಾಂಶ ಇದ್ದಿರಬಹುದಾದರೂ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಒಪ್ಪುವಂತಹ ನಡೆ ಅಲ್ಲ. ಬೊಕ್ಕಸಕ್ಕೆ ಅನಗತ್ಯವಾಗಿ ಹೊರೆಯಾಗುವ ತೀರ್ಮಾನ ಕೈಗೊಳ್ಳುವುದು ಆರ್ಥಿಕತೆಯ ಆರೋಗ್ಯಕ್ಕೆ, ರಾಜ್ಯದ ಪ್ರಗತಿಗೆ ಮಾರಕ.

ಕರ್ನಾಟಕದ ವಿಧಾನಸಭೆಯ ಒಟ್ಟು ಸದಸ್ಯ ಬಲ 224. ನಿಯಮಾನುಸಾರ ಮುಖ್ಯಮಂತ್ರಿ ಸೇರಿ 34 ಮಂದಿಗೆ ಮಾತ್ರ ಸಂಪುಟದಲ್ಲಿ ಸ್ಥಾನ ಕಲ್ಪಿಸಲು ಅವಕಾಶ ಇದೆ. ಸಚಿವರೇನೋ ಅಷ್ಟೇ ಸಂಖ್ಯೆಯಲ್ಲಿ ಇದ್ದಾರೆ. ಆದರೆ ಅಷ್ಟೇ ಸಂಖ್ಯೆಯ ಶಾಸಕರನ್ನು ನಿಗಮ, ಮಂಡಳಿಗಳಿಗೆ ನೇಮಿಸಿ ಅವರಿಗೆ ಸಂಪುಟ ದರ್ಜೆ ಸಚಿವ ಸ್ಥಾನ–ಸೌಲಭ್ಯ ಕಲ್ಪಿಸಿರುವುದು ರಂಗೋಲಿ ಕೆಳಗೆ ನುಸುಳುವ ತಂತ್ರಗಾರಿಕೆ. ಇವರ ಜತೆಗೆ ಮೂವರು ಶಾಸಕರನ್ನು ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ. ಒಬ್ಬರಿಗೆ ಆಯೋಗವೊಂದರ ಅಧ್ಯಕ್ಷ ಹುದ್ದೆ, ಇಬ್ಬರಿಗೆ ದೆಹಲಿ ಪ್ರತಿನಿಧಿ ಸ್ಥಾನ ನೀಡಿ ಎಲ್ಲರಿಗೂ ಸಂಪುಟ ದರ್ಜೆ ಸಚಿವರ ಸೌಲಭ್ಯ ಒದಗಿಸಲಾಗಿದೆ. ಕಾಂಗ್ರೆಸ್‌ನಿಂದ 135 ಶಾಸಕರು ಗೆದ್ದಿದ್ದು, ಈ ಪೈಕಿ ಒಟ್ಟು 73 ಮಂದಿಗೆ ಸಂಪುಟ ದರ್ಜೆ ಸಚಿವ ಸೌಲಭ್ಯ ದೊರೆತಿದೆ. ‘ಗ್ಯಾರಂಟಿ’ಗಳ ಅನುಷ್ಠಾನಕ್ಕಾಗಿ ಹೊಸದಾಗಿ ರಚಿಸಿರುವ ಪ್ರಾಧಿಕಾರ ಸೇರಿ ಇನ್ನೂ 10ಕ್ಕೂ ಹೆಚ್ಚು ಮಂದಿಗೆ ಈ ಸೌಲಭ್ಯ ದೊರೆಯುವ ಸಾಧ್ಯತೆಯೂ ಇದೆ. ಆಡಳಿತ ಪಕ್ಷದ ಕೆಲವು ಕಾರ್ಯಕರ್ತರಿಗೂ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ನೀಡಲು ಸಿದ್ಧತೆ ನಡೆದಿದೆ. ಸಂಪುಟ ದರ್ಜೆ ಸಚಿವರು ಮತ್ತು ಅದೇ ಸ್ಥಾನ–ಸೌಲಭ್ಯ ಹೊಂದಿರುವವರಿಗೆ ವೇತನ ಮತ್ತು ಭತ್ಯೆಗಳ ರೂಪದಲ್ಲಿ ತಿಂಗಳಿಗೆ ₹ 4 ಲಕ್ಷದಿಂದ ₹ 5 ಲಕ್ಷದವರೆಗೂ ವೆಚ್ಚವಾಗಲಿದೆ. ನಿಗಮಗಳ ಉಸ್ತುವಾರಿಗೆ ಸಂಬಂಧಿಸಿದ ಇಲಾಖೆಯ ಸಚಿವರು, ಐಎಎಸ್ ಅಧಿಕಾರಿಗಳು, ನಿಗಮಕ್ಕೆ ಪ್ರತ್ಯೇಕವಾಗಿ ವ್ಯವಸ್ಥಾಪಕ ನಿರ್ದೇಶಕರು ಇರುತ್ತಾರೆ. ಈ ಬಗೆಯ ನೇಮಕಗಳಿಂದ ಮಹತ್ತರವಾದುದನ್ನು ಸಾಧಿಸಿದ ನಿದರ್ಶನಗಳು ವಿರಳಾತಿವಿರಳ. ಸಚಿವರು–ನಿಗಮದ ಅಧ್ಯಕ್ಷರ ಮಧ್ಯೆ ಹೊಂದಾಣಿಕೆ ಕೊರತೆಯಿಂದಾಗಿ ನಿಗಮಗಳು ಬಸವಳಿದ ಉದಾಹರಣೆಗಳೇ ಹೆಚ್ಚು. ಹೀಗಾಗಿ, ಸಂಪುಟ ದರ್ಜೆಯ ಸಚಿವ ಸ್ಥಾನ–ಸೌಲಭ್ಯವನ್ನು ವಾಪಸ್ ಪಡೆಯುವುದು ಸೂಕ್ತ. ಬರಗಾಲ ಒಡಲು ಸುಡುತ್ತಿರುವಾಗ, ಸರ್ಕಾರಕ್ಕೆ ಆರ್ಥಿಕ ಸಂಕಷ್ಟ ಬೆನ್ನೇರಿರುವಾಗ ಕೆಲವರ ಓಲೈಕೆಗಾಗಿ ಇಷ್ಟು ವೆಚ್ಚ ಮಾಡುವುದು ಸರಿಯಾದ ಕ್ರಮವಂತೂ ಅಲ್ಲ.

ದಿನದ ಟ್ವೀಟ್

ಆಹಾರದ ಆಯ್ಕೆ– ಎಚ್ಚರವಿರಲಿ

ಅತಿಸಂಸ್ಕರಿತ ಆಹಾರವನ್ನು ನಾನು ‘ಆಹಾರವಿರೋಧಿ’ ಎಂದು ಕರೆಯುತ್ತೇನೆ. ಉತ್ತಮ ಆಹಾರವೇ ಆರೋಗ್ಯ. ದೀರ್ಘಕಾಲಿಕವಾಗಿ ಕಾಡುವ ಕಾಯಿಲೆಯ ಮೂಲ ಜಂಕ್‌ಫುಡ್. ಪ್ರಯೋಗಾಲಯದಲ್ಲಿ ತಯಾರಿಸಿದ ಆಹಾರವಂತೂ ವಿಪರೀತವಾಗಿ ಸಂಸ್ಕರಿಸಿದ ಆಹಾರ. ಅದು ಆಹಾರದಂತೆಯೇ ತೋರುತ್ತದೆ, ಆದರೆ ಮಣ್ಣಿನಿಂದ ಉತ್ಪಾದಿಸಿದ ನಿಜವಾದ ಆಹಾರ ಪದಾರ್ಥದಲ್ಲಿ ಸಿಗುವ ವೈವಿಧ್ಯಮಯ ಪೋಷಕಾಂಶಗಳನ್ನು ಮಾತ್ರ ಹೊಂದಿರುವುದಿಲ್ಲ.

ವಂದನಾ ಶಿವ, ಪರಿಸರ ಕಾರ್ಯಕರ್ತೆ

ಕಿಡಿನುಡಿ

ಪ್ರತಿವರ್ಷವೂ ಗಾಂಧಿ ಪುಣ್ಯಸ್ಮರಣೆಯಂದು ನಾಥೂರಾಂ ಗೋಡ್ಸೆ ಹೆಸರು ಟಾಪ್ ಟ್ರೆಂಡ್‌ನಲ್ಲಿ ಇರುತ್ತದೆ. ಕೆಲವು ಧ್ವನಿಗಳು ಗೋಡ್ಸೆಯನ್ನು ‘ಹೀರೊ’ ಎಂದು ‘ಸಂಭ್ರಮಿಸುವುದೂ’ ಉಂಟು. ಮಹಾರಾಷ್ಟ್ರದಲ್ಲಿ 1990ರಲ್ಲಿ ನಡೆದ ಚುನಾವಣೆಯ ಸಂದರ್ಭದಲ್ಲಿ, ‘ನೀವು ತುಟಿಯಲ್ಲಿ ರಾಮನನ್ನು, ಅಂತರ್ಯದಲ್ಲಿ ನಾಥೂರಾಂನನ್ನು ಜಪಿಸಲಾಗದು, ಹತ್ಯೆಯನ್ನು ವಿಜೃಂಭಿಸುವುದು ಸಲ್ಲ’ ಎಂದು ಶರದ್ ಪವಾರ್ ಹೇಳಿದ್ದರು.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಭಾನುವಾರ, 31-1-1999

• ಪಟೇಲ್ ಸಂಪುಟ ವಿಸ್ತರಣೆ

ಬೆಂಗಳೂರು ಜ. 30– ಆಡಳಿತಾರೂಢ ಜನತಾದಳದಲ್ಲಿ ಅತೃಪ್ತಿ– ಅಸಮಾಧಾನ ಭುಗಿಲೆದ್ದಿರುವುದರ ನಡುವೆಯೇ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ತಮ್ಮ ಸಂಪುಟವನ್ನು ವಿಸ್ತರಿಸಲು ಕೊನೆಗೂ ನಿರ್ಧರಿಸಿದ್ದು, ದಳದ ಪದಚ್ಯುತ ಅಧ್ಯಕ್ಷ ಬಿ.ಎಲ್. ಶಂಕರ್ ಸಂಪುಟ ದರ್ಜೆ ಸಚಿವರಾಗಿ ನಾಳೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಈ ಹಿನ್ನೆಲೆಯಲ್ಲಿ, ಆಡಳಿತ ಪಕ್ಷದಲ್ಲಿ ಮತ್ತೆ ಭಿನ್ನಮತೀಯ ಚಟುವಟಿಕೆಗಳು ತಲೆ ಎತ್ತುವ ಸೂಚನೆಗಳು ಸ್ಪಷ್ಟವಾಗಿವೆ.

• ಕೇಂದ್ರ ಸಂಪುಟಕ್ಕೆ ಖುರಾನ ರಾಜೀನಾಮೆ

ನವದೆಹಲಿ ಜ. 30 (ಪಿಟಿಐ)– ಕ್ರೈಸ್ತರ ಮೇಲೆ ನಡೆಯುತ್ತಿರುವ ಹಲ್ಲೆಗಳಿಗೆ ಸಂಘ ಪರಿವಾರವನ್ನು ದೂಷಿಸಿದ್ದ ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಮದನಲಾಲ್ ಖುರಾನ ಅವರು ಸಂಪುಟಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಒರಿಸ್ಸಾ ಮತ್ತು ಗುಜರಾತ್‌ನಲ್ಲಿ ಕ್ರೈಸ್ತರ ಮೇಲೆ ನಡೆದ ಹಲ್ಲೆಗೆ ‘ಪಶ್ಚಾತ್ತಾಪ’ಪಡಲು ತಮಗೆ ಅನುಮತಿ ನೀಡುವಂತೆ ಅವರು ಬಿಜೆಪಿ ಅಧ್ಯಕ್ಷ ಕುಶಭಾವು ಠಾಕ್ರೆ ಅವರಿಗೆ ಈಚೆಗೆ ಪತ್ರ ಬರೆದಿದ್ದರು.

50 ವರ್ಷಗಳ ಹಿಂದೆ

ಗುರುವಾರ, 31-1-1974

• ಸಂಕುಚಿತ ಭಾವನೆಗಳಿಂದ ಮಾನವ ಏಕತೆಗೆ ಧಕ್ಕೆ ಆಗದಿರಲಿ: ಇಂದಿರಾ ಕರೆ

ನವದೆಹಲಿ, ಜ. 30– ಜನಾಂಗ, ರಾಷ್ಟ್ರೀಯತೆ, ಧರ್ಮ ಮುಂತಾದ ಸಂಕುಚಿತ ಭಾವನೆಗಳು ಮಾನವ ಏಕತೆಗೆ ಧಕ್ಕೆ ಉಂಟುಮಾಡಲು ಅವಕಾಶ ನೀಡಬಾರದು ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಕರೆ ನೀಡಿದ್ದಾರೆ.

‘ಇಡೀ ಮಾನವ ಜನಾಂಗ ಒಂದು ಕುಟುಂಬ ಎಂದು ನಮ್ಮ ಪೂರ್ವಿಕರು ಹೇಳಿದ್ದರು. ಎಲ್ಲ ಹಿರಿಯ ಧರ್ಮಗಳಲ್ಲೂ ಮಾನವ ಸಹಭ್ರಾತೃತ್ವವನ್ನು ಸೂಚಿಸಲಾಗಿದೆ. ಸಂಪರ್ಕ ಸಾಧನಗಳ ಅಭಿವೃದ್ಧಿಯಿಂದ ಈಗ ನಮ್ಮ ಕಾಲದಲ್ಲೂ ಈ ಸತ್ಯಾಂಶದ ನಿದರ್ಶನಗಳು ಬಹಳಷ್ಟಿವೆ’ ಎಂದು, ಇಲ್ಲಿ ಫೆಬ್ರುವರಿ 3ರಿಂದ ಆರಂಭವಾಗುವ ಮಾನವ ಏಕತೆ ಕುರಿತ ಸಮ್ಮೇಳನಕ್ಕೆ ಕಳುಹಿಸಿರುವ ಸಂದೇಶದಲ್ಲಿ ತಿಳಿಸಿದ್ದಾರೆ.

• ಕಡಿಮೆ ಕೆಲಸ ಹೆಚ್ಚು ವೇತನ

ಜಿನೋವ (ಇಟಲಿ), ಜ. 30– ತೀರ ಕಡಿಮೆ ಕೆಲಸಕ್ಕೆ ತಾವು ಅತಿ ಹೆಚ್ಚಿನ ವೇತನ ಪಡೆಯುತ್ತಿರುವುದಾಗಿ ದೂರಿ ಸರ್ಕಾರಿ ನೌಕರರೊಬ್ಬರು ಇಲ್ಲಿ ಮೊಕದ್ದಮೆ ಹೂಡಿದ್ದಾರೆ.

ನಾನು ಸೋಮಾರಿತನದಿಂದ ದಿನದ ಎಂಟು ಗಂಟೆ ದೂಡುತ್ತಿದ್ದೇನೆ. ನನ್ನ ಸಂಬಳ ತಿಂಗಳಿಗೆ 3,50,000 ಲೈರ್ (4,125 ರೂ) ಎಂದು ದಾವೆ ಹೂಡಿರುವ ಸಿರೋವಿಲನೋ ಹೇಳಿದ್ದಾರೆ. ಅವರು ಸರ್ಕಾರಿ ಸಂಸ್ಥೆಯಾದ ಎಕ್ಸ್‌ಪ್ರೆಸ್ ವೇ ಕಾಂಪ್ಲೆಕ್ಸ್‌ನಲ್ಲಿ ಶಿಲ್ಪಿಯೊಬ್ಬರ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ತಮಗೆ ಹೆಚ್ಚಿನ ಕೆಲಸ ಕೊಡಬೇಕೆಂದು ಅವರು ಕೇಳಿದ್ದಾರೆ.

ಒಲುಮೆಯ ಮಾಧುರ್ಯವನ್ನು ಸವಿಯಲು ಹೊಸ ಮಾದರಿಯನ್ನು ಹುಟ್ಟುಹಾಕಬೇಕಾಗಿದೆ

ಪ್ರೀತಿ ಎಂದರೇನು? ಅರಿತಿರುವೆವೇ?

ವಿಶ್ಲೇಷಣೆ

ಸಬಿತಾ ಬನ್ನಾಡಿ

‘ಮನಕ್ಕೆ ಪ್ರಾಣವಾದ ಪುರುಷನು ಪುರುಷ ರತ್ನವಾಗಿ ಬರುವ ದಾರಿ ನೋಡಿ ಬಾಯಾರಿದ್ದೇನೆ’ ಎನ್ನುವ ಅಕ್ಕ ಮಹಾದೇವಿ, ತನ್ನ ಪ್ರೀತಿಯ ಚೆನ್ನಮಲ್ಲಿಕಾರ್ಜುನನನ್ನು ‘ಅರಿವು’ ಎಂದು ಭಾವಿಸುತ್ತಾಳೆ. ಈ ಅರಿವು ಹೆಣ್ಣೂ ಅಲ್ಲ, ಗಂಡೂ ಅಲ್ಲ. ಇಬ್ಬರಲ್ಲೂ ಇರಬೇಕಾದ ಮಾಗಿದ ತಿಳಿವಳಿಕೆ.

ಪ್ರೀತಿಯ ಹೆಸರಲ್ಲಿ ಲಕ್ಷಾಂತರ ಪುಟಗಳು ಪ್ರಕಟವಾಗಿರಬಹುದು. ಆದರೆ ಇಂದಿಗೂ ಇದು ಅರ್ಥವಾಗಿದೆ ಎಂದು ಹೇಳುವುದಕ್ಕೆ ಹೆಚ್ಚು ಸಾಕ್ಷಿಗಳಿಲ್ಲ. ಹೆಚ್ಚಿನ ಸಂದರ್ಭದಲ್ಲಿ ಪ್ರೀತಿಗಾಗಿ ಯಾರೋ ಒಬ್ಬರು ತ್ಯಾಗ ಮಾಡುವುದನ್ನು ವೈಭವೀಕರಿಸಲಾಗುತ್ತದೆ. ಗಂಡು ಹೆಣ್ಣಿನ ನಡುವಿನ ಪ್ರೇಮ ಸಂಬಂಧದಲ್ಲಂತೂ ಪ್ರೀತಿ ಎಂಬುದು ಹೇಗೆ ಹೇಗೋ ನಿರೂಪಣೆಗೊಂಡಿದೆ. ಆದರೆ ಹೆಚ್ಚಿನವರ ಅನುಭವವೆಂದರೆ, ಜೊತೆಗಾರರನ್ನು ‘ಸಹಿಸಿ’ಕೊಳ್ಳುವುದೇ ಪ್ರೀತಿ ಎಂಬಂತೆ ಭಾವಿಸಿಕೊಳ್ಳಲಾಗಿದೆ. ಇಲ್ಲದೇ ಹೋದರೆ ಯಾಕೆ ಈ ಸಂಬಂಧಗಳಲ್ಲಿ ಮಿತಿಮೀರಿದ ದೌರ್ಜನ್ಯಗಳಿವೆ? ಯಾಕೆ ಬ್ರೇಕಪ್‌ಗಳು, ವಿಚ್ಛೇದನಗಳು ಅನಿವಾರ್ಯ ಎನಿಸತೊಡಗಿವೆ? ಯಾಕೆ ಎಷ್ಟೋ ಜನರಿಗೆ ಇವು ತಮ್ಮ ತಮ್ಮ ಪ್ರತಿಭೆಯನ್ನೂ ಸುಟ್ಟು ಹಾಕಿಕೊಳ್ಳುವ ಕೊಂಡಗಳಾಗಿವೆ? ನಿರ್ಭೀತ ಅಭಿವ್ಯಕ್ತಿ ಬಿಡಿ, ಸಣ್ಣ ಧ್ವನಿಯಲ್ಲೂ ತಮ್ಮ ಕನಸುಗಳನ್ನು ಹೇಳಿಕೊಳ್ಳಲಾರದ ಇಕ್ಕಟ್ಟುಗಳು ಹುಟ್ಟಿಕೊಳ್ಳುತ್ತವೆ?

ಎಷ್ಟೋ ಹೆಣ್ಣುಮಕ್ಕಳು ತಮ್ಮ ದುಡಿಮೆಯನ್ನು ಮನೆಗೆ ಕೊಟ್ಟು, ಮನೆಯಲ್ಲೂ ದುಡಿದು, ಇಲ್ಲದ ಸಮಯವನ್ನು ಹೇಗೋ ಹೊಂದಿಸಿಕೊಂಡು ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಸಾಧನೆಗೆ ತೊಡಗಿಸಿಕೊಂಡರೆ, ಹೆಮ್ಮೆಗಿಂತ ಗಿಲ್ಟ್‌ಗೆ ಒಳಗಾಗುವಂತೆ ಮಾಡಲಾಗುತ್ತಿದೆಯಲ್ಲ? ಅವಳಲ್ಲಿ ಅಭದ್ರತೆಯ ಭಯ ಹುಟ್ಟಿಸಲಾಗುತ್ತಿದೆಯಲ್ಲ ಯಾಕೆ? ಅವಳಿಗೊಂದು ಪ್ರೀತಿಯ ಬೆಂಬಲ ಸಿಗುತ್ತಿಲ್ಲ ಎಂದೇ ಅರ್ಥವಲ್ಲವೇ? ಪ್ರೀತಿ ಇರಲಿ, ಅವಳು ತನ್ನಿಚ್ಛೆಯ ಒಂದೊಂದು ಹೆಜ್ಜೆ ಇಡುವಾಗಲೂ, ಪ್ರತಿ ಹೆಜ್ಜೆಗೂ ‘ವಿವರಣೆ’ ನೀಡುವ ಶಿಕ್ಷೆ ಇದೆ. ಯಾಕೆ ಹೀಗೆ?

ಸ್ತ್ರೀವಾದವಂತೂ ಹೆಣ್ಣಿನ ಸ್ಥಿತಿಯ ಬಗೆಗೆ ನಿರಂತರ ಚಿಂತನೆಗಳನ್ನು ಮಾಡಿದೆ, ಕಾರಣಗಳನ್ನು ಶೋಧಿಸಿದೆ, ಪರಿಹಾರಗಳನ್ನು ಸೂಚಿಸಿದೆ. ಅದರಲ್ಲೂ ಕಪ್ಪು ಸ್ತ್ರೀವಾದಿಗಳು ‘ಪ್ರೀತಿಯ ರಾಜಕಾರಣ’ವನ್ನು ಮುನ್ನೆಲೆಗೆ ತರುವ ಮೂಲಕ ಸಮಸ್ಯೆಯ ಬೇರುಗಳನ್ನು ಅರಿತು ಸರಿಪಡಿಸಲು ಮುಂದಡಿ ಇಡುತ್ತಾರೆ. ಬಿಳಿಯ ಗಂಡಸು ಮತ್ತು ಹೆಂಗಸರಿಂದಲೂ, ಕರಿಯ ಗಂಡು ಯಜಮಾನಿಕೆಯಿಂದಲೂ ದೌರ್ಜನ್ಯವನ್ನು ಅನುಭವಿಸಿದ ಕಪ್ಪು ಸ್ತ್ರೀಯರು ಪ್ರೀತಿಯ ದಾರಿ ಹಿಡಿಯುವುದು ಕುತೂಹಲದಾಯಕವಾದುದು. ಅದರಲ್ಲೂ, ಕಪ್ಪು ಸ್ತ್ರೀವಾದಿ ಬೆಲ್ ಹುಕ್ಸ್ ಈ ಕುರಿತು ಸರಣಿ ಪುಸ್ತಕಗಳನ್ನು ಪ್ರಕಟಿಸಿದ್ದಾಳೆ. ಕನ್ನಡದ ಮುಖ್ಯ ಸ್ತ್ರೀವಾದಿ ಚಿಂತಕರಾದ ಎಚ್.ಎಸ್. ಶ್ರೀಮತಿ ಅವರು ಈಗಾಗಲೇ ನಾಲ್ಕು ಪುಸ್ತಕಗಳನ್ನು ಕನ್ನಡಕ್ಕೆ ತಂದಿದ್ದಾರೆ. ‘ಬಾರಯ್ಯ ಮಮಬಂಧು’ (ಜೀರುಂಡೆ ಪ್ರಕಾಶನ) ಎಂಬುದು ಇತ್ತೀಚಿನ ಸೇರ್ಪಡೆಯಾಗಿದ್ದು, ಪುರುಷರಿಗೆ ಪ್ರೀತಿಯ ದಾರಿಯನ್ನು ತೋರಿಸುವ ಕೃತಿಯಾಗಿದೆ.

ಮಹಿಳೆಯರು ಮತ್ತು ಪುರುಷರಿಬ್ಬರಿಗೂ ಪ್ರೀತಿಯನ್ನು ಕಂಡುಕೊಳ್ಳಲು ಅಗತ್ಯವಾದ ಮಾರ್ಗದರ್ಶನವನ್ನು ಬೆಲ್ ಹುಕ್ಸ್ ತನ್ನ ಕೃತಿಗಳಲ್ಲಿ ಕೊಡುತ್ತಾಳೆ. ಇದನ್ನು ಸ್ತ್ರೀವಾದಿ ಕಣ್ಣೋಟದಿಂದ ವಿವರಿಸುವ ಅವಳು, ಪಿತೃಪ್ರಧಾನ ವ್ಯವಸ್ಥೆಯು ಹೇಗೆ ನಮ್ಮನ್ನು ಪುರುಷತ್ವ ಮತ್ತು ಸ್ತ್ರೀತ್ವ ಎಂಬ ಕಣ್ಕಟ್ಟುಗಳಲ್ಲಿ ಬಂಧಿಸಿಟ್ಟಿದೆ ಮತ್ತು ಗಂಡು, ಹೆಣ್ಣು ಇಬ್ಬರೂ ಹೇಗೆ ಮಾನಸಿಕ ಪಿತೃಪ್ರಧಾನ ಸ್ಥಿತಿಗೆ ಒಳಗಾಗಿ ಒಬ್ಬರನ್ನೊಬ್ಬರು ಒಂದೋ ಅಧಿಕಾರದಡಿ ಬಗ್ಗುಬಡಿಯುವ ಅಥವಾ ಅಧೀನತೆಯಲ್ಲಿ ಬಲಿಯಾಗುವ ದುಃಸ್ಥಿತಿ ಒದಗಿದೆ ಎಂಬುದನ್ನು ಹೇಳುತ್ತಾಳೆ. ಪಿತೃಪ್ರಧಾನ ವ್ಯವಸ್ಥೆಯಿಂದ ಗಂಡು ನಲುಗಿ ಹೋಗಿದ್ದರೂ ಅದನ್ನೇ ಅಪ್ಪಿಕೊಂಡಿದ್ದಾನೆ.

ಗಂಡಾಗಲೀ ಹೆಣ್ಣಾಗಲೀ ತಮ್ಮತನವನ್ನು ಕಳೆದುಕೊಳ್ಳಬೇಕಿಲ್ಲ. ಆದರೆ ತಮ್ಮತನವನ್ನು ವಿವರಿಸಿಕೊಳ್ಳುವಾಗ ಆಗಿರುವ ತಪ್ಪು ವ್ಯಾಖ್ಯಾನವನ್ನು ಸರಿಪಡಿಸಿಕೊಳ್ಳಬೇಕಿದೆ. ಇಲ್ಲದಿದ್ದಲ್ಲಿ ಪ್ರೀತಿ ಎಂಬುದು ಪದವಾಗಿ ಉಳಿಯುತ್ತದೆಯೇ ವಿನಾ ಅನುಭವ ಆಗುವುದಿಲ್ಲ. ಚಿಕ್ಕಂದಿನಿಂದಲೂ ಹೆಣ್ಣುಮಕ್ಕಳಿಗೆ ಹೇಗೋ ಗಂಡು ಮಕ್ಕಳಿಗೂ ಕೆಲವು ಭಾವನೆಗಳನ್ನು ಎಲ್ಲರೆದುರಿಗೂ ತೋರಿಸಿಕೊಳ್ಳಬಾರದು ಎಂದು ತರಬೇತಿ ಆಗುತ್ತಿರುತ್ತದೆ. ಗಂಡು ತನ್ನ ನೋವುಗಳನ್ನು, ಭಯಗಳನ್ನು, ಆತಂಕಗಳನ್ನು ಹೇಳಿಕೊಳ್ಳದೆ, ಯಾವಾಗಲೂ ಇನ್ನೊಬ್ಬರಿಗೆ ರಕ್ಷಣೆ ಕೊಡುವವನು ಎಂಬ ಭಾವಕ್ಕೆ ತೊಂದರೆಯಾಗದಂತೆ ತನ್ನನ್ನು ಬಿಂಬಿಸಿಕೊಳ್ಳಬೇಕು ಎಂಬ ಒತ್ತಡಕ್ಕೆ ಒಳಗಾಗಿರುತ್ತಾನೆ. ಆದರೆ ಆತ ತನ್ನ ಕೋಪವನ್ನು ಮಾತ್ರ ಎಷ್ಟಾದರೂ ವ್ಯಕ್ತಪಡಿಸಬಹುದು ಎಂಬ ಒಪ್ಪಿಗೆಯೊಂದು ಚಲಾವಣೆಯಲ್ಲಿದೆ. ಗಂಡು ಇದನ್ನೇ ತನ್ನ ಲಕ್ಷಣವಾಗಿಸಿಕೊಂಡು ಬಿಡುತ್ತಾನೆ.

ಎಷ್ಟೋ ಬಾರಿ ಕೋಪ ಎಂಬುದು ಯಾವುದೋ ಭಯದ ಪರಿಣಾಮವಾಗಿ ಹುಟ್ಟಿರುತ್ತದೆ. ಆದರೆ ಇದು ತನ್ನ ಜೊತೆಯವರಿಗೆ ಭಯ ಹುಟ್ಟಿಸುವ, ಆ ಮೂಲಕ ಅವರೆಲ್ಲರನ್ನೂ ನಿಯಂತ್ರಿಸುವ ಕೆಲಸ ಮಾಡುತ್ತಿರುತ್ತದೆ. ಇವರ ಈ ಕೋಪ ತಾಪಗಳನ್ನು ಸದ್ದಿಲ್ಲದೆ ಅನುಭವಿಸಬೇಕು ಎಂಬ ಪಿತೃಪ್ರಧಾನ ವ್ಯವಸ್ಥೆಯ ಪಾಠವನ್ನು ಹೆಂಗಸರಿಗೆ ರೂಢಿಸಲಾಗಿದೆ. ಇದನ್ನೇ, ಹೆಂಗಸರು ಮಕ್ಕಳಿಗೆ ದಾಟಿಸುತ್ತಾರೆ.

ಸ್ವತಃ ಗಂಡನ ದೌರ್ಜನ್ಯಕ್ಕೆ ತುತ್ತಾದ ಹೆಂಗಸರನ್ನೂ ಸೇರಿಸಿಕೊಂಡು ಹಲವರು, ಶಿಸ್ತಿನ ಹೆಸರಲ್ಲಿ ಗಂಡಸು ತನ್ನ ಮಕ್ಕಳಿಗೆ ವಿಪರೀತ ಹೊಡೆತದಂತಹ ಹಿಂಸೆಗಳನ್ನು ಮಾಡಿದಾಗ ಅದನ್ನು ಮೌನವಾಗಿ ಬೆಂಬಲಿಸುತ್ತಾರೆ ಅಥವಾ ತಾವೂ ಮಕ್ಕಳೊಂದಿಗೆ ಹೀಗೇ ವರ್ತಿಸುತ್ತಾರೆ. ಇದರಿಂದಾಗಿ ಆ ಮಕ್ಕಳಿಗೆ ತಾಯಿಯ ಬಗೆಗೆ ಅಂತರಂಗದಲ್ಲಿ ದ್ವೇಷ ಹುಟ್ಟಿಕೊಳ್ಳುತ್ತದೆ ಎಂಬುದನ್ನು ಮನಶ್ಶಾಸ್ತ್ರೀಯ ಅಧ್ಯಯನಗಳು ಹೇಳುವುದನ್ನು ಬೆಲ್ ಹುಕ್ಸ್ ಪ್ರಸ್ತಾಪಿಸುತ್ತಾಳೆ. ಮಾತ್ರವಲ್ಲ, ಈ ಕಾರಣದಿಂದ ಆ ಮಕ್ಕಳೂ ಮುಂದೆ ಇಂತಹದೇ ದೌರ್ಜನ್ಯವನ್ನು ಮುಂದುವರಿಸುವವರಾಗುತ್ತಾರೆ. ಇವೆಲ್ಲದರಿಂದ ಪಾರಾಗಲು, ಪಿತೃಪ್ರಧಾನ ವ್ಯವಸ್ಥೆಯ ಕಣ್ಕಟ್ಟುಗಳನ್ನು ಕುರುಡಾಗಿ ಅನುಸರಿಸುವುದನ್ನು ಇಬ್ಬರೂ ಬಿಡಲೇಬೇಕಾಗುತ್ತದೆ.

ಇದರ ಇನ್ನೊಂದು ಪರಿಣಾಮವನ್ನು ನಾವು ದಿನನಿತ್ಯ ನೋಡುತ್ತಿದ್ದರೂ ಅದು ಯಾಕೆ ಎಂಬುದು ನಮಗಿನ್ನೂ ಸರಿಯಾಗಿ ಗೊತ್ತೇ ಆಗಿರುವುದಿಲ್ಲ. ಇಂದಿಗೂ ನಮ್ಮ ಟಿ.ವಿ. ಧಾರಾವಾಹಿಗಳಲ್ಲಿ ಇಬ್ಬರು ಹೆಂಗಸರನ್ನು ಪರಸ್ಪರ ಶತ್ರುಗಳನ್ನಾಗಿಸುವುದು, ಅವರು ಒಬ್ಬ ಗಂಡಸಿಗಾಗಿ ಸ್ಪರ್ಧೆ ಮಾಡುವುದು, ಅವನಿಗಾಗಿ ಎಂತೆಂತಹ ಅವಮಾನಗಳನ್ನೆಲ್ಲಾ ಸಹಿಸಿಕೊಳ್ಳುವ ಸಾಧ್ವೀಮಣಿಯನ್ನು ವೈಭವೀಕರಿಸುವಂತಹ ಚಿತ್ರಣಗಳನ್ನೇ ತಿರುಗಾಮುರುಗಾ ತೋರಿಸುತ್ತಾರೆ. ಇದು ಕೂಡಾ ಪಿತೃಪ್ರಧಾನ ವ್ಯವಸ್ಥೆಯ ಪಾಠವೇ.

ಪುರುಷ ಸದಾ ಹೆಣ್ಣಿಗಿಂತ ಶ್ರೇಷ್ಠನಾದವನು, ‘ನೀನು ಏನಿದ್ದರೂ ನಿನ್ನಂತೆ ಕನಿಷ್ಠಳಾದ ಹೆಣ್ಣಿನ ಜೊತೆಯಲ್ಲೇ ಕಲಹ ಮಾಡುತ್ತಿರಬೇಕು’ ಎಂಬುದನ್ನು ಗೊತ್ತಿಲ್ಲದೇ ಒಪ್ಪಿಕೊಂಡ ಹೆಂಗಸರು ಅವರವರೇ ಹೊಡೆದಾಡುತ್ತಿದ್ದರೆ, ಅವರನ್ನು ಆಳುವುದು ಗಂಡಸಿಗೆ ಬಹು ಸುಲಭ. ಜೊತೆಗೆ ಅವನಿಗೆ ಬಿಟ್ಟಿಯಾಗಿ ಕರುಣೆ ಬೇರೆ ಸಿಗುತ್ತಿರುತ್ತದೆ. ಅವನ ಅಹಂಕಾರದ ಪೋಷಣೆ ಆಗುತ್ತಿರುತ್ತದೆ. ಇನ್ನೊಂದೆಡೆಯಲ್ಲಿ, ಮಹಿಳೆಯರೂ ಪುರುಷರ ದಾರಿಯ ಕಡೆಗೇ ಹೆಜ್ಜೆ ಹಾಕಲು ಆರಂಭಿಸಿದ್ದಾರೆ. ಇದಕ್ಕೆ ಕಾರಣ ‘ನಮ್ಮ ಈ ಸಂಸ್ಕೃತಿಯಲ್ಲಿ ದಬ್ಬಾಳಿಕೆ ನಡೆಸುವವರಿಗೇ ಅಧಿಕಾರ ದಕ್ಕುತ್ತದೆ ಎಂಬ ಅಭಿಪ್ರಾಯವು ಗಾಢವಾಗಿ ನೆಲಸಿದೆ. ಹಾಗಾಗಿ, ಅಧಿಕಾರದ ನಿರೀಕ್ಷೆ ಇರುವ ಯಾರಾದರೂ ಸರಿಯೇ ದೌರ್ಜನ್ಯಕ್ಕೆ ಇಳಿಯುವುದು ಅನಿವಾರ್ಯ ಎಂದೇ ನಂಬುತ್ತಾರೆ’ ಎನ್ನುತ್ತಾಳೆ ಬೆಲ್ ಹುಕ್ಸ್.

ಯಜಮಾನಿಕೆಯೋ ಪ್ರೀತಿಯೋ ಎಂಬ ಆಯ್ಕೆ ಬಂದಾಗ, ಯಜಮಾನಿಕೆಯಿಂದ ಸಿಗುವ ಹುಸಿ ಪ್ರತಿಷ್ಠೆ, ಸಮಾಧಾನದ ಕಾರಣಕ್ಕೆ ಪ್ರೀತಿಯನ್ನು ಬಿಟ್ಟುಕೊಡುವ ಪ್ರಕ್ರಿಯೆ ಹೆಚ್ಚಾಗುತ್ತಿದೆ. ಆದರೆ ಅಂತರಂಗದಲ್ಲಿ ತಾವು ಒಂಟಿ ಎಂಬ ಭಾವದಿಂದ ನಲುಗುವುದೂ ಹೆಚ್ಚಾಗುತ್ತದೆ. ಹೀಗಾಗಿ, ಪ್ರೀತಿ ಮತ್ತು ದಬ್ಬಾಳಿಕೆ ಜೊತೆಯಲ್ಲಿರಲು ಎಂದಿಗೂ ಸಾಧ್ಯವಿಲ್ಲ. ಪ್ರೀತಿಯನ್ನು ಕಂಡುಕೊಳ್ಳಲು ಬಯಸುವ ಒಳ್ಳೆಯ ಪುರುಷರಿಗೆ ಸ್ತ್ರೀಯರು ಸಹಾಯ ಮಾಡಬೇಕಾಗಿದೆ ಎಂದು ಬೆಲ್ ಒತ್ತಿ ಹೇಳುತ್ತಾಳೆ.

ಹಾಗಾದರೆ ಪ್ರೀತಿ ಎಂದರೇನು? ‘ಪ್ರೀತಿ ಎಂದರೆ, ಸ್ವತಃ ತನ್ನ ಮತ್ತು ಜೊತೆಯವರ ಆಧ್ಯಾತ್ಮಿಕ ಹಾಗೂ ಭಾವನಾತ್ಮಕ ಅಭಿವೃದ್ಧಿಯನ್ನು ಪೋಷಿಸಿ ಕಾಪಾಡುವ ಇಚ್ಛೆ’ (ಎಮ್.ಸ್ಕಾಟ್ ಪೆಕ್) ಮತ್ತು ‘ಪ್ರೀತಿಯೆಂಬುದು ಭಾವನೆಯೊಂದೇ ಅಲ್ಲ; ಅದು ಒಂದು ಕ್ರಿಯೆಯೂ ಹೌದು. ಅದನ್ನು ಆಗುಮಾಡಿಕೊಳ್ಳಬೇಕು’ (ಎರಿಕ್ ಫ್ರಾಮ್) ಎಂಬುದನ್ನು ಸೇರಿಸಿ ಬೆಲ್ ಹೇಳುತ್ತಾಳೆ: ‘ಪ್ರೀತಿ ಎಂದರೆ ಕಾಳಜಿ, ಬದ್ಧತೆ, ಅರಿವು, ಜವಾಬ್ದಾರಿ, ಗೌರವ ಹಾಗೂ ನಂಬಿಕೆಗಳ ಒಂದು ಸುಂದರ ಸಮ್ಮಿಶ್ರಣ’.

ಚುರುಮುರಿ

ಅಭಿವೃದ್ಧಿ– ಸಮೃದ್ಧಿ

• ಮಣ್ಣೆ ರಾಜು

‘ಮಳ್ಳಿ ಮಳ್ಳಿ, ಮಂಚಕ್ಕೆ ಎಷ್ಟು ಕಾಲು?’

‘ಮೂರು ಮತ್ತೊಂದೇ ಕಣೋ ಮಳ್ಳ. ಕಾಲ ಬದಲಾದರೂ ಮಂಚದ ಕಾಲು ಬದಲಾಗಿಲ್ಲ’.

‘ಮಳ್ಳಿ, ಸರ್ಕಾರದ ಬೋರ್ಡ್ ಚೇರ್ಮನ್ ಕುರ್ಚಿಗೂ ನಾಲ್ಕೇ ಕಾಲು ಅಲ್ವಾ?’

‘ಹಾಗೇನಿಲ್ಲ. 360 ಡಿಗ್ರಿ ತಿರುಗುವ, ತಲೆ ತಿರುಗಿಸುವ ಒಂಟಿ ಕಾಲಿನ ಕುರ್ಚಿಗಳೂ ಇವೆ. ತೆಪ್ಪಗೆ ಕೂರುವ ನಾಲ್ಕು ಕಾಲಿನ ಕುರ್ಚಿಗಳೂ ಇವೆ’.

‘ಕಾಲುಗಳಿಗಿಂತ, ಬೋರ್ಡ್ ಕುರ್ಚಿ ಪಡೆಯಲು ಎಷ್ಟು ಜನರ ಕಾಲು ಹಿಡಿಯಬೇಕು ಎಂಬ ಲೆಕ್ಕ ಮುಖ್ಯ ಅಲ್ವೇನೆ ಮಳ್ಳಿ?’

‘ಹೌದೋ ಮಳ್ಳ, ಮೊದಲ ಕಂತಿನಲ್ಲಿ ಶಾಸಕರು ಸುಖಾಸೀನದ ಬೋರ್ಡ್ ಕುರ್ಚಿಗಳನ್ನು ಪಡೆದಿದ್ದಾರೆ. ಮುಂದಿನ ಕಂತಿನಲ್ಲಿ ಹಂಚಿಕೆಯಾಗಲು ಇನ್ನಷ್ಟು ‘ಅಭಿವೃದ್ಧಿ’ ನಿಗಮ, ‘ಸಮೃದ್ಧಿ’ ಮಂಡಳಿ ಕುರ್ಚಿಗಳು ಖಾಲಿ ಇವೆ. ಅವುಗಳನ್ನು ಪಡೆದುಕೊಳ್ಳಲು ಕುರ್ಚಿ ಫೈಟ್ ಶುರುವಾಗಿದೆ ಕಣೋ ಮಳ್ಳ’.

‘ಹೋರಾಟ ಮಾಡದಿದ್ದರೆ ಕುರ್ಚಿ ಸಿಗೋದಿಲ್ವಾ?’

‘ಅತ್ತುಕರೆದು ಕುರ್ಚಿ ದಕ್ಕಿಸಿಕೊಳ್ಳುವ ಧರ್ಮಾತ್ಮರ ಕಾಲ ಇದಲ್ಲ. ಲಾಬಿ ಮಾಡಿ ಲಾಭ ಮಾಡಿಕೊಳ್ಳಬೇಕು ಇಲ್ಲವೇ ಹೋರಾಡಿ ಗೆಲ್ಲಬೇಕು’.

‘ಉಪವಾಸ ಸತ್ಯಾಗ್ರಹ ಮಾಡಿದರೆ ಕುರ್ಚಿ ಸಿಗಬಹುದು ಅಲ್ವಾ?’

‘ಗಾಂಧೀಜಿ ಕಾಲದ ಶಾಂತಿ, ಸಂಯಮದ ಸತ್ಯಾಗ್ರಹಕ್ಕೆ ಈಗ ಕಿಮ್ಮತ್ತು ಇಲ್ಲವಂತೆ. ಅನಿರ್ದಿಷ್ಟಾವಧಿ ಧರಣಿ, ಪ್ರತಿಕೃತಿ ದಹನ, ಬಸ್ಸಿಗೆ ಬೆಂಕಿ ಹಚ್ಚುವುದು, ವಾಹನಗಳನ್ನು ಚಚ್ಚುವುದೂ ಈಗ ಓಲ್ಡ್ ಸ್ಟೈಲ್ ಹೋರಾಟವಂತೆ. ಸೋಷಿಯಲ್ ಮೀಡಿಯಾಗಳಲ್ಲಿ ಟಿಆರ್‌ಪಿ ಹೆಚ್ಚುವಂತಹ ವಿಭಿನ್ನ ಹೋರಾಟ ಮಾಡಿ ಗಮನ ಸೆಳೆಯಬೇಕಂತೆ’.

‘ಲೇಟೆಸ್ಟಾಗಿ, ಫ್ಲೆಕ್ಸ್ ಹರಿಯುವ, ಧ್ವಜಬಲ ಪರಾಕ್ರಮ ಪ್ರದರ್ಶನದ ಹೋರಾಟಗಳು ಗಮನ ಸೆಳೆಯುತ್ತಿವೆ. ಮಹಾತ್ಮರು ಹುತಾತ್ಮರಾದ ನಂತರ ಜನರ ಪರಿಸ್ಥಿತಿ, ಅಭಿರುಚಿಗೆ ತಕ್ಕಂತೆ ಹೋರಾಟಗಳ ಸ್ವರೂಪವೂ ಬದಲಾಗುತ್ತಿದೆ ಕಣೆ ಮಳ್ಳಿ...’

ಸಂಗತ

ಅಡಿಕೆ ಸಿಪ್ಪೆ: ಕಳೆಯಬೇಡಿ ‘ಕಳಿಸಿ’

ಅಡಿಕೆ ಸಿಪ್ಪೆಯಿಂದಲೂ ತಯಾರಿಸಬಹುದು ಸಾವಯವ ಗೊಬ್ಬರ

• ಉಲ್ಲಾಸ ಎಂ.ವೈ.

ಅಡಿಕೆ ಉತ್ಪಾದನೆಯಲ್ಲಿ ಕರ್ನಾಟಕವು ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದ್ದು, ಉತ್ಪಾದನೆಯಾಗುವ ಒಟ್ಟು ಅಡಿಕೆಯಲ್ಲಿ (14.5 ಲಕ್ಷ ಟನ್) ಶೇ 79ರಷ್ಟು ನಮ್ಮ ರಾಜ್ಯದ್ದೇ ಆಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಅಡಿಕೆಯು ಅಧಿಕ ಆರ್ಥಿಕ ಲಾಭ ತಂದುಕೊಡುವ ಬೆಳೆಯಾಗಿರುವುದರಿಂದ, ಸಾಂಪ್ರದಾಯಿಕವಾಗಿ ಅಡಿಕೆ ಬೆಳೆಯುವ ಪ್ರದೇಶಗಳಾದ ಮಲೆನಾಡು ಮತ್ತು ಕರಾವಳಿ ಭಾಗಗಳೊಂದಿಗೆ ಮಧ್ಯ ಹಾಗೂ ದಕ್ಷಿಣ ಕರ್ನಾಟಕ ಭಾಗದ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಹಾವೇರಿ ಜಿಲ್ಲೆಗಳಲ್ಲೂ ಅಡಿಕೆ ಬೆಳೆ ವ್ಯಾಪಕವಾಗಿದೆ.

ಅಡಿಕೆ ಕೊಯ್ದು ಸುಲಿದು ಹದ ಮಾಡುವ ಕಾರ್ಯ ಹೆಚ್ಚಿನ ಶ್ರಮ ಬೇಡುವುದರಿಂದ ಬಹುತೇಕ ಅಡಿಕೆ ಬೆಳೆಗಾರರು ತಮ್ಮ ಫಸಲನ್ನು ಸಂಸ್ಕರಿಸದೆ ಇಡೀ ಸಂಸ್ಕರಣಾ ಪ್ರಕ್ರಿಯೆಯನ್ನು ಗುತ್ತಿಗೆಗೆ ನೀಡುತ್ತಾರೆ. ಹೀಗೆ ಗುತ್ತಿಗೆ ತೆಗೆದುಕೊಳ್ಳುವ ಚೇಣಿದಾರರು ಅಡಿಕೆಯನ್ನು ಸುಲಿದು ಸಂಸ್ಕರಿಸಿ ಮಾರಾಟ ಮಾಡುತ್ತಾರೆ. ಅಡಿಕೆ ಸುಲಿಯುವ ಸಮಯದಲ್ಲಿ ದೊರೆಯುವ ಅಡಿಕೆ ಸಿಪ್ಪೆಯ ತ್ಯಾಜ್ಯವನ್ನು ರಸ್ತೆಬದಿಯಲ್ಲಿ ಎಲ್ಲೆಂದರಲ್ಲಿ ಸುರಿದು ಬರುತ್ತಾರೆ. ಇದರಿಂದಾಗಿ ಕೆಲವು ರಸ್ತೆಗಳ ಇಕ್ಕೆಲಗಳಲ್ಲೂ ಅಡಿಕೆ ಸಿಪ್ಪೆಯ ರಾಶಿಯನ್ನು ನಾವು ಕಾಣಬಹುದು. ಹೀಗೆ ಅಡಿಕೆ ಸಿಪ್ಪೆಯನ್ನು ರಸ್ತೆಬದಿಯಲ್ಲಿ ಸುರಿಯುವುದು ಅಥವಾ ಸುಟ್ಟು ಹಾಕುವುದು ಒಂದು ಸಾಮಾನ್ಯ ಪ್ರಕ್ರಿಯೆ ಎನಿಸಿದರೂ ಇದರಿಂದಾಗುವ ಹಾನಿ ಅಪಾರ.

ಒಂದು ಎಕರೆ ಅಡಿಕೆ ತೋಟದಲ್ಲಿ ನಮಗೆ ಅಂದಾಜು 600-700 ಕೆ.ಜಿ. ಒಣ ಅಡಿಕೆ ಸಿಪ್ಪೆ ದೊರೆಯುತ್ತದೆ. ರಾಜ್ಯದಲ್ಲಿ ಸುಮಾರು 12.75 ಲಕ್ಷ ಎಕರೆ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದ್ದು, ಪ್ರತಿವರ್ಷ 8.9 ಲಕ್ಷ ಟನ್‌ನಷ್ಟು ಅಡಿಕೆ ಸಿಪ್ಪೆ ಉತ್ಪಾದನೆ ಆಗುತ್ತದೆ. ಇದರಲ್ಲಿ ಹೆಚ್ಚಿನ ಭಾಗ ಸಿಪ್ಪೆಯು ಯಾವ ಉಪಯೋಗಕ್ಕೂ ಬಾರದೆ ನಷ್ಟವಾಗುತ್ತದೆ.

ಅಡಿಕೆ ಸಿಪ್ಪೆಯು ಒಂದು ಸಾವಯವ ಪದಾರ್ಥವಾಗಿದ್ದು, ಅಡಿಕೆ ಬೆಳೆಗೆ ಬೇಕಾದ ಪೋಷಕಾಂಶಗಳ ಆಗರವಾಗಿದೆ. ಹೀಗಾಗಿ, ಅದನ್ನು ವ್ಯರ್ಥ ಮಾಡುವ ಬದಲಿಗೆ ಕಾಂಪೋಸ್ಟೀಕರಣಗೊಳಿಸಿ (ಗೊಬ್ಬರವಾಗಿ ಕಳಿಸುವಿಕೆ) ತೋಟದ ಮಣ್ಣಿಗೆ ಸೇರಿಸಿದ್ದೇ ಆದಲ್ಲಿ, ನೀರು ಹಾಗೂ ಪೋಷಕಾಂಶವನ್ನು ಹಿಡಿದಿಟ್ಟುಕೊಳ್ಳುವ ಮಣ್ಣಿನ ಶಕ್ತಿ ಸುಧಾರಣೆಗೊಳ್ಳುವುದರ ಜೊತೆಗೆ ಸೂಕ್ಷ್ಮಾಣುಜೀವಿಗಳ ಚಟುವಟಿಕೆಯೂ ಹೆಚ್ಚುತ್ತದೆ. ಇದರಿಂದ ಗಿಡಗಳಿಗೆ ಸುಲಭವಾಗಿ ಪೋಷಕಾಂಶಗಳು ದೊರೆಯುವಂತೆ ಆಗುತ್ತದೆ. ಇಷ್ಟೆಲ್ಲಾ ಉಪಯೋಗಗಳನ್ನು ಹೊಂದಿರುವ ಸಾವಯವ ಪದಾರ್ಥವಾದ ಅಡಿಕೆ ಸಿಪ್ಪೆಯನ್ನು ಸುಟ್ಟುಹಾಕಿದರೆ ಅಥವಾ ತೋಟದಿಂದ ಹೊರಕ್ಕೆ ಎಸೆದರೆ, ಪೋಷಕಾಂಶ ನಷ್ಟ ಆಗುವುದರ ಜೊತೆಗೆ ವಾತಾವರಣವೂ ಕಲುಷಿತಗೊಳ್ಳುತ್ತದೆ.

ಅಡಿಕೆ ಸಿಪ್ಪೆಯಿಂದ ಇಷ್ಟೊಂದು ಉಪಯೋಗಗಳು ಇದ್ದರೂ ಅದನ್ನು ಎಲ್ಲೆಂದರಲ್ಲಿ ಬಿಸಾಡುವುದಕ್ಕೆ ಕಾರಣಗಳು ಇಲ್ಲವೆಂದಿಲ್ಲ. ರೈತರು ಹೇಳುವ ಪ್ರಕಾರ, ಅಡಿಕೆ ಸಿಪ್ಪೆಯು ಹೆಚ್ಚು ನಾರಿನಿಂದ ಕೂಡಿದ್ದು ಕಳಿಯುವಿಕೆ ತುಂಬಾ ನಿಧಾನ, ಹಾಗೆಯೇ ಬಿಟ್ಟರೆ ಅದು ಕರಗಲು ಎರಡು ವರ್ಷ ಬೇಕಾಗುತ್ತದೆ. ಆದ್ದರಿಂದ ರೈತರು ಅದನ್ನು ಕಾಂಪೋಸ್ಟ್ ತೊಟ್ಟಿಗೆ ಹಾಕಲು ಹಿಂಜರಿಯುತ್ತಾರೆ. ಕೆಲವೊಮ್ಮೆ ಅಡಿಕೆ ಸಿಪ್ಪೆಯ ರಾಶಿಗೆ ಬೆಂಕಿಯನ್ನು ಹಾಕುತ್ತಾರೆ. ಅಡಿಕೆ ಸಿಪ್ಪೆಯಲ್ಲಿ ಯಥೇಚ್ಛವಾಗಿ ಲಿಗ್ನಿನ್, ಸೆಲ್ಯುಲೋಸ್, ಹೆಮಿ ಸೆಲ್ಯುಲೋಸ್ ಇರುವುದರಿಂದ ಕಳಿಯುವಿಕೆ ನಿಧಾನ. ವೈಜ್ಞಾನಿಕವಾಗಿ, ಒಂದು ವಸ್ತು ಬೇಗ ಕಳಿಯಬೇಕಾದರೆ, ಅದರಲ್ಲಿನ ಸಾರಜನಕ ಹಾಗೂ ಇಂಗಾಲದ ಅನುಪಾತ 1:30ರ ಆಸುಪಾಸಿನಲ್ಲಿ ಇರಬೇಕು. ಆದರೆ ಅಡಿಕೆ ಸಿಪ್ಪೆಯಲ್ಲಿ ಈ ಅನುಪಾತವು 1:80ರ ಆಸುಪಾಸಿನಲ್ಲಿದೆ. ಅಂದರೆ, ಇಂಗಾಲದ ಪ್ರಮಾಣವು ಸಾರಜನಕದ ಪ್ರಮಾಣಕ್ಕಿಂತ ಅಧಿಕವಾಗಿರುವುದರಿಂದ ಕಳಿಯುವಿಕೆ ನಿಧಾನ.

ಈ ರೀತಿ ಅಡಿಕೆ ಸಿಪ್ಪೆ ಕಳಿಸುವಿಕೆಯಲ್ಲಿರುವ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿರುವ ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಜ್ಞಾನಿಗಳು, ಬರೀ ಆರು ತಿಂಗಳಲ್ಲಿ ಅಡಿಕೆ ಸಿಪ್ಪೆಯನ್ನು ಗೊಬ್ಬರವಾಗಿ ಪರಿವರ್ತಿಸುವ ಪದ್ಧತಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯಬೇಕಾದರೆ, ಪ್ರತಿ ಜಿಲ್ಲೆಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರವನ್ನು ಸಂಪರ್ಕಿಸಬಹುದಾಗಿದೆ. ಈ ರೀತಿ ವೈಜ್ಞಾನಿಕವಾಗಿ ತಯಾರಿಸಿದ ಅಡಿಕೆ ಸಿಪ್ಪೆಯ ಕಾಂಪೋಸ್ಟ್‌ನಲ್ಲಿ ಸಾರಜನಕ, ಪೊಟ್ಯಾಷ್, ಮೆಗ್ನೀಷಿಯಂ ಮತ್ತು ಕ್ಯಾಲ್ಸಿಯಂ ಅಂಶವು ಇನ್ನುಳಿದ ಕಾಂಪೋಸ್ಟ್‌ಗಳಿಗೆ ಹೋಲಿಸಿದರೆ ಅಧಿಕವಾಗಿರುವುದರಿಂದ, ಅಡಿಕೆ ಬೆಳೆಗೆ ಅಡಿಕೆ ಸಿಪ್ಪೆ ಕಾಂಪೋಸ್ಟ್ ಉತ್ತಮ ಸಾವಯವ ಗೊಬ್ಬರ ಆಗಬಲ್ಲದು.

ರೈತರು ಇತ್ತೀಚಿನ ದಿನಗಳಲ್ಲಿ ಪಶುಸಂಗೋಪನೆಯನ್ನು ಕಡೆಗಣಿಸಿದ್ದು, ಕೃಷಿಗೆ ಅಗತ್ಯವಾದ ಗುಣಮಟ್ಟದ ಸಾವಯವ ಗೊಬ್ಬರ ಸಿಗುವುದು ದುರ್ಲಭವಾಗುತ್ತಿದೆ. ಹೀಗಾಗಿ, ಇಂತಹ ಕೃಷಿ ತ್ಯಾಜ್ಯಗಳನ್ನು ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳಬಹುದಾಗಿದೆ. ಅಡಿಕೆ ಸಿಪ್ಪೆ ಮಾತ್ರವಲ್ಲ ಯಾವುದೇ ಬೆಳೆಯ ತ್ಯಾಜ್ಯವನ್ನು ವ್ಯರ್ಥ ಮಾಡದೆ, ತಮ್ಮ ಹೊಲದಲ್ಲಿಯೇ ಕಳಿಯುವಂತೆ ಮಾಡಿ ಹೊಲದ ಮಣ್ಣಿನಲ್ಲಿ ಬಹಳಷ್ಟು ಸಾವಯವ ವಸ್ತುಗಳು ಇರುವಂತೆ ನೋಡಿಕೊಂಡರೆ ಮಾತ್ರ ಮಣ್ಣಿನ ಆರೋಗ್ಯ ಸುಧಾರಿಸಿ ಕೃಷಿಯಲ್ಲಿ ಹೆಚ್ಚು ಸುಸ್ಥಿರತೆ ಸಾಧಿಸಲು ಸಾಧ್ಯ. ಹೀಗಾಗಿ, ರೈತರು ಅಡಿಕೆ ಸಿಪ್ಪೆ ಸೇರಿದಂತೆ ಯಾವುದೇ ಕೃಷಿ ತ್ಯಾಜ್ಯವನ್ನು ಸುಡದೆ, ವ್ಯರ್ಥ ಮಾಡದೆ ತಮ್ಮ ಹೊಲದ ಮಣ್ಣಿನ ಆರೋಗ್ಯ ವೃದ್ಧಿಸಲು ಬಳಸಬೇಕಾಗಿದೆ.

ಲೇಖಕ: ಕೃಷಿ ವಿಜ್ಞಾನಿ, ಕೃಷಿ ವಿಜ್ಞಾನ ಕೇಂದ್ರ ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ

ವಾಚಕರ ವಾಣಿ

ಸಂವಾದ ಅನುವಾದಗೊಳ್ಳಲಿ

‘ಪರೀಕ್ಷಾ ಪೇ ಚರ್ಚಾ’ ಎಂಬ ವಿನೂತನ ಕಾರ್ಯಕ್ರಮದ ಮೂಲಕ, ವಿದ್ಯಾರ್ಥಿಗಳು ನಿರ್ಭೀತಿಯಿಂದ ಪರೀಕ್ಷೆಗಳನ್ನು ಎದುರಿಸಲು ಸಾಧ್ಯವಾಗುವಂತೆ ಪ್ರಧಾನಿ ಸೂಕ್ತ ಮಾರ್ಗದರ್ಶನ ನೀಡುತ್ತಾ ಧೈರ್ಯ ತುಂಬುತ್ತಿರುವುದು ಸ್ವಾಗತಾರ್ಹ. ಇದೇ 29ರಂದು ನಡೆದ ಈ ಕಾರ್ಯಕ್ರಮದಲ್ಲಿ ನಮ್ಮ ರಾಜ್ಯದಿಂದ ಆನ್‌ಲೈನ್ ಮೂಲಕ ಉತ್ತಮ ಪ್ರಶ್ನೆಗಳನ್ನು ಸಲ್ಲಿಸಿದ ಕಾರಣಕ್ಕಾಗಿ 8, 9 ಮತ್ತು 10ನೇ ತರಗತಿಯಿಂದ ತಲಾ ಒಬ್ಬೊಬ್ಬ ವಿದ್ಯಾರ್ಥಿ ಭಾಗವಹಿಸಲು ಅವಕಾಶ ಪಡೆದದ್ದು ಹೆಮ್ಮೆಯ ವಿಷಯವೇ ಸರಿ. ಆದರೆ ಈ ಕಾರ್ಯಕ್ರಮದಲ್ಲಿ ನಡೆಯುವ ಸಂವಾದ ಹಿಂದಿಯಲ್ಲಿಯೇ ಇರುವುದರಿಂದ ಹಿಂದಿಯೇತರ ಭಾಷೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಅದು ಬಹುತೇಕ ಅರ್ಥವಾಗದೇ ಉಳಿಯುತ್ತದೆ. ಆದ್ದರಿಂದ ಆಯೋಜಕರು ಅಥವಾ ಶಿಕ್ಷಣ ಇಲಾಖೆ ಈ ಕಾರ್ಯಕ್ರಮವನ್ನು ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಮರುಪ್ರಸಾರ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ.

ಅನಂತರಾಜು ಡಿ.ಎಲ್., ಕೊಟಗಾರಲಹಳ್ಳಿ, ಮಧುಗಿರಿ

ಸಾಮೂಹಿಕ ವಸತಿ ವ್ಯವಸ್ಥೆ ಕಲ್ಪಿಸಿ

ಸರ್ಕಾರಿ ಉದ್ಯೋಗಗಳ ನೇಮಕಾತಿಗೆ ಅಧಿಸೂಚನೆ ಹೊರಬಿದ್ದ ತಕ್ಷಣ, ದೇಶದ ಲಕ್ಷಾಂತರ ನಿರುದ್ಯೋಗಿಗಳು ಕಷ್ಟಪಟ್ಟು ಹಣ ಹೊಂದಿಸಿಕೊಂಡು ಅರ್ಜಿ ಹಾಕಿ, ನಿಗದಿತ ಹಣ ತುಂಬುತ್ತಾರೆ. ಸತತ ಪರಿಶ್ರಮ ವಹಿಸಿ ಸಿದ್ಧರಾಗಿ ಪರೀಕ್ಷೆ ಬರೆಯಲು ತಮ್ಮದಲ್ಲದ ನಗರಗಳಿಗೆ ಹೋದರೆ, ಅಲ್ಲಿ ವಸತಿ, ಆಹಾರದ ವ್ಯವಸ್ಥೆಯಿಲ್ಲದೆ ಪರದಾಡುವುದನ್ನು ನಾವೆಲ್ಲರೂ ಮಾಧ್ಯಮಗಳ ಮೂಲಕ ಕಾಣುತ್ತಿದ್ದೇವೆ. ಪರೀಕ್ಷಾರ್ಥಿಗಳೆಲ್ಲರಿಗೂ ಸರ್ಕಾರಿ ನೌಕರಿ ಕೊಡಲಾಗದಿದ್ದರೂ, ಅವರು ಅರ್ಜಿಯೊಂದಿಗೆ ಸಲ್ಲಿಸಿದ ಹಣದಲ್ಲಿ ಪರೀಕ್ಷೆಯ ದಿನವಾದರೂ ಕಲ್ಯಾಣ ಮಂಟಪದಲ್ಲೋ ಸರ್ಕಾರಿ ಗೋದಾಮಿನಲ್ಲೋ ಸಾಮೂಹಿಕವಾಗಿ ಒಂದು ರಾತ್ರಿಯ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಆಯಾ ಇಲಾಖೆ ಮಾಡಲು ಮುಂದಾಗಬೇಕು.

ಆರ್.ಪಿ.ಮಂಜುನಾಥ್. ಬಿ.ಜಿ.ದಿನ್ನೆ, ಸಿರಗುಪ್ಪ

ಬಿ.ಇಡಿ. ಕೋರ್ಸ್: ಕಾಲಹರಣ ಸಲ್ಲ

ಮುಂದಿನ ಶೈಕ್ಷಣಿಕ ಸಾಲಿನಿಂದ ನಾಲ್ಕು ವರ್ಷಗಳ ಬಿ.ಇಡಿ. ಕೋರ್ಸ್ ಅಳವಡಿಸಿಕೊಳ್ಳಲು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) ಶಿಫಾರಸು ಮಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಜ. 30). ಈ ಮೊದಲು ರಾಜ್ಯದಲ್ಲಿ 10 ತಿಂಗಳ ಬಿ.ಇಡಿ. ಕೋರ್ಸ್ ಇತ್ತು. ಅಂದು ಕಲಿತ ಪ್ರಶಿಕ್ಷಣಾರ್ಥಿಗಳು ಕಡಿಮೆ ಅವಧಿಯಲ್ಲಿ ಗುಣಮಟ್ಟದ ಶಿಕ್ಷಣ ಪಡೆದು ಹೊರಬರುತ್ತಿದ್ದರು. ನಂತರ ಅನಗತ್ಯವಾಗಿ ಏಕಾಏಕಿ ಬಿ.ಇಡಿ. ಕೋರ್ಸನ್ನು ಎರಡು ವರ್ಷಗಳಿಗೆ ಏರಿಸಲಾಯಿತು. ವಾಸ್ತವವಾಗಿ, ರಾಜ್ಯದಲ್ಲಿರುವ ಶೇಕಡ 75– 80ರಷ್ಟು ಬಿ.ಇಡಿ. ಕಾಲೇಜುಗಳಲ್ಲಿ ಮ್ಯಾನೇಜ್‌ಮೆಂಟ್ ಕೋಟಾದಲ್ಲಿ ಸೀಟು ಪಡೆದವರು ಉಳಿದ ಪ್ರಶಿಕ್ಷಣಾರ್ಥಿಗಳಂತೆ ನಿತ್ಯ ಕಾಲೇಜಿಗೆ ಬಾರದೆ ನೇರವಾಗಿ ಪರೀಕ್ಷೆಗಳನ್ನು ಎದುರಿಸಿ ಬಿ.ಇಡಿ. ಮುಗಿಸಿದ್ದಾರೆ. ಇದರ ಬಗ್ಗೆ ಸರ್ಕಾರವಾಗಲೀ ಸಂಬಂಧಪಟ್ಟ ಇಲಾಖೆಯಾಗಲೀ ಯಾವುದೇ ಕ್ರಮ ಕೈಗೊಂಡಿಲ್ಲ.

ಇಂದು ಬಯೊಮೆಟ್ರಿಕ್ ಅಳವಡಿಸಿ ಪ್ರಶಿಕ್ಷಣಾರ್ಥಿಗಳ ಹಾಜರಾತಿ ಪಡೆದುಕೊಳ್ಳುತ್ತಿದ್ದರೂ, ಅದರಲ್ಲೂ ಬಹಳಷ್ಟು ಗೋಲ್‌ಮಾಲ್ ನಡೆಯುತ್ತಿದೆ. ಹೀಗಿರುವಾಗ, ನಾಲ್ಕು ವರ್ಷದ ಅವಧಿ ಮಾಡಿದರೆ ಸುಮ್ಮನೆ ಕಾಲಹರಣವೇ ವಿನಾ, ಗುಣಾತ್ಮಕತೆಗೆ ಹೆಚ್ಚು ಒತ್ತು ನೀಡಿದಂತೆ ಆಗುವುದಿಲ್ಲ. ಪ್ರಸ್ತುತ ಶಾಲೆಯಲ್ಲಿರುವ ಸವಾಲುಗಳನ್ನು ಎದುರಿಸಲು ಪ್ರಶಿಕ್ಷಣಾರ್ಥಿಗಳನ್ನು ಸಜ್ಜುಗೊಳಿಸುವ ಪಠ್ಯಕ್ರಮವನ್ನು ಬಿ.ಇಡಿ. ಕಲಿಕೆಯಲ್ಲಿ ಅಳವಡಿಸಲಿ.

ಸುರೇಂದ್ರ ಪೈ, ಹೊಸದುರ್ಗ

ವಿವಾದದ ಕಿಡಿ ಶಮನಗೊಳ್ಳಲಿ

ಮಂಡ್ಯದ ಕೆರಗೋಡು ವಿವಾದವನ್ನು ರಾಜಕಾರಣಿಗಳು ಅನವಶ್ಯಕವಾಗಿ ರಾಜಕೀಯ ವಿಚಾರಕ್ಕೆ ಬಳಸಿಕೊಂಡು ಜನರನ್ನು ದಿಕ್ಕು ತಪ್ಪಿಸುತ್ತಿರುವುದು ದುರದೃಷ್ಟಕರ. ಜಿಲ್ಲಾಡಳಿತ ತಪ್ಪು ಕ್ರಮ ತೆಗೆದುಕೊಂಡಿದ್ದರೆ ಸಂಬಂಧಿಸಿದವರು ನ್ಯಾಯಾಲಯದಲ್ಲಿ ಪ್ರಶ್ನಿಸುವ ಅವಕಾಶವಿದ್ದಾಗಲೂ ಜನಸಾಮಾನ್ಯರಿಗೆ ತೊಂದರೆ ನೀಡುತ್ತಿರುವುದು ಸರಿಯಲ್ಲ. ಕಾವೇರಿ ನೀರು ಬಿಡುಗಡೆಗೆ ಸಂಬಂಧಿಸಿದಂತೆ ಮಂಡ್ಯದ ರೈತರು ನೂರಾರು ದಿನ ಸರ್ಕಾರದ ವಿರುದ್ಧ ನಿರಂತರವಾಗಿ ಪ್ರತಿಭಟಿಸಿದರು. ಈಗ ಧ್ವಜದ ವಿಚಾರಕ್ಕೆ ಪ್ರತಿಭಟಿಸುತ್ತಿರುವ ರಾಜಕಾರಣಿಗಳು ಹಾಗೂ ಯುವಪಡೆಗಳಿಗೆ ಸೇರಿದವರು ಆಗ ಎಲ್ಲಿ ಹೋಗಿದ್ದರು? ಮಂಡ್ಯದ ಪ್ರಗತಿಪರರು ಹಾಗೂ ಈ ಹಿಂದೆ ಉರಿಗೌಡ, ನಂಜೇಗೌಡರ ವಿಚಾರ ಭುಗಿಲೆದ್ದಾಗ ಮಧ್ಯಪ್ರವೇಶಿಸಿ ತಿಳಿ ಹೇಳಿದ ನಿರ್ಮಲಾನಂದನಾಥ ಸ್ವಾಮೀಜಿ ಈ ವಿವಾದದ ಕಿಡಿಯನ್ನು ಶಮನಗೊಳಿಸಲು ಪ್ರಯತ್ನಿಸುವುದು ಒಳ್ಳೆಯದು. ಇಲ್ಲದಿದ್ದಲ್ಲಿ ಇದು ಜನಸಾಮಾನ್ಯರ ಬದುಕಿಗೆ ಮತ್ತಷ್ಟು ತೊಂದರೆ ಕೊಡುವ ಸಾಧ್ಯತೆ ಇದೆ.

ಪುಟ್ಟದಾಸು, ಮಂಡ್ಯ

ರಾಜ್ಯಸಭೆಯಲ್ಲಿ ಮೊಳಗಲಿ ಕನ್ನಡಿಗರ ಧ್ವನಿ

ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದ ನಾಲ್ವರು ಸದಸ್ಯರು ನಿವೃತ್ತಿಯಾಗುತ್ತಿರುವುದರಿಂದ ಆ ಸ್ಥಾನಗಳಿಗೆ ಫೆ. 27ರಂದು ಚುನಾವಣೆ ನಡೆಯಲಿದೆ. ಕರ್ನಾಟಕದಿಂದ ಈವರೆಗೆ ವೆಂಕಯ್ಯ ನಾಯ್ಡು, ನಿರ್ಮಲಾ ಸೀತಾರಾಮನ್ ಸೇರಿದಂತೆ ಹಲವಾರು ಪರಭಾಷಿಕರು ಮತ್ತು ಪರರಾಜ್ಯದವರು ಆಯ್ಕೆಯಾಗಿದ್ದಾರೆ. ಅಂತಹವರಿಂದ ಕರ್ನಾಟಕಕ್ಕೆ ನಿರೀಕ್ಷಿಸಿದಷ್ಟು ಅನುಕೂಲ ಆಗಲಿಲ್ಲ. ಜೊತೆಗೆ ಅವರು ಕನ್ನಡ ನಾಡಿನ ಪರವಾಗಿ ನಿಂತಿದ್ದೂ ಕಡಿಮೆಯೇ ಎನ್ನಬಹುದು.

ಇದೀಗ ಕಾಂಗ್ರೆಸ್ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಅವರು ಇಲ್ಲಿಂದ ಕಣಕ್ಕೆ ಇಳಿಯುವ ಊಹಾಪೋಹಗಳು ದಟ್ಟವಾಗಿ ಎದ್ದಿವೆ. ಹಾಗಾಗಿ, ಪ್ರಮುಖ ರಾಜಕೀಯ ಪಕ್ಷಗಳು ಪಕ್ಷಭೇದ ಮರೆತು, ಈಗ ನಡೆಯಲಿರುವ ನಾಲ್ಕು ಸ್ಥಾನಗಳಿಗೆ ಅಪ್ಪಟ ಕನ್ನಡಿಗರು ಮತ್ತು ಕನ್ನಡಪರ ಚಿಂತಕರನ್ನು ಆಯ್ಕೆ ಮಾಡಬೇಕು. ಆಗ ರಾಜ್ಯಸಭೆಯಲ್ಲಿ ಕನ್ನಡಿಗರ ಧ್ವನಿ ಕೇಳುತ್ತದೆ. ಈ ಮೂಲಕ ದಕ್ಷಿಣದ ನೋವಿನ ಕೂಗು ಕೇಂದ್ರಕ್ಕೂ ಕೇಳಿಸುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೇಶದಲ್ಲಿವೆ 718 ಹಿಮಚಿರತೆಗಳು...



ಹಿಮಚಿರತೆಗಳ ಸಂಖ್ಯೆ, ಜೀವನ ಕ್ರಮ, ಆಹಾರ ಕ್ರಮ, ಆವಾಸ ಸ್ಥಾನಗಳ ಬಗ್ಗೆ ಅಧ್ಯಯನ ನಡೆಸುವ ಉದ್ದೇಶದ ಗಣತಿಯು 2023ರಲ್ಲಿ ನಡೆದಿತ್ತು. ಹಲವು ತಿಂಗಳ ಕ್ಷೇತ್ರ ಅಧ್ಯಯನ, ಇನ್ನಷ್ಟು ತಿಂಗಳಲ್ಲಿ ದತ್ತಾಂಶಗಳ ಸಂಸ್ಕರಣೆ ಮತ್ತು ವಿಶ್ಲೇಷಣೆಯ ನಂತರ ಸಿದ್ಧಪಡಿಸಿದ ಹಿಮಚಿರತೆ ಸ್ಥಿತಿಗತಿ ವರದಿಯು ಮಂಗಳವಾರ ಬಿಡುಗಡೆಯಾಗಿದೆ. ವೈಜ್ಞಾನಿಕ ವಿಧಾನಗಳ ಮೂಲಕ ಅತ್ಯಂತ ಕರಾರುವಕ್ಕಾಗಿ ನಡೆಸಲಾದ ಮೊದಲ ಹಿಮಚಿರತೆ ವರದಿ ಇದು ಎಂದು ಕೇಂದ್ರ ಸರ್ಕಾರ ಹೇಳಿಕೊಂಡಿದೆ. ದೇಶದಲ್ಲಿ ಎಲ್ಲೆಲ್ಲಿ ಹಿಮಚಿರತೆಗಳಿವೆ, ಅವುಗಳ ಸ್ಥಿತಿಗತಿ ಕುರಿತ ವಿಸ್ತೃತ ಮಾಹಿತಿಯನ್ನು ಒಳಗೊಂಡ ವರದಿ ಇದು. ಈ ವರದಿಯ ಪ್ರಕಾರ ದೇಶದಲ್ಲಿ ಈಗ 700ಕ್ಕೂ ಹೆಚ್ಚು ಹಿಮಚಿರತೆಗಳಿವೆ

ಪ್ರಜಾವಾಣಿ ವಾರ್ತೆ

ಹಿಮ ಚಿರತೆ. ಲಡಾಖ್‌ನ ಜನಪದ ಕಲಾ ಪ್ರಕಾರಗಳಲ್ಲಿ ಪ್ರಧಾನ ಸ್ಥಾನ ಪಡೆದ ಒಂದು ಬೇಟೆ ಪ್ರಾಣಿ. ಅದು ದೇವತೆಯೂ ಹೌದು, ಕಾವಲುಗಾರನೂ ಹೌದು. ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂ ಮತ್ತು ಅರುಣಾಚಲ ಪ್ರದೇಶದ ಮಹಾ ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಇರುವ ಬುಡಕಟ್ಟು ಸಮುದಾಯಗಳ ಕಲಾ ಪ್ರಕಾರಗಳಲ್ಲೂ ಹಿಮಚಿರತೆಗೆ ಇಂಥದ್ದೇ ಸ್ಥಾನವಿದೆ. ಸಾಂಸ್ಕೃತಿಕವಾಗಿ ಮಾತ್ರವಲ್ಲ, ಜೀವ ವೈವಿಧ್ಯದ ದೃಷ್ಟಿಯಿಂದಲೂ ಅತ್ಯಂತ ಮಹತ್ವದ ಪ್ರಭೇದವಿದು. ಭಾರತದಲ್ಲಿ ಎಷ್ಟು ಹಿಮಚಿರತೆಗಳಿವೆ, ಪರಿಸರ ಸಮತೋಲನ ಕಾಯುವಲ್ಲಿ ಅವುಗಳ ಮಹತ್ವವೇನು ಎಂಬುದರ ಬಗ್ಗೆ ವಿಸ್ತೃತವಾದ ಅಧ್ಯಯನಗಳು ನಡೆದಿರಲಿಲ್ಲ. ಜಗತ್ತಿನ ಒಟ್ಟು ಹಿಮಚಿರತೆಗಳ ಸಂಖ್ಯೆಯಲ್ಲಿ ಭಾರತದಲ್ಲಿನ ಹಿಮಚಿರತೆಗಳ ಪಾಲು ಸರಿಸುಮಾರು ಶೇ 10ರಷ್ಟು ಎಂದು 1980ರಲ್ಲಿ ಅಂದಾಜಿಸಲಾಗಿತ್ತು. ಆನಂತರದಲ್ಲಿ ಅವುಗಳ ಸಂಖ್ಯೆಯನ್ನು ಅಂದಾಜಿಸುವ ಹಲವು ಅಧ್ಯಯನಗಳು ನಡೆದಿದ್ದವು. ಆದರೆ ಇದೇ ಮೊದಲ ಬಾರಿಗೆ ವೈಜ್ಞಾನಿಕವಾಗಿ ಹಿಮಚಿರತೆಗಳ ಗಣತಿ ನಡೆಸಲಾಗಿದೆ.

ಭಾರತದ ಮೂರು ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಷ್ಟೇ ಹಿಮಚಿರತೆಗಳಿವೆ. ಅದೂ ಸಮುದ್ರಮಟ್ಟದಿಂದ 3,000 ಮೀಟರ್‌ನಿಂದ 5,200 ಮೀಟರ್ ಎತ್ತರವಿರುವ ಪ್ರದೇಶಗಳಲ್ಲಿ ಇವುಗಳ ಇರುವಿಕೆ ಹೆಚ್ಚು. ಸಮುದ್ರಮಟ್ಟದಿಂದ 2,700 ಮೀಟರ್ ಎತ್ತರದಲ್ಲಿ ಇರುವ ಪ್ರದೇಶಗಳಲ್ಲಿ ಕೆಲವು ಹಿಮಚಿರತೆಗಳನ್ನು ಗುರುತಿಸಲು ಆಗಿದ್ದರೂ, ಅವುಗಳ ಪ್ರಾಥಮಿಕ ಆವಾಸಸ್ಥಾನ ಇರುವುದು 3,000 ಮೀಟರ್ ಎತ್ತರವಿರುವ ಪ್ರದೇಶಗಳಲ್ಲೇ. ಇಷ್ಟು ಸೀಮಿತ ಪ್ರದೇಶದಲ್ಲಿ ಇರುವ ಕಾರಣಕ್ಕೇ, ಹಿಮಚಿರತೆಗಳ ಕುರಿತು ಸಣ್ಣ ನಿರ್ಲಕ್ಷ್ಯವಿದೆ. ಅವುಗಳ ಗಣತಿ ನಡೆಯದೇ ಇದ್ದುದಕ್ಕೂ ಇದೇ ಕಾರಣ. ಆದರೆ, ಜೀವವೈವಿಧ್ಯದ ದೃಷ್ಟಿಯಿಂದ ಇದು ಅತ್ಯಂತ ಮಹತ್ವದ ಪ್ರಭೇದವಾಗಿದೆ.

ದಕ್ಷಿಣ ಭಾರತ, ಉತ್ತರ ಮತ್ತು ಮಧ್ಯ ಭಾರತದ ಬಯಲು ಪ್ರದೇಶ, ಈಶಾನ್ಯ ಭಾರತದ ಗುಡ್ಡಗಾಡು ಪ್ರದೇಶದ ಕಾಡುಗಳಲ್ಲಿ ಹುಲಿಯೇ ಪ್ರಧಾನ ಬೇಟೆಗಾರ. ಅಲ್ಲಿನ ಆಹಾರದ ಪಿರಮಿಡ್‌ನಲ್ಲಿ ಅತ್ಯಂತ ತುದಿಯಲ್ಲಿರುವ ಪ್ರಾಣಿ ಹುಲಿ. ಆಹಾರ ಸರಪಳಿ, ಪರಿಸರ ವ್ಯವಸ್ಥೆಯಲ್ಲಿ ಹುಲಿಯೇ ಪ್ರಧಾನ. ಈ ಪರಿಸರಗಳಲ್ಲಿ ಸಮತೋಲನ ಕಾಯ್ದುಕೊಳ್ಳುವಲ್ಲಿ ಹುಲಿಗೆ ಎಷ್ಟು ಮಹತ್ವವಿದೆಯೋ, ಮಹಾ ಹಿಮಾಲಯ ಪ್ರದೇಶಗಳಲ್ಲಿನ ಪರಿಸರವನ್ನು ಕಾಯ್ದುಕೊಳ್ಳುವಲ್ಲಿ ಹಿಮಚಿರತೆಗೆ ಅಷ್ಟೇ ಮಹತ್ವವಿದೆ.

ಏಕೆಂದರೆ ಮಹಾ ಹಿಮಾಲಯ ಪ್ರದೇಶಗಳಲ್ಲಿ ಹಿಮಚಿರತೆಯೇ ಪ್ರಧಾನ ಬೇಟೆಗಾರ. ಅಲ್ಲಿನ ಆಹಾರ ಪಿರಮಿಡ್‌ನ ತುತ್ತತುದಿಯಲ್ಲಿ ಇರುವುದು ಹಿಮಚಿರತೆಯೇ ಮತ್ತು ಅಲ್ಲಿನ ಪರಿಸರ ಸಮತೋಲನದಲ್ಲಿ ಪ್ರಧಾನ ಪಾತ್ರ ವಹಿಸುವುದೂ ಹಿಮಚಿರತೆಯೇ. ಈ ಪ್ರದೇಶಗಳಲ್ಲಿ ಯಥೇಚ್ಛವಾಗಿ ಇರುವ ನೀಲಿಕುರಿ, ಜಿಂಕೆ ಮತ್ತಿತರ ಬಲಿ ಪ್ರಾಣಿಗಳ ಸಂಖ್ಯೆಯನ್ನು ನಿಯಂತ್ರಿಸುವುದು ಹಿಮಚಿರತೆಗಳೇ. ಇಲ್ಲದಿದ್ದಲ್ಲಿ ಈ ಪ್ರದೇಶದಲ್ಲಿ ಬಲಿ ಪ್ರಾಣಿಗಳ ಸಂಖ್ಯೆ ಏರಿಕೆಯಾಗಿ, ಹಸಿರು ಕ್ಷೀಣಿಸುತ್ತದೆ. ಮೊದಲೇ ಸಡಿಲವಾಗಿರುವ ಹಿಮಾಲಯದ ಮಣ್ಣನ್ನು ಅದು ಇನ್ನಷ್ಟು ಸಡಿಲ ಮಾಡುತ್ತದೆ. ಪರಿಣಾಮವಾಗಿ ಅದು ಭೂಕುಸಿತಕ್ಕೆ ಕಾರಣವಾಗುವುದಲ್ಲದೇ, ಹಿಮನದಿಗಳ ಪರಿಸರಕ್ಕೂ ಧಕ್ಕೆ ತರುತ್ತದೆ. ಈ ಎಲ್ಲವನ್ನೂ ನಿಯಂತ್ರಣದಲ್ಲಿ ಇಡುವುದು ಹಿಮಚಿರತೆ. ಅದು ಇಲ್ಲಿನ 'ಕೀಸ್ಟೋನ್' ಪ್ರಭೇದ (ಪರಿಸರ ವ್ಯವಸ್ಥೆಯನ್ನು ವ್ಯಾಪಕವಾಗಿ ಪ್ರಭಾವಿಸುವ ಪ್ರಭೇದ). ಹೀಗಾಗಿಯೇ ಅದರ ಸಂರಕ್ಷಣೆ ಅತ್ಯಗತ್ಯವಾದುದು. ಆ ಸಂರಕ್ಷಣೆಯಲ್ಲಿನ ಈಗಿನ ವೈಜ್ಞಾನಿಕ ಗಣತಿಯು ಮಹತ್ವದ ಪಾತ್ರ ವಹಿಸಲಿದೆ.

'ಸಂರಕ್ಷಣಗೆ ಒತ್ತು ನೀಡಿ': ಈ ಗಣತಿಯ ಪ್ರಕಾರ ಒಟ್ಟು 1.07 ಲಕ್ಷ ಚದರ ಕಿ.ಮೀ. ಪ್ರದೇಶದಲ್ಲಿ ಹಿಮಚಿರತೆಗಳ ಆವಾಸಸ್ಥಾನ ವಿಸ್ತರಿಸಿದೆ. ಆದರೆ ಇವುಗಳಲ್ಲಿ ಸಂರಕ್ಷಿತ ಪ್ರದೇಶ ಎಂದು ಘೋಷಿತವಾಗಿರುವುದು ಶೇ 34ರಷ್ಟು ಪ್ರದೇಶ ಮಾತ್ರ. ಉಳಿದ ಶೇ 66ರಷ್ಟು ಪ್ರದೇಶವು ಮಾನವ ಚಟುವಟಿಕೆ ಇರುವ ಪ್ರದೇಶದ ಬಳಿಯೇ ಇದೆ. ಹಿಮಚಿರತೆ–ಮಾನವ ಸಂಘರ್ಷ ಗಣನೀಯ ಮಟ್ಟದಲ್ಲಿ ಇಲ್ಲವಾದರೂ, ಅವುಗಳ ಆವಾಸ ಸ್ಥಾನದ ಬಳಿ ಮಾನವನ ಚಟುವಟಿಕೆಗಳು ತೀವ್ರವಾದರೆ ಸಂಘರ್ಷ ಹೆಚ್ಚಾಗುವ ಅಪಾಯವಿದೆ. ಅದಕ್ಕೂ ಮುನ್ನವೇ ಸಂರಕ್ಷಣಾ ಕ್ರಮಗಳನ್ನು ಹೆಚ್ಚಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

36,380 ಚದರ ಕಿ.ಮೀ.
ಹಿಮಚಿರತೆಗಳ ಆವಾಸ ಸ್ಥಾನದಲ್ಲಿ ಸಂರಕ್ಷಿತ ಅರಣ್ಯ ಪ್ರದೇಶಗಳಲ್ಲಿನ ವ್ಯಾಪ್ತಿ

71,214 ಚದರ ಕಿ.ಮೀ.
ಹಿಮಚಿರತೆಗಳ ಆವಾಸ ಸ್ಥಾನದಲ್ಲಿ ಸಂರಕ್ಷಿತ ಅರಣ್ಯಗಳಿಂದ ಹೊರಗಿರುವ ಪ್ರದೇಶದ ವ್ಯಾಪ್ತಿ

ಕ್ಯಾಮೆರಾದಲ್ಲಿ 241 ಹಿಮಚಿರತೆಗಳು

ಮಹಾ ಹಿಮಾಲಯದ ಹಿಮಗಾಡಿನಲ್ಲಿ ಅಲೆದು ಹಿಮಚಿರತೆಗಳ ಹೆಜ್ಜೆಗುರುತುಗಳನ್ನು ಕಲೆ ಹಾಕಲಾಗಿತ್ತು. ಹಿಮಚಿರತೆಗಳ ಹೆಜ್ಜೆಗುರುತುಗಳು, ಮೂತ್ರ ಸಿಂಪಡಿಸಿದ ಮರ/ಬಂಡೆಗಳು, ಮಲವನ್ನು ಗುರುತಿಸಲು ಸಂಶೋಧಕರು ಒಟ್ಟು 13,450 ಕಿ.ಮೀ.ನಷ್ಟು ದೂರವನ್ನು ಕ್ರಮಿಸಿದ್ದರು. ಜತೆಗೆ 1,971 ಸ್ಥಳಗಳಲ್ಲಿ ಕ್ಯಾಮೆರಾ ಟ್ರ್ಯಾಪಿಂಗ್ ಸಾಧನಗಳನ್ನು ಅಳವಡಿಸಲಾಗಿತ್ತು. ಗಣತಿಯ ಅವಧಿಯಲ್ಲಿ ಈ ಕ್ಯಾಮೆರಾಗಳು ಸೆರೆಹಿಡಿದ ಚಿತ್ರಗಳ ಒಟ್ಟು ಸಂಖ್ಯೆ 20.2 ಲಕ್ಷದಷ್ಟು. ಅವುಗಳಲ್ಲಿ 196 ಪ್ರಭೇದಗಳಿಗೆ ಸೇರಿದ ಹಕ್ಕಿ–ಪಕ್ಷಿಗಳು ಮತ್ತು ಸಸ್ತನಿಗಳ ಚಿತ್ರಗಳಿದ್ದವು. ಅವೆಲ್ಲವನ್ನೂ ಒಂದೊಂದಾಗಿ ಪರಿಶೀಲಿಸಿ, ಹಿಮಚಿರತೆಗಳ ಚಿತ್ರಗಳನ್ನು ಪ್ರತ್ಯೇಕಿಸಲಾಗಿತ್ತು.

ಹಿಮಚಿರತೆಗಳ ಚಿತ್ರಗಳನ್ನೇನೋ ಪ್ರತ್ಯೇಕಿಸ ಲಾಗಿತ್ತು. ಆದರೆ, ಅವುಗಳಲ್ಲಿ ಎಷ್ಟು ಹಿಮಚಿರತೆಗಳ ಚಿತ್ರಗಳಿವೆ ಎಂಬುದನ್ನು ವಿಂಗಡಿಸುವುದು ಹೇಗೆ? ಹುಲಿಗಳನ್ನು ಅವುಗಳ ಪಟ್ಟೆಗಳ ಆಧಾರದಲ್ಲಿ ಪ್ರತ್ಯೇಕಿಸುವಂತೆ, ಹಿಮಚಿರತೆಗಳನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. ಹೀಗಾಗಿ ಸಂಶೋಧಕರು ಬೇರೊಂದು ವಿಧಾನವನ್ನು ರೂಪಿಸಿಕೊಂಡಿದ್ದರು. ಅವುಗಳ ಹಣೆ ಮೇಲಿನ ತುಪ್ಪಳದ ವಿನ್ಯಾಸವು, ಪ್ರತಿ ಹಿಮಚಿರತೆಗೂ ವಿಶಿಷ್ಟ ರೀತಿಯಲ್ಲಿ ಇರುವುದನ್ನು ಕಂಡುಕೊಂಡಿದ್ದರು. ಈ ರೂಪದಲ್ಲಿ ಅವುಗಳನ್ನು ಪ್ರತ್ಯೇಕಿಸಲು ಕೃತಕ ಬುದ್ಧಿಮತ್ತೆ ಟೂಲ್‌ಗಳನ್ನು ಬಳಸಿಕೊಂಡರು. ಅಷ್ಟೂ ಚಿತ್ರಗಳನ್ನು ಕಂಪ್ಯೂಟರ್ ಮೂಲಕ ಹೀಗೆ ಪ್ರತ್ಯೇಕಿಸಲಾಯಿತು. ಹೀಗೆ ಒಟ್ಟು 241 ಹಿಮಚಿರತೆಗಳು ಈ ಚಿತ್ರಗಳಲ್ಲಿ ಸೆರೆಯಾಗಿವೆ ಎಂಬ ನಿರ್ಧಾರಕ್ಕೆ ಬರಲಾಯಿತು.

ಈ ಅಂಕಿಅಂಶಗಳೇ ಈ ಅಧ್ಯಯನದ ಅಗಾಧತೆಯನ್ನು ವಿವರಿಸುತ್ತವೆ. ಈ ಚಿತ್ರಗಳು, ಹೆಜ್ಜೆಗುರುತುಗಳು ಮತ್ತಿತರ ಗುರುತುಗಳನ್ನು ವಿಶ್ಲೇಷಿಸಿ ಈ ಪ್ರದೇಶದಲ್ಲಿ ಒಟ್ಟು 718 ಹಿಮಚಿರತೆಗಳಿವೆ ಎಂಬ ಅಂದಾಜಿಗೆ ಬರಲಾಗಿದೆ. 1980ರಲ್ಲಿ ಮಾಡಲಾಗಿದ್ದ ಅಂದಾಜಿಗೂ (400–700) ಈಗಿನ ಅಂದಾಜಿಗೂ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ಆದರೆ ಈಗಿನದ್ದು, ಮೊದಲಿನದಕ್ಕಿಂತ ಹೆಚ್ಚು ಕರಾರುವಕ್ಕಾದ ಅಂದಾಜು.

ಸಿನಿ ಬಿಟ್ಸ್

ಶಿವರಾತ್ರಿಗೆ ಕರಟಕ ದಮನಕ

ಯೋಗರಾಜ್ ಭಟ್ ಆ್ಯಕ್ಷನ್, ಕಟ್ ಹೇಳಿರುವ ಹೊಸ ಸಿನಿಮಾ 'ಕರಟಕ ದಮನಕ' ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ. ಶಿವರಾಜ್‌ಕುಮಾರ್ ಹಾಗೂ ಪ್ರಭುದೇವ ನಟಿಸಿರುವ ಈ ಸಿನಿಮಾ ಮಾರ್ಚ್ 8 ರಿಲೀಸ್ ಆಗಲಿದೆ.

'ಕಳೆದ 10-11 ವರ್ಷದಿಂದ ಯೋಗರಾಜ್ ಭಟ್ ಅವರು ಒಂದು ಸಿನಿಮಾ ಮಾಡಲು ಕೇಳುತ್ತಿದ್ದರು. ಫಿಲಾಸಫಿಯನ್ನು ಮನರಂಜನಾತ್ಮಕವಾಗಿ ಹೇಳುವ ಕಲೆ ಅವರಲ್ಲಿದೆ. ಪ್ರಭುದೇವ ಅವರ ಜೊತೆ ನಟನೆ, ಡ್ಯಾನ್ಸ್ ಮಾಡುವಾಗ ಭಯವಿತ್ತು. ಇದಕ್ಕೆ ಭೂಷಣ್ ಅವರನ್ನು ಮನೆಗೆ ಕರೆಸಿಕೊಂಡು ತರಬೇತಿ ಪಡೆದಿದ್ದೆ. ಪ್ರಭುದೇವ ಮೇಲೆ ಒಂದು ರೀತಿಯ ಭಕ್ತಿ ಹಾಗೂ ಮರ್ಯಾದೆ ನನಗಿದೆ. ಅವರ ಜೊತೆ ನಟಿಸಿದ ಬಳಿಕ ಅವರನ್ನು ಹೆಚ್ಚು ಇಷ್ಟಪಡತೊಡಗಿದೆ' ಎಂದು ಚಿತ್ರೀಕರಣದ ಅನುಭವ ಹಂಚಿಕೊಂಡರು ಶಿವರಾಜ್‌ಕುಮಾರ್.

'ಭಟ್ರು ಒಂಥರಾ ಹೆಂಡ್ತಿ ಇದ್ದ ಹಾಗೆ': 'ಯೋಗರಾಜ್ ಭಟ್ ಒಂದು ರೀತಿ ಹೆಂಡತಿಯ ಹಾಗೆ. ಬಿಡಕ್ಕೂ ಆಗಲ್ಲ; ಜೊತೆ ಇರುವುದಕ್ಕೂ ಆಗುವುದಿಲ್ಲ. ಆದರೆ ಇರಲೇಬೇಕಲ್ಲ. ಅವರ ಜೊತೆ ಚಿತ್ರೀಕರಣ ಮಾಡುವುದು ಕಷ್ಟ. ಏಕೆಂದರೆ ಸಿನಿಮಾ ಬಗ್ಗೆ ಅವರಿಗೆ ಹೆಚ್ಚು ಒಲವಿದೆ' ಎಂದರು ಪ್ರಭುದೇವ.

ಊರು, ನೀರಿನ ಕಥೆ: ಚಿತ್ರದ ಕಥೆಯ ಬಗ್ಗೆ ಮಾಹಿತಿ ನೀಡಿದ ಯೋಗರಾಜ್ ಭಟ್, 'ಒಂದು ಊರು, ನೀರಿನ ಕಥೆ ಇದು. ಟ್ರೈಲರ್‌ನಲ್ಲಿ ಕಥೆಯ ಸಣ್ಣ ಸುಳಿವು ಸಿಗಲಿದೆ. ಉತ್ತರ ಕರ್ನಾಟಕದ ಬ್ಯಾಕ್‌ಡ್ರಾಪ್‌ನಲ್ಲಿ ಈ ಸಿನಿಮಾ ನಡೆಯುತ್ತದೆ. ಅಲ್ಲಿನ ಕರಿಮಣ್ಣಿನಿಂದಾಗಿ ನಮ್ಮ ನಾಡಿಗೆ ಕರುನಾಡು ಎಂದು ಹೆಸರು ಬಂದಿದೆ. ನಾನು ಉತ್ತರ ಕರ್ನಾಟಕದಲ್ಲೇ ಓದಿ, ಬೆಳೆದವನು. ಕಥೆಗೆ ಸೂಕ್ತವಾಗಿರುವ ಕಾರಣ ಉತ್ತರ ಕರ್ನಾಟಕವನ್ನು ಪ್ರಮುಖವಾಗಿ ತೆಗೆದುಕೊಳ್ಳಲಾಗಿದೆ' ಎಂದರು.

ನಾಗತಿಹಳ್ಳಿ ಸೇರಿ ಹಲವರಿಗೆ ಪ್ರಶಸ್ತಿ

'ಆಚಾರ್ & ಕೋ' ಚಿತ್ರದ ನಿರ್ದೇಶನಕ್ಕಾಗಿ ಸಿಂಧೂ ಶ್ರೀನಿವಾಸಮೂರ್ತಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಟ ಡಾಲಿ ಧನಂಜಯ, ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ, ಹೇಮಂತ್ ರಾವ್ ಸೇರಿದಂತೆ ಚಿತ್ರರಂಗದ ಹಲವು ಸಾಧಕರಿಗೆ ಶ್ರೀ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ ವಿವಿಧ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಕನ್ನಡ ಚಿತ್ರರಂಗದ ಪ್ರಚಾರಕರ್ತ ದಿವಂಗತ ಡಿ.ವಿ ಸುಧೀಂದ್ರ ಅವರಿಂದ ಸ್ಥಾಪಿತವಾದ ಶ್ರೀ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ 48ನೇ ವಾರ್ಷಿಕೋತ್ಸವ ಹಾಗೂ 23ನೇ ಪ್ರಶಸ್ತಿ ಪ್ರದಾನ ಸಮಾರಂಭ ಬೆಂಗಳೂರಿನ ಕಲಾವಿದರ ಸಂಘದಲ್ಲಿ ಇತ್ತೀಚಿಗೆ ನಡೆಯಿತು.

ನಿರ್ಮಾಪಕ ರಾಮು ಅವರಿಗೆ ಮರಣೋತ್ತರ ಪ್ರಶಸ್ತಿ ನೀಡಲಾಗಿದ್ದು, ಅವರ ಪತ್ನಿ ಮಾಲಾಶ್ರೀ ಪ್ರಶಸ್ತಿ ಸ್ವೀಕರಿಸಿದರು. ಹಿರಿಯ ನಟ ಸುಂದರರಾಜ್, ಹಿರಿಯ ನಟಿ ದುಬೈ ಜಯಲಕ್ಷ್ಮಿ, ಸಂಗೀತ ನಿರ್ದೇಶಕ ಜೋಕೋಸ್ಟ, ನಿರ್ದೇಶಕಿ ಸಿಂಧೂ ಶ್ರೀನಿವಾಸಮೂರ್ತಿ, ಹಿರಿಯ ಪತ್ರಕರ್ತ ಬಿ.ಎನ್. ಸುಬ್ರಹ್ಮಣ್ಯ, ಬಿ.ಎಸ್.ಲಿಂಗದೇವರು ಹಾಗೂ ಶರಣು ಹುಲ್ಲೂರು ಅವರು ವಿವಿಧ ವಿಭಾಗಗಳಲ್ಲಿನ ಪ್ರಶಸ್ತಿಗೆ ಭಾಜನರಾದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ಎನ್.ಎಂ. ಸುರೇಶ್, ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷರಾದ ಉಮೇಶ್ ಬಣಕಾರ್, ಹಿರಿಯ ನಟ ಶಶಿಕುಮಾರ್, ತಾರಾ ಅನುರಾಧ, ಡಾ. ವಿಜಯಮ್ಮ, ಪೂರ್ಣಿಮ ರಾಮಕುಮಾರ್, ವಿನೋದ್ ಪ್ರಭಾಕರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ನನಗೆ ಹೆಮ್ಮೆ ಇದೆ. ಅವರು ದೇಶಕ್ಕಾಗಿ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ನಾನು ಪ್ರಧಾನಿಯಾಗಿದ್ದಾಗ ಅಂತಹ ನಿರ್ಧಾರಗಳನ್ನು ತೆಗೆದುಕೊಳ್ಳಲು ಕಾಂಗ್ರೆಸ್ ಬಿಡುತ್ತಿರಲಿಲ್ಲ. ಆದರೆ ನನಗೆ ಈಗ ಅಂತಹ ಭಯವಿಲ್ಲ. ಹೀಗಾಗಿ ಈ ಸತ್ಯವನ್ನು ಹೇಳುತ್ತಿದ್ದೇನೆ. ನರೇಂದ್ರ ಮೋದಿ ಅವರು ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠ ಪ್ರಧಾನಿ' ಎಂದು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಟ್ವೀಟ್ ಮಾಡಿದ್ದಾರೆ ಎನ್ನಲಾದ ಸ್ಕ್ರೀನ್‌ಶಾಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. '@manmohan_5 ಹ್ಯಾಂಡಲ್‌ನಿಂದ ಮನಮೋಹನ್ ಸಿಂಗ್ ಈ ಟ್ವೀಟ್ (ಎಕ್ಸ್‌ಪೋಸ್ಟ್) ಮಾಡಿದ್ದಾರೆ ಎನ್ನಲಾಗುತ್ತಿದೆ. ಆದರೆ ಇದು ಸುಳ್ಳು ಸುದ್ದಿ.

'ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಇಂತಹ ಸ್ವೀಟ್ ಮಾಡಿಲ್ಲ. '@manmohan_5 ಹ್ಯಾಂಡಲ್, ಮನಮೋಹನ್ ಸಿಂಗ್ ಅವರ ಎಕ್ಸ್ ಖಾತೆಗೆ ಸಂಬಂಧಿಸಿದ್ದಲ್ಲ. '@manmohan_5 ಹ್ಯಾಂಡಲ್‌ನಿಂದ ಈ ಹಿಂದೆಯೂ ಹಲವು ಬಾರಿ ಸುಳ್ಳು ಸುದ್ದಿಗಳನ್ನು ಹಂಚಿಕೊಳ್ಳಲಾಗಿತ್ತು. ಈ ಖಾತೆಗೆ ಡಿಸ್‌ಪ್ಲೇ ಚಿತ್ರವಿಲ್ಲ ಮತ್ತು ವೆರಿಫೈಡ್ ಚಿಹ್ನೆಯೂ ಇಲ್ಲ. ಇದೊಂದು ನಕಲಿ ಖಾತೆ ಎಂದು 2021ರಲ್ಲೇ ಕೆಲವು ಮಾಧ್ಯಮಗಳು ವರದಿ ಮಾಡಿದ್ದವು. ಈ ಹ್ಯಾಂಡಲ್‌ನಲ್ಲಿ ಪ್ರಕಟವಾಗಿದ್ದ ಎಲ್ಲಾ ಪೋಸ್ಟ್‌ಗಳನ್ನು ಈಗ ಡಿಲೀಟ್ ಮಾಡಲಾಗಿದೆ. ಈ ಹ್ಯಾಂಡಲ್ ಅನ್ನು ಬಳಸಿಕೊಂಡು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಹೆಸರಿನಲ್ಲಿ ಯಾರೋ ಸುಳ್ಳು ಸುದ್ದಿ ಸೃಷ್ಟಿಸುತ್ತಿದ್ದಾರೆ' ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಹಿಂದಕ್ಕೆ ಚಲಿಸುವ ಜನ

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಇವರು ಸದಾ ಹೀಗೆ. ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಲೇ ಇರುತ್ತಾರೆ. ಪುನರಾವರ್ತಿತ ವಿಷಯಗಳು ಬಿಟ್ಟರೆ ಮತ್ತೇನೂ ಹೊಸದು ಅವರ ಬಳಿ ಸಿಗುವುದಿಲ್ಲ. ಈ ದಿನದ ತಾಜಾ ಬದುಕನ್ನು, ನಾಳೆಯ ಕನಸನ್ನು ಅವರೆಂದೂ ವಿಸ್ತರಿಸುವುದಿಲ್ಲ. ತಿರುಗಿ ಕ್ರಿಸ್ತ-ಪೂರ್ವದಲ್ಲಿ ತಮಗೆ ಮೋಸ ಮಾಡಿದವರ, ನೋವು ಕೊಟ್ಟವರ, ತನ್ನಿಂದ ಸಹಾಯ ಪಡೆದು ಮರೆತಿರುವ ವ್ಯಕ್ತಿಗಳ ನೆನೆದು ನಿಗಿನಿಗಿ ಉರಿಯುತ್ತಲೇ ಇರುತ್ತಾರೆ. ತಮ್ಮ ಮಾತುಗಳ ಕೇಳುವ ಜನರನ್ನು ಹುಡುಕಿಕೊಂಡು ಅಲೆದಾಡುತ್ತಾರೆ. ರೇಜಿಗೆ ಬಂದಿದ್ದರೂ ಸಹಿಸಿಕೊಂಡು ನಾನೊಮ್ಮೆ ಹೇಳಿದೆ.

'ನೀವು ಹಿಂದಿನದನ್ನು ಯಾಕೆ ಮರೆಯುವುದಿಲ್ಲ? ಕಹಿ ಘಟನೆಗಳು, ನೋವಿನ ಸಂದರ್ಭಗಳು ಎಲ್ಲರ ಜೀವನದಲ್ಲೂ ಘಟಿಸಿ ಹೋಗಿರುತ್ತವೆ. ಅವುಗಳನ್ನು ನೆನಪಿಸಿ, ಕೆದಕಿ, ಕಾಲಕಳೆಯುವುದು ಒಳ್ಳೆಯದಲ್ಲ. ದಯಮಾಡಿ ನಿಮ್ಮ ಶತ್ರುಗಳನ್ನು ಒಮ್ಮೆಗೇ ಮರೆತುಬಿಡಿ. ಸಾಧ್ಯವಾದರೆ ಕ್ಷಮಿಸಿಬಿಡಿ. ನಿಮ್ಮ ಬದುಕಲ್ಲಿ ಸಿಕ್ಕ ಒಳ್ಳೆಯವರ ಬಗ್ಗೆ ಈಗಿನಿಂದಾದರೂ ಮಾತಾಡಲು ಶುರು ಮಾಡಿ. ಅಲ್ಲದೇ ಹೋದರೆ, ಇರುವ ಪರಿಚಯಸ್ತರನ್ನೂ ಕಳೆದುಕೊಳ್ಳುತ್ತೀರಿ' ಎಂದೆ.

ಅವರು ಬದಲಾಗಲು ತಯಾರಿಲ್ಲ. ಮತ್ತದೇ ಹಳೆಯ ಪ್ಲೇಟು ಅದೇ ಧಾಟಿಯಲ್ಲಿ ಹಚ್ಚಿದರು. ಕೊರಗುವುದು ಮತ್ತು ಕೊರೆಯುವುದು ಅವರಿಗೆ ಜಾಡ್ಯವಾಗಿ ಹೋಗಿದೆ. ಎಷ್ಟೋ ವರ್ಷಗಳ ಹಿಂದೆ ನಡೆದ ಘಟನೆಗಳನ್ನು ತಾಜಾ ಎಂಬಂತೆ ಬಿಂಬಿಸುತ್ತಾರೆ. ಅವರಿಗೆಲ್ಲಾ ನಾನೊಂದು ಗತಿ ಕಾಣಿಸದೆ ಬಿಡುವುದಿಲ್ಲ ಎಂಬ ಪ್ರತಿಜ್ಞೆಯನ್ನೂ ಮರೆಯದೆ ಮಾಡುತ್ತಾರೆ. ನನಗೆ ತಿಳಿದಂತೆ ಈ ಸೇಡು ತೀರಿಸಿಕೊಳ್ಳುವ ಯಾವ ಕೆಲಸವನ್ನೂ ಅವರು ಮಾಡಲಾಗಿಲ್ಲ. ಎಲ್ಲವೂ ಮಾತಲ್ಲೇ ನಡೆದಿವೆ. ಕರಕರ ಹಲ್ಲು ಕಡಿದು, ಕೊತಕೊತ ಕುದಿದು ಸಿಟ್ಟಾಗಿ ಪ್ರಸಂಗ ಮುಗಿಸುತ್ತಾರೆ.

ಹೀಗೆ ದಿನದಿನವೂ ಹಿಂದಿನ ಕಹಿ ಘಟನೆಗಳ ನೆನೆದು ಕೆರಳುವ ಗೀಳಿನವರು ಮುಂದೆ ಚಲಿಸುವುದಿಲ್ಲ. ಎಷ್ಟು ಹಿಡಿದೆಳೆದರೂ ಮತ್ತೆ ಮತ್ತೆ ತಪ್ಪಿಸಿಕೊಂಡು ನೋವು ಕೊಟ್ಟವರ ಮನೆ ಕಡೆಗೆ ಓಡುತ್ತಾರೆ. ಹಳೆಯ ಗಾಯಗಳ ಎಬ್ಬಿಸಿ ಸವರಿ ಸುಖಪಡುವ ಈ ಮನಃಸ್ಥಿತಿಯೇ ಒಂದು ವಿಚಿತ್ರ ಕಾಯಿಲೆ. ಮೂರ್ಖರು ಮಾತ್ರ ತಮ್ಮ ಹಳೆಯ ಗಂಟುಗಳನ್ನು ಕಟ್ಟುತ್ತಾರಂತೆ. ಬುದ್ಧಿವಂತರು ಅವುಗಳನ್ನು ಮೊದಲೇ ಕಳೆದು ಕೊಂಡಿರುತ್ತಾರಂತೆ. ಇದೊಂದು ಬಗೆಯ ಕೀಳರಿಮೆ. ವ್ಯಕ್ತಿಯ ಮನಸ್ಸಿಗೆ ಸೀಸದ ಪಾದಗಳಂತೆ ಮೆಲ್ಲನೆ ನಡೆದು ಬರುವ ಪುರಾತನ ದಿನಗಳು ನಂತರ ಕಬ್ಬಿಣದ ಕೈಗಳಾಗಿ ಅವರಿಗೇ ಹೊಡೆಯಲು ಶುರುಮಾಡುತ್ತವೆ. ಇಂಥವರ ಮನಸ್ಸು ವೇಗವಾಗಿ ಗಾಯಗೊಳ್ಳುತ್ತದೆ. ಆದರೆ ಎಂದೆಂದಿಗೂ ಗುಣವಾಗುವ ಸೂಚನೆ ತೋರುವುದಿಲ್ಲ. ಮಿದುಳು ಯೋಚಿಸುವುದನ್ನು ನಿಲ್ಲಿಸಿದಾಗ ನಾಲಿಗೆ ಹೆಚ್ಚು ಮಾತನಾಡುತ್ತದೆ ಎನ್ನುವುದು ನಿಜವೇ ಇರಬೇಕು.

ಮನುಷ್ಯ ಕೆಟ್ಟದ್ದನ್ನು ಸಹಿಸಿಕೊಂಡು ಒಳ್ಳೆಯದನ್ನು ನಿರೀಕ್ಷಿಸುವುದೇ ಜೀವನ. ಸ್ವಲ್ಪವೂ ದುಃಖವಿಲ್ಲದೆ ಯಾರ ದಿನವು ಹಾದು ಹೋಗುವುದಿಲ್ಲ. ನಡೆದು ಹೋದ ಯಾವುದನ್ನೂ ಸರಿ ಮಾಡಲು ಆಗುವುದಿಲ್ಲ. ಲಭ್ಯವಿರುವ ಬದುಕಿನ ಸಂತಸಗಳೊಟ್ಟಿಗೆ ಬದುಕಬೇಕೆಂದರೆ ಆದ ಕಹಿಗಳನ್ನು ಮರೆಯಲೇಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜನವರಿ 31, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ಪಂಚಮಿ ಗಂ. 11-37 ನಕ್ಷತ್ರ: ಹಸ್ತ ಗಂ. 25-08 ಯೋಗ: ಸುಕರ್ಮ ಗಂ. 11-41 ಕರಣ: ತೈತಿಲ ಗಂ. 11-37, ಮಕರ ಮಾಸದ 15 ನೇ ದಿನ, ಮಳೆನಕ್ಷತ್ರ: ಶ್ರವಣ 3.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 07-01 ಸೂರ್ಯಾಸ್ತ : 06-27
ಮುಸ್ಲಿಂ ದಿನಾಂಕ : 18 ರಜಬ್
ಅದೃಷ್ಟ ಸಂಖ್ಯೆ: 2, 9

ಮೇಷ: ಉತ್ತಮ ಅಭಿವೃದ್ಧಿಯಿಂದ ಸಂಸಾರದಲ್ಲಿ ನೆಮ್ಮದಿ ಇರುವುದು. ಸಿಟ್ಟು ಅಥವಾ ಯೋಚನಾರಹಿತ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗುವುದು. ಜಾಗ್ರತೆವಹಿಸಿ.

ವೃಷಭ: ಈಗ ಆರಿಸಿಕೊಂಡಿರುವ ಕಾರ್ಯಕ್ಷೇತ್ರದಲ್ಲಿ ನಿರಾಸೆಯಿಂದ ಹಿಂದಿರುಗುವ ಆಲೋಚನೆ ಸರಿಯಲ್ಲ. ಆಹಾರದ ಪದ್ಧತಿ ನಿಯಂತ್ರಿಸಿಕೊಂಡು ರಕ್ತದೊತ್ತಡ ಸ್ಥಿತಿಯನ್ನು ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳಿ.

ಮಿಥುನ: ಕೈಗೊಂಡ ನಿರ್ಧಾರಗಳನ್ನು ಕೆಲ ಮಾರ್ಪಾಟು ಮಾಡಿಕೊಂಡಲ್ಲಿ ವ್ಯವಹಾರವು ಧನಲಾಭವನ್ನು ಕಾಣುವುದು. ಪ್ರೀತಿಪಾತ್ರರೊಂದಿಗೆ ಮನಬಿಚ್ಚಿ ಮಾತನಾಡುವ ಇಚ್ಛೆಯುಂಟಾಗಲಿದೆ.

ಕರ್ಕಾಟಕ: ಕೃಷಿಕರಿಗೆ ಉತ್ತಮ ಫಸಲು ದೊರಕುವ ಲಕ್ಷಣಗಳಿಂದ ಮನಸ್ಸಿಗೆ ಹರ್ಷವಿರುವುದು. ಲೇವಾದೇವಿ ವ್ಯವಹಾರದಲ್ಲಿ ಅಡ್ಡಿ ಎದುರಾದರೆ, ದುರ್ಗಾದೇವಿಯ ಆರಾಧನೆಯಿಂದ ಸಹಜವಾಗಿ ಮುಂದುವರೆಯುವುದು.

ಸಿಂಹ: ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಕೊಡಿಸಲು ಅಣ್ಣನ ಸಹಾಯ ಕೇಳಿದರೆ ಶುಭವಾಗುತ್ತದೆ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ವ್ಯವಹಾರ ನಡೆಸುವಾಗ ಹಣಕಾಸಿನ ವಿಚಾರದಲ್ಲಿ ಗಮನವಿರಲಿ.

ಕನ್ಯಾ: ಜವಾಬ್ದಾರಿಗಳತ್ತ ಹೆಚ್ಚಿನ ಗಮನ ಹರಿಸಿ, ಅದರ ಫಲವಾಗಿ ಆತಂಕವಿಲ್ಲದೆ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯುವವು. ಸಾಲದ ಹಣ ಹಿಂದಿರುಗಿ ಕೈಸೇರುವುದರಿಂದ ಮನೆಯ ರಿಪೇರಿಗೆ ಖರ್ಚು ಮಾಡುವಿರಿ.

ತುಲಾ: ಆರೋಗ್ಯ ಸ್ಥಿತಿಯು ಉತ್ತಮವಿದ್ದು, ದಾಂಪತ್ಯ ಜೀವನವು ಸುಖಮಯವಾಗಿರುವುದು. ಕೋರ್ಟಿನಲ್ಲಿರುವ ಹಳೆಯ ವಾಜ್ಯಗಳು ಮುಕ್ತಾಯಗೊಳ್ಳುವ ಸಂಭವ ಹೆಚ್ಚಾಗಿರುವುದು. ವಿವೇಕರಹಿತ ಕೆಲಸದಲ್ಲಿತೊಡಗಿಸಿಕೊಳ್ಳದಿರಿ.

ವೃಶ್ಚಿಕ: ಹೋಟೆಲ್ ಉದ್ಯಮದವರಿಗೆ ಅಥವಾ ಬೇಕರಿಯವರಿಗೆ ವ್ಯಾಪಾರದಲ್ಲಿ ಹಿನ್ನಡೆ ಉಂಟಾಗಬಹುದು. ಈ ಸಮಸ್ಯೆ ದೀರ್ಘಕಾಲದ್ದಾದರೆ ಅಂಗಡಿಯ ಜಾಗ ಬದಲಾಯಿಸಿದರೆ, ಸಮಸ್ಯೆ ನಿವಾರಣೆಯಾಗಲಿದೆ.

ಧನು: ಅಭಿವೃದ್ಧಿಯಲ್ಲಿ ಹಲವು ಅಡೆತಡೆಗಳು ಮತ್ತು ಆತಂಕಕಾರಿ ವಿಚಾರಗಳು ಎದುರಾಗುವುದು. ಭವಿಷ್ಯದ ಯೋಜನೆಗಳಿಗೆ ಗಮನ ಕೊಡಬೇಕಾಗಿ ಬರುವುದು. ಸಗಟು ವ್ಯಾಪಾರಿಗಳಿಗೆ ಸಣ್ಣ ಸಮಸ್ಯೆ ಎದುರಾಗಬಹುದು.

ಮಕರ: ಸ್ವ ಉದ್ಯೋಗಿಗಳು ಕೈತಪ್ಪಿದ ಅವಕಾಶಗಳನ್ನು ಪರಿಶ್ರಮದಿಂದ ಮರಳಿ ಪಡೆಯುವ ಪ್ರಯತ್ನ ಮಾಡಿ. ಪೂರ್ವಾರ್ಧದಲ್ಲಿ ಶುಭಫಲ ಅನುಭವಿಸುವ ನಿಮಗೆ ಉತ್ತರಾರ್ಧದಲ್ಲಿ ಸಿಹಿ-ಕಹಿಯ ಮಿಶ್ರಣ ಸವಿಯಬೇಕಾಗುತ್ತದೆ

ಕುಂಭ: ಸುಖ-ದುಃಖ, ಲಾಭ-ನಷ್ಟಗಳೆರಡು ಸಮಾನವಾಗಿದ್ದರೂ ಪ್ರತಿಷ್ಠಿತರ ಸಹಕಾರದಿಂದ ಸುಧಾರಣೆಯಾಗಲಿದೆ. ಸಂಸ್ಥೆಗಳ ಷೇರು ಬಂಡವಾಳದಲ್ಲಿ ಲಾಭ ಸಿಗುವುದು. ವ್ಯವಹಾರದದಲ್ಲಿ ಅನುಭವ ಬೇಕಾಗುವುದು.

ಮೀನ: ಸಮಯವೆಲ್ಲವನ್ನು ನಿಶ್ಚಿತ ಗುರಿ ತಲುಪಲು ಮೀಸಲಾಗಿಡುವುದು ಒಳ್ಳೆಯದು. ಸಂಸಾರ ನಿರ್ವಹಣೆಗಾಗಿ ಅಧಿಕ ಹಣ ವ್ಯಯಿಸುವಿರಿ. ನಿಮ್ಮಿಂದ ಪ್ರಯೋಜನ ಪಡೆದ ವ್ಯಕ್ತಿಗಳು ನಿಮ್ಮನ್ನು ದೂಷಿಸುವರು.

ಪದಬಂಧ 5577

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯಜಮಾನನ ಹುಟ್ಟುಗುಣ (4)
3.ಅಕ್ಕಿ ತೊಳೆದ ನೀರು (4)
5.ಒಳ್ಳೆಯ ಸ್ವಭಾವವಿದು (3)
6.ಹರಿಯುವಂಥ ವಸ್ತು (2)
8.ಸಂಕಲನ ಮಾಡೆಂದರೆ ಈ ಜಗಳ! (3)
10.ತೊಂದರೆ ಹೊಂದಿದ ವ್ಯಕ್ತಿ (3)
11.ಆಮೇಲೂ ಇಳಿಯದಿರುವ ಮತ್ತು! (3)
12.ಚಿಕ್ಕ ಮಕ್ಕಳನ್ನು ಹೀಗೆ ಸಂತೈಸು (3)
15.ರಸನದಲ್ಲಿರುವ ದ್ರವ (2)
17.ದೃಷ್ಟಿಗೆ ದೂರವಾಗಿರುವುದು ಪಕ್ಷದಲ್ಲಿ ಕಂಡೀತೇ? (3)
18.ಯಾಗದ ಸಮಾಪ್ತಿ (4)
19.ನಿಸ್ಸಾರವಾದುದನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಗಾಳಿ ಸುಳಿದಾಡಲು ಮಾಡಿರುವ ಕಿಂಡಿ (3)
2.ಬೆಳಗಿನ ಜಾವವಿದು (3)
3.ಕಲೆಸಿದ ಗೋಧಿ ಹಿಟ್ಟು (3)
7.ಬೇರೆ ಬೇರೆ ಬಣ್ಣಗಳ ಬೆರಕೆ (5)
9.ಹರನೊಳಗಿದ್ದಾನಲ್ಲಾ ಈ ಮೋಸಗಾರ ! (5)
13.ಒಳ್ಳೆಯ ದಾರಿಯಿದು (3)
14.ನಾಶವಿಲ್ಲದ ವರ್ಣ (3)
16.ದನವಿರುವ ಮನೆ (3)



5576ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಋಗ್ವೇದ 4.ಸಂಭವ
6.ಜವಾಬುದಾರಿ 7.ನಭ
9.ನವ 10.ಶಿಷ್ಯ
11.ಸುತ 13.ಮನೆವಾಳ್ತನ
16.ಮೆದುಳು 7.ನೆನಪು

ಮೇಲಿಂದ ಕೆಳಕ್ಕೆ:
1.ಋತುಮಾನ 2.ದನುಜ
3.ಸಬೂಬು 4.ಸಂಚಾರಿ
5.ವಜ್ರೋತ್ಸವ 8.ಭವಿಷ್ಯ
9.ನನಸು 10.ಶಿರೋನಾಮೆ
12.ತಲೆಗಾಪು 13.ಮರಳು
14.ವಾಯಿದೆ 15.ನಮೂನೆ

ಸುಡೊಕು 5962

7				1			8	
		6			9			7
4		8	7				9	
	7			2	1			8
	6	4	9		8		7	
8		1				9		4
	8			9			4	
1		2				7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5961 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಷೇರುಪೇಟೆ ವಹಿವಾಟು 801



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	21,737
ಇಂದಿನ ಅಂತ್ಯ	21,522
▼	215
ದಿನದ ಕನಿಷ್ಠ	21,501

ವಿನಿಮಯ ದರ

$ ಡಾಲರ್	83.16
£ ಪೌಂಡ್	105.39
€ ಯುರೊ	89.99
¥ ಯೆನ್ (100ಕ್ಕೆ)	56

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹572

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1505 (1505)
ಸೋಯಾ (ರಿಫೈನ್ಡ್)	₹880 (895)
ಸೂರ್ಯಕಾಂತಿ (ರಿಫೈನ್ಡ್)	₹915 (918)
ಪಾಮೋಲಿನ್	₹845 (862)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1400-1700
ಮಧ್ಯಮ	₹1000-1400
ಸಣ್ಣ	₹500-1000

ಎನ್.ಆರ್.ಪುರ ರಬ್ಬರ್

ಆರ್ಎಸ್ಎಸ್-4	₹161
ಆರ್ಎಸ್ಎಸ್-5	₹156
ಗುಡ್ ಲಾಟ್	₹139

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹272-468
ದ್ವಿತಳಿ (ಬಿ.ವಿ)	₹311-560

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-9850
ಬೆಂಗಳೂರು	₹11000-12500
ಕೆ.ಆರ್.ಪೇಟೆ	₹8300-8350
ತಿಪಟೂರು	₹8500-10000

ನಬಾರ್ಡ್: 2024–25ನೇ ಸಾಲಿನ ರಾಜ್ಯದ ಆದ್ಯತಾ ಪತ್ರ ಬಿಡುಗಡೆ

₹3.97 ಲಕ್ಷ ಕೋಟಿ ಸಾಲದ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024–25ನೇ ಹಣಕಾಸು ವರ್ಷಕ್ಕೆ ರಾಜ್ಯದ ಆದ್ಯತಾ ವಲಯದ ಸಾಲದ ಪ್ರಮಾಣವನ್ನು ₹3.97 ಲಕ್ಷ ಕೋಟಿಗೆ ನಿಗದಿಪಡಿಸಲಾಗಿದೆ.

ವಿವಿಧ ಬ್ಯಾಂಕ್‌ಗಳ ಮೂಲಕ ಈ ಸಾಲ ವಿತರಣೆಗೆ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ನಿರ್ಧರಿಸಿದೆ. ಹಿಂದಿನ ಹಣಕಾಸು ವರ್ಷಗಳಿಗೆ ಹೋಲಿಸಿದರೆ ಸಾಲದ ಪ್ರಮಾಣವು ಶೇ 10.67ರಷ್ಟು ಏರಿಕೆಯಾಗಿದೆ. 2023–24ನೇ ಸಾಲಿನಡಿ ₹3.59 ಲಕ್ಷ ಕೋಟಿ ಸಾಲ ನಿಗದಿಪಡಿಸಲಾಗಿತ್ತು.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಸಂಗ್ರಹಿಸಿ ಆದ್ಯತಾ ವಲಯಗಳಿಗೆ ಅಗತ್ಯವಿರುವ ಆರ್ಥಿಕ ನೆರವಿನ ಕುರಿತು ನಬಾರ್ಡ್ ಸಿದ್ಧಪಡಿಸಿರುವ ಈ ಆದ್ಯತಾ ಪತ್ರವನ್ನು (ಸ್ಟೇಟ್ ಫೋಕಸ್ ಪೇಪರ್), ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್ ಅವರು ಮಂಗಳವಾರ ಬಿಡುಗಡೆಗೊಳಿಸಿದರು.

ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಟಿ. ರಮೇಶ್ ಮಾತನಾಡಿ, 'ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿಯಡಿ ನೆರವು ಕಲ್ಪಿಸಿದೆ. 119 ನೀರಾವರಿ ಯೋಜನೆಗಳಿಗೆ ₹990 ಕೋಟಿ, ಕುಡಿಯುವ ನೀರು ಪೂರೈಕೆ ಯೋಜನೆಗಳಿಗೆ ₹611 ಕೋಟಿ ನೆರವು ನೀಡಿದೆ' ಎಂದು ವಿವರಿಸಿದರು.

ಸುಸ್ಥಿರ ನೀರಾವರಿ ಪದ್ಧತಿಗೆ ಉತ್ತೇಜನ ನೀಡುತ್ತಿದೆ. ಸೂಕ್ಷ್ಮ ನೀರಾವರಿ ನಿಧಿಯಡಿ ₹290 ಕೋಟಿ ನೀಡಿದೆ. ರೈತ ಉತ್ಪಾದಕರ ಸಂಸ್ಥೆಗಳಿಗೆ ಉತ್ತೇಜನ ನೀಡುತ್ತಿದೆ. ರಾಜ್ಯದ 5,491 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ಪ್ಯಾಕ್ಸ್) ಗಣಕೀಕರಣ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ವಿವರಿಸಿದರು.

ಭಾರತೀಯ ರಿಸರ್ವ್ ಬ್ಯಾಂಕ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಪಿ.ಎನ್. ರಘುನಾಥ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಪ್ರಧಾನ ವ್ಯವಸ್ಥಾಪಕ ಕೃಷ್ಣನ್ ಶರ್ಮ, ಕೆನರಾ ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಹರ್ದೀಪ್ ಸಿಂಗ್ ಅಹ್ಲುವಾಲಿಯಾ ಹಾಜರಿದ್ದರು.

ಬೆಂಗಳೂರಿನ ನಬಾರ್ಡ್ ಪ್ರಾದೇಶಿಕ ಕಚೇರಿಯಲ್ಲಿ ಮಂಗಳವಾರ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ನಬಾರ್ಡ್‌ನಿಂದ ಸಿದ್ಧಪಡಿಸಿರುವ ಆದ್ಯತಾ ಪತ್ರವನ್ನು ಬಿಡುಗಡೆಗೊಳಿಸಿದರು. ಭಾರತೀಯ ರಿಸರ್ವ್ ಬ್ಯಾಂಕ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಪಿ.ಎನ್. ರಘುನಾಥ್, ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಟಿ. ರಮೇಶ್, ಕೆನರಾ ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಹರ್ದೀಪ್ ಸಿಂಗ್ ಅಹ್ಲುವಾಲಿಯಾ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಪ್ರಧಾನ ವ್ಯವಸ್ಥಾಪಕ ಕೃಷ್ಣನ್ ಶರ್ಮ ಹಾಜರಿದ್ದರು –ಪ್ರಜಾವಾಣಿ ಚಿತ್ರ

'ಒಂದು ಟ್ರಿಲಿಯನ್ ಆರ್ಥಿಕತೆಗೆ ಸಿದ್ಧತೆ'

'2030ರ ವೇಳೆಗೆ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯನ್ನು (ಜಿಎಸ್‌ಡಿಪಿ) ಒಂದು ಟ್ರಿಲಿಯನ್ ಡಾಲರ್‌ಗೆ ಏರಿಸಲು (ಸುಮಾರು ₹83 ಲಕ್ಷ ಕೋಟಿ) ಸರ್ಕಾರ ಗುರಿ ಹೊಂದಿದೆ' ಎಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.

ರಾಜ್ಯದಲ್ಲಿ ಕೃಷಿ ಮತ್ತು ತೋಟಗಾರಿಕೆ ವಲಯದ ವಾರ್ಷಿಕ ಉತ್ಪಾದನೆಯು ₹1.10 ಲಕ್ಷ ಕೋಟಿಯಷ್ಟಿದೆ. ಕೆಲವು ಸಣ್ಣ ರೈತರು ವಾರ್ಷಿಕ ₹1 ಕೋಟಿ ಆದಾಯಗಳಿಸುತ್ತಿದ್ದಾರೆ. ಪಶು ಸಂಗೋಪನೆ, ಮೀನು ಕೃಷಿಯಲ್ಲಿ ತೊಡಗಿದ್ದಾರೆ. ಹಾಗಾಗಿ, ಬ್ಯಾಂಕ್‌ಗಳು ಸಮಗ್ರ ಸಾಲ ಯೋಜನೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು. ಸಾಲ ಮಂಜೂರಾತಿ ಹಂತದಲ್ಲಿ ಸೂಕ್ತ ದಾಖಲೆಗಳಿಲ್ಲವೆಂದು ರೈತರನ್ನು ಸತಾಯಿಸುವುದು ಸರಿಯಲ್ಲ. ಸಕಾಲದಲ್ಲಿ ದಾಖಲೆಗಳನ್ನು ಸ್ವೀಕರಿಸಿ ಸಾಲ ನೀಡುವುದು ಬ್ಯಾಂಕ್‌ಗಳ ಜವಾಬ್ದಾರಿ ಎಂದರು.

ವಲಯವಾರು ಸಾಲದ ವಿವರ

- **₹1.85** ಲಕ್ಷ ಕೋಟಿ — ಕೃಷಿ ಮತ್ತು ಪೂರಕ ಚಟುವಟಿಕೆ
- **₹1.58** ಲಕ್ಷ ಕೋಟಿ — ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ
- **₹54** ಸಾವಿರ ಕೋಟಿ — ಇತರೆ ಆದ್ಯತಾ ವಲಯ
- **₹3.59** ಲಕ್ಷ ಕೋಟಿ — 2023–24ರಲ್ಲಿ ನಿಗದಿಪಡಿಸಿದ್ದ ಸಾಲದ ಮೊತ್ತ

ರಾಜ್ಯ ಸರ್ಕಾರ ಕೈಗೊಳ್ಳುವ ಅಭಿವೃದ್ಧಿ ಚಟುವಟಿಕೆಗಳಿಗೆ ನಬಾರ್ಡ್ ಪೂರಕವಾಗಿ ಸ್ಪಂದಿಸಲು ಸಿದ್ಧವಿದೆ

ಟಿ. ರಮೇಶ್, ಮುಖ್ಯ ಪ್ರಧಾನ ವ್ಯವಸ್ಥಾಪಕ, ನಬಾರ್ಡ್

ಮುಂಬೈ ಧಾರಣೆ

ಶೇಂಗಾ

30-1-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1515 (1515)
ಒಂದು ವಾರದ ಡೆಲಿವರಿ	1510 (1510)
ಸೋಯಾ ಕಚ್ಚಾ	855 (858)
ಪಾಮ್ ವಾರದ ಡೆಲಿವರಿ	843 (860)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,250 (62,300)
ಬೆಳ್ಳಿ ಕೆ.ಜಿ **₹71,700** (71,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜೀ ಕಂಪನಿ ಅರ್ಜಿ ವಿಚಾರಣೆಗೆ ಅಂಗೀಕಾರ

ಮುಂಬೈ (ಪಿಟಿಐ): ಸೋನಿ ಪಿಕ್ಚರ್ಸ್ ನೆಟ್‌ವರ್ಕ್ಸ್ ಇಂಡಿಯಾವು (ಎಸ್‌ಪಿಎನ್‌ಐ) ಒಪ್ಪಂದ ರದ್ದುಪಡಿಸಿರುವುದನ್ನು ಪ್ರಶ್ನಿಸಿ ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ ಸಲ್ಲಿಸಿರುವ ಅರ್ಜಿಯನ್ನು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯು (ಎನ್‌ಸಿಎಲ್‌ಟಿ) ಮಂಗಳವಾರ ವಿಚಾರಣೆಗೆ ಅಂಗೀಕರಿಸಿದೆ.

ಈ ಕುರಿತು ಮೂರು ವಾರದಲ್ಲಿ ತನ್ನ ಅಭಿಪ್ರಾಯ ಸಲ್ಲಿಸುವಂತೆ ಸೋನಿ ಕಂಪನಿಗೆ ನೋಟಿಸ್ ನೀಡಿ, ವಿಚಾರಣೆಯನ್ನು ಮಾರ್ಚ್ 12ಕ್ಕೆ ಮುಂದೂಡಿದೆ.

₹83 ಸಾವಿರ ಕೋಟಿ ಮೊತ್ತದ ಎರಡೂ ಕಂಪನಿಗಳ ವಿಲೀನ ಒಪ್ಪಂದವು ಇತ್ತೀಚೆಗೆ ಮುರಿದು ಬಿದ್ದಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಕೃಷ್ಣಪ್ರಸಾದ ಪ್ರಭು, ಬೆಂಗಳೂರು.

- ಪ್ರಶ್ನೆ: ನಾನು ಮತ್ತು ನನ್ನ ಪತ್ನಿ ಬೆಂಗಳೂರಿನಲ್ಲಿ ವಾಸವಿದ್ದು, ಸ್ವಂತ ಮನೆ ಹೊಂದಿದ್ದೇವೆ. ಮನೆಯ ಒಡೆತನದ ದಾಖಲೆಗಳು ಆಕೆಯ ಹೆಸರಲ್ಲಿದ್ದು, ಈ ಮನೆಯು ಅವರ ತಂದೆಯಿಂದ ವಿಲ್ ರೂಪದಲ್ಲಿ ಬಂದಿರುತ್ತದೆ. ವೃತ್ತಿಯಲ್ಲಿ ನನ್ನ ಪತ್ನಿ ಶಿಕ್ಷಕಿ. ನಾನು ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದು ವೇತನದಲ್ಲಿ ₹25 ಸಾವಿರ ಮನೆ ಬಾಡಿಗೆ ಭತ್ಯೆಯೂ ಸಿಗುತ್ತಿದೆ.

ಆದರೆ, ಸ್ವಂತ ಮನೆ ಎಂಬ ಕಾರಣಕ್ಕೆ ನಾನು ಮನೆ ಬಾಡಿಗೆಗೆ ಸಂಬಂಧಿಸಿದ ಯಾವುದೇ ವಿನಾಯಿತಿ ಪಡೆಯುತ್ತಿರಲಿಲ್ಲ ಹಾಗೂ ನಮ್ಮ ಕಂಪನಿಗೂ ಅದೇ ರೀತಿ ಮಾಹಿತಿ ನೀಡಿದ್ದೆ. ಆದರೆ, ತೆರಿಗೆ ಕಾನೂನಿನ ದೃಷ್ಟಿಯಲ್ಲಿ ನಾವಿಬ್ಬರೂ ಒಂದೇ ಮನೆಯಲ್ಲಿದ್ದಾಗ ಬಾಡಿಗೆ ಭತ್ಯೆಗೆ ಸಂಬಂಧಿಸಿದಂತೆ ವಿನಾಯಿತಿ ಪಡೆಯಬಾರದು ಎಂಬ ನಿಯಮ ಇದೆಯೇ? ಒಂದು ವೇಳೆ ತೆರಿಗೆ ರಿಯಾಯಿತಿ ಪಡೆಯುವುದು ಸಾಧ್ಯ ಎನ್ನುವುದಾದರೆ ಅದಕ್ಕೇನು ಮಾಡಬೇಕು. ಎಷ್ಟು ವಿನಾಯಿತಿ ಸಿಗಬಹುದು. ಈ ಬಗ್ಗೆ ಮಾಹಿತಿ ನೀಡಿ.

ಉತ್ತರ: ಯಾವುದೇ ತೆರಿಗೆದಾರ ಮನೆ ಬಾಡಿಗೆ ಭತ್ಯೆಗೆ ಸಂಬಂಧಿಸಿ ತೆರಿಗೆ ವಿನಾಯಿತಿ ಪಡೆಯಲು ಆದಾಯ ತೆರಿಗೆಯ ಸೆಕ್ಷನ್ 10(13ಎ) ಹಾಗೂ ತತ್ಸಂಬಂಧ ಕೆಲವು ನಿಯಮಾವಳಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಬಾಡಿಗೆ ಭತ್ಯೆಗೆ ಸಂಬಂಧಿಸಿದಂತೆ ವಿನಾಯಿತಿ ಪಡೆಯಲು ಮೊದಲಾಗಿ ತೆರಿಗೆದಾರ ವೇತನ ಆದಾಯ ಪಡೆಯುವವನಾಗಿದ್ದು ಅದರ ಭಾಗವಾಗಿ ಮನೆ ಬಾಡಿಗೆ ಖರ್ಚನ್ನು ಪಾವತಿಸಲು ಭತ್ಯೆ ಪಡೆಯುತ್ತಿರಬೇಕು ಹಾಗೂ ಬಾಡಿಗೆ ಪಾವತಿಸುತ್ತಿರಬೇಕು. ಇದಲ್ಲದೆ, ಉದ್ಯೋಗಿ ಮನೆಯ ಮಾಲೀಕತ್ವ ಹೊಂದಿರಬಾರದು ಎಂಬುದು ಮೂಲ ನಿಯಮ.

ನೀವು ಪ್ರಶ್ನೆಯಲ್ಲಿ ತಿಳಿಸಿರುವಂತೆ ಮನೆಯ ಮಾಲೀಕತ್ವ ನಿಮ್ಮ ಪತ್ನಿಯ ಹೆಸರಲ್ಲಿದೆ. ಹೀಗಾಗಿ ಬಾಡಿಗೆ ಮನೆ ಭತ್ಯೆಗೆ ಸಂಬಂಧಿಸಿ ವಿನಾಯಿತಿ ಪಡೆಯಲು ಸಾಧ್ಯವಿದೆ. ಇದಕ್ಕೆ ನೀವು ಅವರಿಗೆ ನಿರ್ದಿಷ್ಟ ಮೊತ್ತವನ್ನು ಪ್ರತಿ ತಿಂಗಳೂ ಬ್ಯಾಂಕ್ ಮೂಲಕ ವರ್ಗಾಯಿಸಿ ದಾಖಲೆ ಇಟ್ಟುಕೊಳ್ಳಿ. ಮನೆ ಬಾಡಿಗೆಗೆ ಸಂಬಂಧಿಸಿ ಕರಾರು ಮಾಡಿಕೊಂಡು ಪಾವತಿಸುವ ಮೊತ್ತನ್ನು ದಾಖಲಿಸಿಕೊಳ್ಳಿ. ಇಷ್ಟೇ ಅಲ್ಲದೆ ಅವರ ತೆರಿಗೆ ರಿಟರ್ನ್ಸ್ ಭರಿಸುವಾಗ ನೀವು ಪಾವತಿಸುವ ಬಾಡಿಗೆಯನ್ನು ಆದಾಯವೆಂದು ಘೋಷಿಸುವುದು ಅನಿವಾರ್ಯ. ಅವರು ಈಗಾಗಲೇ ಶೈಕ್ಷಣಿಕ ವೃತ್ತಿ ಮಾಡುತ್ತಿರುವ ಬಗ್ಗೆ ನೀವು ಉಲ್ಲೇಖಿಸಿದ್ದೀರಿ. ಹಾಗಾಗಿ ಬಾಡಿಗೆ ಆದಾಯವನ್ನೂ ಅದರೊಡನೆ ಸೇರಿಸಿ ಅನ್ವಯವಾಗುವ ತೆರಿಗೆ ಪಾವತಿಸಿ. ಒಟ್ಟಾರೆ ಅವರು ಈ ಕಾರಣದಿಂದ ನೀವು ಉಳಿಸುವ ತೆರಿಗೆಗಿಂತ ಅಧಿಕ ತೆರಿಗೆ ಪಾವತಿಸಬೇಕಾಗಿ ಬಂದರೆ, ಈ ಯೋಜನೆ ಬಿಟ್ಟುಬಿಡುವುದು ಒಳಿತು.

ಇದಕ್ಕಾಗಿ ಇಬ್ಬರ ಆದಾಯವನ್ನೂ ಪ್ರಸ್ತುತ ಸನ್ನಿವೇಶದಲ್ಲಿ ಹಾಗೂ ಬಾಡಿಗೆ ಸಹಿತ ಎಷ್ಟು ಬರಬಹುದೆಂಬುದನ್ನು ಸಮೀಪದ ತೆರಿಗೆ ಸಲಹೆಗಾರರಿಂದ ಮಾಹಿತಿ ಪಡೆದುಕೊಳ್ಳಿ. ಸಿಗುವ ವಿನಾಯಿತಿಯನ್ನು ಲೆಕ್ಕ ಹಾಕಲು ನಿಮ್ಮ ಮೂಲ ವೇತನದ ಮಾಹಿತಿಯನ್ನೂ ಅವರಿಗೆ ಒದಗಿಸಿ. ನಿಮಗೆ ಹೊಸ ತೆರಿಗೆ ಪದ್ಧತಿಯ ಆಯ್ಕೆ ಲಾಭದಾಯಕವಾಗಿದ್ದರೆ, ಈ ಯಾವುದೇ ವಿನಾಯಿತಿ ಸಿಗುವುದಿಲ್ಲ ಎಂಬುದು ಗಮನದಲ್ಲಿ ಇರಲಿ.

ಸೋಮಶೇಖರ, ಶಹಾಪುರ.

- ಪ್ರಶ್ನೆ: ನಾನು ಒಬ್ಬ ದರ್ಜಿಯಾಗಿದ್ದು ವರ್ಷಕ್ಕೆ ಮೂರರಿಂದ ನಾಲ್ಕು ಲಕ್ಷ ರೂಪಾಯಿ ದುಡಿಮೆ ಇದೆ. ಇದರಲ್ಲಿ ವರ್ಷಕ್ಕೆ ಸುಮಾರು ₹1 ಲಕ್ಷದಂತೆ ಉಳಿತಾಯ ಮಾಡಲು ಪ್ರಯತ್ನಿಸಿ ಈಗ ₹5 ಲಕ್ಷಕ್ಕೂ ಅಧಿಕ ಮೊತ್ತ ಉಳಿತಾಯವಾಗಿದೆ. ಇದನ್ನು ಬ್ಯಾಂಕಿನಲ್ಲಿ ಹೂಡಿಕೆ ಮಾಡಿ ಬಡ್ಡಿ ಆದಾಯ ಪಡೆಯೋಣ ಎಂದು ಯೋಚಿಸಿದ್ದೇನೆ. ಅದು ಕೋ-ಆಪರೇಟಿವ್ ಬ್ಯಾಂಕ್ ಆಗಿದ್ದು ಕೆಲವು ವಿಶೇಷ ಸಂದರ್ಭದಲ್ಲಿ ಠೇವಣಿ ಇಟ್ಟರೆ ಶೇ 9.5ರಷ್ಟು ಬಡ್ಡಿ ಸಿಗುತ್ತದೆ. ಇದಕ್ಕೆ ಪ್ಯಾನ್ ಸಂಖ್ಯೆ ಅತ್ಯಗತ್ಯ ಎಂದು ಸೂಚಿಸಿದ್ದಾರೆ. ಮುಂದೆ ತೆರಿಗೆಯನ್ನು ಶೇ 20ರಷ್ಟು ದರದಲ್ಲಿ ಕಡಿತ ಮಾಡಲಾಗುತ್ತದೆ ಎಂಬುದಾಗಿಯೂ ಸೂಚಿಸಿದ್ದಾರೆ.

ಹೀಗಾಗಿ, ನನಗೆ ಸಿಗುವ ಬಡ್ಡಿದರ ಶೇ 7.6ರಷ್ಟು ಆಗಲಿದೆ. ಪ್ಯಾನ್ ಸಂಖ್ಯೆ ಇಲ್ಲದೆ ಠೇವಣಿ ಮಾಡುವುದು ಅಸಾಧ್ಯವೇ? ಇದನ್ನು ಪಡೆದರೆ ಆದಾಯ ತೆರಿಗೆ ಬರುವುದೇ? ನನ್ನ ಮಕ್ಕಳ ಹೆಸರಲ್ಲಿ ಹಣ ಹೂಡಿಕೆ ಮಾಡಬಹುದೇ. ಹಾಗಿದ್ದಲ್ಲಿ ಅವರಿಗೂ ಪ್ಯಾನ್ ಬೇಕಾಗುತ್ತದೆಯೇ?

ಉತ್ತರ: ಪ್ಯಾನ್ ಕಾರ್ಡ್ ಹೊಂದಿದ ಮಾತ್ರಕ್ಕೆ ಆದಾಯ ತೆರಿಗೆ ಅನ್ವಯವಾಗುತ್ತದೆ ಎನ್ನುವ ಆತಂಕ ಬೇಡ. ಅದಕ್ಕೂ ತೆರಿಗೆಗೂ ಸಂಬಂಧವಿಲ್ಲ. ಆಯಾ ಆರ್ಥಿಕ ವರ್ಷದಲ್ಲಿ ತೆರಿಗೆಗೊಳಪಡುವ ಆದಾಯ ಇದ್ದಾಗ ಮಾತ್ರ ತೆರಿಗೆ ಅನ್ವಯವಾಗುತ್ತದೆಯೇ ವಿನಾ ಪ್ಯಾನ್ ಇರುವ ಕಾರಣಕ್ಕಲ್ಲ.

ಕೆಲವೊಮ್ಮೆ ಒಟ್ಟಾರೆ ಆದಾಯಕ್ಕೆ ತೆರಿಗೆ ಅನ್ವಯಿಸದಿದ್ದರೂ, ತೆರಿಗೆ ಕಟಾಯಿಸಿರುವ ಸಾಧ್ಯತೆಗಳಿರುತ್ತವೆ. ಉದಾಹರಣೆಗೆ ಠೇವಣಿ ಮೇಲೆ ಪಾವತಿಸುವ ಬಡ್ಡಿ ₹40,000 ದಾಟಿದಾಗ ಆದಾಯ ತೆರಿಗೆ ಕಟಾಯಿಸುತ್ತಾರೆ. ಇಂತಹ ಮೊತ್ತವನ್ನು ಹಿಂಪಡೆಯಲು ಆದಾಯ ತೆರಿಗೆ ರಿಟರ್ನ್ಸ್ ಭರಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಪ್ಯಾನ್ ಸಂಖ್ಯೆ ಹೊಂದದೆ ರಿಫಂಡ್ ಪಡೆಯುವುದು ಅಸಾಧ್ಯ.

ಹೀಗಾಗಿ, ಪ್ಯಾನ್ ಹೊಂದುವುದು ನಮ್ಮ ಸುಲಲಿತ ಆರ್ಥಿಕ ವ್ಯವಹಾರಕ್ಕೆ ಎಂಬುದನ್ನು ಮನದಟ್ಟುಮಾಡಿಕೊಳ್ಳಿ ಹಾಗೂ ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಿ. ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ 'ಫಾರ್ಮ್- 49ಎ' ಭರ್ತಿ ಮಾಡಿ ಪ್ಯಾನ್ ಪಡೆಯಿರಿ. ಇದು ಒಂದೆರಡು ವಾರಗಳಲ್ಲಿ ಲಭ್ಯವಾಗುತ್ತದೆ.

ಆದರೆ, ಕೆಲವು ಆರ್ಥಿಕ ವ್ಯವಹಾರ ಕೈಗೊಳ್ಳುವ ಸಂದರ್ಭಗಳಲ್ಲಿ ಪ್ಯಾನ್ ಸಂಖ್ಯೆ ದಾಖಲಿಸುವುದು ಅನಿವಾರ್ಯವಾಗಿರುತ್ತದೆ. ₹50,000ಕ್ಕೂ ಅಧಿಕ ಮೊತ್ತದ ಠೇವಣಿ ಅಥವಾ ಒಂದೇ ಆರ್ಥಿಕ ವರ್ಷದಲ್ಲಿ ಒಟ್ಟಾರೆ ₹5 ಲಕ್ಷಕ್ಕೂ ಅಧಿಕ ಮೊತ್ತದ ಠೇವಣಿ ಹೊಂದಿದಾಗ ಪ್ಯಾನ್ ನಮೂದಿಸಬೇಕು.

ಆದರೆ, ಇದಕ್ಕೆ ಪರ್ಯಾಯವಾಗಿ 'ಫಾರಂ ಸಂಖ್ಯೆ 60' ಅನ್ನು ತುಂಬಿ ಬ್ಯಾಂಕಿಗೆ ಕೊಡುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಆದರೆ, ವಾರ್ಷಿಕ ಬಡ್ಡಿ ಆದಾಯ ₹40,000 (ಹಿರಿಯ ನಾಗರಿಕರಿಗೆ ₹50,000) ದಾಟಿದಾಗ ಪ್ಯಾನ್ ಹೊಂದಿರದಿದ್ದ ಖಾತೆಗಳಿಗೆ ಶೇ 20ರಷ್ಟು ತೆರಿಗೆ ಕಡಿತ ಮಾಡಲಾಗುತ್ತದೆ. ಈ ಕಾರಣಕ್ಕೆ ಪ್ಯಾನ್ ಹೊಂದುವುದು ಸೂಕ್ತ ಹಾಗೂ ಆ ಸಂಖ್ಯೆಯನ್ನು ಬ್ಯಾಂಕಿಗೂ ಅಗತ್ಯವಾಗಿ ನೀಡಿ.

ನಿಮ್ಮ ಮಕ್ಕಳು ಅಪ್ರಾಪ್ತ ವಯಸ್ಸಿನವರಾಗಿದ್ದರೆ, ಅವರ ಆದಾಯಕ್ಕೆ ಹೆತ್ತವರೇ ಬಾಧ್ಯಸ್ಥರು. ಅವರು ವಯಸ್ಕರಾಗಿದ್ದರೆ, ಸಹಜವಾಗಿ ನಿಮಗೆ ಅನ್ವಯವಾಗುವ ಎಲ್ಲಾ ನಿಯಮಗಳು ಅವರಿಗೂ ಅನ್ವಯವಾಗುತ್ತವೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ವಿಶ್ವದ ಕುಖ್ಯಾತ ಮಾರುಕಟ್ಟೆಗಳ ಪಟ್ಟಿ ಬಿಡುಗಡೆ

ಬೆಂಗಳೂರಿನ ಎಸ್.ಪಿ ರಸ್ತೆ ಉಲ್ಲೇಖ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ವ್ಯಾಪಾರ ಪ್ರತಿನಿಧಿಗಳ ಸಂಸ್ಥೆಯು (ಯುಎಸ್‌ಟಿಆರ್) ಮಂಗಳವಾರ ಬಿಡುಗಡೆಗೊಳಿಸಿರುವ ವಿಶ್ವದ 'ಕುಖ್ಯಾತ ಮಾರುಕಟ್ಟೆ'ಗಳ ವಾರ್ಷಿಕ ಪಟ್ಟಿಯಲ್ಲಿ ಬೆಂಗಳೂರಿನ ಎಸ್.ಪಿ ರಸ್ತೆ ಮಾರುಕಟ್ಟೆಯ ಹೆಸರು (ಸದರ್ ಪತ್ರಪ್ಪ ರಸ್ತೆ) ಉಲ್ಲೇಖವಾಗಿದೆ.

ಸರ್ಕಾರಿ ಸ್ವಾಮ್ಯದ ಈ ಸಂಸ್ಥೆಯು 2023ರಲ್ಲಿನ ವಿಶ್ವದ ಕುಖ್ಯಾತ 39 ಆನ್‌ಲೈನ್ ಮಾರ್ಕೆಟ್ ಮತ್ತು 33 ಭೌತಿಕ ಮಾರುಕಟ್ಟೆಗಳ ಪಟ್ಟಿ ಪ್ರಕಟಿಸಿದೆ. ಈ ಮಾರುಕಟ್ಟೆಗಳು ನಕಲಿ ಟ್ರೇಡ್‌ಮಾರ್ಕ್ ಸೃಷ್ಟಿ ಅಥವಾ ಹಕ್ಕುಸ್ವಾಮ್ಯ ಚೌರ್ಯದಲ್ಲಿ ತೊಡಗಿವೆ ಎಂದು ಹೇಳಿದೆ.

ಮುಂಬೈನ ಹೀರಾ ಪನ್ನಾ ಮತ್ತು ನವದೆಹಲಿಯ ಪ್ರಸಿದ್ಧ ಕರೋಲ್ ಬಾಗ್ ಮಾರುಕಟ್ಟೆಗಳು ಈ ಪಟ್ಟಿಯಲ್ಲಿವೆ. ದೇಶದ ಜನಪ್ರಿಯ ಇ-ಕಾಮರ್ಸ್ ಉದ್ಯಮ ಇಂಡಿಯಾ ಮಾರ್ಟ್, ವೆಗಾಮೂವೀಸ್, ಡಬ್ಲ್ಯುಎಚ್‌ಎಂಸಿಎಸ್ ಸ್ಟ್ಯಾಟರ್ಸ್ ಕೂಡ ಪಟ್ಟಿಯಲ್ಲಿವೆ. 'ಈ ಮಾರುಕಟ್ಟೆಗಳಲ್ಲಿ ನಕಲಿ ವ್ಯಾಪಾರ ಹೆಚ್ಚಾಗಿ ನಡೆಯುತ್ತದೆ. ಜನರಿಂದ ದೋಚಿದ ಸರಕುಗಳ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದೆ. ಇದರಿಂದ ಕಾರ್ಮಿಕರು, ಗ್ರಾಹಕರು ಮತ್ತು ಸಣ್ಣ ವ್ಯಾಪಾರಕ್ಕೆ ಹಾನಿಯಾಗುತ್ತಿದೆ. ಅಮೆರಿಕದ ಆರ್ಥಿಕತೆಗೂ ಇಂತಹ ಮಾರುಕಟ್ಟೆಗಳು ಅಪಾಯ ತಂದೊಡ್ಡುತ್ತಿವೆ' ಎಂದು ಅಮೆರಿಕದ ವ್ಯಾಪಾರ ಪ್ರತಿನಿಧಿ ಕ್ಯಾಥರೀನ್ ತೈ ಕಳವಳ ವ್ಯಕ್ತಪಡಿಸಿದ್ದಾರೆ.

ಚೀನಾ ಮೂಲದ ಇ-ಕಾಮರ್ಸ್ ಮತ್ತು ವಾಣಿಜ್ಯ ಮಾರುಕಟ್ಟೆಯಾದ ಟಾವೊಬಾವೊ, ವಿಚಾಟ್, ಡಿಎಚ್‌ಗೇಟ್, ಪಿಂಡೂಡುವೋ ಈ ಪಟ್ಟಿಯಲ್ಲಿವೆ. ಚೀನಾ ಕುಖ್ಯಾತ ಮಾರುಕಟ್ಟೆಗಳನ್ನು ಹೊಂದಿರುವ ದೇಶಗಳ ಪೈಕಿ ಮೊದಲ ಸ್ಥಾನದಲ್ಲಿದೆ.

ಟೊಯೊಟಾ: ಮೂರು ಮಾದರಿ ಪೂರೈಕೆಗೆ ತಡೆ

ನವದೆಹಲಿ (ಪಿಟಿಐ): ಎಂಜಿನ್‌ಗಳು ಉತ್ಪಾದಿಸುವ ಶಕ್ತಿಯ ಪರೀಕ್ಷೆ ವೇಳೆ ಎಸಗಿರುವ ಅಕ್ರಮಕ್ಕೆ ಸಂಬಂಧಿಸಿದಂತೆ ತನಿಖೆಯು ಪೂರ್ಣಗೊಳ್ಳುವವರೆಗೂ ಡೀಸೆಲ್ ಮಾದರಿಯ ಇನ್ನೋವಾ ಕ್ರಿಸ್ಟಾ, ಫಾರ್ಚೂನರ್ ಮತ್ತು ಹೈಲಕ್ಸ್ ಕಾರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡದಂತೆ ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ ಎಂದು ಟೊಯೊಟಾ ಇಂಡಸ್ಟ್ರೀಸ್ ಕಾರ್ಪೊರೇಷನ್ (ಟಿಐಸಿಒ) ತಿಳಿಸಿದೆ.

ಎಂಜಿನ್‌ಗಳು ಉತ್ಪಾದಿಸುವ ಶಕ್ತಿಯನ್ನು ಪರೀಕ್ಷೆಗೆ ಒಳಪಡಿಸುವಾಗ ಬಳಸಿದ ಇಸಿಯುಗಳನ್ನು (ಎಂಜಿನ್ ಕಂಟ್ರೋಲ್ ಯುನಿಟ್) ಎಂಜಿನ್ ತಯಾರಿಕೆಯ ವೇಳೆ ಬಳಸಿಲ್ಲ. ಅಕ್ರಮವಾಗಿ ಎರಡೂ ಇಸಿಯುಗಳನ್ನು ಕಂಪನಿಯು ಭಿನ್ನವಾಗಿ ಬಳಸಿದ್ದು, ಈ ಬಗ್ಗೆ ತನಿಖೆ ನಡೆಯುತ್ತಿದೆ.

'ಈ ಪ್ರಕರಣವು ವಾಹನಗಳ ಸುರಕ್ಷತೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ' ಎಂದು ಟೊಯೊಟಾ ಕಿರ್ಲೋಸ್ಕರ್ ಮೋಟಾರ್‌ನ ಸಂಯೋಜಿತ ಸಂಸ್ಥೆಯಾದ ಟಿಐಸಿಒ ಹೇಳಿದೆ.

'ಈ ಮೂರು ಮಾದರಿಯ ವಾಹನಗಳ ದತ್ತಾಂಶದ ಪ್ರಮಾಣೀಕರಣಕ್ಕೆ ಸಂಬಂಧಿಸಿದಂತೆ ಕಂಪನಿಯ ಅಧಿಕಾರಿಗಳು ಕಾರ್ಯನಿರತರಾಗಿದ್ದಾರೆ. ಅಲ್ಲಿಯವರೆಗೆ ಈ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವುದಿಲ್ಲ' ಎಂದು ತಿಳಿಸಿದೆ.

ಅನುಮತಿ ಪಡೆಯದೆ ಹಾರಿದ ಇಂಡಿಗೊ ವಿಮಾನ!

ನವದೆಹಲಿ (ಪಿಟಿಐ): ವಿಮಾನ ನಿಲ್ದಾಣದ ವಾಯು ಸಂಚಾರ ನಿಯಂತ್ರಣ (ಎಟಿಸಿ) ಘಟಕದ ಅನುಮತಿ ಪಡೆಯದೆ ಇಂಡಿಗೊ ವಿಮಾನವೊಂದು ನವದೆಹಲಿಯಿಂದ ಅಜರ್‌ಬೈಜಾನ್ ದೇಶದ ರಾಜಧಾನಿ ಬಾಕುಗೆ ಹಾರಾಟ ನಡೆಸಿರುವ ಘಟನೆ ಬೆಳಕಿಗೆ ಬಂದಿದೆ.

ಜನವರಿ 28ರಂದು ಈ ಘಟನೆ ನಡೆದಿದ್ದು, ಸುರಕ್ಷತಾ ಮಾನದಂಡ ಉಲ್ಲಂಘಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ತನಿಖೆಗೆ ಆದೇಶಿಸಿದೆ. ಅಲ್ಲದೇ, ವಿಚಾರಣೆ ಕಾಯ್ದಿರಿಸಿದ ಇಬ್ಬರು ಪೈಲಟ್‌ಗಳನ್ನು ಕೆಲಸದ ಪಾಳಿಯಿಂದ ಕೈಬಿಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಾರಾಟಕ್ಕೂ ಮೊದಲು ಸರದಿ ಸಾಲಿನಲ್ಲಿ ವಿಮಾನವನ್ನು ನಿಲುಗಡೆ ಮಾಡಿ ಅನುಮತಿ ನೀಡುವವರೆಗೂ ಕಾಯುವಂತೆ ಎಟಿಸಿ ಸೂಚಿಸಿತ್ತು. ಆದರೆ, ಪೈಲಟ್ ಈ ಸೂಚನೆ ಪಾಲಿಸಿಲ್ಲ ಎಂದು ತಿಳಿಸಿದ್ದಾರೆ.

'ಕಂಪನಿಗೆ ಸೇರಿದ ವಿಮಾನವು (6ಇ 1803) ನಿಯಮ ಉಲ್ಲಂಘಿಸಿರುವ ಬಗ್ಗೆ ತನಿಖೆ ನಡೆಯುತ್ತಿದೆ. ಪೈಲಟ್‌ಗಳು ತಪ್ಪು ಎಸಗಿರುವುದು ಸಾಬೀತಾದರೆ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಇಂಡಿಗೊ ವಕ್ತಾರರು ಮಂಗಳವಾರ ತಿಳಿಸಿದ್ದಾರೆ.

ಪಾಕ್: ನಕಲಿ ನಿಯಂತ್ರಣಕ್ಕೆ ಹೊಸ ನೋಟು

ಕರಾಚಿ(ಪಿಟಿಐ): ನಕಲಿ ನೋಟುಗಳ ಹಾವಳಿ ತಪ್ಪಿಸಲು ಸುಧಾರಿತ ಭದ್ರತಾ ವೈಶಿಷ್ಟ್ಯಗಳನ್ನು ಹೊಂದಿದ ಹೊಸ ಕರೆನ್ಸಿನೋಟುಗಳನ್ನು ಚಲಾವಣೆಗೆ ತರಲು ಪಾಕಿಸ್ತಾನ ಮುಂದಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನದ ಗವರ್ನರ್ ಜಮೀಲ್ ಅಹ್ಮದ್ ಅವರು ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿ, 'ಹೊಸ ಕರೆನ್ಸಿ ನೋಟುಗಳು ಅಂತರರಾಷ್ಟ್ರೀಯ ಮಾನದಂಡಗಳನ್ನು ಒಳಗೊಂಡ ಅತ್ಯಾಧುನಿಕ ಭದ್ರತಾ ವೈಶಿಷ್ಟ್ಯಗಳನ್ನು ಹೊಂದಿವೆ. ಇದರಲ್ಲಿ ಪ್ರತ್ಯೇಕ ಭದ್ರತಾ ಸಂಖ್ಯೆಗಳು ಹಾಗೂ ಆಧುನಿಕ ವಿನ್ಯಾಸ ಒಳಗೊಂಡಿದೆ' ಎಂದು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಬೆಂಗಳೂರಿನಲ್ಲಿ SLVಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18 ರಿಂದ 45) ಊಟ ವಸತಿಯೊಂದಿಗೆ ಟ್ರೇನಿಂಗ್ ಕೊಟ್ಟು ಸಂಬಳ 12,000/ ರಿಂದ 20,000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆಮಾಡಿ. 7019869181, 9071106371

ಕೃಷಿ ಕೆಲಸ ಮಾಡಲು ಕಾರ್ಮಿಕರು ಬೇಕಾಗಿದ್ದಾರೆ. ಸ್ಥಳ: ಮುಳಬಾಗಲು, ವಸತಿ ಸೌಕರ್ಯ ನೀಡಲಾಗುವುದು. ದಂಪತಿಗಳಿಗೆ ಅವಕಾಶ, 14ಸಾವಿರ. 9916011953.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430366, 9663563555

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

Teachers/ Professors

Multiple Vacancy

REQUIRED, EXPERIENCED Telecaller & LoanRecovery Supervisor For BankLoan collection. Salary 30,000+ Incentive Contact: 9620206756

ಆಜಾದ್ ಎಜುಕೇಷನ್ ಸೊಸೈಟಿ(ರಿ)
ಎಂ.ಕೆ.ಕೆ. ರಸ್ತೆ, ಶಿವಮೊಗ್ಗ–577202, ಶಿವಮೊಗ್ಗ ಜಿಲ್ಲೆ.
ಎ.ಇ.ಎಸ್ ಸಂಖ್ಯೆ: 28/2023–24 ದಿನಾಂಕ: 31.01.2024
ಶಿಕ್ಷಕರು ಬೇಕಾಗಿದ್ದಾರೆ
ನಿರ್ದೇಶಕರು (ಪ್ರೌಢಶಿಕ್ಷಣ) ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ ನೃಪತುಂಗ ರಸ್ತೆ ಬೆಂಗಳೂರು ರವರ ಜ್ಞಾಪನಾ: DPI.CPIO:8(2): FOV.05/E1009980/ ಖಾ.ಹು.ಭ.ಅನು/107/2023 ದಿನಾಂಕ:–04/01/2024 ರಂದು ನೀಡಿದ ಅನುಮತಿ ಆದೇಶದಂತೆ ಮೇಲ್ಕಂಡ ಸಂಸ್ಥೆ ವತಿಯಿಂದ ನಡೆಸುತ್ತಿರುವ ಈ ಕೆಳಕಂಡ ಅನುದಾನಿತ ಪ್ರೌಢಶಾಲೆಯಲ್ಲಿ ಖಾಲಿ ಇರುವ ಸಹ ಶಿಕ್ಷಕರು (ಸಿ.ಬಿ.ಝಡ್ ಆಂಗ್ಲ) ಹುದ್ದೆಗೆ ಸರ್ಕಾರ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಕೆಳಕಂಡಂತೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಯ ವಿವರ ಕೆಳಕಂಡಂತಿದೆ.

ಕ್ರ ಸಂ	ಶಾಲೆಯ ಹೆಸರು ಮತ್ತು ವಿಳಾಸ	ಹುದ್ದೆ ಮತ್ತು ವಿಷಯ	ಖಾಲಿ ಹುದ್ದೆ ಸಂಖ್ಯೆ	ಮೀಸಲಾತಿ ಬಿಂದು & ಸಮತಲ ಮೀಸಲಾತಿ ಗುಂಪು	ವಿದ್ಯಾರ್ಹತೆ & ಮಾಧ್ಯಮ
1	ಆಜಾದ್ ಬಾಲಿಕಾ ಪ್ರೌಢಶಾಲೆ ಎಂ.ಕೆ.ಕೆ.ರಸ್ತೆ ಶಿವಮೊಗ್ಗ	ಸಿ.ಬಿ.ಝಡ್ (ಸಹ ಶಿಕ್ಷಕರು)	01	ಮೀಸಲಾತಿ ಅನ್ವಯಿಸುವುದಿಲ್ಲ ಅಲ್ಪಸಂಖ್ಯಾತರ ಶಾಲೆ	ಬಿ.ಎಸ್.ಸಿ. ಬಿ.ಎಡ್ (ಸಿ.ಬಿ.ಝಡ್) ಮಾಧ್ಯಮ:ಆಂಗ್ಲ

(1)ಅಭ್ಯರ್ಥಿಗಳು ತಮ್ಮ ಹೆಸರು, ವಿದ್ಯಾರ್ಹತೆ, ಹುಟ್ಟಿದ ದಿನಾಂಕ, ಜಾತಿ ಮುಂತಾದ ವಿವರಗಳನ್ನೊಳಗೊಂಡ ಅರ್ಜಿಯೊಂದಿಗೆ ವಿದ್ಯಾರ್ಹತೆಗೆ ಸಂಬಂಧಿಸಿದ ದೃಢೀಕೃತ ದಾಖಲೆಗಳ ನಕಲು ಪ್ರತಿಗಳೊಂದಿಗೆ ಮೇಲ್ಕಂಡ ವಿಳಾಸಕ್ಕೆ ಮತ್ತು ಅರ್ಜಿಯ ಮತ್ತೊಂದು ಪ್ರತಿಯನ್ನು ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ. ಶಿವಮೊಗ್ಗ ಶೈಕ್ಷಣಿಕ ಜಿಲ್ಲೆ ರವರಿಗೆ ನೋಂದಣಿ ಅಂಚೆ ಮೂಲಕ ಪತ್ರಿಕೆಯಲ್ಲಿ ಪ್ರಕಟಣೆಗೊಂಡ 21 ದಿನಗಳೊಳಗಾಗಿ ತಲುಪುವಂತೆ ಕಳುಹಿಸುವುದು. (2)ಅಭ್ಯರ್ಥಿಗಳ ವಯೋಮಿತಿ: ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಸರ್ಕಾರಿ ಆದೇಶದನ್ವಯ ಕನಿಷ್ಠ ಮತ್ತು ಗರಿಷ್ಠ ವಯೋಮಿತಿ ಹೊಂದಿರಬೇಕು. (3)ನಿಗದಿತ ಶುಲ್ಕ: ಆಜಾದ್ ಎಜುಕೇಷನ್ ಸೊಸೈಟಿ (ರಿ) ಶಿವಮೊಗ್ಗ ಇವರ ಹೆಸರಿಲ್ಲಿ ಅಭ್ಯರ್ಥಿಗಳು ರೂ 1000/– ಗಳ DD ಪಡೆದು ಅರ್ಜಿಯೊಂದಿಗೆ ಅನುಬಂಧಿಸಿ ಕಳುಹಿಸುವುದು. (4)ಅಪೂರ್ಣ ಮಾಹಿತಿಗಳುಳ್ಳ ಹಾಗೂ ವಿಳಂಬವಾಗಿ ಬಂದ ಅರ್ಜಿಗಳನ್ನು ಯಾವುದೇ ಹಿಂಬರಹ ನೀಡದೆ ತಿರಸ್ಕರಿಸಲಾಗುವುದು ಹಾಗೂ ಪ್ರಕ್ರಿಯಾ ಶುಲ್ಕವನ್ನು ಯಾವುದೇ ಕಾರಣದಿಂದ ಹಿಂದಿರುಗಿಸಲಾಗುವುದಿಲ್ಲ. (5)ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9900278404/ 6364132094. (6)S.C.S.T ಇತರೆ ಪ್ರವರ್ಗಗಳಿಗೆ ಸೇರಿದ ಅಭ್ಯಾರ್ಥಿಗಳು ವಯೋಮಿತಿ ಸಡಿಲಿಕೆ ಸೌಲಭ್ಯವನ್ನು ಪಡೆಯಲು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗಾಗಿ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಲು ಕಡ್ಡಾಯವಾಗಿರುತ್ತದೆ. (7)ವಿಶೇಷ ಸೂಚನೆ: ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ಅಂಚೆ ಮೂಲಕ ಪ್ರತ್ಯೇಕವಾಗಿ ತಿಳಿಸಲಾಗುವುದು. ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು.
ಸಹಿ/ಕಾರ್ಯದರ್ಶಿ
ಆಜಾದ್ ಎಜುಕೇಷನ್ ಸೊಸೈಟಿ(ರಿ) ಶಿವಮೊಗ್ಗ

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ 24.02.2024 24.03.2024 12.04.2024 ರಿಂದ 8/12 ದಿನಗಳ ಕಾಶಿ,ಗಯಾ,ಅಯೋಧ್ಯಾ. 20.02.2024 ರಿಂದ 11 ದಿನಗಳ ಗುಜರಾತ್ ಉಜ್ಜಯಿನಿ ಮಹಾಕಾಳೇಶ್ವರ. 11.03.2024 12.04.2024 ರಿಂದ 11 ದಿನಗಳ ಅಯೋಧ್ಯಾ,ಮುಕ್ತಿನಾಥ ನೇಪಾಳ,ಕಾಶಿ. 20.03.2024 12.04.2024 ರಿಂದ 12 ದಿನಗಳ ವೈಷ್ಣೋದೇವಿ ಕಾಶ್ಮೀರ್ ಟುಲಿಪ್ ಗಾರ್ಡನ್. 17.05.2024 26.05.2024 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆಗಳು. 27.02.2024 11.03.2024 ರಿಂದ 5 ದಿನಗಳ ದುಬೈ,ಅಬುದಾಬಿ ಶಾರ್ಜಾ. 24.03.2024 25.04.2024 ರಿಂದ 7/11 ದಿನಗಳ ಸಿಂಗಾಪುರ,ಮಲೇಶಿಯಾ ಥೈಲ್ಯಾಂಡ್. 12.04.2024 25.04.2024 14.05.2024 ರಿಂದ 13/16 ದಿನಗಳ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಶಿವನಂದಿ ಟ್ರಾವೆಲ್ಸ್.(ರಿ) ಹನುಮಂತನಗರ, ಬೆಂಗಳೂರು. ಅಯೋಧ್ಯ,ನೇಪಾಳ ಮುಕ್ತಿನಾಥ್ 12ದಿನ,21.3.2024, 15.4.2024. ದೆಹಲಿ,ಕಾಶಿ ಅಯೋಧ್ಯ,10ದಿನ 24.4.2024. ಚಾರ್`ಧಾಮ್ 14ದಿನ,3.6.24. 9036056352 9481027363.

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 7/12 ದಿನಗಳು. 21.03.2024 ಸಮಗ್ರ ಕೇರಳ ಕನ್ಯಾಕುಮಾರಿ,ಪಳನಿ 9800/-. 15.04.2024 ವೈಷ್ಣೋದೇವಿ ವಾಘಬಾರ್ಡರ್ ಅಮೃತ್ಸರ್,ದೆಹಲಿ ಇತ್ಯಾದಿ 21000/-. ಮೇ ಕೊನೆಯವಾರ ಗುಜರಾತ್,ಮಧ್ಯಪ್ರದೇಶ 4 ಜ್ಯೋತಿರ್ಲಿಂಗಗಳು 21000/-. 9448390735 9449721678

21.02.2024 6ದಿನಗಳು ವಿಮಾನ,A/C_ಬಸ್ಸಿನಲ್ಲಿ ರಿಯಾಯಿತಿದರ ಅಯೋಧ್ಯೆ ನೂತನ ರಾಮಮಂದಿರ, ಕಾಶಿ,ಗಯಾ, ಅಲಹಬಾದ್(ಕೆಲವೇ ಸೀಟುಗಳಿವೆ)ಫೆಬ್ರವರಿ,ಮಾರ್ಚ್ ನಲ್ಲಿ ಅಂಡಮಾನ್,ಹವಳದ್ವೀಪ, RoyalPackage'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219

15/02/2024ರಿಂದ ಮಧುರೈ, ರಾಮೇಶ್ವರ,ನವಗ್ರಹ ಹಾಗೂ ವಾಸವಿಪೆನ್ನಗೊಂಡ,`ಪಂಚರಾಮ ಕ್ಷೇತ್ರ. 14/03/2024ರಿಂದ 16ದಿನಗಳ`ಮುಕ್ತಿನಾಥ್, ಪೋಕ್ರಾ,ಕಾಶಿ,ಅಯೋಧ್ಯ, ಚಾರುಧಾಮ್,ವೈಷ್ಣೋದೇವಿ, ಕಾಶ್ಮೀರ`ಯಾತ್ರೆಗಳಿಗೆ`ವಿಚಾರಿಸಿ: ವಿಷ್ಣನ್`ಟ್ರಾವೆಲ್`ಲೈನ್ಸ್, ಮಿನರ್ವ`ಸರ್ಕಲ್. ಬೆಂಗಳೂರು–04. 8105657052/ 9480182865.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸೆನ್ಸೆಕ್ಸ್ 801 ಅಂಶ ಕುಸಿತ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್, ಐಟಿಸಿ ಮತ್ತು ಬಜಾಜ್ ಫೈನಾನ್ಸ್ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರ ಕುಸಿತ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 801 ಅಂಶ (ಶೇ 1.11) ಇಳಿಕೆಯಾಗಿ 71,139ರಲ್ಲಿ ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 215 ಅಂಶ ಇಳಿಕೆ ಕಂಡು (ಶೇ 0.99) 21,522ರಲ್ಲಿ ವಹಿವಾಟು ಮುಕ್ತಾಯವಾಯಿತು.

2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಬಜಾಜ್ ಫೈನಾನ್ಸ್ ನಿವ್ವಳ ಲಾಭದಲ್ಲಿ ಏರಿಕೆ ದಾಖಲಿಸಿದ್ದರೂ ಹೂಡಿಕೆದಾರರು ಉತ್ಸಾಹ ತೋರಲಿಲ್ಲ. ಇದರಿಂದ ಕಂಪನಿಯ ಷೇರಿನ ಮೌಲ್ಯ ಶೇ 5.03ರಷ್ಟು ಇಳಿಕೆಯಾಗಿದೆ.

ಟೈಟನ್, ಅಲ್ಟ್ರಾ ಟೆಕ್ ಸಿಮೆಂಟ್, ಬಜಾಜ್ ಫಿನ್‌ಸರ್ವ್, ರಿಲಯನ್ಸ್ ಇಂಡಸ್ಟ್ರೀಸ್, ಐಟಿಸಿ ಮತ್ತು ಎನ್‌ಟಿಪಿಸಿ ಇಳಿಕೆ ಕಂಡಿವೆ. ಟಾಟಾ ಮೋಟರ್ಸ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಿಂದುಸ್ತಾನ್ ಯೂನಿಲಿವರ್, ಪವರ್‌ಗ್ರಿಡ್, ಟೆಕ್ ಮಹೀಂದ್ರ ಮತ್ತು ಟಿಸಿಎಸ್ ಗಳಿಕೆ ದಾಖಲಿಸಿವೆ. ಏಷ್ಯಾದ ಮಾರುಕಟ್ಟೆಯಲ್ಲಿ ಟೋಕಿಯೊ ಸಕಾರಾತ್ಮಕ ವಹಿವಾಟು ದಾಖಲಿಸಿದ್ದರೆ, ಸಿಯೋಲ್, ಶಾಂಘೈ ಮತ್ತು ಹಾಂಗ್‌ಕಾಂಗ್ ಇಳಿಕೆ ಕಂಡಿವೆ. ಬ್ರೆಂಟ್ ಕಚ್ಚಾ ತೈಲ ದರ ಶೇ 0.21ರಷ್ಟು ಏರಿಕೆಯಾಗಿ ಪ್ರತಿ ಬ್ಯಾರೆಲ್ 82.57 ಡಾಲರ್ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ — ಸಕಲೇಶಪುರ

ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	560

ಅಡಿಕೆ

ಬಂಟ್ವಾಳ	
ಕೋಕ	18000-28500
ಹೊಸತು	28500-35000
ಹಳತು	42000-44000
ಕಾರ್ಕಳ	
ಹೊಸತು	25000-35000
ಹಳತು	30000-44500
ಸಾಗರ	
ಚಾಲಿ	32569-32569
ಕೆಂಪುಗೋಟು	31699-35609
ರಾಶಿ	39140-48329
ಸಿಪ್ಪೆಗೋಟು	16625-19555
ಶಿವಮೊಗ್ಗ	
ಬೆಟ್ಟೆ	41100-55699
ಗೊರಬಲು	18600-38009
ರಾಶಿ	30010-49199
ಸರಕು	49810-81596
ಸಿದ್ದಾಪುರ	
ಬಿಳಿಗೋಟು	30319-32819
ಚಾಲಿ	36899-38100
ಕೋಕ	29599-32299
ಹೊಸಚಾಲಿ	31299-36809
ಕೆಂಪುಗೋಟು	32089-35699
ರಾಶಿ	43899-47509
ತಟ್ಟಿಬೆಟ್ಟೆ	40099-46309
ಶಿರಸಿ	
ಬೆಟ್ಟೆ	38699-46061
ಬಿಳಿಗೋಟು	25099-34699
ಚಾಲಿ	36009-39271
ಕೆಂಪುಗೋಟು	32200-36898
ರಾಶಿ	44009-48699
ಯಲ್ಲಾಪುರ	
ಅಪಿ	58269-66869
ಬಿಳಿಗೋಟು	24899-33980
ಚಾಲಿ	34900-39969
ಕೋಕ	18899-30899
ಕೆಂಪುಗೋಟು	26899-36969
ರಾಶಿ	46899-56479
ತಟ್ಟಿಬೆಟ್ಟೆ	38569-46510

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14400	14400	-	189.25 ಸೆಂಟ್ಸ್
ಎಸಿ	7900	7,800	-	
ಆರ್‌ಪಿ	12600	12,650	-	ಲಂಡನ್
ಆರ್‌ಸಿ	7425	7500	-	3,275 ಡಾಲರ್ಸ್

2023–24ರಲ್ಲಿ ಶೇ 6.7 ಜಿಡಿಪಿ ಪ್ರಗತಿ: ಐಎಂಎಫ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಆರ್ಥಿಕತೆ ಬೆಳವಣಿಗೆಯು (ಜಿಡಿಪಿ) 2023–24ನೇ ಹಣಕಾಸು ವರ್ಷದಲ್ಲಿ ಶೇ 6.7ರಷ್ಟು ಇರಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಅಂದಾಜಿಸಿದೆ. ಈ ಮೊದಲು ಶೇ 6.3ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿತ್ತು.

2024–25ನೇ ಹಣಕಾಸು ವರ್ಷದಲ್ಲಿ ಶೇ 6.5ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿದೆ. ಈ ಮೊದಲು ಶೇ 6.3ರಷ್ಟು ಬೆಳವಣಿಗೆ ದಾಖಲಿಸಿದೆ ಎಂದು ಹೇಳಿತ್ತು.

ಅಲ್ಲದೇ, 2025–26ನೇ ಹಣಕಾಸು ವರ್ಷದಲ್ಲಿ ಜಿಡಿಪಿಯು ಶೇ 6.5ರಷ್ಟು ದಾಖಲಾಗಲಿದೆ ಎಂದು ಅಂದಾಜಿಸಿದೆ.

ಅಧಿಕೃತ ರಹಸ್ಯ ಕಾಯ್ದೆ ಉಲ್ಲಂಘನೆ ಪ್ರಕರಣ

ಇಮ್ರಾನ್ ಖಾನ್‌ಗೆ 10 ವರ್ಷ ಜೈಲು

ಇಸ್ಲಾಮಾಬಾದ್ (ಪಿಟಿಐ/ರಾಯಿಟರ್ಸ್): ಅಧಿಕೃತ ರಹಸ್ಯ ಕಾಯ್ದೆ ಉಲ್ಲಂಘನೆ ಪ್ರಕರಣದಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಮಾಜಿ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಷಿ ಅವರಿಗೆ ಪಾಕಿಸ್ತಾನದ ನ್ಯಾಯಾಲಯ ಮಂಗಳವಾರ 10 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಇಮ್ರಾನ್ ಖಾನ್

ಪಾಕಿಸ್ತಾನದಲ್ಲಿ ಫೆಬ್ರುವರಿ 8 ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಅದಕ್ಕೂ ಮುನ್ನ ನ್ಯಾಯಾಲಯದ ತೀರ್ಪು ಹೊರಬಿದ್ದಿದೆ. 71 ವರ್ಷದ ಇಮ್ರಾನ್ ಅವರು ಭ್ರಷ್ಟಾಚಾರ ಪ್ರಕರಣದಲ್ಲಿ ಈಗಾಗಲೇ ಮೂರು ವರ್ಷಗಳ ಜೈಲು ಶಿಕ್ಷೆ ಅನುಭವಿಸುತ್ತಿದ್ದು, ರಾವಲ್ಪಿಂಡಿಯ ಅಡಿಯಾಲಾ ಕಾರಾಗೃಹದಲ್ಲಿದ್ದಾರೆ.

ಅಧಿಕೃತ ರಹಸ್ಯ ಕಾಯ್ದೆ ಉಲ್ಲಂಘನೆ ಪ್ರಕರಣದ ವಿಚಾರಣೆಯನ್ನು ಅಡಿಯಾಲಾ ಜೈಲಿನಲ್ಲಿ ಸ್ಥಾಪಿಸಿರುವ ವಿಶೇಷ ನ್ಯಾಯಾಲಯ ನಡೆಸಿದೆ. ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಹಸ್ನತ್ ಜುಲ್‌ಖರ್ನೈನ್ ಅವರು ಇಬ್ಬರಿಗೂ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದರು.

ಮುಖ್ಯಾಂಶಗಳು

- ಮಾಜಿ ವಿದೇಶಾಂಗ ಸಚಿವ ಖುರೇಷಿಗೂ ಜೈಲು
- ತೀರ್ಪು ಪ್ರಕಟಿಸಿದ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ

ಏನಿದು ಪ್ರಕರಣ?: ವಾಷಿಂಗ್ಟನ್‌ನಲ್ಲಿರುವ ಪಾಕ್ ರಾಯಭಾರ ಕಚೇರಿಗೆ 2022ರ ಮಾರ್ಚ್‌ನಲ್ಲಿ ಕಳುಹಿಸಲಾಗಿದ್ದ ಗೋಪ್ಯ ದಾಖಲೆ ಕೇಬಲ್ (ಸೈಫರ್) ಅನ್ನು ಬಹಿರಂಗಪಡಿಸಿದ ಪ್ರಕರಣ ಇದಾಗಿದೆ.

2022ರ ಮಾರ್ಚ್ 27 ರಂದು ನಡೆದ ರ್‍ಯಾಲಿಯೊಂದರಲ್ಲಿ ಇಮ್ರಾನ್ ಅವರು ಈ ದಾಖಲೆಗಳನ್ನು ಬಹಿರಂಗಪಡಿಸಿದ್ದರು. ತನ್ನ ಸರ್ಕಾರವನ್ನು ಬುಡಮೇಲುಗೊಳಿಸಲು 'ಅಂತರರಾಷ್ಟ್ರೀಯ ಮಟ್ಟದಲ್ಲಿ ಪಿತೂರಿ' ನಡೆದಿದೆ ಎಂದು ಆರೋಪಿಸಿದ್ದರು. ಅಧಿಕೃತ ರಹಸ್ಯ ಕಾಯ್ದೆ ಉಲ್ಲಂಘನೆಯಡಿ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಈ ಕಾನೂನುಬಾಹಿರ ತೀರ್ಪನ್ನು ನಾವು ಒಪ್ಪಿಕೊಳ್ಳುವುದಿಲ್ಲ. ಮೇಲ್ಮನವಿ ಸಲ್ಲಿಸುತ್ತೇವೆ

ನಯೀಮ್ ಪಂಜೂತಾ, ಇಮ್ರಾನ್ ಪರ ವಕೀಲ

ಮೇಲ್ಮನವಿಗೆ ನಿರ್ಧಾರ: ವಿಶೇಷ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವುದಾಗಿ ಇಮ್ರಾನ್ ಅವರ ಪಾಕಿಸ್ತಾನ ತೆಹ್ರೀಕ್‌–ಎ–ಇನ್ಸಾಫ್ (ಪಿಟಿಐ) ಪಕ್ಷ ತಿಳಿಸಿದೆ.

'ನಮ್ಮ ಕಾನೂನು ತಂಡ ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲಿದ್ದು, ಶಿಕ್ಷೆಯು ರದ್ದಾಗುವ ವಿಶ್ವಾಸ ಹೊಂದಿದ್ದೇವೆ. ಈ ಪ್ರಕರಣದ ವಿಚಾರಣೆಯು ನಿಷ್ಪಕ್ಷಪಾತವಾಗಿ ನಡೆದಿಲ್ಲ. ನಮ್ಮ ವಕೀಲರಿಗೆ ನ್ಯಾಯಾಲಯದ ಕಲಾಪದಲ್ಲಿ ಪಾಲ್ಗೊಳ್ಳುವ ಅವಕಾಶ ನಿರಾಕರಿಸಲಾಗಿದೆ. ತರಾತುರಿಯಲ್ಲಿ ತೀರ್ಪು ಹೊರಬಿದ್ದಿದೆ' ಎಂದು ಪಿಟಿಐ ಹೇಳಿದೆ.

ಚಂಡೀಗಢ ಮೇಯರ್ ಚುನಾವಣೆ: ಹೈಕೋರ್ಟ್ ಮೊರೆಹೋದ ಎಎಪಿ • 8 ಮತಗಳು ಅಸಿಂಧು

ಬಿಜೆಪಿ ಜಯಭೇರಿ; 'ಇಂಡಿಯಾ'ಕ್ಕೆ ಸೋಲು

ಚಂಡೀಗಢ (ಪಿಟಿಐ): ಚಂಡೀಗಢ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಮೇಯರ್, ಹಿರಿಯ ಉಪ ಮೇಯರ್ ಮತ್ತು ಉಪ ಮೇಯರ್ ಸ್ಥಾನಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಈ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿ-ಕೂಟವನ್ನು ಪ್ರತಿನಿಧಿಸಿದ್ದ ಎಎಪಿ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ಭಾರಿ ಹಿನ್ನಡೆ ಆಗಿದೆ.

ಚುನಾವಣಾ ಪ್ರಕ್ರಿಯೆಯಲ್ಲಿ ಅಕ್ರಮ, ವಂಚನೆ ನಡೆದಿದೆ ಎಂದು ಆರೋಪಿಸಿರುವ ಎಎಪಿ, ಚುನಾವಣೆಯನ್ನು ಅನೂರ್ಜಿತಗೊಳಿಸಿ ಹೊಸದಾಗಿ ಚುನಾವಣೆ ನಡೆಸಬೇಕು ಎಂದು ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

ಎಂಟು ಮತಗಳು ಅಸಿಂಧು, ಬಿಜೆಪಿಗೆ ಜಯ: ಬಿಜೆಪಿ ಅಭ್ಯರ್ಥಿ ಮನೋಜ್ ಸೋಂಕರ್ ಅವರು ಎಎಪಿಯ ಕುಲದೀಪ್ ಕುಮಾರ್ ಅವರನ್ನು ಸೋಲಿಸಿ ಚಂಡೀಗಢದ ಮೇಯರ್ ಆಗಿ ಮಂಗಳವಾರ ಆಯ್ಕೆಯಾದರು. ಚುನಾವಣೆಯಲ್ಲಿ ಮನೋಜ್ 16 ಮತಗಳನ್ನು ಪಡೆದರೆ, ಕುಲದೀಪ್ 12 ಮತಗಳನ್ನು ಪಡೆದರು. ಎಂಟು ಮತಗಳನ್ನು ಅಸಿಂಧು ಎಂದು ಘೋಷಿಸಲಾಯಿತು.

ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ 'ಇಂಡಿಯಾ' ಮೈತ್ರಿಕೂಟದ ಎಎಪಿ ಮತ್ತು ಕಾಂಗ್ರೆಸ್ ಪಕ್ಷಗಳು ಪ್ರತಿಭಟನೆ ನಡೆಸಿದವು. ಅಲ್ಲದೆ, ಹಿರಿಯ ಉಪ ಮೇಯರ್ ಮತ್ತು ಉಪ ಮೇಯರ್ ಸ್ಥಾನದ ಚುನಾವಣೆಗಳನ್ನು ಬಹಿಷ್ಕರಿಸಿದವು. ಇದರಿಂದ ಈ ಹುದ್ದೆಗಳೂ ಬಿಜೆಪಿ ಪಾಲಾದವು.

ಬಿಜೆಪಿ ಅಭ್ಯರ್ಥಿಗಳಾದ ಕುಲ್ಜಿತ್ ಸಂಧು ಮತ್ತು ರಾಜಿಂದರ್ ಶರ್ಮಾ ಅವರು ಕ್ರಮವಾಗಿ ಹಿರಿಯ ಉಪ ಮೇಯರ್ ಮತ್ತು ಉಪ ಮೇಯರ್ ಸ್ಥಾನಗಳಿಗೆ ಸುಲಭವಾಗಿ ಆಯ್ಕೆಯಾದರು.

ಚುನಾವಣಾ ಅಧಿಕಾರಿ ವಿರುದ್ಧ ಆರೋಪ: ಚುನಾವಣಾ ಅಧಿಕಾರಿ ಅನಿಲ್ ಮಸಿಹ್ ಅವರು ಮತ ಎಣಿಕೆಯ ಸಮಯದಲ್ಲಿ ಮತಪತ್ರಗಳ ಮೇಲೆ ಕೆಲವು ಗುರುತುಗಳನ್ನು ಮಾಡಿ, ಅವುಗಳನ್ನು ಅಸಿಂಧುಗೊಳಿಸಿದ್ದಾರೆ ಎಂದು ಎಎಪಿ ಮತ್ತು ಕಾಂಗ್ರೆಸ್ ಪಕ್ಷಗಳು ಆರೋಪ ಮಾಡಿವೆ. ಈ ಮತಗಳು ಅಸಿಂಧು ಆದ ಕಾರಣ, ಬಿಜೆಪಿ ಅಭ್ಯರ್ಥಿ ಗೆಲುವು ಸಾಧ್ಯವಾಯಿತು ಎಂದು ಅವು ದೂರಿವೆ.

'ಪೂರ್ವಯೋಜಿತ ರೀತಿಯಲ್ಲಿ ಚುನಾವಣಾ ಅಧಿಕಾರಿಯನ್ನು ದುರ್ಬಳಕೆ ಮಾಡಿಕೊಂಡು ಒಳಸಂಚು ನಡೆಸುವ ಮೂಲಕ ಬಿಜೆಪಿಯು ಪ್ರಜಾಪ್ರಭುತ್ವವನ್ನು ಕೊಲೆ ಮಾಡಿದೆ' ಎಂದು ಕಾಂಗ್ರೆಸ್ ನಾಯಕ ಪವನ್ ಕುಮಾರ್ ಬನ್ಸಾಲ್ ಅವರು ಆರೋಪಿಸಿದರು.

ಮತಪತ್ರಗಳನ್ನು ಪರಿಶೀಲಿಸಲು ಕಾಂಗ್ರೆಸ್- ಎಎಪಿ ಪಕ್ಷಗಳ ಏಜೆಂಟರಿಗೆ ಅನುಮತಿ ನೀಡಲಿಲ್ಲ ಎಂದು ಅವರು ದೂರಿದರು.

'ಎಂಟು ಮತಗಳು ತಿರಸ್ಕೃತಗೊಂಡಿದ್ದು, ಬಿಜೆಪಿ ಅಭ್ಯರ್ಥಿ ವಿಜೇತರಾಗಿದ್ದಾರೆ ಎಂದು ಘೋಷಿಸಿದ ಚುನಾವಣಾ ಅಧಿಕಾರಿ ಅಲ್ಲಿಂದ ಹೊರಟುಹೋದರು. ಅಷ್ಟರಲ್ಲಿಯೇ ಟೇಬಲ್ ಬಳಿ ನುಗ್ಗಿದ ಬಿಜೆಪಿ ಸದಸ್ಯರು ಅಲ್ಲಿದ್ದ ಮತಪತ್ರಗಳನ್ನು ಹರಿದು ಹಾಕಿದರು' ಎಂದು ಅವರು ಆರೋಪಿಸಿದರು.

ಮತ ಎಣಿಕೆಗಾಗಿ ಮತಪೆಟ್ಟಿಗೆ ತೆರೆದಾಗ ಚುನಾವಣಾ ಅಧಿಕಾರಿಯು ಪಕ್ಷದ ಚುನಾವಣಾ ಏಜೆಂಟರನ್ನು ಕರೆಯಲಿಲ್ಲ ಎಂದು ದೂರಿದ ಕಾಂಗ್ರೆಸ್ ಸದಸ್ಯ ಗುರ್ಬಕ್ಸ್ ರಾವತ್ ಅವರು, 'ಈ ಫಲಿತಾಂಶವನ್ನು ನಾವು ಒಪ್ಪಿಕೊಳ್ಳುವುದಿಲ್ಲ' ಎಂದು ಹೇಳಿದರು.

ಚಂಡೀಗಢದ ಬಿಜೆಪಿ ಘಟಕಕ್ಕೆ ಅಭಿನಂದನೆಗಳು. 'ಇಂಡಿಯಾ'ದ ಅಭ್ಯರ್ಥಿಯ ಸೋಲು ಅವರ 'ಕೆಮಿಸ್ಟ್ರಿ' ಕೆಲಸ ಮಾಡುತ್ತಿಲ್ಲ ಎಂಬುದನ್ನು ತೋರಿಸುತ್ತದೆ
ಜೆ.ಪಿ.ನಡ್ಡಾ, ಬಿಜೆಪಿ ಅಧ್ಯಕ್ಷ

ಮೇಯರ್ ಚುನಾವಣೆಯಲ್ಲಿ ಅವರು (ಬಿಜೆಪಿ) ಈ ಮಟ್ಟಕ್ಕೆ ಇಳಿಯುತ್ತಾರೆ ಎಂದರೆ, ರಾಷ್ಟ್ರೀಯ ಚುನಾವಣೆಯಲ್ಲಿ ಯಾವ ಮಟ್ಟಕ್ಕೆ ಇಳಿಯಬಹುದು?
ಅರವಿಂದ ಕೇಜ್ರಿವಾಲ್
ದೆಹಲಿ ಮುಖ್ಯಮಂತ್ರಿ

ಚಂಡೀಗಢ ಮೇಯರ್ ಚುನಾವಣೆಯಲ್ಲಿ ವಿಜೇತರಾದ ಬಿಜೆಪಿ ಅಭ್ಯರ್ಥಿ ಮನೋಜ್ ಸೋಂಕರ್ ಅವರನ್ನು ಅಭಿನಂದಿಸಿದ ಬಿಜೆಪಿ ಸದಸ್ಯರು ಸಂಭ್ರಮಿಸಿದರು —ಪಿಟಿಐ ಚಿತ್ರ

ಎಎಪಿ ಅಭ್ಯರ್ಥಿಯಿಂದ ತನಿಖೆಗೆ ಒತ್ತಾಯ

ಇಡೀ ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸ್ವತಂತ್ರ ಸಂಸ್ಥೆಯೊಂದರಿಂದ ತನಿಖೆ ನಡೆಸಬೇಕು. ಅಲ್ಲದೆ ಹೊಸದಾಗಿ ಮುಕ್ತ ಮತ್ತು ನ್ಯಾಯ ಸಮ್ಮತ ರೀತಿಯಲ್ಲಿ ಚುನಾವಣೆಯನ್ನು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ನಡೆಸಲು ನಿರ್ದೇಶನ ನೀಡಬೇಕು ಎಂದು ಮೇಯರ್ ಚುನಾವಣೆಯ ಎಎಪಿ ಅಭ್ಯರ್ಥಿ ಕುಲದೀಪ್ ಕುಮಾರ್ ಅವರು ಹೈಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಕೋರಿದ್ದಾರೆ.

35 ಸದಸ್ಯ ಬಲದ ಪಾಲಿಕೆಯಲ್ಲಿ ಬಿಜೆಪಿ 14, ಎಎಪಿ 13, ಕಾಂಗ್ರೆಸ್ ಏಳು, ಶಿರೋಮಣಿ ಅಕಾಲಿದಳದ ಒಬ್ಬ ಸದಸ್ಯರನ್ನು ಹೊಂದಿದೆ. ಚಂಡೀಗಢ ಸಂಸದ ಕಿರಣ್ ಖೇರ್ ಅವರು ಮತದಾನದ ಹಕ್ಕು ಹೊಂದಿದ್ದಾರೆ.

ಈ ಚುನಾವಣೆ ಜನವರಿ 18ರಂದು ನಿಗದಿಯಾಗಿತ್ತು. ಆದರೆ ಚುನಾವಣಾ ಅಧಿಕಾರಿಯ ಅನಾರೋಗ್ಯದ ಕಾರಣ ಫೆಬ್ರುವರಿ 6ಕ್ಕೆ ಮುಂದೂಡಲಾಗಿತ್ತು. ಇದನ್ನು ಎಎಪಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಚುನಾವಣೆ ಮುಂದೂಡಿಕೆ ಆದೇಶವನ್ನು ರದ್ದುಗೊಳಿಸಿದ ಹೈಕೋರ್ಟ್, ಜನವರಿ 30ರಂದು ಬೆಳಿಗ್ಗೆ 10 ಗಂಟೆಗೆ ಮೇಯರ್ ಚುನಾವಣೆ ನಡೆಸಬೇಕು ಎಂದು ಚಂಡೀಗಢ ಆಡಳಿತಕ್ಕೆ ನಿರ್ದೇಶನ ನೀಡಿತ್ತು.

ಮಹಾ ವಿಕಾಸ ಅಘಾಡಿಗೆ 'ವಿಬಿಎ'

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಕಾಂಗ್ರೆಸ್, ಎನ್‌ಸಿಪಿ (ಶರದ್ ಪವಾರ್ ಬಣ) ಮತ್ತು ಶಿವಸೇನಾ (ಉದ್ಧವ್ ಠಾಕ್ರೆ ಬಣ) ನೇತೃತ್ವದ 'ಮಹಾ ವಿಕಾಸ ಅಘಾಡಿ' (ಎಂವಿಎ) ಮೈತ್ರಿಕೂಟಕ್ಕೆ ಪ್ರಕಾಶ್ ಅಂಬೇಡ್ಕರ್ ನೇತೃತ್ವದ ವಂಚಿತ್ ಬಹುಜನ ಅಘಾಡಿ (ವಿಬಿಎ) ಸೇರ್ಪಡೆಯಾಗಿದೆ.

ಮುಂಬರುವ ಲೋಕಸಭೆ ಚುನಾವಣೆಗೂ ಮುನ್ನವೇ ಈ ಬೆಳವಣಿಗೆ ನಡೆದಿದೆ.

'ಮಹಾವಿಕಾಸ ಅಘಾಡಿಯ ಮೈತ್ರಿಕೂಟಕ್ಕೆ ವಿಬಿಎ ಅನ್ನು ಸೇರ್ಪಡೆ ಮಾಡಲು ಕಾಂಗ್ರೆಸ್, ಎನ್‌ಸಿಪಿ ಮತ್ತು ಶಿವಸೇನಾ ಪಕ್ಷಗಳು ಒಕ್ಕೊರಲಿನಿಂದ ನಿರ್ಧರಿಸಿದವು. ಸರ್ವಾಧಿಕಾರ ವಿರುದ್ಧದ ಹೋರಾಟಕ್ಕೆ ನಿಮ್ಮ ಬೆಂಬಲಕ್ಕೆ ಧನ್ಯವಾದಗಳು' ಎಂದು ಮಹಾರಾಷ್ಟ್ರದ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಅವರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಪ್ರಕಾಶ್ ಅಂಬೇಡ್ಕರ್

ಅಂಬೇಡ್ಕರ್ ಅವರ ಮೊಮ್ಮಗನಾದ ಪ್ರಕಾಶ್ ಅಂಬೇಡ್ಕರ್ ನೇತೃತ್ವದ ವಿಬಿಎ ಪಕ್ಷವು ವಿದರ್ಭ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ತನ್ನ ಪ್ರಭಾವ ಹೊಂದಿದೆ.

'ಇಂಡಿಯಾ' ಮೈತ್ರಿಯ ಮಿದುಳು ನಿಷ್ಕ್ರಿಯ'

ನವದೆಹಲಿ (ಪಿಟಿಐ): 'ಇಂಡಿಯಾ' ಮೈತ್ರಿಕೂಟದ 'ಮಿದುಳು ನಿಷ್ಕ್ರಿಯ'ಗೊಂಡಿದೆ. ಶೀಘ್ರವೇ ಅದು ಸಹಜ ಸಾವು ಕಾಣಲಿದೆ' ಎಂದು ಬಿಜೆಪಿ ಮಂಗಳವಾರ ವ್ಯಂಗ್ಯವಾಡಿದೆ.

ಇತರೆ ಪಕ್ಷಗಳ ಜೊತೆ ಜಗಳವಾಡುವುದು ಕಾಂಗ್ರೆಸ್‌ನ ಸ್ವಭಾವ ಎಂದೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಟೀಕಿಸಿದರು.

ಮಮತಾ ಬ್ಯಾನರ್ಜಿ ಅವರ ಹೇಳಿಕೆ, ಮೈತ್ರಿಯಿಂದ ಜೆಡಿಯು ಹೊರಬಿದ್ದ ಬೆಳವಣಿಗೆಯನ್ನು ಅವರು ಉಲ್ಲೇಖಿಸಿದರು.

'ಇಂಡಿಯಾ' ಮೈತ್ರಿಕೂಟವು ಕೇವಲ ಫೋಟೊ ಶೂಟ್‌ಗಾಗಿ ಎಂದು ಹೇಳುತ್ತಲೇ ಇದ್ದೆವು.

ಪ್ರಲ್ಹಾದ ಜೋಶಿ

ಇದು ಅಸಹಜ ಮೈತ್ರಿಯಾಗಿತ್ತು. ಸದ್ಯಕ್ಕೆ ಮೆದುಳು ನಿಷ್ಕ್ರಿಯಗೊಂಡಿದೆ. ಶೀಘ್ರದಲ್ಲಿಯೇ ಸಹಜ ಸಾವು ಸಂಭವಿಸಲಿದೆ' ಎಂದು ಜೋಶಿ ಹೇಳಿದರು.

ಸಂಕ್ಷಿಪ್ತ ಸುದ್ದಿ

ಅತ್ಯಾಚಾರ: ಮೂವರಿಗೆ 90 ವರ್ಷ ಜೈಲು

ಇಡುಕ್ಕಿ, ಕೇರಳ (ಪಿಟಿಐ): ಪಶ್ಚಿಮ ಬಂಗಾಳದ ಇಡುಕ್ಕಿ ಜಿಲ್ಲೆಯ ಪೂಪಾರ ಗ್ರಾಮದಲ್ಲಿ ನಡೆದಿದ್ದ ಬಾಲಕಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ಮೂವರು ಅಪರಾಧಿಗಳಿಗೆ ಕೇರಳದ ನ್ಯಾಯಾಲಯ 90 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ದೇವಿಕುಳಂ ತ್ವರಿತ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಪಿ.ಎ.ಸಿರಾಜುದ್ದೀನ್ ಅವರು ಐಪಿಸಿ ಮತ್ತು ಪೋಕ್ಸೊ ಕಾಯ್ದೆಯಡಿ ಶಿಕ್ಷೆ ವಿಧಿಸಿ ಮಂಗಳವಾರ ತೀರ್ಪು ಪ್ರಕಟಿಸಿದರು.

ಮೂವರ ವಿರುದ್ಧ ಐಪಿಸಿಯ ಎರಡು ಸೆಕ್ಷನ್‌ಗಳಡಿ ಕ್ರಮವಾಗಿ 20 ಮತ್ತು 25 ವರ್ಷ, ಪೋಕ್ಸೊ ಕಾಯ್ದೆಯ ಎರಡು ಸೆಕ್ಷನ್‌ಗಳಡಿ ಕ್ರಮವಾಗಿ 20 ಹಾಗೂ 25 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

'ಆದರೆ, ಜೈಲು ಶಿಕ್ಷೆಯನ್ನು ಏಕಕಾಲದಲ್ಲಿ ಅನುಭವಿಸಲಿರುವ ಕಾರಣ ಮತ್ತು ಅಪರಾಧಿಗಳಿಗೆ ವಿಧಿಸಿರುವ ಗರಿಷ್ಠ ಜೈಲು ಶಿಕ್ಷೆ 25 ವರ್ಷಗಳು ಆಗಿರುವುದರಿಂದ ಅವರು 25 ವರ್ಷ ಜೈಲಿನಲ್ಲಿರಬೇಕಾಗುತ್ತದೆ' ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಸ್ಮಿಜು ಕೆ.ದಾಸ್ ಹೇಳಿದ್ದಾರೆ.

16 ಕ್ಷೇತ್ರಗಳಿಗೆ ಅಭ್ಯರ್ಥಿ ಘೋಷಿಸಿದ ಎಸ್‌ಪಿ

ಲಖನೌ (ಪಿಟಿಐ): ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ 16 ಅಭ್ಯರ್ಥಿಗಳ ಪ್ರಥಮ ಪಟ್ಟಿಯನ್ನು ಸಮಾಜವಾದಿ ಪಕ್ಷ ಬಿಡುಗಡೆ ಮಾಡಿದೆ. ಹಾಲಿ ಸಂಸದೆ ಡಿಂಪಲ್ ಯಾದವ್ ಅವರು ಮೈನ್‌ಪುರಿ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ.

ಮತ್ತೊಬ್ಬ ಹಾಲಿ ಸಂಸದ ಶಫಿಕುರ್ ರಹಮಾನ್ ಬರ್ಕ್ ಅವರು ಸಂಭಲ್‌ನಿಂದ ಸ್ಪರ್ಧಿಸಲಿದ್ದಾರೆ ಎಂದು ಪಕ್ಷ 'ಎಕ್ಸ್' ಜಾಲತಾಣದ ಮೂಲಕ ಮಂಗಳವಾರ ಬಿಡುಗಡೆ ಮಾಡಿದ ಪಟ್ಟಿಯಲ್ಲಿ ತಿಳಿಸಿದೆ.

'ಮೈತ್ರಿಕೂಟಕ್ಕೆ ನಿತೀಶ್ ಅನಗತ್ಯ'

ಪೂರ್ಣಿಯಾ (ಬಿಹಾರ) (ಪಿಟಿಐ): ಬಿಹಾರದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ 'ಮಹಾಘಟಬಂಧನ್' ಹೋರಾಟ ಮುಂದುವರಿಸುತ್ತದೆ ಎಂದು ಹೇಳಿದ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು, 'ಮೈತ್ರಿಕೂಟಕ್ಕೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಅಗತ್ಯವಿಲ್ಲ' ಎಂದು ಪ್ರತಿಪಾದಿಸಿದರು.

ಪೂರ್ಣಿಯಾ ಜಿಲ್ಲೆಯಲ್ಲಿ ಮಂಗಳವಾರ ನಡೆದ ಭಾರತ್ ಜೋಡೊ ನ್ಯಾಯ ಯಾತ್ರೆಯ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ಸರಿಯಾದ ಪ್ರಾತಿನಿಧ್ಯ ದೊರೆತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಸತನಾಂ ಸಿಂಗ್ ಸಂಧು ರಾಜ್ಯಸಭೆಗೆ

ನವದೆಹಲಿ (ಪಿಟಿಐ): ಚಂಡೀಗಢ ವಿಶ್ವವಿದ್ಯಾಲಯದ ಸಂಸ್ಥಾಪಕ-ಕುಲಪತಿ ಸತನಾಂ ಸಿಂಗ್ ಸಂಧು ಅವರನ್ನು ಮಂಗಳವಾರ ರಾಜ್ಯಸಭೆಗೆ ನಾಮನಿರ್ದೇಶನ ಮಾಡಲಾಗಿದೆ.

ಸಂಸತ್ತಿನ ಮೇಲ್ಮನೆಗೆ ಸಂಧು ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಮನಿರ್ದೇಶನಗೊಳಿಸಿದ್ದಾರೆ ಎಂದು ಕೇಂದ್ರ ಗೃಹ ಇಲಾಖೆಯು ಅಧಿಸೂಚನೆಯಲ್ಲಿ ತಿಳಿಸಿದೆ.

'ಸಿಎಎ ಜಾರಿಗೆ ಅವಕಾಶ ನೀಡಲ್ಲ'

ರಾಯಗಂಜ್, ಪಶ್ಚಿಮ ಬಂಗಾಳ (ಪಿಟಿಐ): 'ನಾನು ಬದುಕಿರುವವರೆಗೂ ಪಶ್ಚಿಮ ಬಂಗಾಳದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆಯನ್ನು (ಸಿಎಎ) ಜಾರಿಗೊಳಿಸಲು ಅವಕಾಶ ನೀಡುವುದಿಲ್ಲ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದರು.

ಮಮತಾ ಬ್ಯಾನರ್ಜಿ

ಉತ್ತರ ದಿನಾಜಪುರ ಜಿಲ್ಲೆಯ ರಾಯಗಂಜ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಚುನಾವಣೆ ಸಮೀಪಿಸುತ್ತಿರುವಂತೆಯೇ, ಬಿಜೆಪಿಯು ರಾಜಕೀಯ ಲಾಭಕ್ಕಾಗಿ ಮತ್ತೆ ಸಿಎಎ ವಿಷಯವನ್ನು ಮುನ್ನೆಲೆಗೆ ತಂದಿದೆ' ಎಂದು ಟೀಕಿಸಿದರು.

ಪೌರತ್ವ ತಿದ್ದುಪಡಿ ಕಾಯ್ದೆಯನ್ನು ದೇಶದಾದ್ಯಂತ ವಾರದೊಳಗೆ ಜಾರಿಗೊಳಿಸಲಾಗುವುದು ಎಂದು ಕೇಂದ್ರ ಸಚಿವ ಶಾಂತನು ಠಾಕೂರ್ ಅವರು ಭಾನುವಾರ ಹೇಳಿದ್ದರು. ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಅವರು ಈ ಹೇಳಿಕೆ ನೀಡಿದ್ದರು.

ಮಮತಾ ಪಾದಯಾತ್ರೆ: ಮುಂಬರುವ ಲೋಕಸಭಾ ಚುನಾವಣೆಗೂ ಮುನ್ನ ಪಕ್ಷವನ್ನು ಸಂಘಟಿಸುವ ನಿಟ್ಟಿನಲ್ಲಿ ಮಮತಾ ಅವರು ರಾಜ್ಯದ ಉತ್ತರ ಭಾಗದಲ್ಲಿ ಮಂಗಳವಾರ ಪಾದಯಾತ್ರೆ ನಡೆಸಿದರು.

ಉತ್ತರ ದಿನಾಜಪುರ ಜಿಲ್ಲೆಯ ಚೋಪ್ರಾ ಪಟ್ಟಣದಲ್ಲಿ 'ಜನಸಂಯೋಗ ಯಾತ್ರೆ' ಕೈಗೊಂಡ ಅವರು ಆ ಬಳಿಕ ಸಮೀಪದ ಇಸ್ಲಾಂಪುರದಲ್ಲಿ ಮತ್ತೊಂದು ಪಾದಯಾತ್ರೆ ನಡೆಸಿದರು.

ಜ್ಞಾನವಾಪಿ: 'ಸುಪ್ರೀಂ'ಗೆ ಪ್ರತ್ಯೇಕ ಅರ್ಜಿ

ನವದೆಹಲಿ (ಪಿಟಿಐ): ಜ್ಞಾನವಾಪಿ ಮಸೀದಿಯ ಆವರಣದಲ್ಲಿ ಪತ್ತೆಯಾಗಿದೆ ಎನ್ನಲಾದ 'ಶಿವಲಿಂಗ'ದ ವೈಶಿಷ್ಟ್ಯಗಳು ಹಾಗೂ ಅದರ ಸ್ವರೂಪವನ್ನು ಪತ್ತೆ ಮಾಡುವುದಕ್ಕಾಗಿ ಸಮೀಕ್ಷೆ ನಡೆಸುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ನಿರ್ದೇಶನ ನೀಡುವಂತೆ ಕೋರಿ ನಾಲ್ವರು ಹಿಂದೂ ಮಹಿಳೆಯರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಈ ಕುರಿತು ನಾಲ್ವರೂ ಮಹಿಳೆಯರು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದಾರೆ.

'ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆಯನ್ನು ಮುಂದೂಡಿ 2023ರ ಮೇ 19ರಂದು ನೀಡಿದ್ದ ಆದೇಶ, ಮಸೀದಿಯಲ್ಲಿ ಪತ್ತೆ ಆಗಿದೆ ಎನ್ನಲಾದ 'ಶಿವಲಿಂಗ'ದ ಕಾಲಮಾನ ಪತ್ತೆಗಾಗಿ ಅಲಹಾಬಾದ್ ಹೈಕೋರ್ಟ್ ಕಳೆದ ವರ್ಷ ಮೇ 12ರಂದು ನೀಡಿದ್ದ ನಿರ್ದೇಶನದಂತೆ ನಡೆಯಬೇಕಿದ್ದ ಕಾರ್ಬನ್ ಡೇಟಿಂಗ್ ಪರೀಕ್ಷೆ ಮುಂದೂಡಿ ತಾನು ನೀಡಿದ್ದ ಆದೇಶವನ್ನು ತೆರವುಗೊಳಿಸುವಂತೆಯೂ ಅರ್ಜಿದಾರರು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

'ಶಿವಲಿಂಗ ಸುತ್ತಲೂ ನಿರ್ಮಿಸಿರುವ ಕೃತಕ/ಆಧುನಿಕ ಗೋಡೆಗಳು ಹಾಗೂ ನೆಲಹಾಸನ್ನು ತೆರವು ಮಾಡಿ, ವೈಜ್ಞಾನಿಕ ಪರೀಕ್ಷೆ ಕೈಗೊಂಡಾಗ ಮಾತ್ರ ಅದರ ನಿಖರವಾದ ಸ್ವರೂಪವನ್ನು ಪತ್ತೆ ಮಾಡಲು ಸಾಧ್ಯ. ಇದಕ್ಕಾಗಿ ಈಗ ಮುಚ್ಚಲಾಗಿರುವ ಪ್ರದೇಶದ ಉತ್ಖನನ ನಡೆಸಬೇಕು ಹಾಗೂ ಇತರ ವೈಜ್ಞಾನಿಕ ವಿಧಾನಗಳನ್ನು ಬಳಸಿ ಸಮೀಕ್ಷೆ ನಡೆಸಬೇಕು' ಎಂದೂ ಅರ್ಜಿದಾರರು ಮನವಿ ಮಾಡಿದ್ದಾರೆ.

ಈ ಕುರಿತು ವಕೀಲ ವಿಷ್ಣುಶಂಕರ್ ಜೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿರುವ ಮಹಿಳೆಯರು, ಕೋರ್ಟ್ ನಿಗದಿಪಡಿಸುವ ಕಾಲಮಿತಿಯೊಳಗೆ ವರದಿ ಸಲ್ಲಿಸುವಂತೆ ಎಎಸ್‌ಐಗೆ ನಿರ್ದೇಶನ ನೀಡುವಂತೆಯೂ ಕೋರಿದ್ದಾರೆ.

ಆದೇಶ ಕಾಯ್ದಿರಿಸಿದ ವಾರಾಣಸಿ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಲಖನೌ: ಜ್ಞಾನವಾಪಿ ಮಸೀದಿಯ ನೆಲಮಾಳಿಗೆಯಲ್ಲಿ (ತೆಹಖಾನಾ) ಪೂಜೆ ಸಲ್ಲಿಸಲು ಅವಕಾಶ ನೀಡುವಂತೆ ಕೋರಿ ಹಿಂದೂ ಅರ್ಜಿದಾರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಪೂರ್ಣಗೊಳಿಸಿರುವ ವಾರಾಣಸಿ ಜಿಲ್ಲಾ ನ್ಯಾಯಾಲಯ, ಈ ಕುರಿತ ಆದೇಶವನ್ನು ಮಂಗಳವಾರ ಕಾಯ್ದಿರಿಸಿತು.

'ವಾದ-ಪ್ರತಿವಾದಗಳನ್ನು ಆಲಿಸಿರುವ ಜಿಲ್ಲಾ ನ್ಯಾಯಾಲಯವು ಬುಧವಾರ ಆದೇಶ ಪ್ರಕಟಿಸುವ ಸಂಭವ ಇದೆ' ಎಂದು ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣುಶಂಕರ್ ಜೈನ್ ತಿಳಿಸಿದ್ದಾರೆ.

ಮಸೀದಿಯ ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸುವ ಹಿಂದೂಗಳ ಹಕ್ಕನ್ನು ಮತ್ತೆ ಒದಗಿಸಿಕೊಡುವಂತೆ ಜೈನ್ ಕೋರಿದ್ದಾರೆ.

ವಾದ-ಪ್ರತಿವಾದವೇನು?: ಮಸೀದಿಯ ನೆಲಮಾಳಿಗೆಯಲ್ಲಿ ಸೋಮನಾಥ ವ್ಯಾಸ ಮತ್ತು ಅವರ ಕುಟುಂಬದವರು 1993ರ ವರೆಗೆ ಪೂಜೆ ಸಲ್ಲಿಸುತ್ತಿದ್ದರು. ಆಗ,

ಅಧಿಕಾರದಲ್ಲಿದ್ದ ಮುಲಾಯಂ ಸಿಂಗ್ ಯಾದವ್ ಸರ್ಕಾರವು 1993ರ ನವೆಂಬರ್‌ನಲ್ಲಿ ಇಲ್ಲಿ ಪೂಜೆ ಸಲ್ಲಿಸುವುದನ್ನು ನಿಷೇಧಿಸಿತು ಎನ್ನುವುದು ಹಿಂದೂ ಅರ್ಜಿದಾರರ ವಾದವಾಗಿದೆ.

ಆದರೆ, ಮಸೀದಿಯ ನಿರ್ವಹಣೆಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ಅಂಜುಮನ್ ಇಂತೆಜಾಮಿಯಾ, ಹಿಂದೂಗಳ ವಾದವನ್ನು ವಿರೋಧಿಸಿದೆ.

'ನೆಲಮಾಳಿಗೆಯು ಮಸೀದಿಯ ಭಾಗವೇ ಆಗಿದ್ದು, ಅಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡಬಾರದು' ಎಂದು ಹೇಳಿದೆ.

'ಕಟ್ಟಡ ನಿರ್ಮಾಣ: ಮಹಿಳೆಯರಿಗೆ ಹೆರಿಗೆ ರಜೆ

ನವದೆಹಲಿ (ಪಿಟಿಐ): ರಸ್ತೆ ನಿರ್ಮಾಣ ಕಾಮಗಾರಿಗಳ ನೋಂದಾಯಿತ ಮಹಿಳಾ ಕಾರ್ಮಿಕರಿಗೆ, 26 ವಾರ ಸಂಬಳ ಸಹಿತ ಹೆರಿಗೆ ರಜೆ ನೀಡಬೇಕು ಎಂದು ಕೇಂದ್ರ ಸರ್ಕಾರವು ಉದ್ಯೋಗದಾತರಿಗೆ ಸೂಚಿಸಿದೆ.

'ಎರಡು ಹೆರಿಗೆಗಳಿಗೆ ಈ ಸೌಲಭ್ಯ ನೀಡಬೇಕು. ಎರಡು ಹೆರಿಗೆ ಮೀರಿದ ಅಥವಾ ದತ್ತು ಪ್ರಕರಣದಲ್ಲಿ 12 ವಾರ ಈ ಸೌಲಭ್ಯ ನೀಡಬೇಕು' ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಹೇಳಿದ್ದಾರೆ.

'ಕಾರ್ಯಪಡೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ' ಕುರಿತ ಸಲಹಾ ವರದಿ ಬಿಡುಗಡೆ ಮಾಡಿದ ಸಚಿವೆ ಈ ಮಾತು ಹೇಳಿದರು. ಕಾರ್ಮಿಕ ಸಚಿವಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಗಳು ಈ ವರದಿ ರೂಪಿಸಿವೆ.

15 ಪಿಎಫ್‌ಐ ಕಾರ್ಯಕರ್ತರಿಗೆ ಮರಣ ದಂಡನೆ

ಅಲಪ್ಪುಳ (ಕೇರಳ) (ಪಿಟಿಐ): 2021ರಲ್ಲಿ ನಡೆದಿದ್ದ ಬಿಜೆಪಿ ಒಬಿಸಿ ರಾಜ್ಯ ಕಾರ್ಯದರ್ಶಿ ರಂಜಿತ್ ಶ್ರೀನಿವಾಸನ್ ಹತ್ಯೆ ಸಂಬಂಧ ನಿಷೇಧಿತ ಇಸ್ಲಾಮಿಕ್ ಸಂಘಟನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) 15 ಕಾರ್ಯಕರ್ತರಿಗೆ ಕೇರಳ ನ್ಯಾಯಾಲಯ ಮರಣ ದಂಡನೆ ವಿಧಿಸಿದೆ.

ಮಾವೆಲಿಕ್ಕರ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ವಿ.ಜಿ.ಶ್ರೀದೇವಿ ಮರಣ ದಂಡನೆಯ ತೀರ್ಪು ನೀಡಿದ್ದಾರೆ ಎಂದು ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ತಿಳಿಸಿದ್ದಾರೆ. ನ್ಯಾಯಾಲಯವು ಜನವರಿ 20ರಂದು ಆರೋಪಿಗಳನ್ನು ದೋಷಿಗಳೆಂದು ತೀರ್ಪು ನೀಡಿತ್ತು.

ದೋಷಿಗಳ ಪೈಕಿ ನ್ಯಾಯಾಲಯದಲ್ಲಿ 14 ಮಂದಿ ಹಾಜರಿದ್ದರು. ಆದರೂ ಮರಣ ದಂಡನೆಯ ತೀರ್ಪು ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ದೋಷಿಗೂ ಅನ್ವಯಿಸುತ್ತದೆ ಎಂದು ನ್ಯಾಯಾಧೀಶರು ಮೌಖಿಕವಾಗಿ ತಿಳಿಸಿರುವುದಾಗಿ ವಿಶೇಷ ಪ್ರಾಸಿಕ್ಯೂಟರ್ ಪ್ರತಾಪ್ ಜಿ. ಪಡಿಕ್ಕಲ್ ತಿಳಿಸಿದ್ದಾರೆ.

ಹಂತಕರು ತರಬೇತಿ ಪಡೆದ ಕೊಲೆಗಡುಕರ ತಂಡಕ್ಕೆ ಸೇರಿದ್ದು, ಶ್ರೀನಿವಾಸನ್ ಅವರನ್ನು ಅವರ ತಾಯಿ, ಹೆಂಡತಿ ಮತ್ತು ಹಸುಗೂಸಿನ ಮುಂದೆ ಪೈಶಾಚಿಕವಾಗಿ ಕೊಂದಿದ್ದರಿಂದ ಇದನ್ನು ಅಪರೂಪದಲ್ಲಿ ಅಪರೂಪದ ಪ್ರಕರಣ ಎಂದು ಪರಿಗಣಿಸಿ ಆರೋಪಿಗಳಿಗೆ ಗರಿಷ್ಠ ಶಿಕ್ಷೆ ವಿಧಿಸಬೇಕೆಂದು ಪ್ರಾಸಿಕ್ಯೂಷನ್ ವಾದ ಮಂಡಿಸಿತ್ತು.

ಹತ್ಯೆಗೊಳಗಾಗಿದ್ದ ಶ್ರೀನಿವಾಸನ್ ಅವರ ಕುಟುಂಬಸ್ಥರು ಮತ್ತು ಬಿಜೆಪಿ ನ್ಯಾಯಾಲಯದ ತೀರ್ಪನ್ನು ಸ್ವಾಗತಿಸಿದ್ದು, ಶ್ರೀನಿವಾಸನ್ 'ಶ್ರೇಷ್ಠ ಹುತಾತ್ಮ, ಅವರಿಗೆ ನ್ಯಾಯ ಸಿಕ್ಕಿದೆ' ಎಂದು ಬಿಜೆಪಿ ಕೇರಳ ಅಧ್ಯಕ್ಷ ಸುರೇಂದ್ರನ್ ಹೇಳಿದ್ದಾರೆ.

ಪಿಎಫ್‌ಐ ಮತ್ತು ಎಸ್‌ಡಿಪಿಐ ಕಾರ್ಯಕರ್ತರು 2021ರ ಡಿಸೆಂಬರ್ 19ರಂದು ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಕಾರ್ಯದರ್ಶಿಯಾಗಿದ್ದ ಶ್ರೀನಿವಾಸನ್ ಅವರ ಮೇಲೆ ಅವರ ಮನೆಯಲ್ಲೇ ದಾಳಿ ನಡೆಸಿ, ಕುಟುಂಬದ ಸದಸ್ಯರ ಕಣ್ಣೆದುರಲ್ಲೇ ಬರ್ಬರವಾಗಿ ಕೊಲೆ ಮಾಡಿದ್ದರು.

ಫೆ. 3ರಿಂದ ಪಾಕಿಸ್ತಾನ ವಿರುದ್ಧ ಡೇವಿಸ್ ಕಪ್ ವಿಶ್ವಗುಂಪಿನ ಪಂದ್ಯ

'ಆಟವಾಡದ ನಾಯಕ'ನಾಗಿ ಜೀಶಾನ್ ಅಲಿ

ಇಸ್ಲಾಮಾಬಾದ್ (ಪಿಟಿಐ): ಹಿರಿಯ ಆಟಗಾರ ಜೀಶಾನ್ ಅಲಿ ಅವರು ಪಾಕಿಸ್ತಾನದ ಇಸ್ಲಾಮಾಬಾದಿನಲ್ಲಿ ಫೆ. 3 ಮತ್ತು 4ರಂದು ಡೇವಿಸ್ ಕಪ್ ಪಂದ್ಯ ಆಡಲಿರುವ ಭಾರತ ತಂಡದಲ್ಲಿ ತರಬೇತುದಾರನ ಜೊತೆಗೆ 'ಆಟವಾಡದ ನಾಯಕ'ನ ಪಾತ್ರವನ್ನೂ ನಿರ್ವಹಿಸಲಿದ್ದಾರೆ. ವೈಯಕ್ತಿಕ ಕಾರಣ ನೀಡಿ ರೋಹಿತ್ ರಾಜಪಾಲ್ ಅವರು ತಂಡದೊಂದಿಗೆ ತೆರಳದ ಕಾರಣ ಜೀಶಾನ್ ಅವರಿಗೆ ಹೆಚ್ಚುವರಿ ಹೊಣೆ ವಹಿಸಲಾಗಿದೆ.

ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಮಹಾಕಾರ್ಯದರ್ಶಿ ಅನಿಲ್ ಧುಪರ್ ಅವರು ಈ ವಿಷಯವನ್ನು ಸುದ್ದಿಸಂಸ್ಥೆಗೆ ಮಂಗಳವಾರ ಖಚಿತಪಡಿಸಿದ್ದಾರೆ. ಕುಟುಂಬ ಸದಸ್ಯರಿಗೆ ವೈದ್ಯಕೀಯ ತುರ್ತು ಇರುವ ಕಾರಣ ರಾಜಪಾಲ್ ಪಾಕಿಸ್ತಾನಕ್ಕೆ ಪ್ರಯಾಣಿಸಿಲ್ಲ ಎಂದು ತಿಳಿದುಬಂದಿದೆ.

'ನಮ್ಮ ತಂಡದ ಆಟವಾಡದ ನಾಯಕರಾಗಿದ್ದ ರೋಹಿತ್ ರಾಜಪಾಲ್ ವೈಯಕ್ತಿಕ ಕಾರಣಗಳಿಂದ ತಂಡದ ಜೊತೆ ತೆರಳಲು ಆಗಿಲ್ಲ. ಹಿರಿಯ ಆಟಗಾರ ಜೀಶಾನ್ ಅಲಿ ಅವರನ್ನು ತಂಡದ ನಾಯಕನಾಗಿ ನೇಮಕ ಮಾಡಿದ್ದೇವೆಂದು ತಿಳಿಸಲು ಸಂತಸವಾಗುತ್ತಿದೆ' ಎಂದು ಧುಪರ್ ತಿಳಿಸಿದ್ದಾರೆ.

ಜೀಶಾನ್ ಅಲಿ

ಐವರು ಆಟಗಾರರು, ನೆರವು ಸಿಬ್ಬಂದಿ ಮತ್ತು ಕೋಚ್ ಒಳಗೊಂಡ 10 ಮಂದಿಯ ತಂಡ ಪಾಕ್‌ಗೆ ಪಯಣಿಸಿದೆ. ಪಾಕಿಸ್ತಾನ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನ ಹುಲ್ಲಿನ ಅಂಕಣದಲ್ಲಿ ಈ ವಿಶ್ವ ಗುಂಪಿನ (1) ಪ್ಲೇ ಆಫ್ ಪಂದ್ಯ ನಡೆಯಲಿದೆ.

ಭಾರತ ಡೇವಿಸ್ ಕಪ್ ತಂಡ ಕೊನೆಯ ಬಾರಿ 1964ರಲ್ಲಿ ಪಾಕಿಸ್ತಾನಕ್ಕೆ ತೆರಳಿತ್ತು.2019ರಲ್ಲಿ ಭಾರತ ಡೇವಿಸ್ ಕಪ್ ಪಂದ್ಯವಾಡಲು ಪಾಕಿಸ್ತಾನಕ್ಕೆ ತೆರಳಬೇಕಾಗಿತ್ತು. ಆದರೆ ರಾಜತಾಂತ್ರಿಕ ಸಂಬಂಧ ಸೌಹಾರ್ದಯುತವಾಗಿಲ್ಲದ ಕಾರಣ ಪಂದ್ಯವನ್ನು ತಟಸ್ಥ ತಾಣದಲ್ಲಿ (ಕಜಕಸ್ತಾನದಲ್ಲಿ) ಆಡಿಸುವಲ್ಲಿ ಎಐಟಿಎ ಯಶಸ್ವಿ ಆಗಿತ್ತು.

ದೇಶದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮೀತ್ ನಗಾಲ್ ಮತ್ತು ಶಶಿಕುಮಾರ್ ಮುಕುಂದ್ ಅವರ ಅನುಪಸ್ಥಿತಿಯಲ್ಲಿ, ವಿಶ್ವದ 463ನೇ ಕ್ರಮಾಂಕದ ಆಟಗಾರ ರಾಮಕುಮಾರ್ ರಾಮನಾಥನ್ ಭಾರತ ತಂಡದ ಸವಾಲನ್ನು ಮುನ್ನಡೆಸಲಿದ್ದಾರೆ. ಪೂರ್ಣಾವಧಿ ಡಬಲ್ಸ್ ಆಟಗಾರರಾಗಿರುವ ಯೂಕಿ ಭಾಂಬ್ರಿ ಅವರು ಅಗತ್ಯ ಬಿದ್ದಲ್ಲಿ ಸಿಂಗಲ್ಸ್‌ನಲ್ಲಿ ಆಡುವ ಸಾಧ್ಯತೆಯಿದೆ.

ಭಾರತ ತಂಡವು ಎನ್.ಶ್ರೀರಾಮ್ ಬಾಲಾಜಿ, ನಿಕಿ ಪೂಣಚ್ಚ ಮತ್ತು ಸಾಕೇತ್ ಮೈನೇನಿ ಅವರನ್ನು ಒಳಗೊಂಡಿದೆ. ಕಳೆದ ಮೊರಾಕ್ಕೊ ವಿರುದ್ಧ ನಡೆದ ಪಂದ್ಯದ ವೇಳೆ ಡೇವಿಸ್ ಕಪ್ ತಂಡಕ್ಕೆ ಪದಾರ್ಪಣೆ ಮಾಡಿದ್ದ ದಿಗ್ವಿಜಯ ಪ್ರತಾಪ್ ಸಿಂಗ್ ಅವರು ರಿಸರ್ವ್ ಆಟಗಾರರಾಗಿದ್ದಾರೆ.

1964ರಲ್ಲಿ ಆಡಿದ್ದ ಜೀಶಾನ್ ತಂದೆ

ವಿಶೇಷ ಎಂದರೆ, 1964ರ ಮಾರ್ಚ್‌ನಲ್ಲಿ ಲಾಹೋರ್‌ನಲ್ಲಿ ನಡೆದ ಡೇವಿಡ್ ಕಪ್ ಪಂದ್ಯದಲ್ಲಿ ಅಖ್ತರ್ ಅಲಿ ಅವರು ಆಟಗಾರರಾಗಿ ನಾಲ್ಕು ಪಂದ್ಯಗಳ ಪೈಕಿ ಎರಡರಲ್ಲಿ ಆಡಿದ್ದರು. ಅಖ್ತರ್ ಅಲಿ ಅವರು, ಭಾರತ ತಂಡದ ಕೋಚ್ ಆಗಿರುವ ಮತ್ತು 'ಆಟವಾಡದ ನಾಯಕ'ನ ಹೊಣೆ ವಹಿಸಿರುವ ಜೀಶಾನ್ ಅಲಿ ಅವರ ತಂದೆ.

ಅಖ್ತರ್ ಮೊದಲ ಸಿಂಗಲ್ಸ್‌ನಲ್ಲಿ ಮತ್ತು ಪ್ರೇಮಜಿತ್ ಲಾಲ್ ಜೊತೆಗೂಡಿ ಡಬಲ್ಸ್ ಪಂದ್ಯದಲ್ಲಿ ಜಯಗಳಿಸಿದ್ದರು. ಅಖ್ತರ್ ಮತ್ತು ಲಾಲ್ ಇಬ್ಬರೂ ಈಗ ಇಲ್ಲ. 'ನನ್ನ ತಂದೆ 1964ರಲ್ಲಿ ಆಡಿದ್ದ ತಂಡದ ಭಾಗವಾಗಿದ್ದರು. ಈಗ 60 ವರ್ಷಗಳ ನಂತರ ಭಾರತ ತಂಡದ ಜೊತೆ ಇಲ್ಲಿಗೆ ಬಂದಿರುವುದು ನನಗೆ ಮತ್ತು ನನ್ನ ಕುಟುಂಬಕ್ಕೆ ಸ್ಮರಣೀಯ ಸಂದರ್ಭ. ತಂಡದ ಯುವ ಆಟಗಾರರು ಉತ್ತಮವಾಗಿ ಆಡಿ ಪಂದ್ಯವನ್ನು ನಾವು ಗೆಲ್ಲುವೆವೆಂಬ ವಿಶ್ವಾಸವಿದೆ' ಎಂದು 54 ವರ್ಷದ ಜೀಶಾನ್ ಹೇಳಿದರು.

ಸಂಜಯ್ ವಿರುದ್ಧ ಕ್ರಮ: ಎಚ್ಚರಿಕೆ

ನವದೆಹಲಿ (ಪಿಟಿಐ): ಅಮಾನತುಗೊಂಡಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ಅವರು ಸರ್ಕಾರದ ಮಾನ್ಯತೆಗೆ ಸಂಬಂಧಿಸಿ 'ಆಧಾರರಹಿತ ಮತ್ತು ಕುಚೇಷ್ಟೆಯ' ಹೇಳಿಕೆಗಳನ್ನು ನೀಡುತ್ತಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕ್ರೀಡಾ ಸಚಿವಾಲಯ ಮಂಗಳವಾರ ಎಚ್ಚರಿಕೆ ನೀಡಿದೆ.

ಡಬ್ಲ್ಯುಎಫ್‌ಐ ನಡೆಸುವ ಯಾವುದೇ ಟೂರ್ನಿಯನ್ನು 'ಮಾನ್ಯತೆ ಪಡೆಯದ ಟೂರ್ನಿ' ಎಂದು ಪರಿಗಣಿಸಲಾಗುವುದು ಎಂದೂ ಸಚಿವಾಲಯ ಪುನರುಚ್ಚರಿಸಿದೆ.

ಸಂಜಯ್ ಸಿಂಗ್ ಅವರನ್ನು ಉದ್ದೇಶಿಸಿ ಸಚಿವಾಲಯವು ಬರೆದ ಪತ್ರದಲ್ಲಿ ಈ ವಿಷಯ ತಿಳಿಸಲಾಗಿದೆ.

ಪುಣೆಯಲ್ಲಿ ಜನವರಿ 29 ರಿಂದ 31ರವರೆಗೆ ನಡೆಯುವ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ 700 ಕುಸ್ತಿಪಟುಗಳು ಭಾಗವಹಿಸುವರು ಎಂದು ಸಿಂಗ್ ಕಳೆದ ಶನಿವಾರ ಹೇಳಿದ್ದರು. ಇದು ಸಚಿವಾಲಯದ ಕೆಂಗಣ್ಣಿಗೆ ಕಾರಣವಾಗಿತ್ತು. ಸಂಜಯ್ ಸಿಂಗ್ ನೇತೃತ್ವದ ಹೊಸ ಸಮಿತಿಯನ್ನು ಮೂರೇ ದಿನಕ್ಕೆ ಸರ್ಕಾರ ಅಮಾನತುಗೊಳಿಸಿತ್ತು.

ಐಒಎ ನೇಮಿಸಿರುವ ಭೂಪೇಂದರ್ ಸಿಂಗ್ ಬಾಜ್ವಾ ನೇತೃತ್ವದ ಅಡ್‌ಹಾಕ್ ಸಮಿತಿಯು, ಫೆ. 2 ರಿಂದ 5ರ ವರೆಗೆ ಜೈಪುರದಲ್ಲಿ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸುವುದಾಗಿ ಪ್ರತ್ಯೇಕವಾಗಿ ಪ್ರಕಟಿಸಿತ್ತು.

ಹಾಕಿ ಫೈವ್ಸ್ ಪುರುಷರ ವಿಶ್ವಕಪ್: ಕ್ವಾರ್ಟರ್‌ನಲ್ಲಿ ಮುಗ್ಗರಿಸಿದ ಭಾರತ

ಮಸ್ಕತ್ (ಪಿಟಿಐ): ಮೊಹಮ್ಮದ್ ರಾಹೀಲ್ ಅವರ ಹ್ಯಾಟ್ರಿಕ್ ಗೋಲುಗಳ ಹೊರತಾಗಿಯೂ ಭಾರತ ತಂಡವು ಎಫ್‌ಐಎಚ್ ಹಾಕಿ ಫೈವ್ಸ್ ಪುರುಷರ ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಮಂಗಳವಾರ 4-7ರಿಂದ ನೆದರ್ಲೆಂಡ್ಸ್ ವಿರುದ್ಧ ಪರಾಭವಗೊಂಡಿತು.

ರಾಹೀಲ್ (1ನೇ, 7ನೇ ಮತ್ತು 25ನೇ ನಿಮಿಷ) ಮೂರು ಗೋಲು ಗಳಿಸಿ ಮಿಂಚಿದರೆ, ಮನ್‌ದೀಪ್ ಮೋರ್ (11ನೇ) ಒಂದು ಗೋಲು ಗಳಿಸಿದರು.

ನೆದರ್ಲೆಂಡ್ಸ್ ತಂಡದ ಪರ ಸ್ಯಾಂಡರ್ ಡಿವಿಜ್ನ್ (4ನೇ ಮತ್ತು 15ನೇ) ಹಾಗೂ ಅಲೆಕ್ಸಾಂಡರ್ ಸ್ಕೋಪ್ (10ನೇ ಮತ್ತು 26ನೇ) ತಲಾ ಎರಡು ಗೋಲು ಗಳಿಸಿದರೆ, ಲ್ಯೂಕಾಸ್ ಮಿಡೆನ್‌ಡಾರ್ಪ್ (12ನೇ), ಜೇಮೀ ವ್ಯಾನ್ ಆರ್ಟ್ (13ನೇ) ಮತ್ತು ಪೆಪಿಜ್ನ್ ರೆಯೆಂಗಾ (20ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಬಳಿಕ ಎದುರಾಳಿ ತಂಡವು ಪಾರಮ್ಯ ಮೆರೆದು ಜಯಭೇರಿ ಬಾರಿಸಿ ಸೆಮಿಫೈನಲ್ ಪ್ರವೇಶಿಸಿತು.

ನಂತರದಲ್ಲಿ ಐದರಿಂದ ಎಂಟನೇ ಸ್ಥಾನಗಳ ನಿರ್ಣಯಕ್ಕಾಗಿ ನಡೆದ ಪಂದ್ಯದಲ್ಲಿ ಭಾರತವು 9-4ರಿಂದ ಕೀನ್ಯಾ ವಿರುದ್ಧ ಜಯ ಸಾಧಿಸಿತು. ಐದು ಮತ್ತು ಆರನೇ ಸ್ಥಾನಕ್ಕಾಗಿ ಬುಧವಾರ ನಡೆಯುವ ಪಂದ್ಯದಲ್ಲಿ ಭಾರತ ಸೆಣಸಲಿದೆ.

ಕಬಡ್ಡಿ: ಅಗ್ರಸ್ಥಾನಕ್ಕೆ ಪುಣೇರಿ ಪಲ್ಟನ್

ಪಟ್ನಾ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಪುಣೇರಿ ಪಲ್ಟನ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಮಂಗಳವಾರ ತೆಲುಗು ಟೈಟನ್ಸ್ ವಿರುದ್ಧ ಸುಲಭ ಗೆಲುವು ಸಾಧಿಸಿ, ಪಾಯಿಂಟ್ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೆ ಏರಿತು.

ಪಾಟಲೀಪುತ್ರ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪಲ್ಟನ್ ತಂಡವು 60-29ರಿಂದ ಟೈಟನ್ಸ್ ತಂಡವನ್ನು ಮಣಿಸಿತು. ಮಧ್ಯಂತರದ ವೇಳೆ 29-6ರಿಂದ ಮುನ್ನಡೆ ಪಡೆದ ಪಲ್ಟನ್ ತಂಡವು, ಉತ್ತರಾರ್ಧದಲ್ಲೂ ಎದುರಾಳಿ ತಂಡದ ಮೇಲೆ ಸವಾರಿ ಮುಂದುವರಿಸಿ 31 ಅಂಕಗಳ ಅಂತರದಿಂದ ಜಯಭೇರಿ ಬಾರಿಸಿತು.

ಪಂದ್ಯ ಆರಂಭವಾದ 6ನೇ ನಿಮಿಷದಲ್ಲಿ ಎದುರಾಳಿ ತಂಡವನ್ನು ಆಲೌಟ್ ಮಾಡಿ 11-2ರ ಮುನ್ನಡೆ ಪಡೆದ ಪಲ್ಟನ್ ತಂಡವು, 14ನೇ ನಿಮಿಷದಲ್ಲಿ ಮತ್ತೆ ಅಂಗಣವನ್ನು ಖಾಲಿ ಮಾಡಿಸಿತು. ಒಟ್ಟು ನಾಲ್ಕು ಬಾರಿ ಟೈಟನ್ಸ್ ತಂಡವನ್ನು ಆಲೌಟ್ ಮಾಡಿತು.

ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನಕ್ಕೆ ಜಮೀನು ಹಸ್ತಾಂತರ

ಪುತ್ತೂರು (ದಕ್ಷಿಣ ಕನ್ನಡ): ತಾಲ್ಲೂಕಿನ ಕಬಕ ಗ್ರಾಮದ ಪೆರಿಯತ್ತೋಡಿ ಎಂಬಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯು ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನ ನಿರ್ಮಿಸಲಿದ್ದು, ಅದಕ್ಕೆ ಜಿಲ್ಲಾ ಆಡಳಿತದಿಂದ 23.25 ಎಕರೆ ಜಮೀನು ಹಸ್ತಾಂತರಿಸಲಾಯಿತು.

ಉಪವಿಭಾಗಾಧಿಕಾರಿ ಜುಬಿನ್ ಮೊಹಾಪಾತ್ರ ಹಾಗೂ ಶಾಸಕ ಅಶೋಕ್ ಕುಮಾರ್ ರೈ ಅವರು ಜಮೀನು ದಾಖಲೆಗಳನ್ನು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಅವರಿಗೆ ಮಂಗಳವಾರ ಹಸ್ತಾಂತರಿಸಿದರು.

'₹25 ಕೋಟಿ ವೆಚ್ಚದಲ್ಲಿ ಕ್ರಿಕೆಟ್ ಮೈದಾನ ನಿರ್ಮಿಸಲಾಗುವುದು. 30 ವರ್ಷ ಅವಧಿಗೆ ಲೀಸ್ ಆಧಾರದಲ್ಲಿ ಜಾಗ ನೀಡಲಾಗಿದೆ. ಜತೆಗೆ ಮಕ್ಕಳು, ಸಾರ್ವಜನಿಕರಿಗೆ ಕ್ರಿಕೆಟ್ ಆಟವಾಡಲು ಮತ್ತೊಂದು ಮೈದಾನ ನಿರ್ಮಾಣವಾಗಲಿದೆ' ಎಂದು ಅಶೋಕ್ ಹೇಳಿದರು.

ಚೌಬೆ ರಾಜೀನಾಮೆಗೆ ಆಗ್ರಹ

ಎಐಎಫ್‌ಎಫ್: 2ನೇ ಬಾರಿಗೆ ಪ್ರಧಾನ ಕಾರ್ಯದರ್ಶಿ ವಜಾ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಅಧ್ಯಕ್ಷ ಕಲ್ಯಾಣ್ ಚೌಬೆ ರಾಜೀನಾಮೆ ನೀಡಬೇಕು ಎಂದು ಮಾಜಿ ನಾಯಕ ಬೈಚುಂಗ್ ಭುಟಿಯಾ ಮಂಗಳವಾರ ಒತ್ತಾಯಿಸಿದ್ದಾರೆ. ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಶಾಜಿ ಪ್ರಭಾಕರನ್ ಅವರನ್ನು ಎರಡನೇ ಬಾರಿಗೆ ವಜಾಗೊಳಿಸಲಾಗಿದ್ದು, ಸಂಸ್ಥೆಯ ಆಡಳಿತದಲ್ಲಿನ ಎಲ್ಲ ಗೊಂದಲಗಳಿಗೆ ಅಧ್ಯಕ್ಷರೇ ಹೊಣೆಗಾರ ಎಂದು ಭುಟಿಯಾ ಆರೋಪಿಸಿದ್ದಾರೆ.

ಎಐಎಫ್‌ಎಫ್‌ನ ಕಾರ್ಯಕಾರಿ ಸಮಿತಿಯು ಮಂಗಳವಾರ ಪ್ರಭಾಕರನ್ ಅವರನ್ನು ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ತೆಗೆದುಹಾಕಿದೆ. ನವೆಂಬರ್ 7ರಂದು ಈ ಹಿಂದೆ ತುರ್ತು ಸಮಿತಿಯು ನಂಬಿಕೆದ್ರೋಹ ಕಾರಣಕ್ಕೆ ಇದೇ ರೀತಿ ಮಾಡಿತ್ತು.

ಬೈಚುಂಗ್ ಭುಟಿಯಾ

ದೆಹಲಿ ಹೈಕೋರ್ಟ್‌ನ ಏಕಸದಸ್ಯ ಪೀಠವು ಡಿಸೆಂಬರ್ 8 ರಂದು ಅವರ ವಜಾಕ್ಕೆ ಮಧ್ಯಂತರ ತಡೆಯಾಜ್ಞೆ ನೀಡಿತ್ತು.

ಪ್ರಭಾಕರನ್ ಅವರನ್ನು ತುರ್ತು ಸಮಿತಿಯು ವಜಾಗೊಳಿಸಿದೆ. ಆದರೆ ಫೆಡರೇಷನ್ ನಿಯಮಾವಳಿಗಳ ಪ್ರಕಾರ, ಕಾರ್ಯಕಾರಿ ಸಮಿತಿಗೆ ಮಾತ್ರ ಇಂಥ ಅಧಿಕಾರವಿದೆ ಎಂದು ಹೈಕೋರ್ಟ್ ಜನವರಿ 19ರ ಆದೇಶದಲ್ಲಿ ತಿಳಿಸಿತ್ತು.

ಆದಾಗ್ಯೂ, ಅರ್ಜಿದಾರರ (ಪ್ರಭಾಕರನ್) ಅಧಿಕಾರಾವಧಿ ಕೊನೆಗೊಳಿಸುವ ಉದ್ದೇಶದಿಂದ ಕಾರ್ಯಕಾರಿ ಸಮಿತಿಯ ಸಭೆಗಳನ್ನು ನಡೆಸಲು ಡಿಸೆಂಬರ್ 8ರ ತಡೆಯಾಜ್ಞೆಯು ಎಐಎಫ್‌ಎಫ್‌ಗೆ ಅಡ್ಡಿಯಾಗುವುದಿಲ್ಲ ಎಂದೂ ಹೈಕೋರ್ಟ್ ಹೇಳಿತ್ತು.

'ಹೌದು, ಮಂಗಳವಾರ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಶಾಜಿ ಪ್ರಭಾಕರನ್ ಅವರನ್ನು ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ವಜಾಗೊಳಿಸಲಾಗಿದೆ' ಎಂದು ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

ವೀಕ್ಷಕರಿಂದ ದುರ್ವರ್ತನೆ: ದಿವ್ಯಾ ಬೇಸರ

ನವದೆಹಲಿ (ಪಿಟಿಐ): 'ಚೆಸ್ ಕ್ರೀಡೆಯಲ್ಲಿ ವೀಕ್ಷಕರಿಂದ ದುರ್ವರ್ತನೆ (ಸೆಕ್ಸಿಸ್ಟ್) ಎದುರಿಸಿದ್ದೇನೆ. ಪಂದ್ಯದ ವೇಳೆ ಅವರ ಗಮನವು ನನ್ನ ಆಟಕ್ಕಿಂತ, ನನ್ನ ಉಡುಪು, ಕೇಶವಿನ್ಯಾಸ, ಉಚ್ಚಾರ ಹಾಗೂ ಇತರ ಅಪ್ರಸ್ತುತ ಅಂಶಗಳ ಮೇಲೆಯೇ ಕೇಂದ್ರೀಕೃತವಾಗಿತ್ತು' ಎಂದು ಭಾರತದ ಚೆಸ್ ಆಟಗಾರ್ತಿ ದಿವ್ಯಾ ದೇಶಮುಖ ಬೇಸರ ವ್ಯಕ್ತಪಡಿಸಿದ್ದಾರೆ.

ನೆದರ್ಲೆಂಡ್ಸ್‌ನಲ್ಲಿ ನಡೆದ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿ ಬಳಿಕ ಸಾಮಾಜಿಕ ಮಾಧ್ಯಮ ಇನ್‌ಸ್ಟಾಗ್ರಾಂನಲ್ಲಿ ಧ್ವನಿಯೆತ್ತಿರುವ 18 ವರ್ಷದ ದಿವ್ಯಾ, ಕ್ರೀಡಾ ಕ್ಷೇತ್ರದಲ್ಲಿನ ಲಿಂಗಭೇದ ಹಾಗೂ ಸ್ತ್ರೀದ್ವೇಷದ ಕುರಿತು ಅನುಭವ ಹಂಚಿಕೊಂಡಿದ್ದಾರೆ. ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ ಚಾಲೆಂಜರ್ಸ್ ವಿಭಾಗದಲ್ಲಿ ಆಡಿದ್ದ ದಿವ್ಯಾ, 4.5 ಅಂಕಗಳೊಂದಿಗೆ 12ನೇ ಸ್ಥಾನ ಪಡೆದಿದ್ದರು.

ದಿವ್ಯಾ ದೇಶಮುಖ

ಈ ಟೂರ್ನಿಯಲ್ಲಿ ತಮ್ಮನ್ನು ನಡೆಸಿಕೊಂಡ ರೀತಿಗೆ ಅಸಮಾಧಾನ ಹೊರಹಾಕಿದ್ದಾರೆ. 'ನಾನು ಚೆನ್ನಾಗಿಯೇ ಆಡಿದ್ದೇನೆ. ಅದರ ಬಗ್ಗೆ ಹೆಮ್ಮೆಯಿದೆ. ಆದರೆ, ಪುರುಷ ಆಟಗಾರರನ್ನು ಅವರ ಆಟಕ್ಕಾಗಿ ಶ್ಲಾಘಿಸಿದರೆ, ಆಟಗಾರ್ತಿಯರನ್ನು ಮಾತ್ರ ಅವರ ಆಟಕ್ಕೆ ಸಂಬಂಧವಿಲ್ಲದ ಅಪ್ರಸ್ತುತ ಅಂಶಗಳಿಂದ ಅಳೆಯುತ್ತಾರೆ' ಎಂದು ಕಳೆದ ವರ್ಷ ಏಷ್ಯನ್ ಮಹಿಳಾ ಚೆಸ್ ಚಾಂಪಿಯನ್‌ಷಿಪ್ ಗೆದ್ದುಕೊಂಡಿದ್ದ ದಿವ್ಯಾ ಬೇಸರ ವ್ಯಕ್ತಪಡಿಸಿದ್ದಾರೆ.

ಈ ವಿಚಾರದ ಕುರಿತು ಈ ಹಿಂದೆಯೇ ಮಾತನಾಡಬೇಕೆಂದು ಅಂದುಕೊಂಡಿದ್ದೆ. ಆದರೆ, ಈ ಟೂರ್ನಿ ಮುಗಿಯುವುದನ್ನು ಕಾಯುತ್ತಿದ್ದೆ. ಚೆಸ್‌ನಲ್ಲಿ ಮಹಿಳೆಯರನ್ನು ವೀಕ್ಷಕರು ಹೇಗೆ ಲಘುವಾಗಿ ಪರಿಗಣಿಸುತ್ತಾರೆ ಎಂಬುದನ್ನು ನಾನು ಗಮನಿಸುತ್ತಿದ್ದೇನೆ. ಇದಕ್ಕೆ ಇತ್ತೀಚೆಗೆ ನಡೆದ ಟೂರ್ನಿಯೇ ಉದಾಹರಣೆ ಎಂದಿದ್ದಾರೆ.

'ಸಂದರ್ಶನದಲ್ಲಿ ನನ್ನ ಆಟವನ್ನು ಹೊರತುಪಡಿಸಿ ವೀಕ್ಷಕರು ಚರ್ಚಿಸುವ ವಿಷಯವನ್ನು ನೋಡಿ ತೀವ್ರ ನಿರಾಸೆಯಾಗಿದೆ. ಆದರೆ, ಪುರುಷ ಆಟಗಾರರ ವಿಚಾರಕ್ಕೆ ಬಂದರೆ, ಅಲ್ಲಿ ಅವರ ಆಟದ ಬಗ್ಗೆಯೇ ಚರ್ಚೆಯಾಗುತ್ತದೆ. ಬೇರೆ ವಿಚಾರದ ಬಗ್ಗೆ ಕೇಳುವುದಿಲ್ಲ' ಎಂದು ತಿಳಿಸಿದ್ದಾರೆ.

ಮಯಂಕ್ ಅಗರವಾಲ್ ಅಸ್ವಸ್ಥ

ಕರ್ನಾಟಕ ಕ್ರಿಕೆಟ್ ತಂಡದ ನಾಯಕ ಆಸ್ಪತ್ರೆಗೆ ದಾಖಲು, ಆರೋಗ್ಯ ಸ್ಥಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಣಜಿ ಕ್ರಿಕೆಟ್ ತಂಡದ ನಾಯಕ ಮಯಂಕ್ ಅಗರವಾಲ್ ಮಂಗಳವಾರ ದಿಢೀರ್ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ನವದೆಹಲಿ ಮೂಲಕ ಸೂರತ್‌ಗೆ ತೆರಳುವ ವಿಮಾನದಲ್ಲಿ ಅವರು ಪಾನೀಯ ಸೇವಿಸಿದ್ದರಿಂದ ಅಸ್ವಸ್ಥರಾದರೆನ್ನಲಾಗಿದೆ.

ಆದರೆ ಅವರು ಯಾವ ಪಾನೀಯ ಅಥವಾ ನೀರು ಸೇವನೆ ಮಾಡಿದ್ದಾರೆ ಎನ್ನುವುದು ತಿಳಿದು ಬಂದಿಲ್ಲ. 32 ವರ್ಷದ ಮಯಂಕ್ ಅವರನ್ನು ಅಗರ್ತಲಾದ ಐಎಲ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ. ಪ್ರಾಣಾಪಾಯವಿಲ್ಲವೆಂದು ಮೂಲಗಳು ತಿಳಿಸಿವೆ.

ಸೋಮವಾರ ಇಲ್ಲಿ ಮುಕ್ತಾಯಗೊಂಡ ರಣಜಿ ಪಂದ್ಯದಲ್ಲಿ ಮಯಂಕ್ ನೇತೃತ್ವದ ಕರ್ನಾಟಕ ತಂಡವು ತ್ರಿಪುರಾ ಎದುರು ಜಯಿಸಿತ್ತು. ಮುಂದಿನ ಪಂದ್ಯ ಆಡಲು ಮಂಗಳವಾರ ನವದೆಹಲಿ ಮೂಲಕ ಸೂರತ್‌ಗೆ ತೆರಳಲು ತಂಡವು ಪ್ರಯಾಣ ಆರಂಭಿಸಿತ್ತು. ಆದರೆ ವಿಮಾನ ಹತ್ತಿದ ನಂತರ ಈ ಘಟನೆ ನಡೆಯಿತು.

‘ಮಯಂಕ್ ಅವರಿಗೆ 24 ಗಂಟೆಗಳವರೆಗೆ ಮಾತನಾಡಲು ಸಾಧ್ಯವಾಗದು. ಅವರು ಏನು ಸೇವನೆ ಮಾಡಿದ್ದರು ಎಂಬುದರ ಕುರಿತು ವೈದ್ಯರೂ ಖಚಿತವಾಗಿ ತಿಳಿಸಿಲ್ಲ’ ಎಂದು ತಂಡದ ವ್ಯವಸ್ಥಾಪಕರು ತಿಳಿಸಿದ್ದಾರೆ.

‘ವಿಮಾನದಲ್ಲಿ ಮಯಂಕ್ ಇದ್ದಕ್ಕಿದ್ದಂತೆ ತಮ್ಮ ಬಾಯಿ ಮತ್ತು ಗಂಟಲು ಉರಿಯುತ್ತಿರುವುದಾಗಿ ಹೇಳಿದರು. ನಮಗೆ ಸ್ಥಿತಿ ಗಂಭೀರ ಎನಿಸಿ ವಿಮಾನದ ಸಿಬ್ಬಂದಿಗೆ ತಿಳಿಸಿದೆವು. ಅವರು ಕೂಡಲೇ ಆಸ್ಪತ್ರೆಗೆ ಕಳಿಸಿದರು’ ಎಂದು ಅವರು ಹೇಳಿದರು.

ಮಯಂಕ್ ಅಗರವಾಲ್

ಮಯಂಕ್ ಅವರು ಕೇಂದ್ರ ತನಿಖಾ ಸಂಸ್ಥೆ (ಸಿಬಿಐ) ಮುಖ್ಯಸ್ಥ ಪ್ರವೀಣ ಸೂದ್ ಅವರ ಅಳಿಯ ಕೂಡ ಹೌದು.

‘ಮಧ್ಯಾಹ್ನ ವಿಮಾನವು ಟೇಕ್ ಆಫ್ ಅಗಲು ಸಿದ್ಧವಾಗಿತ್ತು. ವಿಮಾನದ ಕ್ಯಾಪ್ಟನ್ ಸೀಟ್ ಬೆಲ್ಟ್ ಕಟ್ಟಿಕೊಳ್ಳುವಂತೆ ಎಲ್ಲ ಪ್ರಯಾಣಿಕರಿಗೂ ಸೂಚಿಸಿದ್ದರು. ಅದೇ ಸಂದರ್ಭದಲ್ಲಿ ಎದ್ದುನಿಂತ ಮಯಂಕ್ ತಾವು ತುರ್ತಾಗಿ ಶೌಚಾಲಯಕ್ಕೆ ಹೋಗಬೇಕೆಂದು ಕೂಗತೊಡಗಿದರು. ವಿಮಾನದ ಸಿಬ್ಬಂದಿ ಅವರತ್ತ ಧಾವಿಸಿ ವಿಮಾನದೊಳಗಿನ ಶೌಚಾಲಯಕ್ಕೆ ಕರೆದೊಯ್ದರು. ಆದರೆ ಅವರ ಸ್ಥಿತಿ ಗಂಭೀರವೆಂದು ಪರಿಗಣಿಸಿದ ಸಿಬ್ಬಂದಿಯು ಕೂಡಲೇ ಅಂಬುಲೆನ್ಸ್ ಕರೆಸಿದರು. ಮಯಂಕ್ ಅವರನ್ನು ಅಸ್ಪತ್ರೆಗೆ ಕಳಿಸಿಕೊಟ್ಟರು. ವಿಮಾನದಲ್ಲಿದ್ದಾಗಲೇ ಮಯಂಕ್ ಎರಡು ಬಾರಿ ವಾಂತಿ ಮಾಡಿಕೊಂಡಿದ್ದರು‘ ಎಂದು ಪ್ರತ್ಯಕ್ಷ ದರ್ಶಿಗಳು ಹೇಳಿದರು.

‘ನಾವು ಮಯಂಕ್ ಸುತ್ತಮುತ್ತ ಇರಲಿಲ್ಲ. ಅವರಿಂದ ಸ್ವಲ್ಪ ದೂರದ ಆಸನದಲ್ಲಿ ಕುಳಿತಿದ್ದೆ. ಅವರು ಎದ್ದು ಕೂಗತೊಡಗಿದರು. ಏನಾಯಿತು ಎಂದು ನಾನು ವಿಚಾರಿಸಿದಾಗ ತಮ್ಮ ಕೈನ ಹೆಬ್ಬೆರಳನ್ನು ಬಾಯಿಯತ್ತ ಇಟ್ಟು ತೋರಿಸಿದರು. ಆಗ ವಿಮಾನ ಸಿಬ್ಬಂದಿ ಅವರ ಬಳಿಗೆ ಬಂದು ನೆರವು ನೀಡಿದರು. ನಮ್ಮಲ್ಲಿ ಯಾರನ್ನೂ ಅವರ ಸನಿಹಕ್ಕೆ ತೆರಳಲು ಬಿಡಲಿಲ್ಲ‘ ಎಂದು ತಂಡದ ಸದಸ್ಯರೊಬ್ಬರು ಪತ್ರಿಕೆಗೆ ತಿಳಿಸಿದರು.

‘ತಮ್ಮ ಮುಂದಿನ ಬಾಟಲಿಯಲ್ಲಿ ನೀರಿನಂತಿದ್ದ ಪಾನೀಯವನ್ನು ಮಯಂಕ್ ಕುಡಿದರು. ನಂತರ ಗಾಬರಿಯಿಂದ ಕೂಗತೊಡಗಿದರೆಂದು ಮಯಂಕ್ ಅಕ್ಕಪಕ್ಕ ಕುಳಿತ ಸಹ ಪ್ರಯಾಣಿಕರು ಹೇಳಿದರು’ ಎಂದು ತಿಳಿಸಿದ್ದಾರೆ.

ಮಯಾಂಕ್ ಅವರು ಭಾರತ ತಂಡದಲ್ಲಿ 21 ಟೆಸ್ಟ್ ಹಾಗೂ ಐದು ಏಕದಿನ ಪಂದ್ಯಗಳನ್ನು ಆಡಿದ್ದಾರೆ

ದೆಹಲಿಯಲ್ಲಿ ಉಳಿದ ಆಟಗಾರರು

ಮಯಂಕ್ ಅವರನ್ನು ಆಸ್ಪತ್ರೆಗೆ ಸೇರಿಸುವ ಪ್ರಕ್ರಿಯೆಯ ನಂತರ ವಿಮಾನವು ದೆಹಲಿಗೆ ತೆರಳಿತು. ಅದರೆ ವಿಮಾನವು ದೆಹಲಿ ತಲುಪುವುದು ವಿಳಂಬವಾಯಿತು. ಅಲ್ಲಿಂದ ಸೂರತ್‌ಗೆ ತಂಡದ ಆಟಗಾರರು ತೆರಳಬೇಕಿದ್ದ ವಿಮಾನವೂ ಹೋಗಿಯಾಗಿತ್ತು. ಆದ್ದರಿಂದ ಮಂಗಳವಾರ ರಾತ್ರಿ ಕರ್ನಾಟಕದ ಆಟಗಾರರು ನವದೆಹಲಿಯಲ್ಲಿ ಉಳಿಯಬೇಕಾಯಿತು. ಬುಧವಾರ ಸೂರತ್‌ಗೆ ಪ್ರಯಾಣಿಸಲಿದ್ದಾರೆ ಎಂದು ತಂಡದ ಮೂಲಗಳು ತಿಳಿಸಿವೆ.

ಬೆಂಗಳೂರಿಗೆ ಮಯಂಕ್?: ಮಯಂಕ್ ಆರೋಗ್ಯದಲ್ಲಿ ಸುಧಾರಣೆ ಕಂಡು ಬರುತ್ತಿದೆ. ಅವರನ್ನು ಬೆಂಗಳೂರಿಗೆ ಸ್ಥಳಾಂತರಿಸುವ ಸಾಧ್ಯತೆ ಇದೆ ಎಂದೂ ಮೂಲಗಳು ತಿಳಿಸಿವೆ.

ದೂರು ದಾಖಲು; ಪೊಲೀಸ್ ತನಿಖೆ

ಬೆಂಗಳೂರು: 'ಮಯಂಕ್ ಅಗರವಾಲ್ ಅವರು ವಿಮಾನದಲ್ಲಿ ತಮ್ಮ ಆಸನದ ಮುಂದಿನ ಪೌಚ್‌ನಲ್ಲಿದ್ದ ದ್ರವವನ್ನು ನೀರು ಎಂದುಕೊಂಡು ಕುಡಿದಿದ್ದಾರೆ. ಬಾಯಿಯಲ್ಲಿ ಉರಿ ಮತ್ತು ಬಾವು ಉಂಟಾಗಿದೆ. ಬೊಬ್ಬೆಗಳೂ ಬಂದಿವೆ. ಈಗ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಅವರ ಮ್ಯಾನೇಜರ್ ದೂರು ನೀಡಿದ್ದು, ದಾಖಲಿಸಿಕೊಂಡಿದ್ದೇವೆ. ಈ ಕುರಿತು ಸಮಗ್ರವಾಗಿ ತನಿಖೆ ಮಾಡಲಾಗುವುದು’ ಎಂದು ತ್ರಿಪುರಾ ಪೂರ್ವ ವಲಯದ ಎಸ್ಪಿ ಕೆ. ಕಿರಣಕುಮಾರ್ ತಿಳಿಸಿದ್ದಾರೆ.

ಘಟನೆಯ ಕುರಿತು ಪ್ರತಿಕ್ರಿಯಿಸಿರುವ ತ್ರಿಪುರ ರಾಜ್ಯದ ಆರೋಗ್ಯ ಇಲಾಖೆ ಕಾರ್ಯದರ್ಶಿ ಕಿರಣ ಗಿತ್ತೆ, ‘ವಿಮಾನ ಪ್ರಯಾಣದ ಸಂದರ್ಭದಲ್ಲಿ ಮಯಂಕ್ ಅವರು ಆಕಸ್ಮಿಕವಾಗಿ ವಾಟರ್ ಪೌಚ್ ಎಂದು ಸೇವಿಸಿದ್ದಾರೆ. ತತ್‌ಕ್ಷಣ ಅವರಿಗೆ ಬಾಯಿಯಲ್ಲಿ ಉರಿಯೂತ ಉಂಟಾಗಿದೆ. ಇದೀಗ ಅವರ ಆರೋಗ್ಯ ಸ್ಥಿರವಾಗಿದೆ. ಘಟನೆಯ ಕುರಿತು ತನಿಖೆ ನಡೆಯುತ್ತಿದೆ’ ಎಂದಿದ್ದಾರೆ.

ತಂಡಕ್ಕೆ ಪಾಂಡೆ: ಅನುಭವಿ ಆಟಗಾರ ಮನೀಷ್ ಪಾಂಡೆ ಅವರು ಕರ್ನಾಟಕ ತಂಡವನ್ನು ಬುಧವಾರ ಸೇರಿಕೊಳ್ಳಲಿದ್ದಾರೆ. ಸೂರತ್‌ನಲ್ಲಿ ರೇಲ್ವೆಸ್ ತಂಡದ ಎದುರು ನಡೆಯಲಿರುವ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಮನೀಷ್ ಮುನ್ನಡೆ ಸುವ ಸಾಧ್ಯತೆ ಇದೆ. ಮೈಸೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುವಾಗ ಮನೀಷ್ ಗಾಯಗೊಂಡಿದ್ದರು. ಆದ್ದರಿಂದ ತ್ರಿಪುರ ವಿರುದ್ಧ ಆಡಿರಲಿಲ್ಲ.

ಮುಷೀರ್ ಮತ್ತೊಂದು ಶತಕ, ಭಾರತಕ್ಕೆ ಜಯ

ಬ್ಲೊಮ್‌ಫೊಂಟೀನ್ (ಪಿಟಿಐ): ಮಧ್ಯಮ ಕ್ರಮಾಂಕದ ಬ್ಯಾಟರ್ ಮುಷೀರ್ ಖಾನ್, 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಅಮೋಘ ಪ್ರದರ್ಶನ ಮುಂದುವರಿಸಿದ್ದಾರೆ. ಅವರ ಮತ್ತೊಂದು ಶತಕದ (131) ನೆರವಿನಿಂದ ಭಾರತ ತಂಡ ಮಂಗಳವಾರ ನಡೆದ ಸೂಪರ್ ಸಿಕ್ಸ್ ಹಂತದ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 214 ರನ್‌ಗಳ ದೊಡ್ಡ ಅಂತರದಿಂದ ಸದೆಬಡಿಯಿತು.

ಟಾಸ್ ಸೋತಿದ್ದ ಭಾರತ, ಮುಶೀರ್ ಅವರ ಭರ್ಜರಿ ಆಟದ ಜೊತೆಗೆ ಆರಂಭ ಆಟಗಾರ ಆದರ್ಶ್ ಸಿಂಗ್ (52, 58ಎ, 4x6) ಅವರ ಅರ್ಧ ಶತಕದ ನೆರವಿನಿಂದ 9 ವಿಕೆಟ್‌ಗೆ 295 ರನ್‌ಗಳ ಉತ್ತಮ ಮೊತ್ತ ಗಳಿಸಿತು. ನಂತರ ಎಡಗೈ ಸ್ಪಿನ್ನರ್ ಎಡಗೈ ಸ್ಪಿನ್ನರ್ ಸೌಮಿ ಕುಮಾರ್ ಪಾಂಡೆ (10–2–19–4) ಮತ್ತು ವೇಗದ ಬೌಲರ್ ರಾಜ್ ಲಿಂಬಾನಿ (17ಕ್ಕೆ2) ಅವರ ದಾಳಿಗೆ ಸಿಲುಕಿದ ಕಿವೀಸ್ ತಂಡ 29ನೇ ಓವರ್‌ನಲ್ಲಿ 81 ರನ್‌ಗಳಿಗೆ ಪತನಗೊಂಡಿತು.

ಸೌಮಿ ಕುಮಾರ್ ಪಾಂಡೆ

ಲಿಂಬಾನಿ, ಕಿವೀಸ್ ಇನಿಂಗ್ಸ್‌ನ ಮೊದಲ ಮತ್ತು ಐದನೇ ಎಸೆತಗಳಲ್ಲಿ ವಿಕೆಟ್ ಪಡೆದು ಪಂದ್ಯ ಭಾರತದ ಹಿಡಿತದಲ್ಲೇ ಉಳಿಯುವಂತೆ ನೋಡಿಕೊಂಡರು. ನಂತರ ಉಪನಾಯಕನೂ ಆಗಿರುವ ಸೌಮಿ ಕುಮಾರ್, ಯಾವ ಹಂತದಲ್ಲೂ ಎದುರಾಳಿಗೆ ಚೇತರಿಸಲು ಅವಕಾಶ ನೀಡಲಿಲ್ಲ.

ಇದಕ್ಕೆ ಮೊದಲು, 18 ವರ್ಷದ ಮುಷೀರ್, ಎದುರಾಳಿಗಳ ದಾಳಿಯನ್ನು ದಂಡಿಸಿ ಈ ಪಂದ್ಯಾವಳಿಯಲ್ಲಿ ಎರಡನೇ ಶತಕ ಬಾರಿಸಿದರು. ಅವರ ಇನಿಂಗ್ಸ್‌ನಲ್ಲಿ 13 ಬೌಂಡರಿ ಮತ್ತು ಮೂರು ಸಿಕ್ಸರ್‌ಗಳಿದ್ದವು. ಈ ಟೂರ್ನಿಯಲ್ಲಿ ಅವರು 300ಕ್ಕೂ ಹೆಚ್ಚು ರನ್ ಕಲೆಹಾಕಿದ ಮೊದಲ ಬ್ಯಾಟರ್ ಎನಿಸಿದರು

ಸಂಕ್ಷಿಪ್ತ ಸ್ಕೋರ್: ಭಾರತ: 50 ಓವರುಗಳಲ್ಲಿ 8 ವಿಕೆಟ್‌ಗೆ 295 (ಆದರ್ಶ್ ಸಿಂಗ್ 52, ಮುಶೀರ್ ಖಾನ್ 131, ಉದಯ್ ಸಹಾರನ್ 35; ಮೇಸನ್ ಕ್ಲಾರ್ಕ್ 64ಕ್ಕೆ4); ನ್ಯೂಜಿಲೆಂಡ್: 28.1 ಓವರುಗಳಲ್ಲಿ 81 (ರಾಜ್ ಲಿಂಬಾಮಿ 17ಕ್ಕೆ2, ಸೌಮಿ ಕುಮಾರ್ ಪಾಂಡೆ 19ಕ್ಕೆ4

ಕರ್ನಾಟಕ ತಂಡಕ್ಕೆ ಜಯ

ಅಮ್ತಾರ್, ಹಿಮಾಚಲಪ್ರದೇಶ: ಆರಂಭಿಕ ಬ್ಯಾಟರ್ ಪ್ರಖರ್ ಚತುರ್ವೇದಿ (55; 72ಎ, 4X9) ಅರ್ಧಶತಕ ಮತ್ತು ಮೊಹಸೀನ್ ಖಾನ್ ಆಲ್‌ರೌಂಡ್ ಆಟದಿಂದ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು 23 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಹಿಮಾಚಲ ಪ್ರದೇಶ ಎದುರು ಜಯಿಸಿತು.

ಪ್ರಖರ್ ಚತುರ್ವೇದಿ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಹಿಮಾಚಲಪ್ರದೇಶ: 62.5 ಓವರ್‌ಗಳಲ್ಲಿ 169 (ಕುಶಾಲ್ ಪಾಲ್ 29, ಆರ್ಯವ್ರತ್ ಶರ್ಮಾ 20, ಮೃದುಲ್ ಸುರೊಚ್ 54, ಮನ್ವಂತ್ ಕುಮಾರ್ 35ಕ್ಕೆ2, ಮೊಹಸಿನ್ ಖಾನ್ 47ಕ್ಕೆ7) ಕರ್ನಾಟಕ: 48.4 ಓವರ್‌ಗಳಲ್ಲಿ 160 (ಮೆಕ್‌ನೀಲ್ ಹ್ಯಾಡ್ಲಿ ನರೋನಾ 22, ಸ್ಮರಣ್ ಆರ್ 23, ಅಕ್ಷಣ್ ರಾವ್ 30, ರಾಜವೀರ್ ವಾಧ್ವಾ 22, ರೋಹಿತ್ ಠಾಕೂರ್ 54ಕ್ಕೆ2, ಸೌರವ್ ಹಿಮಾಲ್ವಿ 34ಕ್ಕೆ3) ಎರಡನೇ ಇನಿಂಗ್ಸ್: ಹಿಮಾಚಲಪ್ರದೇಶ: 51.3 ಓವರ್‌ಗಳಲ್ಲಿ 163 (ಕುಶಾಲ್ ಪಾಲ್ 42, ಆರ್ಯವ್ರತ್ ಶರ್ಮಾ 31, ಮೃದುಲ್ ಸರೊಚ್ 32, ಮೊನಿಷ್ ರೆಡ್ಡಿ 61ಕ್ಕೆ4, ರಾಜವೀರ್ ವಾದ್ವಾ 34ಕ್ಕೆ2, ಮೊಹಸೀನ್ ಖಾನ್ 24ಕ್ಕೆ4) ಕರ್ನಾಟಕ: 35.3 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 174 (ಪ್ರಖರ್ ಚತುರ್ವೇದಿ 55, ಅಕ್ಷನ್ ರಾವ್ 26, ಅನೀಶ್ವರ್ ಗೌತಮ್ 26, ಮೊಹಸೀನ್ ಖಾನ್ ಅಜೇಯ 15, ರೋಹಿತ್ ಠಾಕೂರ್ 44ಕ್ಕೆ2, ದಿವೇಶ್ ಶರ್ಮಾ 54ಕ್ಕೆ5) ಕರ್ನಾಟಕ ತಂಡಕ್ಕೆ 2 ವಿಕೆಟ್‌ಗಳ ಜಯ.

(ಮಾಹಿತಿ: ಬಿಸಿಸಿಐ ಡಾಟ್ ಟಿವಿ ವೆಬ್‌ಸೈಟ್)

ವಿರಾಟ್, ಜಡೇಜ ಗೈರು; ಇಂಗ್ಲೆಂಡ್‌ಗೆ ಅನುಕೂಲ

ಕ್ರಿಕೆಟಿಗ ಜೆಫ್ರಿ ಬಾಯ್ಕಾಟ್ ಅಭಿಪ್ರಾಯ

ಲಂಡನ್ (ಪಿಟಿಐ): ಹೈದರಾಬಾದ್ ಟೆಸ್ಟ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅವರ ಗೈರುಹಾಜರಿ ಭಾರತ ತಂಡವನ್ನು ಕಾಡಿತು. ರೋಹಿತ್ ಶರ್ಮಾ ಅವರ ವೈಭವವು ಈಗ ಗತಕಾಲ ಸೇರಿದೆ ಎಂದು ಇಂಗ್ಲೆಂಡ್ ಕ್ರಿಕೆಟ್ ದಿಗ್ಗಜ ಜೆಫ್ರಿ ಬಾಯ್ಕಾಟ್ ಅಭಿಪ್ರಾಯಪಟ್ಟಿದ್ದಾರೆ.

ಭಾರತ ತಂಡವು ಇಂಗ್ಲೆಂಡ್ ವಿರುದ್ಧದ ಸರಣಿಯ ಮೊದಲ ಪಂದ್ಯದಲ್ಲಿ 28 ರನ್‌ಗಳಿಂದ ಸೋತಿತ್ತು. ಆ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮುನ್ನಡೆ ಗಳಿಸಿದ್ದ ಆತಿಥೇಯ ತಂಡವು ಎರಡನೇ ಇನಿಂಗ್ಸ್‌ನಲ್ಲಿ ಹಿಡಿತ ಕಳೆದುಕೊಂಡಿದ್ದು ಸೋಲಿಗೆ ಕಾರಣವಾಗಿತ್ತು. ಪಂದ್ಯದ ನಾಲ್ಕನೇ ದಿನ 231 ರನ್‌ಗಳ ಗುರಿಯನ್ನು ಸಾಧಿಸುವಲ್ಲಿ ಭಾರತ ತಂಡ ವಿಫಲವಾಗಿತ್ತು.

ಈ ಐದು ಪಂದ್ಯಗಳ ಸರಣಿಯ ಮೊದಲೆರಡು ಪಂದ್ಯಗಳಿಂದ ವಿರಾಟ್ ‘ರಜೆ’ ಪಡೆದಿದ್ದಾರೆ.

'ಇಂಗ್ಲೆಂಡ್ ತಂಡಕ್ಕೆ ಇದು ಉತ್ತಮ ಸಮಯ ವಾಗಿದೆ. 12 ವರ್ಷಗಳ ನಂತರ ಭಾರತವನ್ನು ಅದರದ್ದೇ ತವರಿನಲ್ಲಿ ಸೋಲಿಸಬಹುದು’ ಎಂದು ಬಾಯ್ಕಾಟ್ ‘ದ ಡೇಲಿ ಟೆಲಿಗ್ರಾಫ್’ ಅಂಕಣದಲ್ಲಿ ಬರೆದಿದ್ದಾರೆ.

5ನೇ ಸ್ಥಾನಕ್ಕೆ ಭಾರತ

ದುಬೈ (ಪಿಟಿಐ): ಹೈದರಾಬಾದ್‌ನಲ್ಲಿ ನಡೆದ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ಕೈಲಿ ಆಘಾತಕಾರಿ ಸೋಲನುಭವಿಸಿದ ಭಾರತ ತಂಡ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಐದನೇ ಸ್ಥಾನಕ್ಕೆ ಸರಿದಿದೆ.

ದಕ್ಷಿಣ ಆಫ್ರಿಕಾ ವಿರುದ್ಧ ಎರಡು ಟೆಸ್ಟ್‌ಗಳ ಸರಣಿಯನ್ನು ಈ ತಿಂಗಳ ಆರಂಭದಲ್ಲಿ 1–1 ರಲ್ಲಿ ಸಮ ಮಾಡಿಕೊಂಡಿದ್ದ ಭಾರತ ಅಲ್ಪಾವಧಿಗೆ ಅಗ್ರಸ್ಥಾನಕ್ಕೇರಿತ್ತು. ಆದರೆ ಪಾಕಿಸ್ತಾನ ವಿರುದ್ಧ ಸರಣಿ ಗೆದ್ದ ನಂತರ ಆಸ್ಟ್ರೇಲಿಯಾ ತಂಡವು, ಭಾರತ ತಂಡವನ್ನು ಹಿಂದೆಹಾಕಿ ಮೊದಲ ಸ್ಥಾನಕ್ಕೆ ಮರಳಿತ್ತು.

ಇಂಗ್ಲೆಂಡ್ ವಿರುದ್ಧ ಮೊದಲ ಟೆಸ್ಟ್ ಸೋಲಿನಿಂದ ಭಾರತದ ಸ್ಥಾನ ಕುಸಿಯಿತು. ರೋಹಿತ್ ಶರ್ಮಾ ಬಳಗದ ಶೇಕಡವಾರು ಪಾಯಿಂಟ್ಸ್ 54.16 ರಿಂದ ಹಾಲಿ 43.33ಕ್ಕೆ ಇಳಿದಿದೆ.

ಬಿಎಫ್‌ಸಿ ತೆಕ್ಕೆಗೆ ಚಿಂಗ್ಲೆನ್ಸನಾ

ಬೆಂಗಳೂರು: ಮಣಿಪುರದ ಡಿಫೆಂಡರ್ ಚಿಂಗ್ಲೆನ್ಸನಾ ಸಿಂಗ್ (ಸನಾ) ಅವರು ಬೆಂಗಳೂರು ಎಫ್‌ಸಿಯೊಂದಿಗೆ ಮುಂದಿನ ಐದೂವರೆ ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. 28 ವರ್ಷದ ಚಿಂಗ್ಲೆನ್ಸನಾ ಕಳೆದ ಬಾರಿ ಹೈದರಾಬಾದ್ ಎಫ್‌ಸಿ ಪರ ಕಣಕ್ಕಿಳಿದಿದ್ದರು.

ಇಂಡಿಯನ್ ಸೂಪರ್ ಲೀಗ್‌ನಲ್ಲಿ 94 ಪಂದ್ಯ ಮತ್ತು ಭಾರತ ತಂಡಕ್ಕಾಗಿ 11 ಪಂದ್ಯಗಳನ್ನು ಆಡಿದ್ದಾರೆ. ಸಂದೇಶ್ ಜಿಂಗಾನ್ ಅವರು ಗೋವಾ ಎಫ್‌ಸಿಗೆ ಹೋದ ಬಳಿಕ ಬಿಎಫ್‌ಸಿ ತಂಡದ ಸೆಂಟರ್ ಬ್ಯಾಕ್‌ನಲ್ಲಿ ಅನುಭವಿ ಆಟಗಾರನ ಕೊರತೆಯಿತ್ತು.

ಬಾಜ್‌ಬಾಲ್ ಮೊದಲ ಭಾರತ-ಇಂಗ್ಲೆಂಡ್ ಟೆಸ್ಟ್ ಪಂದ್ಯದಲ್ಲಿ ಪ್ರಭುತ್ವಸಾಧಿಸಿದ್ದಾರೆ!

ದಾಖಲೆ ಸುಧಾರಿಸಿದ ಅಕ್ಷದೀಪ್

ಚಂಡೀಗಢ (ಪಿಟಿಐ): ಪಂಜಾಬ್‌ನ ಅಕ್ಷದೀಪ್ ಸಿಂಗ್ ಅವರು ಮಂಗಳವಾರ ಇಲ್ಲಿ ನಡೆದ ರಾಷ್ಟ್ರೀಯ ಓಪನ್ ರೇಸ್ ವಾಕಿಂಗ್ ಸ್ಪರ್ಧೆಗಳ ಪುರುಷರ 20 ಕಿ.ಮೀ. ನಡಿಗೆ ಸ್ಪರ್ಧೆಯಲ್ಲಿ ಅಗ್ರಸ್ಥಾನ ಪಡೆಯುವ ಹಾದಿಯಲ್ಲಿ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆ ಉತ್ತಮಪಡಿಸಿಕೊಂಡರು. ಅಕ್ಷದೀಪ್ ಈ ವರ್ಷದ ಮಧ್ಯದಲ್ಲಿ ನಡೆಯುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ.

ರಾಂಚಿಯಲ್ಲಿ ನಡೆದ 2023ನೇ ಸಾಲಿನ ರಾಷ್ಟ್ರೀಯ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆಲ್ಲುವ ಮೂಲಕ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ್ದ ಅಕ್ಷದೀಪ್, ಇಲ್ಲಿ ಇದೇ ಸ್ಪರ್ಧೆಯನ್ನು 1 ಗಂಟೆ 19ನಿಮಿಷ 38 ಸೆಕೆಂಡುಗಳಲ್ಲಿ ಪೂರೈಸಿ, ಈ ಹಿಂದಿನ ದಾಖಲೆ (1:19.55) ಸುಧಾರಿಸಿದರು.

ಎರಡನೇ ಸ್ಥಾನ ಪಡೆದ ಸೂರಜ್ ಪನ್ವಾರ್ (ಉತ್ತರಾಖಂಡ) ಅವರೂ ಪ್ಯಾರಿಸ್ ಒಲಿಂಪಿಕ್ಸ್‌ಗೆ ನಿಗದಿಪಡಿಸಿದ ಅರ್ಹತಾ ಗಡುವಿನೊಳಗೇ ಗುರಿತಲುಪಿದರು. ಅವರು 1ಗಂ. 19ನಿ.43 ಸೆ.ಗಳಲ್ಲಿ ಗುರಿತಲುಪಿದರು. ಅವರು ಒಲಿಂಪಿಕ್ಸ್ 20 ಕಿ.ಮೀ. ರೇಸ್ ವಾಕ್‌ಗೆ ಅರ್ಹತೆ ಪಡೆದ ಭಾರತದ 4ನೇ ಸ್ಪರ್ಧಿ ಎನಿಸಿದರು.

ಅಕ್ಷದೀಪ್ ಸಿಂಗ್

ಪರಮಜೀತ್ ಬಿಷ್ಟ್ ಮತ್ತು ವಿಕಾಸ್ ಸಿಂಗ್ ಅವರು ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲಿರುವ ಭಾರತದ ಇನ್ನಿಬ್ಬರು ಸ್ಪರ್ಧಿಗಳು. ಅವರು ಜಪಾನ್‌ನಲ್ಲಿ ಕಳೆದ ವರ್ಷ ನಡೆದ ಏಷ್ಯನ್ ರೇಸ್ ವಾಕ್ ಚಾಂಪಿಯನ್‌ಷಿಪ್ಸ್ ಸಂದರ್ಭದಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು.

ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದ ವೈಯಕ್ತಿಕ ಸ್ಪರ್ಧೆಯೊಂದರಲ್ಲಿ ದೇಶವೊಂದು ಮೂರು ಮಂದಿಯನ್ನು ಮಾತ್ರ ಕಳಿಸಲು ಅವಕಾಶವಿದೆ. ಇದೀಗ ನಾಲ್ವರಲ್ಲಿ ಮೂರು ಮಂದಿಯ ಹೆಸರನ್ನು ಅಂತಿಮಗೊಳಿಸುವ ಹೊಣೆ ಅಥ್ಲೆಟಿಕ್ ಫೆಡರೇಷನ್ ಆಫ್ ಇಂಡಿಯಾ ಮೇಲಿದೆ.

ALVA'S CENTRAL SCHOOL
ALVA'S Education Foundation
Affiliated to CBSE Board, New Delhi
Puttige. Moodubidire 574 227

REQUIRED
PGTs & TGTs
Phyiscs | Chemistry | Biology | Maths | Social Science | English | Hindi | Sanskrit

- Graduates/Post Graduates with B.Ed.
- Excellent English Communication with IT Skills,
- Teaching Experience in CBSE School.

Eligible candidates mail your application with updated Bio-data to ao-schools@alvas.org within 7 days
+91 7026530843, 6366377824

For more details: Bangalore: Honda BigWing Bengaluru East (Indiranagar): 6366922291, 6366922290, Honda BigWing Bengaluru North (Sadashivnagar): 6366966041, 080-45048888, Honda BigWing Topline (Lavelle Road): 9844564831, 8884947272, Honda BigWing RR Nagar: 8197156468, 9844726971, Honda BigWing Banashankari: 8123597722, 9742420326, Honda BigWing Mahadevapura: 7795889052, 7795690898, Honda BigWing Hennur: 9606447507, 7795690877, Honda BigWing Yelahankha: 7204582224, 6366966041; **Belgaum**: Honda BigWing BigWing Belagavi South (Tilakwadi): 9686203854; **Mangalore**: Honda BigWing Mangalore North (Derebail): 8147599847; **Mysore**: Honda BigWing Mysuru Central (Saraswathipuram): 7676523911; **Hubli**: Honda BigWing Hubballi Central (Bannigida): 8884433175, 8884433693.